ಬುಧವಾರ, ಮಾರ್ಚ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 64 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ನಮ್ಮ ಜಾಡನ್ನು ಹಿಡಿಯಬಲ್ಲ ಮೊಬೈಲ್ ಫೋನ್‌ಗಳ ನಿಯಂತ್ರಣ ನಮ್ಮ ಕೈಯಲ್ಲಿಯೇ ಇದೆ

ಆಳ-ಅಗಲ

ವಿಪಕ್ಷದ ಕಡೆ ತಿರುಗದ ಕ್ಯಾಮರಾ: ಅಧಿಕಾರಿ ಅಮಾನತು 6

ಹಕ್ಕಿಜ್ವರ: ಮಾಂಸ, ಮೊಟ್ಟೆ ತಿಂದರೆ ಸೋಂಕು ತಗಲದು

ಖಾಸಗಿ ಆಸ್ಪತ್ರೆಗಳಲ್ಲಿ ಸುಲಿಗೆ: ನೀತಿ ರೂಪಿಸಿ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,989	22,082	₹90,020 (ಬೆಂಗಳೂರು)	₹1 ಲಕ್ಷ (ಬೆಂಗಳೂರು)	87.19

ಸರ್ಕಾರಿ ಕಾಮಗಾರಿ ಗುತ್ತಿಗೆ: ಆರ್ಥಿಕ ಇಲಾಖೆಯಿಂದ ತಿದ್ದುಪಡಿ ಮಸೂದೆ ಸಿದ್ಧ ● ಸಂಪುಟಕ್ಕೆ ಪ್ರಸ್ತಾವ

ಮುಸ್ಲಿಮರಿಗೆ ಶೇ 4 ಮೀಸಲು?

● ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಪರಿಶಿಷ್ಟ ಜಾತಿ-ಪಂಗಡ, ಹಿಂದುಳಿದವರಿಗೆ ನೀಡಿರುವಂತೆ ಮುಸ್ಲಿಮರಿಗೆ (ಪ್ರವರ್ಗ 2 ಬಿ) ಶೇಕಡ 4ರಷ್ಟು ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶದಿಂದ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಟಿಪಿ) ಕಾಯ್ದೆ–1999' (2000ರ ಕರ್ನಾಟಕ ಕಾಯ್ದೆ 29)ರ ಸೆಕ್ಷನ್ 6ಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಆರ್ಥಿಕ ಇಲಾಖೆಯು ತಿದ್ದುಪಡಿ ಮಸೂದೆಯ ಕರಡು ಸಿದ್ಧಪಡಿಸಿದ್ದು, ಅದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಅವರು ಸಹಮತ ಸೂಚಿಸಿದ್ದಾರೆ. ಬುಧವಾರ (ಮಾರ್ಚ್ 5) ಸಂಜೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಕರಡು ಮಸೂದೆ ಚರ್ಚೆಗೆ ಬರಲಿದೆ. ಸಂಪುಟ ಅನುಮೋದನೆ ನೀಡಿದರೆ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿಯೇ ಮಸೂದೆ ಮಂಡನೆ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಕೆಟಿಪಿಪಿ ಕಾಯ್ದೆಗೆ ಸರ್ಕಾರ ಈ ಹಿಂದೆಯೇ ತಿದ್ದುಪಡಿ ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆ ದಾರರಿಗೆ ₹50 ಲಕ್ಷದವರೆಗಿನ ಕಾಮಗಾರಿಗಳಲ್ಲಿ ಶೇ 24.10ರಷ್ಟು ಮೀಸಲಾತಿ ಕಲ್ಪಿಸಿತ್ತು. ಸಿದ್ದರಾಮಯ್ಯ ಸರ್ಕಾರ 2023ರ ಮಾರ್ಚ್ 29ರಂದು ಮತ್ತೆ ತಿದ್ದುಪಡಿ ಮಾಡಿ ಈ ಮೀಸಲಾತಿಯನ್ನು ₹1 ಕೋಟಿಯವರೆಗಿನ ವೆಚ್ಚದ ಕಾಮಗಾರಿಗಳವರೆಗೆ ವಿಸ್ತರಿಸಿ ಗೆಜೆಟ್ ಅಧಿಸೂಚನೆ ಹೊರಡಿಸಿತ್ತು.

2023ನೇ ಸಾಲಿನ ಬಜೆಟ್ ಘೋಷಣೆಯಂತೆ ಕೆಟಿಟಿಪಿ ಕಾಯ್ದೆಗೆ ಮತ್ತೆ ತಿದ್ದುಪಡಿ ಮಾಡಿ 2024ರ ಜೂನ್ 10ರಂದು ಗೆಜೆಟ್ ಹೊರಡಿಸಿದ ಸರ್ಕಾರ, ₹1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1ರ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆದಾರರಿಗೆ ಶೇ 4ರಷ್ಟು ಮತ್ತು ಪ್ರವರ್ಗ 2ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆ ದಾರರಿಗೆ ಶೇ 15ರಷ್ಟು ಮೀಸಲಾತಿ ನೀಡಿತ್ತು.

ಗುತ್ತಿಗೆ ಕಾಮಗಾರಿಗಳಲ್ಲಿ ಎಸ್‌ಸಿ ಮತ್ತು ಎಸ್‌ಟಿ ಜನಾಂಗಕ್ಕೆ ಹಾಗೂ ಹಿಂದುಳಿದ ಸಮುದಾಯವರಿಗೆ ಮೀಸಲಾತಿ ನೀಡಿದ ಮಾದರಿಯಲ್ಲಿ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೂ ಶೇ 4ರಷ್ಟು ಮೀಸಲಾತಿ ನೀಡಬೇಕೆಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸಚಿವರಾದ ಜಮೀರ್ ಅಹಮದ್ ಖಾನ್, ರಹೀಂ ಖಾನ್, ಶಾಸಕರಾದ ತನ್ವೀರ್ ಸೇಠ್, ಎನ್‌.ಎ. ಹ್ಯಾರೀಸ್, ರಿಜ್ವಾನ್ ಅರ್ಷದ್, ಆಸೀಫ್ ಸೇಠ್, ಕನೀಝ್ ಫಾತಿಮಾ, ಇಕ್ಬಾಲ್ ಹುಸೇನ್ ಮತ್ತು ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹ್ಮದ್, ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್, ಬಿಲ್ಕೀಸ್ ಬಾನು ಹಾಗೂ ಕೆಲವು ಮುಖಂಡರು ಮುಖ್ಯಮಂತ್ರಿಗೆ ಈ ಹಿಂದೆಯೇ ಮನವಿ ಸಲ್ಲಿಸಿದ್ದರು.

ಈ ಕಾರಣಕ್ಕೆ ಕಳೆದ ನವೆಂಬರ್‌ನಲ್ಲಿಯೇ ಆರ್ಥಿಕ ಇಲಾಖೆಯು ಕಾಯ್ದೆ ತಿದ್ದುಪಡಿಗೆ ಪ್ರಸ್ತಾವ ಸಿದ್ಧಪಡಿಸಿತ್ತು. ಈ ವಿಷಯ ಬಹಿರಂಗಗೊಂಡು, ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದಂತೆಯೇ 'ಮೀಸಲಾತಿ ನೀಡಬೇಕೆಂಬ ಬೇಡಿಕೆ ಬಂದಿರುವುದು ನಿಜ. ಈ ಬಗ್ಗೆ ಯಾವುದೇ ತೀರ್ಮಾನವನ್ನೂ ತೆಗೆದುಕೊಂಡಿಲ್ಲ' ಎಂದು ಮುಖ್ಯಮಂತ್ರಿ ಸ್ಪಷ್ಟನೆ ನೀಡಿದ್ದರು.

ಗುತ್ತಿಗೆಯಲ್ಲಿ ಸದ್ಯ 'ಮೀಸಲು'

24.10%	4%	15%
ಎಸ್‌ಸಿ, ಎಸ್‌ಟಿ	ಪ್ರವರ್ಗ-1	ಪ್ರವರ್ಗ 2ಎ

ಪಶು ಆಹಾರ: ನಿಯಂತ್ರಣಕ್ಕೆ ಕಾಯ್ದೆ

ರಾಜ್ಯದಲ್ಲಿ ಪಶು ಆಹಾರ ಉತ್ಪಾದನೆ, ಪೂರೈಕೆ ಮತ್ತು ಮಾರಾಟವನ್ನು ನಿಯಂತ್ರಿಸಲು ಮತ್ತು ಅದರ ಮೇಲೆ ನಿಗಾ ಇಡುವ ಉದ್ದೇಶದಿಂದ ಕಾಯ್ದೆ ರೂಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಹೀಗಾಗಿ ಕರಡು ಮಸೂದೆ ಸಿದ್ಧವಾಗಿದೆ.

ಪಶು ಆಹಾರ ಉತ್ಪಾದನಾ ಘಟಕಗಳ ನಿಯಂತ್ರಣ ಪ್ರಾಧಿಕಾರ ಮತ್ತು ಪರವಾನಗಿ ನೀಡುವ ಸಂಬಂಧ ಪಶುಸಂಗೋಪನಾ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ. ಅಲ್ಲದೆ, ಪರವಾನಗಿ ಇಲ್ಲದೆ ಪಶು ಆಹಾರ ಉತ್ಪಾದಿಸಿ, ಮಾರಾಟ ಮಾಡುವ ಮೂಲಕ ಕಾಯ್ದೆಯಲ್ಲಿರುವ ನಿಯಮಗಳನ್ನು ಉಲ್ಲಂಘಿಸಿದರೆ ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹ 5 ಲಕ್ಷದವರೆಗೆ ದಂಡ ವಿಧಿಸಲು ಕೂಡಾ ಕರಡು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಕೆಪಿಎಸ್‌ಸಿಗೆ 'ಮೂಗುದಾರ'?

ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬ, ಅಕ್ರಮ, ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ಆರೋಪಗಳನ್ನು ಎದುರಿಸುತ್ತಿರುವ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಕಾಯಕಲ್ಪ ನೀಡುವತ್ತ ಸರ್ಕಾರ ಹೆಜ್ಜೆ ಇಟ್ಟಿದೆ.

ಇದಕ್ಕಾಗಿ, 'ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ಕಾಯ್ದೆ–1959 (1959ರ ಕರ್ನಾಟಕ ಕಾಯ್ದೆ 20)ಕ್ಕೂ ತಿದ್ದುಪಡಿ ತರಲು ನಿರ್ಧರಿಸಿದೆ. ಆ ಮೂಲಕ, ಕೆಪಿಎಸ್‌ಸಿಗೆ 'ಮೂಗುದಾರ' ಹಾಕಲು ಮುಂದಾಗಿದೆ.

'ಆಯೋಗ ನಿಯೋಜಿಸಿದ ಇಬ್ಬರು ಅಥವಾ ಹೆಚ್ಚು ಸದಸ್ಯರು ಅಭ್ಯರ್ಥಿಗಳ ಸಂದರ್ಶನ ನಡೆಸಬಹುದು; ಈ ಸಂದರ್ಶನದ ಫಲಿತಾಂಶಗಳನ್ನು ಆಯೋಗದ ಮುಂದೆ ಮಂಡಿಸಿ, ಅಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಬೇಕು' ಎಂಬ ನಿಯಮ ಈಗ ಇದೆ. ಅದನ್ನು ಬದಲಾಯಿಸಲಾಗುವುದು. 'ಸಂದರ್ಶನ ಮಂಡಳಿಯಲ್ಲಿ ಆಯೋಗವು ನಿಯೋಜಿಸಬಹುದಾದ ಒಬ್ಬ ಸದಸ್ಯ ಮಾತ್ರ ಇರಬೇಕು. ಆದರೆ, ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ನಿಯಮದಲ್ಲಿ ಇರುವಂತೆ ಸಂದರ್ಶನ ನಡೆಸಬೇಕು' ಎಂದು ಬದಲಿಸಲಾಗುವುದು.

ಆಯೋಗದ ಸಭೆಗೆ ಅಧ್ಯಕ್ಷರನ್ನು ಸೇರಿಸಿ ಒಟ್ಟು ಸದಸ್ಯರ ಪೈಕಿ ಶೇ 50ರಷ್ಟು ಕೋರಂ ಅಗತ್ಯ (ಈ ಹಿಂದೆ ಅಧ್ಯಕ್ಷರು ಇಲ್ಲದಿದ್ದರೂ ಶೇ 50ರಷ್ಟು ಎಂದಿತ್ತು). ಆಯೋಗದ ಎಲ್ಲ ನಿರ್ಣಯಗಳನ್ನು ಕಾರ್ಯದರ್ಶಿ ದಾಖಲಿಸಿಕೊಳ್ಳಬೇಕು ಮತ್ತು ಅದು ಎಲ್ಲ ಸದಸ್ಯರಿಗೂ ಮುಕ್ತ ಆಗಿರಬೇಕು. ಆ ನಿರ್ಣಯಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಹೊಂದಿರುವ ಸದಸ್ಯ, ಅದನ್ನು ದಾಖಲಿಸುವ ಜೊತೆಗೆ ಅದಕ್ಕೆ ಕಾರಣವನ್ನೂ ದಾಖಲಿಸಬಹುದು.

ಚಾಂಪಿಯನ್ಸ್ ಟ್ರೋಫಿ

ಸತತ ಮೂರನೇ ಫೈನಲ್‌ಗೆ ಭಾರತ

ದುಬೈ(ಪಿಟಿಐ): ವಿರಾಟ್ ಕೊಹ್ಲಿ ಸಂಯಮದ ಆಟದ ಬಲದಿಂದ ಭಾರತ ಕ್ರಿಕೆಟ್ ತಂಡವು ಮಂಗಳವಾರ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಜಯಿಸಿ, ಫೈನಲ್ ಪ್ರವೇಶಿಸಿತು.

ಆಸ್ಟ್ರೇಲಿಯಾ: 264 (49.3 ಓವರ್)

ಭಾರತ: 6ಕ್ಕೆ267 (48.1 ಓವರ್‌ಗಳಲ್ಲಿ)

ಫಲಿತಾಂಶ: **ಭಾರತಕ್ಕೆ 4** ವಿಕೆಟ್‌ಗಳ ಜಯ

- ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲಿ ಭಾರತವು ಒಟ್ಟಾರೆ 5ನೇ ಹಾಗೂ ಸತತ 3ನೇ ಬಾರಿ ಫೈನಲ್ ಪ್ರವೇಶಿಸಿದೆ
- 2002 ಮತ್ತು 2013ರಲ್ಲಿ ಭಾರತ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು
- ಕೊಹ್ಲಿ ಐಸಿಸಿ ಟ್ರೋಫಿ ಟೂರ್ನಿಗಳಲ್ಲಿ ಒಟ್ಟು 24 ಅರ್ಧಶತಕ ಗಳಿಸಿ, ಸಚಿನ್ ತೆಂಡೂಲ್ಕರ್ (23) ದಾಖಲೆ ಮುರಿದರು.
- ಚಾಂಪಿಯನ್ಸ್ ಟ್ರೋಫಿಯಲ್ಲಿ ವಿರಾಟ್ ಒಟ್ಟು 746 ರನ್ ಗಳಿಸಿದರು. ಶಿಖರ್ ಧವನ್ (701ರನ್) ದಾಖಲೆ ಮೀರಿದರು.
- ಕೆ.ಎಲ್. ರಾಹುಲ್ ಏಕದಿನ ಕ್ರಿಕೆಟ್‌ನಲ್ಲಿ 3 ಸಾವಿರ ರನ್‌ಗಳ ಮೈಲಿಗಲ್ಲು ದಾಟಿದರು.
- ಮಾರ್ಚ್ 9ರಂದು ದುಬೈನಲ್ಲಿ ಫೈನಲ್ ಪಂದ್ಯ ನಡೆಯಲಿದೆ

12

'ಪಾಕಿಸ್ತಾನಿ ಎಂದರೆ ಅಪರಾಧವಲ್ಲ'

ನವದೆಹಲಿ (ಪಿಟಿಐ): 'ಮಿಯಾಂ–ತಿಯಾಂ' ಎನ್ನುವುದು, 'ಪಾಕಿಸ್ತಾನಿ' ಎಂದು ಕರೆಯುವುದು ಕೆಟ್ಟ ಅಭಿರುಚಿಯಿಂದ ಕೂಡಿರುವುದಾದರೂ ಅದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಅಪರಾಧ ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಜಾರ್ಖಂಡ್‌ನ ಉಪ ವಿಭಾಗೀಯ ಕಚೇರಿಯಲ್ಲಿ ಮಾಹಿತಿ ಹಕ್ಕು ಶಾಖೆಯ ಹಂಗಾಮಿ ಗುಮಾಸ್ತ, ಉರ್ದು ಅನುವಾದಕರೊಬ್ಬರು ಸಲ್ಲಿಸಿದ್ದ ದೂರಿನಲ್ಲಿ ಆರೋಪಿಯಾಗಿದ್ದ ಹರಿನಂದನ್ ಸಿಂಗ್ ಎನ್ನುವವರನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎಸ್‌.ಸಿ. ಶರ್ಮ ಅವರು ಇರುವ ವಿಭಾಗೀಯ ಪೀಠವು ದೋಷಮುಕ್ತಗೊಳಿಸಿದೆ.

'ದೂರುದಾರರನ್ನು ಮಿಯಾಂ–ತಿಯಾಂ ಮತ್ತು ಪಾಕಿಸ್ತಾನಿ ಎಂದು ಕರೆದು ಅವರ ಧಾರ್ಮಿಕ ಭಾವನೆಗಳಿಗೆ ಮೇಲ್ಮನವಿದಾರರು (ಸಿಂಗ್) ಧಕ್ಕೆ ತಂದಿದ್ದಾರೆ ಎಂದು ಆರೋಪಿಸಲಾಗಿದೆ. ಈ ಮಾತುಗಳು ಕೆಟ್ಟ ಅಭಿರುಚಿಯವು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇವು ದೂರುದಾರರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂಥವಲ್ಲ' ಎಂದು ಫೆಬ್ರುವರಿ 11ರಂದು ನೀಡಿರುವ ತೀರ್ಪಿನಲ್ಲಿ ಪೀಠ ಸ್ಪಷ್ಟಪಡಿಸಿದೆ.

ಸ್ವ ಇಚ್ಛೆಯಿಂದ ಗ್ಯಾರಂಟಿ ತ್ಯಜಿಸಲು ಅವಕಾಶ: ರೇವಣ್ಣ

ಪ್ರಜಾವಾಣಿ ವಾರ್ತೆ



ಎಚ್‌.ಎಂ. ರೇವಣ್ಣ

ನವದೆಹಲಿ: ಐದು ಗ್ಯಾರಂಟಿ ಯೋಜನೆಗಳನ್ನು ಸ್ವ ಇಚ್ಛೆಯಿಂದ ಬಿಟ್ಟುಕೊಡುವವರಿಗೆ ಅದಕ್ಕೆ ಅವಕಾಶ ಮಾಡಿಕೊಡಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ.ರೇವಣ್ಣ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಮಾಹಿತಿ ನೀಡಿದ್ದೇನೆ' ಎಂದರು.

'ಕಾರವಾರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳು ನಮಗೆ ಬೇಡ ಎಂದು ಕೆಲವು ಮಹಿಳೆಯರು ಹೇಳಿದ್ದರು. ಈ ಯೋಜನೆಗಳನ್ನು ರಾಜ್ಯ ಸರ್ಕಾರ ನಿಲ್ಲಿಸುವುದಿಲ್ಲ' ಎಂದರು.

ದುಡ್ಡಿಲ್ಲದೇ ಹುದ್ದೆ ಗಿಟ್ಟಿಸಲು ಸಾಧ್ಯವಿಲ್ಲ: ಅಶೋಕ ಆಕ್ರೋಶ

'ಕೆಪಿಎಸ್‌ಸಿ ಭ್ರಷ್ಟಾಚಾರದ ಕೂಪ'

ಪ್ರಜಾವಾಣಿ ವಾರ್ತೆ

ಆರ್‌.ಅಶೋಕ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಕಳ್ಳರ ಸಂತೆ ಆಗಿದೆ, ಭ್ರಷ್ಟಾಚಾರದ ಕೂಪವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅರ್ಹರು, ಕನ್ನಡಿಗರು, ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳು ನ್ಯಾಯ ಮಾರ್ಗದಿಂದ ಆಯ್ಕೆ ಆಗಲು ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಕಿಡಿಕಾರಿದರು.

ಕೆಪಿಎಸ್‌ಸಿಯಲ್ಲಿನ ಪರೀಕ್ಷಾ ಹಗರಣಗಳು ಮತ್ತು ಕನ್ನಡ ಪ್ರಶ್ನೆ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಆದ ಅನ್ಯಾಯದ ಬಗ್ಗೆ ವಿಧಾನಸಭೆಯಲ್ಲಿ ಮಂಗಳವಾರ ನಿಯಮ 69ರಡಿ ವಿಷಯ ಪ್ರಸ್ತಾಪಿಸಿದರು.

'ವಿವಿಧ ಹುದ್ದೆಗಳ ಪರೀಕ್ಷೆಗಳಿಗೆ ದರ ಪಟ್ಟಿ ನಿಗದಿ ಆಗಿದೆ. ಹಣ ಕೊಟ್ಟವರಿಗೆ ಮಾತ್ರ ಪ್ರತ್ಯೇಕ ಪರೀಕ್ಷೆ ಬರೆಸಿ ಆಯ್ಕೆ ಮಾಡಲಾಗುತ್ತಿದೆ' ಎಂದು ಆರೋಪಿಸಿದ ಅವರು, ಅದಕ್ಕೆ ಪೂರಕ ದಾಖಲೆಗಳನ್ನೂ ಸದನದಲ್ಲಿ ಪ್ರದರ್ಶಿಸಿದರು. 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗಳನ್ನೂ ಉಲ್ಲೇಖಿಸಿದರು.

'ಉಪ ಆಯುಕ್ತ, ಡಿವೈಎಸ್‌ಪಿಗಳ ಹುದ್ದೆಗಳನ್ನು ಹರಾಜಿಗಿಡಲಾಗಿದೆ. ಕೆಪಿಎಸ್‌ಸಿ ವ್ಯವಸ್ಥೆಯಲ್ಲಿ ವಿದ್ಯೆಗೆ ಬೆಲೆಯೇ ಇಲ್ಲ. ದುಡ್ಡು ಕೊಟ್ಟು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬರುವವರು ಕೊಳ್ಳೆ ಹೊಡೆಯಲು ಕೂರುತ್ತಾರೆ. ಪೂರ್ವಭಾವಿ ಪರೀಕ್ಷೆಗೆ ₹60 ಲಕ್ಷ, ಮುಖ್ಯ ಪರೀಕ್ಷೆ ₹1 ಕೋಟಿ ಮತ್ತು ಸಂದರ್ಶನಕ್ಕೆ ₹40 ಲಕ್ಷ ನಿಗದಿ ಮಾಡಲಾಗಿದೆ. ಹೀಗೆ ಮೂರು ಹಂತಗಳನ್ನು ದಾಟಿ ಹುದ್ದೆ ಗಿಟ್ಟಿಸಲು ಪ್ಯಾಕೇಜ್ ರೂಪದಲ್ಲಿ ಹಣ ಕೊಡಬೇಕಾಗಿದೆ' ಎಂದು ಅಶೋಕ ಆರೋಪಿಸಿದರು.

ಅಶೋಕ ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ, ಕೆ. ಷಡಕ್ಷರಿ ಮತ್ತು ಬಿ.ಕೆ. ಸಂಗಮೇಶ್ವರ್ ಅವರು, 'ನೀವು ಪುಕ್ಸಟೆ ಭಾಷಣ ಮಾಡಬೇಡಿ. ಯಾವುದೇ ಆಧಾರ ಮತ್ತು ದಾಖಲೆಗಳು ಇಲ್ಲದೇ ಮಾತನಾಡಬೇಡಿ. ನಿಮ್ಮ ಬಳಿ ದಾಖಲೆ ಇದ್ದರೆ ಮುಂದಿಡಿ, ಆ ಮೇಲೆ ಮಾತನಾಡಿ' ಎಂದು ಸವಾಲು ಹಾಕಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

11ನೇ ಪುಟ ನೋಡಿ

ಪರೀಕ್ಷೆಯಲ್ಲಿ ಪಾಸಾಗಲು ದರ ಪಟ್ಟಿ

ವಿವಿಧ ಹುದ್ದೆಗಳ ಪರೀಕ್ಷೆಯಲ್ಲಿ ಉತ್ತೀರ್ಣ ಮಾಡಲು ವಸೂಲಿ ಮಾಡುವ ಮೊತ್ತದ ದರ ಪಟ್ಟಿಯನ್ನು ಅಶೋಕ ಅವರು ಸದನದಲ್ಲಿ ವಿವರಿಸಿದರು

ಹುದ್ದೆ	ಮೊತ್ತ
ಉಪ ವಿಭಾಗಾಧಿಕಾರಿ (ಎಸಿ)	₹2 ಕೋಟಿ
ಡಿವೈಎಸ್‌ಪಿ	₹2 ಕೋಟಿ
ವಾಣಿಜ್ಯ ತೆರಿಗೆ ಅಧಿಕಾರಿ	₹1.50 ಕೋಟಿ
ಪಂಚಾಯತ್ ಅಧಿಕಾರಿ	₹1.50 ಕೋಟಿ

ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ಮಾತ್ರ ಈ ಹುದ್ದೆಗಳಿಗೆ ಆಯ್ಕೆ ಆಗಬೇಕು ಎಂಬ ಹುನ್ನಾರ ಇದೆ. ಕೆಪಿಎಸ್‌ಸಿ ಅವ್ಯವಹಾರದ ಬಗ್ಗೆ ಸಿಬಿಐ ತನಿಖೆಯೇ ಆಗಬೇಕು

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ

ಉಕ್ರೇನ್‌ಗೆ ನೆರವು ತಾತ್ಕಾಲಿಕ ಸ್ಥಗಿತ

ಹಿರಿಯ ಅಧಿಕಾರಿಗಳ ಜೊತೆ ಸಭೆ ಬಳಿಕ ಅಮೆರಿಕ ಅಧ್ಯಕ್ಷ ಟ್ರಂಪ್ ನಿರ್ಧಾರ

ಡೊನಾಲ್ಡ್ ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ರಷ್ಯಾ ಜೊತೆ ಯುದ್ಧನಿರತ ಉಕ್ರೇನ್‌ಗೆ ನೀಡುತ್ತಿರುವ ಎಲ್ಲ ಸೇನಾ ನೆರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ.

ಈ ನಿರ್ಧಾರವು, ಉಕ್ರೇನ್‌ಗೆ ಶತಕೋಟಿ ಡಾಲರ್ ಮೌಲ್ಯದ (ಅಂದಾಜು ₹8,700 ಕೋಟಿ) ಶಸ್ತ್ರಾಸ್ತ್ರ ಪೂರೈಕೆ ಮೇಲೆ ಪರಿಣಾಮ ಬೀರಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶ್ವೇತಭವನದ ಓವಲ್ ಕಚೇರಿಯಲ್ಲಿ ಇತ್ತೀಚೆಗೆ ತಮ್ಮನ್ನು ಭೇಟಿ ಮಾಡಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ವಾಗ್ವಾದ ನಡೆದ ಕೆಲ ದಿನಗಳ ನಂತರ ಟ್ರಂಪ್ ಈ ನಿರ್ಧಾರ ಕೈಗೊಂಡಿದ್ದಾರೆ.

'ಉಕ್ರೇನ್‌ಗೆ ನೀಡಲಾಗುತ್ತಿರುವ ಸೇನಾ ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಟ್ರಂಪ್ ಸೂಚಿಸಿದ್ದು, ಈ ಕುರಿತ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರ ಹೇಳಿಕೆ ಉಲ್ಲೇಖಿಸಿ 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳೊಂದಿಗೆ ಟ್ರಂಪ್ ಅವರು ನಡೆಸಿದ ಸರಣಿ ಸಭೆಗಳ ನಂತರ ಈ ಕುರಿತ ನಿರ್ಧಾರಕ್ಕೆ ಬರಲಾಗಿದೆ. ರಷ್ಯಾ ಜೊತೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರು ಬದ್ಧತೆ ಪ್ರದರ್ಶಿಸುವ ಕುರಿತು ಟ್ರಂಪ್ ಅವರಿಗೆ ಮನವರಿಕೆಯಾಗುವವರೆಗೆ ಈ ಆದೇಶ ಜಾರಿಯಲ್ಲಿ ಇರಲಿದೆ' ಎಂದೂ ಅಧಿಕಾರಿಗಳು ಹೇಳಿದ್ದಾರೆ.

'ಉಕ್ರೇನ್ ಭದ್ರತಾ ನೆರವು ಕಾರ್ಯಕ್ರಮ'ದಡಿ ಕೋಟ್ಯಂತರ ಡಾಲರ್ ನೆರವು ನೀಡುವುದು ಕೂಡ ಸ್ಥಗಿತಗೊಳ್ಳಲಿದೆ. ಅಮೆರಿಕದ ಕಂಪನಿಗಳಿಂದ ಹೊಸ ಶಸ್ತ್ರಾಸ್ತ್ರ ಖರೀದಿಗೆ ಉಕ್ರೇನ್ ಈ ಹಣಕಾಸು ನೆರವನ್ನು ಬಳಕೆ ಮಾಡಿಕೊಳ್ಳಬೇಕಿತ್ತು. ರಷ್ಯಾ ಯುದ್ಧ ಆರಂಭಿಸಿದಾಗಿನಿಂದ ಈವರೆಗೆ ಉಕ್ರೇನ್‌ಗೆ ಅಂದಾಜು ₹5 ಲಕ್ಷ ಕೋಟಿ) ಸೇನಾ ನೆರವು ನೀಡಲಾಗಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಓಡಿಹೋಗೆವು: ಉಕ್ರೇನ್

ಕೀವ್ (ರಾಯಿಟರ್ಸ್): 'ಅಮೆರಿಕ ಸೇನಾ ನೆರವನ್ನು ಸ್ಥಗಿತಗೊಳಿಸಿದರೂ ತನ್ನ ಪಡೆಗಳು ಯುದ್ಧಭೂಮಿಯಿಂದ ಓಡಿ ಹೋಗುವುದಿಲ್ಲ. ರಷ್ಯಾ ವಿರುದ್ಧದ ಸಮರ ಮುಂದುವರಿಸಲಿವೆ' ಎಂದು ಉಕ್ರೇನ್ ಮಂಗಳವಾರ ಪ್ರತಿಕ್ರಿಯಿಸಿದೆ.

ರಷ್ಯಾ ವಿರುದ್ಧದ ಯುದ್ಧದಲ್ಲಿ ಉಕ್ರೇನ್ ಪಾಲಿಗೆ ನಿರ್ಣಾಯಕವೆನಿಸಿದ ಸೇನಾ ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ ಬೆನ್ನಲ್ಲೇ, ಉಕ್ರೇನ್ ಪ್ರಧಾನಿ ಡೆನಿಸ್ ಶಿಮಿಹಾಲ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಟ್ರಂಪ್ ಅವರ ನಡೆಗೆ ಮೊದಲ ಅಧಿಕೃತ ಪ್ರತಿಕ್ರಿಯೆ ನೀಡಿರುವ ಅವರು, ಅಮೆರಿಕದೊಂದಿಗೆ ಉಕ್ರೇನ್ ವಾಸ್ತವಿಕ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸುವುದನ್ನು ಮುಂದುವರಿಸಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ರಷ್ಯಾ, ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಬಳಸಿ ನಡೆಸುವ ದಾಳಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಅಮೆರಿಕ ಪೂರೈಸಿರುವ ಪ್ಯಾಟ್ರಿಯಟ್ ರಕ್ಷಣಾ ವ್ಯವಸ್ಥೆ ಮಾತ್ರ ಹೊಂದಿದೆ. ಆದರೆ, ಇವುಗಳ ದುರಸ್ತಿ ಹಾಗೂ ನಿರ್ವಹಣೆ ದೊಡ್ಡ ಸವಾಲಾಗಿದೆ' ಎಂದಿದ್ದಾರೆ.

'ಅತ್ಯುತ್ತಮ ಕೊಡುಗೆ': ರಷ್ಯಾ

ಮಾಸ್ಕೊ (ಎಎಫ್‌ಪಿ): ಉಕ್ರೇನ್‌ಗೆ ಸೇನಾ ನೆರವು ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಅಮೆರಿಕ ನಿರ್ಧಾರವನ್ನು ರಷ್ಯಾ ಸ್ವಾಗತಿಸಿದೆ.

ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧ ಕೊನೆಗಾಣಿಸಲು ಈ ಕ್ರಮ ಅಮೆರಿಕದ ಅತ್ಯುತ್ತಮ ಕೊಡುಗೆಯಾಗಿದೆ ಎಂದು ಮಂಗಳವಾರ ಹೇಳಿದೆ.

'ಸೇನಾ ನೆರವು ಪೂರೈಕೆಯನ್ನು ಅಮೆರಿಕ ನಿಲ್ಲಿಸಿದಲ್ಲಿ, ಶಾಂತಿ ಸ್ಥಾಪನೆಗೆ ಅದು ದೊಡ್ಡ ಕೊಡುಗೆ ಎನಿಸಲಿದೆ. ಶಾಂತಿ ಸ್ಥಾಪನೆಯಲ್ಲಿ ತೊಡಗುವಂತೆ ಉಕ್ರೇನ್ ಮೇಲೆ ಒತ್ತಡ ಬೀಳಲಿದೆ' ಎಂದು ರಷ್ಯಾ ಸರ್ಕಾರದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

'ಉಕ್ರೇನ್ ವಿರುದ್ಧ ರಷ್ಯಾ ಯುದ್ಧ ಆರಂಭಿಸಿದ ದಿನದಿಂದಲೂ ಆ ದೇಶಕ್ಕೆ ಸೇನಾ ನೆರವು ನೀಡುತ್ತಿರುವ ಪ್ರಮುಖ ರಾಷ್ಟ್ರ ಅಮೆರಿಕ. ಈಗ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೈಗೊಂಡಿರುವ ನಿರ್ಧಾರದಿಂದಾಗಿ ಎಂಥ ಸನ್ನಿವೇಶಗಳು ಸೃಷ್ಟಿಯಾಗಲಿವೆ ಎಂಬುದನ್ನು ನಾವು ಗಮನಿಸುತ್ತಿದ್ದೇವೆ' ಎಂದು ಪೆಸ್ಕೋವ್ ಹೇಳಿದ್ದಾರೆ.

ಅದು ಹಿತವಚನ, ಹಳ್ಳಿ ಭಾಷೆಯಲ್ಲಿ ಹೇಳಿದ್ದೆ: ಡಿಕೆಶಿ

ಬೆಂಗಳೂರು: 'ನಟ್ಟು- ಬೋಲ್ಟು' ಪದ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ಸಂಸ್ಕಾರ ತೋರಿಸುತ್ತದೆ ಎನ್ನುವ ಚಿತ್ರನಿರ್ದೇಶಕ ನಾಗಾಭರಣ ಅವರ ಮಾತಿಗೆ, ಶಿವಕುಮಾರ್, 'ನಾನು ಹೇಳಿದ್ದು ಹಿತವಚನ, ನನ್ನ ಹಳ್ಳಿ ಭಾಷೆಯಲ್ಲಿ ಒರಟಾಗಿ ಹೇಳಿದ್ದೇನೆ. ಅವರ ಬಳಿ ಹೊಸ ಭಾಷೆಯಿದ್ದರೆ ಕಲಿಸಿಕೊಡಲಿ, ಅದೇ ರೀತಿ ಮಾತನಾಡುತ್ತೇನೆ' ಎಂದು ತಿವಿದರು. 5

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಗ್ರಾಹಕರ ಆಕರ್ಷಿಸಲು ಮೈಸೂರ್ ಸ್ಯಾಂಡಲ್ಸ್ ನೂತನ ಉತ್ಪನ್ನಗಳು

ಮಲ್ಲಿಗೆ, ಗುಲಾಬಿ ಘಮದ ಸಾಬೂನು

● ಜಯಸಿಂಹ ಆರ್.

ಬೆಂಗಳೂರು: ಮೈಸೂರ್ ಸ್ಯಾಂಡಲ್ಸ್ ಎಂದರೆ ಗಂಧದ ಎಣ್ಣೆಯ ಸಾಬೂನು ಮಾತ್ರ ಎನ್ನುವ ಕಾಲ ಬಹಳ ಹಳತಾಯಿತು. ಈಗ ಮಲ್ಲಿಗೆ, ಲ್ಯಾವೆಂಡರ್, ಗುಲಾಬಿ, ಲೋಳೆಸರ... ಹೊಸ ಸುವಾಸನೆಯುಳ್ಳ ಸಾಬೂನುಗಳ ಪಟ್ಟಿ ಇದು.

ಗಂಧದೆಣ್ಣೆಯ ಸಾಬೂನಿಗೆ ಹೆಸರಾದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ (ಕೆಎಸ್‌ಡಿಎಲ್) 'ಮೈಸೂರ್ ಸ್ಯಾಂಡಲ್' ಬ್ರ್ಯಾಂಡ್‌ನ ಅಡಿಯಲ್ಲಿ ಈಗ ಹೊಸ–ಹೊಸ ಉತ್ಪನ್ನಗಳನ್ನು ತಂದಿದೆ. ಗಂಧದೆಣ್ಣೆಯ ಸಾಬೂನಿಗೆ ಬೇಡಿಕೆ ಕುಂದಿಲ್ಲವಾದರೂ ಹೊಸ ಪರಿಮಳದ ಸಾಬೂನುಗಳು ಮಾರುಕಟ್ಟೆಯಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿವೆ.

ಗಂಧದೆಣ್ಣೆ ಮತ್ತು ಬಾದಾಮಿ ಎಣ್ಣೆಯ ಮಿಶ್ರಣ ಇರುವ ಬೇಬಿ ಸಾಬೂನು, ಗಿಡಮೂಲಿಕೆ, ಬೇವಿನ ಎಣ್ಣೆ–ನಿಂಬೆ, ಅರಿಶಿನದ ಅಂಶಗಳಿರುವ ಸಾಬೂನುಗಳನ್ನೂ ಕೆಎಸ್‌ಡಿಎಲ್ ಈಚಿನ ದಿನಗಳಲ್ಲಿ ಮಾರುಕಟ್ಟೆಗೆ ತಂದಿದೆ. ಈ ಹೊಸ ಉತ್ಪನ್ನಗಳ ಬಿಡುಗಡೆಗೂ ಮುನ್ನ ಕಂಪನಿಯ ವಾರ್ಷಿಕ ಸಾಬೂನು ತಯಾರಿಕೆ 26,000 ಟನ್‌ಗಳಷ್ಟು ಇತ್ತು. ಈಗ ಅದು 34,000 ಟನ್‌ಗಳಿಗೆ ಏರಿಕೆಯಾಗಿದೆ.

ಹೊಸ ಉತ್ಪನ್ನಗಳಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿರುವುದು ಮಲ್ಲಿಗೆ ಪರಿಮಳದ ಸಾಬೂನು. ಗಂಧದೆಣ್ಣೆಯ ಸಾಬೂನಿನ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳ ಜತೆಗೆ ಮಲ್ಲಿಗೆ ಪರಿಮಳದ ದ್ರಾವಣವನ್ನು ಈ ಸಾಬೂನಿನ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಉತ್ತಮ ಗುಣಮಟ್ಟ ಕಾಯ್ದುಕೊಂಡಿರುವ ಕಾರಣಕ್ಕೆ ಈ ಸಾಬೂನಿಗೆ ಬೇಡಿಕೆ ಹೆಚ್ಚುತ್ತಿದೆ ಎನ್ನುತ್ತಾರೆ ಕೆಎಸ್‌ಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಪಿ.ಕೆ.ಎಂ.

11ನೇ ಪುಟ ನೋಡಿ

ಮೈಸೂರ್ ಸ್ಯಾಂಡಲ್ಸ್‌ನ ವಿವಿಧ ಪರಿಮಳದ 'ವೇವ್' ಸಾಬೂನುಗಳು ಪ್ರಜಾವಾಣಿ ಚಿತ್ರ

₹400 ಕೋಟಿ ಲಾಭದ ನಿರೀಕ್ಷೆ: ಪ್ರಶಾಂತ್

ಹೊಸ ಉತ್ಪನ್ನಗಳು ಮತ್ತು ಮಾರುಕಟ್ಟೆ ವಿಸ್ತರಣೆಯ ಕಾರಣಕ್ಕೆ ಕಂಪನಿಯ ಲಾಭದ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2024–25ನೇ ಸಾಲಿನಲ್ಲಿ ವಹಿವಾಟು ₹2,000 ಕೋಟಿಯನ್ನು ದಾಟಲಿದ್ದು, ಲಾಭ ₹400 ಕೋಟಿಯ ಗಡಿ ದಾಟುವ ನಿರೀಕ್ಷೆ ಇದೆ. 2030ರ ವೇಳೆಗೆ ವಹಿವಾಟನ್ನು ₹10,000 ಕೋಟಿಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ಕಾರ್ಖಾನೆಗಳ ಸಾಮರ್ಥ್ಯವನ್ನು ಹೆಚ್ಚಿಸುವ, ಹೊಸ ಕಾರ್ಖಾನೆಗಳ ಸ್ಥಾಪನೆಯ ಪ್ರಕ್ರಿಯೆ ನಡೆಯುತ್ತಿದೆ

ಪ್ರಶಾಂತ್ ಪಿ.ಕೆ.ಎಂ. ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಡಿಎಲ್

ಜಾಗತಿಕ ಬ್ರ್ಯಾಂಡ್ ಆಗಿಸಬೇಕು: ಪಾಟೀಲ

ನಮ್ಮ ಸರ್ಕಾರ ಬರುವುದಕ್ಕೂ ಮುನ್ನ 23 ದೇಶಗಳಲ್ಲಷ್ಟೇ ಕಂಪನಿಯ ಉತ್ಪನ್ನಗಳು ರಫ್ತಾಗುತ್ತಿತ್ತು. ಈಗ 80 ದೇಶಗಳಿಗೆ ಮಾರುಕಟ್ಟೆ ವಿಸ್ತರಿಸಲಾಗಿದೆ. ಇದು ಇನ್ನಷ್ಟು ಹೆಚ್ಚಲಿದೆ. ಕೆಎಸ್‌ಡಿಎಲ್ ಅನ್ನು ಜಾಗತಿಕ ಬ್ರ್ಯಾಂಡ್ ಆಗಿಸಬೇಕು ಎಂಬುದು ನಮ್ಮ ಗುರಿ. ಇದಕ್ಕಾಗಿ ಜಾಗತಿಕ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಲು ಕಂಪನಿ ಮುಂದಾಗಿದೆ. ಜತೆಗೆ ವಿಶ್ವದ ಎಲ್ಲ ದೇಶಗಳ ಪ್ರತಿಷ್ಠಿತ ನಗರಗಳಲ್ಲಿ ಮೈಸೂರ್ ಸ್ಯಾಂಡಲ್‌ನ ಉತ್ಪನ್ನಗಳು ದೊರೆಯು ವಂತೆ ಮಾಡಬೇಕಿದೆ. ಇದಕ್ಕೆ ಅಗತ್ಯ ವಿರುವ ಎಲ್ಲ ಸಹಕಾರವನ್ನು ರಾಜ್ಯ ಸರ್ಕಾರ ನೀಡಲಿದೆ.

ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ

'ಬೇಡಿಕೆಯು ಹೆಚ್ಚಾಗಿದೆ'

ನೂತನ ಉತ್ಪನ್ನಗಳನ್ನು ರೂಪಿಸುವ ಮೂಲಕ ಕಂಪನಿ ಪ್ರಯೋಗಶೀಲತೆಗೆ ತೆರೆದುಕೊಂಡಿದೆ. ಗುಣಮಟ್ಟದ ಉತ್ಪನ್ನಗಳಿಗೆ ಜನರು ಉತ್ತಮವಾಗಿ ಸ್ಪಂದಿಸಿದ್ದಾರೆ. ಬೇಡಿಕೆ ಹೆಚ್ಚಾಗಿದ್ದು, ಪೂರೈಕೆಯಲ್ಲಿ ಕೊರತೆಯಾಗುತ್ತಿದೆ. ಹೀಗಾಗಿ ಹೊಸ ಯಂತ್ರಗಳನ್ನು ಅಳವಡಿಸಿ ತಯಾರಿಕೆ ಹೆಚ್ಚಿಸಲಿದ್ದೇವೆ

ಸಿ.ಎಸ್.ನಾಡಗೌಡ, ಅಧ್ಯಕ್ಷ, ಕೆಎಸ್‌ಡಿಎಲ್

2.76 ಲಕ್ಷ ಹುದ್ದೆ ಖಾಲಿ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಟ್ಟು 2,76,386 ಹುದ್ದೆಗಳು ಖಾಲಿ ಇವೆ. ಒಟ್ಟು 7,80,748 ಮಂಜೂರಾದ ಹುದ್ದೆಗಳ ಪೈಕಿ 5,04,362 ಹುದ್ದೆಗಳು ಮಾತ್ರ ಭರ್ತಿ ಇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಕಾಂಗ್ರೆಸ್‌ನ ರವಿಕುಮಾರಗೌಡ (ಗಣಿಗ) ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿ, 'ಎ' ದರ್ಜೆಯ 16,017, 'ಬಿ' ದರ್ಜೆಯ 16,734, 'ಸಿ' ದರ್ಜೆಯ 1,66,021 ಮತ್ತು 'ಡಿ' ದರ್ಜೆಯ 77,614 ಹುದ್ದೆಗಳು ಖಾಲಿ ಇವೆ ಎಂಬ ಮಾಹಿತಿ ಒದಗಿಸಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಅತ್ಯಧಿಕ 70,727 ಹುದ್ದೆಗಳು ಖಾಲಿ ಇವೆ. ಈ ಇಲಾಖೆಯಲ್ಲಿ ಒಟ್ಟು 2,84,086 ಹುದ್ದೆಗಳ ಮಂಜೂರಾತಿ ಇದೆ. ಈ ಪೈಕಿ 'ಸಿ' ದರ್ಜೆ ಒಂದರಲ್ಲೇ 60,219 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ.

ಗೃಹ ಇಲಾಖೆಯಲ್ಲಿ 26,168, ಉನ್ನತ ಶಿಕ್ಷಣ ಇಲಾಖೆಯಲ್ಲಿ 13,227, ಕಂದಾಯ ಇಲಾಖೆಯಲ್ಲಿ 11,145, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 10,898, ಪಶುಸಂಗೋಪನಾ ಇಲಾಖೆಯಲ್ಲಿ 10,755, ಸಮಾಜ ಕಲ್ಯಾಣ ಇಲಾಖೆಯಲ್ಲಿ 9,980, ಆರ್ಥಿಕ ಇಲಾಖೆಯಲ್ಲಿ 9,536, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 8,334 ಹುದ್ದೆಗಳು ಖಾಲಿ ಇವೆ ಎಂದು ಮಾಹಿತಿ ನೀಡಿದ್ದಾರೆ.

259 ನ್ಯಾಯಾಧೀಶರ ಹುದ್ದೆ ಖಾಲಿ

ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನ್ಯಾಯಾಲಯಗಳಲ್ಲಿ ಒಟ್ಟು 259 ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ವಿಧಾನಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಬಿಜೆಪಿಯ ಮಹೇಶ್ ಟೆಂಗಿನಕಾಯಿ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 'ಕೆಳಹಂತದ ನ್ಯಾಯಾಲಯಗಳಲ್ಲಿ ಮಂಜೂರಾದ 1,395 ನ್ಯಾಯಾಧೀಶರ ಹುದ್ದೆಗಳಿವೆ. ಈ ಪೈಕಿ 1,152 ಹುದ್ದೆಗಳು ಭರ್ತಿ ಇವೆ. ಜಿಲ್ಲಾ ನ್ಯಾಯಾಧೀಶರು 61, ಹಿರಿಯ ಸಿವಿಲ್ ನ್ಯಾಯಾಧೀಶರ ಹುದ್ದೆಗಳು 33 ಮತ್ತು 165 ಸಿವಿಲ್ ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ' ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯದ ಜಿಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು 21,541 ಹುದ್ದೆಗಳ ಮಂಜೂರಾತಿ ಇದ್ದು, ಈ ಪೈಕಿ 5,926 ಹುದ್ದೆಗಳು ಖಾಲಿ ಇವೆ ಎಂದು ತಿಳಿಸಿದ್ದಾರೆ.

ಬಲ್ಡೋಟಾ ಕಾರ್ಖಾನೆ: ಕೆಲಸ ನಿಲ್ಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಜಿಲ್ಲಾ ಕೇಂದ್ರದ ಸಮೀಪ ಬಲ್ಡೋಟಾ ಕಂಪನಿಯು ಉಕ್ಕಿನ ಕಾರ್ಖಾನೆ ಆರಂಭಿಸಲು ಮಾಡಿಕೊಳ್ಳುತ್ತಿರುವ ಸಿದ್ಧತೆಯನ್ನು ನಿಲ್ಲಿಸಬೇಕು' ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಕಾರ್ಖಾನೆ ಆರಂಭವಾದರೆ ದೂಳು ವ್ಯಾಪಕವಾಗುತ್ತದೆ ಎಂದು ಕೊಪ್ಪಳದ ಜನರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಹೀಗಾಗಿ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ನೇತೃತ್ವದಲ್ಲಿ ಜಿಲ್ಲೆಯ ಎಲ್ಲ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳು, ಸಂಘ–ಸಂಸ್ಥೆಗಳ ಮುಖಂಡರು ಮುಖ್ಯಮಂತ್ರಿಯನ್ನು ಬೆಂಗಳೂರಿನಲ್ಲಿ ಮಂಗಳವಾರ ಭೇಟಿಯಾಗಿ ಕಾರ್ಖಾನೆ ಆರಂಭವಾದರೆ ಆಗುವ ಅಪಾಯಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ಆಗ ಜಿಲ್ಲಾಧಿಕಾರಿಗೆ ಕರೆ ಮಾಡಿದ ಮುಖ್ಯಮಂತ್ರಿಯವರು, 'ಕಾರ್ಖಾನೆ ಆರಂಭಿಸುವ ಸಿದ್ಧತೆ ಕೆಲಸ ನಿಲ್ಲಿಸಲು ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸಂಬಂಧಪಟ್ಟವರ ಜೊತೆ ಶೀಘ್ರ ಸಭೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಬಳಿಕ ನಿಯೋಗದ ಸದಸ್ಯರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನೂ ಭೇಟಿಯಾಗಿ ಕಾರ್ಖಾನೆ ಆರಂಭಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದರು.

ಬುಧವಾರದ ಉಷ್ಣಾಂಶ
33° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಗಸ, ಬಿಸಿಲಿನ ಝಳ ಹೆಚ್ಚಿರಲಿದೆ.

ಉಷ್ಣಾಂಶ

ಗುರುವಾರ	ಶುಕ್ರವಾರ	ಶನಿವಾರ
33° 20°	32° 19°	32° 19°

ಮತ್ತೊಂದು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಛಲವಾದಿ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬಳಿ ಮತ್ತೊಂದು ಅಂತರ ರಾಷ್ಟ್ರೀಯ ವಿಮಾನನಿಲ್ದಾಣವನ್ನು ನಿರ್ಮಿಸುವ ಬದಲು ಎಚ್‌ಎಎಲ್ ಅನ್ನು ದೇಶೀಯ ವಿಮಾನನಿಲ್ದಾಣವಾಗಿ ಬಳಸಿಕೊಳ್ಳಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಎರಡನೇ ವಿಮಾನನಿಲ್ದಾಣಕ್ಕೆ ರೈತರು ಸಾವಿರಾರು ಎಕರೆ ಭೂಮಿ ಕಳೆದುಕೊಳ್ಳಬೇಕಾಗುತ್ತದೆ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಪರೋಕ್ಷವಾಗಿ ಅನುಕೂಲ ಮಾಡಿಕೊಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ದೂರಿದರು. ಈಗಿರುವ ಕೆಂಪೇಗೌಡ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನಗಳಿಗೆ ಮಾತ್ರ ಬಳಕೆ ಮಾಡಬೇಕು. ಹೊಸ ನಿಲ್ದಾಣದ ಪ್ರಸ್ತಾವ ಕೈಬಿಡಬೇಕು ಎಂದು ಆಗ್ರಹಿಸಿದರು.

ಸಿ.ಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿರುದ್ಧ ನಾರಾಯಣಗೌಡ ಟೀಕೆ

ಕೆಪಿಎಸ್‌ಸಿ ಲೋಪ: ಕರವೇ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನಾರಾಯಣಗೌಡ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆದ ಮರು ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗಾದ ಅನ್ಯಾಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸರಿಯಾದ ಮಾಹಿತಿ ನೀಡದೆ, ಅವರನ್ನು ದಾರಿ ತಪ್ಪಿಸಿದ್ದೀರಿ ಎಂದು ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ಟೀಕಿಸಿದ್ದಾರೆ.

'384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ ಕನ್ನಡ ಪ್ರಶ್ನೆಪತ್ರಿಕೆಗಳಲ್ಲಿ ದೊಡ್ಡ ಪ್ರಮಾಣದ ತಪ್ಪುಗಳು ಕಾಣಿಸಿಕೊಂಡು, ಇಡೀ ಪರೀಕ್ಷೆಯೇ ರದ್ದಾಗಲು ಮುಖ್ಯ ಕಾರಣರಾದ ಪರೀಕ್ಷಾ ನಿಯಂತ್ರಕರನ್ನು ತಾವು ಬೆಂಬಲಿಸುತ್ತಿದ್ದೀರಿ. ಪರೀಕ್ಷಾ ನಿಯಂತ್ರಕರು ಅದೇ ಹುದ್ದೆಯಲ್ಲಿ ಮುಂದುವರೆಯಲು ಕೂಡ ತಾವೇ ಕಾರಣ ಎಂಬ ಅಭಿಪ್ರಾಯಗಳು ವಿದ್ಯಾರ್ಥಿಗಳಲ್ಲಿದೆ' ಎಂದಿರುವ ನಾರಾಯಣಗೌಡ ಅವರು, ಎಕ್ಸ್‌ನಲ್ಲಿ ಅತೀಕ್ ಅವರಿಗೆ ಹತ್ತು ಪ್ರಶ್ನೆಗಳನ್ನೂ ಕೇಳಿದ್ದಾರೆ.

'ನೀವು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವ ಅಧಿಕಾರಿ ಎಂಬುದು ನನಗೆ ಗೊತ್ತಿದೆ. ಹೀಗಾಗಿ ನಿಮ್ಮ ಪ್ರಾಮಾಣಿಕ ಉತ್ತರವನ್ನು ಅಲ್ಲೇ ನಿರೀಕ್ಷಿಸುತ್ತೇನೆ. ಈ ಪ್ರಶ್ನೆಗಳಿಗೆ ಉತ್ತರಿಸಿ.. ಇಲ್ಲವಾದಲ್ಲಿ ನಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುತ್ತೇವೆ' ಎಂದು ಎಚ್ಚರಿಸಿದ್ದಾರೆ.

10 ಪ್ರಶ್ನೆಗಳೇನು?

- ವಿದ್ವಾಂಸರ ಮುಂದೆ ಪ್ರಶ್ನೆ ಪತ್ರಿಕೆಗಳನ್ನು ಇಡೋಣ. ಸರಿಯೋ ತಪ್ಪೋ ಎಂಬುದನ್ನು ಅವರು ವಿಶ್ಲೇಷಣೆ ಮಾಡಲಿ. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೇ?
- 70 ಸಾವಿರಕ್ಕೂ ಹೆಚ್ಚು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಯಾಕೆ ಇಷ್ಟು ಲಘುವಾಗಿ ಪರಿಗಣಿಸುತ್ತಿದ್ದೀರಿ?
- ಎರಡನೇ ಬಾರಿ ಮರುಪರೀಕ್ಷೆಯಲ್ಲೂ ಹಿಂದಿನ ತಪ್ಪು ಯಾಕಾಯಿತು? ಇದಕ್ಕೆ ಯಾರು ಹೊಣೆಗಾರರು? ಕನ್ನಡದ ಕುರಿತು ಯಾಕಿಷ್ಟು ಅವಜ್ಞೆ?
- ಪ್ರಶ್ನೆಪತ್ರಿಕೆಯಲ್ಲಿ 80 ದೋಷಗಳು ಇದ್ದರೆ ಅವುಗಳನ್ನು ಇಂಗ್ಲಿಷ್‌ನಲ್ಲಿ ಓದಿ ಅರ್ಥ ಮಾಡಿಕೊಂಡು ಬರೆಯಲು ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಸಾಧ್ಯವೇ?
- 50ಕ್ಕೂ ಹೆಚ್ಚು ಪ್ರಶ್ನೆಗಳಲ್ಲಿ ಉತ್ತರಿಸಲು ಸಾಧ್ಯವೇ ಇಲ್ಲದ ಗಂಭೀರ ಸ್ವರೂಪದ ತಪ್ಪುಗಳಿವೆ. ಇದಕ್ಕೆ 5 ಅಂಕ ಕೊಡುವುದು ಹೇಗೆ ಸರಿಹೋಗುತ್ತದೆ?
- ಯಾವ ಉದ್ದೇಶಕ್ಕೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಮೇಲೆ ಹೀಗೆ ಅಮಾನುಷವಾಗಿ ಬರೆ ಎಳೆಯಲಾಗುತ್ತಿದೆ?
- ಮುಖ್ಯಪರೀಕ್ಷೆಗೆ ಅಭ್ಯರ್ಥಿಗಳು ವಿವರಗಳ ಅರ್ಜಿ ನಮೂನೆ (ಡಾಫ್) ಸಲ್ಲಿಸುವ ಮುನ್ನವೇ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಕೆ ಆಗಿ ರುವುದು ಕೆಪಿಎಸ್‌ಸಿ ಅಧಿಕಾರಿಗಳಿಗೆ ಹೇಗೆ ಗೊತ್ತಾಯಿತು?
- ಮುಖ್ಯಮಂತ್ರಿ ಅವರಿಗೆ ಸರಿಯಾದ ಮಾಹಿತಿ ಒದಗಿಸದೆ, ಕೆಪಿಎಸ್‌ಸಿಯನ್ನು ಸಮರ್ಥಿಸಿಕೊಂಡು, ವಿದ್ಯಾರ್ಥಿಗಳಿಗೆ ಆದ ಅನ್ಯಾಯವನ್ನು ಏಕೆ ಮುಚ್ಚಿಡುತ್ತಿದ್ದೀರಿ?
- ಸರಿಯನ್ನು ಸರಿ, ತಪ್ಪನ್ನು ತಪ್ಪು ಎಂದು ಹೇಳಲಾಗದ ಅನಿವಾರ್ಯ ನಿಮಗೇನು?
- ಸಾರ್ವಜನಿಕವಾಗಿ ಬಹಿರಂಗಗೊಂಡಿರುವ ಪ್ರಶ್ನೆ ಪತ್ರಿಕೆಯ ಮಹಾಲೋಪವನ್ನು ನೀವು ಮುಖ್ಯಮಂತ್ರಿಯವರ ಗಮನಕ್ಕೆ ಏಕೆ ತರುತ್ತಿಲ್ಲ?

31 ವರ್ಷಗಳ ವಿಶ್ವಾಸ, ಅತ್ಯುತ್ತಮವಾದುದರಲ್ಲಿ ನಂಬಿಕೆ
ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ ®
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ
9449478944
email: care@adigasyatra.com website: www.adigasyatra.com
• NO COMPROMISE IN QUALITY !!! • VALUE FOR MONEY !!! • NO DISCOUNTS !!!
• NO FALSE PROMISES !!! • BEST QUALITY ASSURANCE !!! • NO SALES GIMMICKS !!!
DOMESTIC FIXED DEPARTURE
Stay at Deluxe/3*/4* Hotel with Meals & Travel Insurance
NORTH INDIA
ಅಮರನಾಥ ಯಾತ್ರಾ — 5/7/9 Days
ಹೆಲಿಕಾಪ್ಟರ್‌ನಲ್ಲಿ ಯಾತ್ರಾ
ಅಮರನಾಥ–ವೈಷ್ಣೋದೇವಿ–ಅಮೃತಸರ್ 5/7/9 ದಿನಗಳು
ಶಾರದಾ ಮಂದಿರ ದರ್ಶನ–3 ದಿನಗಳು
Dep Dates: 2025 July and August
ಹೆಲಿಕಾಪ್ಟರ್‌ನಲ್ಲಿ ಯಾತ್ರಾ
ಚಾರ್‌ಧಾಮ ಯಾತ್ರಾ — 7 Days
ಬದರಿನಾಥ–ಕೇದಾರನಾಥ ಯಾತ್ರಾ – 3/5 ದಿನಗಳು
Dep Dates: 2025: MAY 7, 14, 21, 28. JUN 4, 11, 18, 25. SEP 3, 10, 17, 24. OCT 1, 8.

THIRTHA YATRA — 8 Nights / 9 Days
Naimisharanya, Ayodhya, Triveni Sangama(Prayag Raj), Chitrakoot, Bodhgaya, Gaya, Varanasi(Kashi).
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17. OCT 8, 22.

CHARDHAM YATRA — 11 Nights / 12 Days
Haridwar, Rishikesh, Yamunotri, Uttarakashi, Gangotri, Guptakashi, Kedarnath, Badrinath, Mana, Rudraprayaga
2025: APR 30, MAY 7, 14, 21, 28. JUN 4, 11, 18, 25. JUL 9, 23. AUG 6, 20. SEP 3, 10, 17, 24. OCT 1, 8.

BADRI - KEDAR YATRA — 7 Nights / 8 Days
Haridwar, Rishikesh, Guptakashi, Kedarnath, Badrinath, Mana, Rudraprayaga
2025: APR 30, MAY 7, 14, 21, 28. JUN 4, 11, 18, 25. JUL 9, 23. AUG 6, 20. SEP 3, 10, 17, 24. OCT 1, 8.

AMRITSAR - DALHOUSIE - DHARMASHALA — 6 Nights / 7 Days
Amritsar, Wagha Border, Dalhousie, Khajjiar, Dharmashala, Kangra Vajreshwari, Chamunda, Jwalamukhi.
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17.

AMRITSAR - VAISHNODEVI — 4 Nights / 5 Days
Amritsar, Wagha Border, Katra, Vaishnodevi
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17. OCT 8, 22.

VAISHNODEVI - KASHMIR — 7 Nights / 8 Days
Katra, Vaishnodevi, Sonamarg, Srinagar, Dal Lake, Gulmarg, Pehalgam.
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17. OCT 8, 22.

ENCHANTING KASHMIR — 5 Nights / 6 Days
Sonamarg, Srinagar, Dal Lake, Gulmarg, Pahalgam.
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17. OCT 8, 22.

NAINITAL - KAUSANI - JIM CORBETT — 5 Nights / 6 Days
Nainital, Sat Tal, Bhimtal, Naukuchia Tal, Kausani, Bageshwar, Jim Corbett National Park
2025: MAR 19. APR 9, 23. MAY 7, 21. AUG 6, 20. SEP 3, 17. OCT 8, 22. NOV 5, 19.

GOLDEN - TRIANGLE TOUR — 5 Nights / 6 Days
Delhi, Mathura, Brindavan, Agra, Fatehpur sikri, Jaipur
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17.

KASHI - GAYA - YATRA — 5 Nights / 6 Days
Varanasi, Prayagraj, Gaya, Bodhgaya, Saranath
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17.

KASHI - GAYA - AYODHYA — 6 Nights / 7 days
Varanasi, Prayagraj, Gaya, Bodhgaya, Saranath, Ayodhya
2025: MAR 19. APR 9, 23. MAY 7, 21. JUN 4, 18. JUL 9, 23. AUG 6, 20. SEP 3, 17.

ROYAL RAJASTHAN — 7 Nights / 8 days
Jaipur, Ajmer, Pushkar, Udaipur, Jaisalmer, Desert, Jodhpur.
2025: MAR 19. APR 9, 23. SEP 3, 10, 17. OCT 8, 15, 22, 29. NOV 5, 12, 19, 26. DEC 3, 10, 17.

SHIMLA - MANALI - CHANDIGARH — 6 Nights / 7 days
Shimla, Kufri, Kullu, Manali, Solang Valley, Atal tunnel, Chandigarh
2025: MAR 19. APR 9, 23. MAY 7, 21. JUN 4, 18. JULY 9, 23. AUG 6, 20. SEP 3, 17. OCT 8, 22.

SOUTH INDIA

MADURAI-RAMESHWARAM-KANYAKUMARI — 3 Nights / 4 Days
Madurai, Rameshwaram, Kanyakumari. Suchindram
2025: MAR 19. APR 9, 23. MAY 7, 21. JUN 4, 18. JULY 9, 23. AUG 6, 20. SEP 3, 17. OCT 8, 22

ANDAMAN ISLANDS — 4 Nights / 5 Days
Havelock (Swaraj deep) Island, Port Blair (Sri Vijaya Puram), Cellular jail, Ross Island (Netaji Subhash Chandra Bose Island), North Bay Island
2025: MAR 19. APR 9, 23. MAY 7, 21. JUN 4, 18. JULY 9, 23. AUG 6, 20. SEP 3, 17.

KERALA BACK WATERS — 4 Nights / 5 Days
Kochin, Munnar, Thekkady, Alleppey House Boat
2025: MAR 19. APR 9, 23. MAY 7, 21. JUN 4, 18. JULY 9, 23. AUG 6, 20. SEP 3, 17. OCT 8, 22.

For more details call:
ಬಸವನಗುಡಿ : 080-26616678 / 7022259008 | ಮಲ್ಲೇಶ್ವರಂ : 080-23346678 / 9364104372
ರಾಜರಾಜೇಶ್ವರಿ ನಗರ : 080-26696678 / 7975001378 | ವಿಜಯನಗರ : 080-23356678 / 9845631379
ಹುಬ್ಬಳ್ಳಿ : 0836-2256678 / 9364104366 | ಹಾಸನ : 08172-261888 / 8884679122

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂ.ಅಪ್ರಾ/ಕಾಅ/ಪೂರ್ವ/ಟೆಂ/1082/2024–25 ದಿನಾಂಕ: 04.03.2025

ಟೆಂಡರ್ ಆಹ್ವಾನಿಸುವ ಅಧಿಸೂಚನೆ
(ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪೂರ್ವ ವಿಭಾಗ, ಬಿಡಿಎ ರವರು ಈ ಕೆಳಗಿನ ಕಾಮಗಾರಿಗಾಗಿ ಆಸಕ್ತ ಬಿಡ್ಡುದಾರರಿಂದ ಸಿಂಗಲ್ ಸ್ಟೇಜ್ ಎರಡು ಬಿಡ್ ಬಿಡ್ಡಿಂಗ್ ವ್ಯವಸ್ಥೆಯಲ್ಲಿ ಎಲೆಕ್ಟ್ರಾನಿಕ್ ಟೆಂಡರಿಂಗ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಪ್ರಸ್ತಾವನೆಯನ್ನು ಆಹ್ವಾನಿಸುತ್ತಾರೆ. **ಕಾಮಗಾರಿಯ ಹೆಸರು: ಬೆಂಗಳೂರಿನ ದೊಮ್ಮಲೂರು ಗ್ರಾಮದ ಸರ್ವೆ ಸಂಖ್ಯೆ 58/9, ಅಮರಜ್ಯೋತಿ ಎಚ್‌ಬಿಸಿಎಸ್ ಲೇಔಟ್‌ನಲ್ಲಿ ಸಿಎ ಸಂಖ್ಯೆ: 'ಎನ್' ನಲ್ಲಿ ಪಿಪಿಪಿ ಮಾದರಿಯಡಿಯಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ.**

ಅಂದಾಜು ವೆಚ್ಚ ಲಕ್ಷ ರೂ. ಗಳಲ್ಲಿ: ಆರ್‌ಎಫ್‌ಪಿ ಪ್ರಕಾರ. ಇಎಂಡಿ ಲಕ್ಷ ರೂ. ಗಳಲ್ಲಿ: 30.00. ಟೆಂಡರ್ ಪ್ರಕ್ರಿಯೆ ಶುಲ್ಕ ರೂ. ಗಳಲ್ಲಿ: ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡಿ. ಪೂರ್ಣಗೊಳ್ಳುವ ಸಮಯ: 24 ತಿಂಗಳುಗಳು.

ಕಾರ್ಯಕ್ರಮಗಳ ವೇಳಾಪಟ್ಟಿ: 1) ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) ದಾಖಲೆಯನ್ನು **https://kppp.karnataka.gov.in** ನಿಂದ **04.03.2025** ರಿಂದ **ಡೌನ್‌ಲೋಡ್ ಮಾಡಿಕೊಳ್ಳಬಹುದು.** 2) ವಿಚಾರಣೆಗಳಿಗೆ ಕೊನೆಯ ದಿನಾಂಕ: **11.03.2025 ರ 16.00 ಗಂಟೆಗಳವರೆಗೆ.** 3) ಬಿಡ್ ಪೂರ್ವಭಾವಿ ಸಭೆ: **15.03.2025 ರ 16.00 ಗಂಟೆಗೆ.** 4) ವಿಚಾರಣೆಗಳಿಗೆ ಪ್ರತಿಕ್ರಿಯೆ: **18.03.2025.** 5) ಬಿಡ್ ಸಲ್ಲಿಸಲು ಅಂತಿಮ ದಿನಾಂಕ: **26.03.2025 ರ 16.00 ಗಂಟೆಗಳವರೆಗೆ.** 6) ತಾಂತ್ರಿಕ ಬಿಡ್ ತೆರೆಯುವಿಕೆ: **28.03.2025 ರ 16.00 ಗಂಟೆಗೆ** 7) ಆರ್ಥಿಕ ಬಿಡ್ ತೆರೆಯುವಿಕೆ: ನಂತರ ತಿಳಿಸಲಾಗುವುದು.

ಹೆಚ್ಚಿನ ವಿವರಗಳನ್ನು **https://kppp.karnataka.gov.in** ನಿಂದ ಅಥವಾ ಮೇಲಿನ ಕಚೇರಿಯಿಂದ ಕಚೇರಿ ಸಮಯದಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪೂರ್ವ ವಿಭಾಗ, ಬಿಡಿಎ, ಬೆಂಗಳೂರು

ಭಾರತ ಸರ್ಕಾರ
ದೂರಸಂಪರ್ಕ ಇಲಾಖೆ
ವಿಶೇಷ ಡಿಜಿ–ಟೆಲಿಕಾಂ, ಕರ್ನಾಟಕ ಎಲ್‌ಎಸ್‌ಎ'ರವರ ಕಾರ್ಯಾಲಯ
1ನೇ ಮಹಡಿ, ಸಂಚಾರ ಕಾಂಪ್ಲೆಕ್ಸ್ ಬಿಲ್ಡಿಂಗ್
ಡಬ್ಲ್ಯುಎಂಎಸ್ ಕಾಂಪೌಂಡ್, ಜಯನಗರ, ಬೆಂಗಳೂರು–41
ಡಿಡಿಜಿ(ಎ)/ಡಿಒಟಿ/ಕೆಟಿಕೆ–ಎಲ್‌ಎಸ್‌ಎ/77–2/ರಿಕ್ರೂಟ್ಮೆಂಟ್ ಗ್ರೂಪ್ ಸಿ/2024–25/10

ಡೆಪ್ಯುಟೇಶನ್ ನೋಟಿಸ್

ಡಿಒಟಿ, ಕರ್ನಾಟಕ ಎಲ್‌ಎಸ್‌ಎ, ಇವರು ವಿಶೇಷ ಡಿಜಿ–ಟೆಲಿಕಾಂ, ಕರ್ನಾಟಕ ಎಲ್‌ಎಸ್‌ಎ' ರವರ ಕಾರ್ಯಾಲಯದಲ್ಲಿನ ಲೋವರ್ ಡಿವಿಜನ್ ಕ್ಲರ್ಕ್ (ಎಲ್‌ಡಿಸಿ) ಮತ್ತು ಟೆಲಿಕಾಂ ಅಸಿಸ್ಟಂಟ್ (ಟಿಎ) ಗ್ರೂಪ್ 'ಸಿ' ಹುದ್ದೆಗಳನ್ನು **ಕೇಂದ್ರ / ರಾಜ್ಯ ಸರ್ಕಾರ / ಪಿಎಸ್‌ಯು / ವಿಶ್ವವಿದ್ಯಾಲಯ / ಅಂಗೀಕೃತ ಸಂಶೋಧನಾ ಸಂಸ್ಥೆಗಳು / ಸ್ವಾಯುತ್ತ ಅಂಗಸಂಸ್ಥೆಗಳಲ್ಲಿ** ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದ ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ವಿವರಗಳಿಗಾಗಿ ಮತ್ತು ಅರ್ಜಿ ನಮೂನೆಗಾಗಿ ದಯವಿಟ್ಟು ಡಿಒಟಿ'ರವರ www.dot.gov.in ವೆಬ್‌ಸೈಟ್‌ನಲ್ಲಿ ವೆಕನ್ಸಿ ಟ್ಯಾಬ್ ಪರಿಶೀಲಿಸಿರಿ.

ಸುತ್ತೋಲೆ ಪ್ರಕಟಗೊಂಡ ದಿನಾಂಕದಿಂದ 8 ವಾರಗಳ ಅವಧಿಯು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ.

CBC 06229/12/0001/2425 ನಿರ್ದೇಶಕರು (ಆಡಳಿತ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ:ಅಇಂವಿ/ಪ್ರ(ಕಾ)/ದ–ವೃತ್ತ/ಕಾನಿಇಂ(ಕ)/ಸಕಾನಿಇಂ–4/24–25/9364–66 ದಿನಾಂಕ: 03.03.2025
ಕವಿಪ್ರನಿನಿಯ ಬಿಡ್ ವಿಚಾರಣೆ ಸಂಖ್ಯೆ: **ಕವಿಪ್ರನಿನಿಯ/ಅಇಂ(ವಿ)/ಪ್ರ(ನಿ)/ಬಿಎಂಎಜಡ್(ದ)/ಕಾನಿಇಂ(ಕ)/ಸಕಾನಿಇಂ–4/19–20/ಇಪಿಆರ್–79/ಕರೆ–9 ದಿನಾಂಕ: 03.03.2019**ರ ಅನ್ವಯ ಕವಿಪ್ರನಿನಿಯು ಬೆಂಗಳೂರು, ಪ್ರಸರಣ(ಕಾರ್ಯಾಚರಣೆ) ದಕ್ಷಿಣ ವೃತ್ತದ ಕೆಳಗೆ ತಿಳಿಸಿರುವ ಸ್ಥಳಗಳಲ್ಲಿ ಒಳಗೆ ಅಥವಾ ಹೊರಗೆ ಒಂದೇ ಸಮಯದಲ್ಲಿ ಬಿಸಿ ಶಾಖವನ್ನು ಕಾಯಿಸುವುದರೊಂದಿಗೆ ವ್ಯಾಕ್ಯೂಂ ಪುಲ್ಲಿಂಗ್ ಹಾಗೂ ನೈಟ್ರೋಜೆನ್ ಪರ್ಜಿಂಗ್ ಮೂಲಕ ಪರಿವರ್ತಕವನ್ನು ಸಂಪೂರ್ಣವಾಗಿ ಒಣಗಿಸಿ 20ಎಂವಿಎ ವಿದ್ಯುತ್ ಪರಿವರ್ತಕ–1 ರ ಇನ್ಸುಲೇಷನ್ ಮೌಲ್ಯವನ್ನು ಸುಧಾರಿಸುವುದು ಹಾಗೂ ಇಂಧನದ ತೇವಾಂಶವನ್ನು ತೆಗೆಯುವುದು ಮತ್ತು ವೈಂಡಿಂಗ್ ಮಾಡುವ ಕಾಮಗಾರಿಗಳಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದೆ. **ಸ್ಥಳ: 66/11ಕೆವಿ ಸುಬ್ರಮಣ್ಯಪುರ ಉಪ ಕೇಂದ್ರ, ಪರಿವರ್ತಕದ ತಯಾರಿಕೆ/ ಕ್ರಮ ಸಂಖ್ಯೆ: ಎಮ್ಕೋ ತಯಾರಿಕೆ, ಕ್ರಮ ಸಂಖ್ಯೆ: ಹೆಚ್‌ಟಿ 1316/11548.**

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ಪದ್ಧತಿಯ ಮೂಲಕ ಮಾತ್ರವೇ ಸ್ವೀಕರಿಸಲಾಗುವುದು. ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ಗೆ ಹೈಪರ್‌ಲಿಂಕ್ **E Procurement KPTCL** ನಲ್ಲಿ ಅಥವಾ ವೆಬ್‌ಸೈಟ್: **https://kppp.karnataka.gov.in**ನಲ್ಲಿ ದಿನಾಂಕ: **06.03.2025** ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್, ವಿದ್ಯುತ್, ಪ್ರಸರಣ(ಕಾರ್ಯಾಚರಣೆ), ದಕ್ಷಿಣ ವೃತ್ತ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು–560 009.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಆಯುಕ್ತರು (ಕಲ್ಯಾಣ)ರವರ ಕಚೇರಿ,
ಎನ್.ಆರ್.ಚೌಕ, ಬೆಂಗಳೂರು – 560 002.

ಸಂಖ್ಯೆ: ಸ.ಅ(ಕೇ)/ಪಿಆರ್/2130/2024–25 ದಿನಾಂಕ: 04.03.2025

ಕೋಟೇಷನ್ ಆಹ್ವಾನ

2024–25ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಕಾರ್ಯಕ್ರಮವಾರು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಈ ಕೆಳಕಂಡ ಕಾರ್ಯಕ್ರಮಗಳ Specification ಹಾಗೂ ದರಪಟ್ಟಿಯನ್ನು ಅರ್ಹ ಸಂಸ್ಥೆ / ಏಜೆನ್ಸಿ ಸರಬರಾಜುದಾರರು ರವರಿಂದ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಮೊಹರು ಮಾಡಿದ Specification ಹಾಗೂ ದರಪಟ್ಟಿಗಳನ್ನು ದಿನಾಂಕ: **07.03.2025**ರ ಸಂಜೆ **5:30** ಗಂಟೆಯೊಳಗಾಗಿ ಸಹಾಯಕ ಆಯುಕ್ತರು (ಕಲ್ಯಾಣ–ಕೇಂದ್ರ), ರವರ ಕಚೇರಿ, ರೂಂ ನಂ.209, ಅನೆಕ್ಸ್–2, ಬಿ.ಬಿ.ಎಂ.ಪಿ ಕೇಂದ್ರ ಕಚೇರಿಗೆ ಸಲ್ಲಿಸಲು ಕೋರಿದೆ

ಕಾರ್ಯಕ್ರಮಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳು	ನಿಗದಿಗೊಳಿಸಿರುವ ಮೊತ್ತ (₹. ಲಕ್ಷಗಳಲ್ಲಿ)
1.	ವೃದ್ಧಾಶ್ರಮಕ್ಕೆ ಹಾಗೂ ನಗರ ವಸತಿರಹಿತರ ಆಶ್ರಯ ಕೇಂದ್ರಗಳಿಗೆ ಸಾಮಗ್ರಿಗಳು	630.00
2.	ಪೌರಕಾರ್ಮಿಕ ಅವಲಂಬಿತರಿಗೆ ಸಂಗೀತ ಸಾಮಾಗ್ರಿಗಳು	51.00
3.	ಎಲೆಕ್ಟ್ರಿಕಲ್ ವೀಲ್ ಚೇರ್	840.00
4.	ಕೌಶಲ್ಯ ತರಬೇತಿ ಕಾರ್ಯಕ್ರಮ	400.00

ಸದರಿ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಸಹಾಯಕ ಆಯುಕ್ತರು (ಕಲ್ಯಾಣ–ಕೇಂದ್ರ)ರವರ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ಆಯುಕ್ತರು (ಕಲ್ಯಾಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಉಪ ಆಯುಕ್ತರು (ಭೂಸ್ವಾಧೀನ ಮತ್ತು ಟಿ.ಡಿ.ಆರ್)ರವರ ಕಚೇರಿ, ಅನೆಕ್ಸ್ ಬಿಲ್ಡಿಂಗ್–3, ಎನ್.ಆರ್.ಚೌಕ, ಬೆಂಗಳೂರು – 02

ಸಂಖ್ಯೆ: ಎಲ್‌ಎಕ್ಯೂ/ಸಿಆರ್/725/2024–25 ದಿನಾಂಕ: 24.01.2025

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರ ಕಲಂ 11(1) ಮೇರೆಗೆ

ಅಧಿಸೂಚನೆ

ಸಾರ್ವಜನಿಕ ಉದ್ದೇಶದ Formation road from Hoodi Railway Station to Kumbena Agrahara via Sadaramangala as per RMP-2015 for the width of 18.00mts and Length of 2.8Km. ಯೋಜನೆಗೆ ಸಂಬಂಧಿಸಿದಂತೆ ರಸ್ತೆ ನಿರ್ಮಾಣ ಮಾಡಲು ಅವಶ್ಯವಿರುವ ಸ್ವತ್ತುಗಳಿಗೆ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಇರುತ್ತದೆ ಎಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ: 23–07–2019ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ 2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:16)ರ ಕಲಂ 10 (A) ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ: ಕಂಇ04ಎಕ್ಯೂಬಿ2020, ದಿನಾಂಕ: 28–03–2022ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ ರಾಜ್ಯಪತ್ರದಲ್ಲಿ ದಿನಾಂಕ: 28–03–2022 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013(2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಉಪ ಆಯುಕ್ತರು (ಭೂಸ್ವಾಧೀನ) ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲಿ ಯಾರು ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಕ್ರಮ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಪಡಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ33ಎಕ್ಯೂಬಿ2024 ದಿನಾಂಕ:16–03–2024 ರಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮೂಲ ಭೂಸ್ವಾಧೀನ ಕಾಯ್ದೆ 2013ರ ಅಧ್ಯಾಯ–II ರಡಿ ಸಾಮಾಜಿಕ ಪರಿಣಾಮ ನಿರ್ಧಾರಣಾ ಅಧ್ಯಯನ (SIA) ಮಾಡುವುದರಿಂದ ಹಾಗೂ ಅಧ್ಯಾಯ–IIIರ ಕಲಂ 10ನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಆದೇಶಿಸಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ–15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೆ ವಿಲೇಗೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಕೊಠಡಿ ಸಂಖ್ಯೆ:208, ಎರಡನೇ ಮಹಡಿ, ಅನೆಕ್ಸ್–3 ಕಟ್ಟಡ, ಕೇಂದ್ರ ಕಚೇರಿ ಬಿಬಿಎಂಪಿ ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಜಿಲ್ಲೆ: ಬೆಂಗಳೂರು ನಗರ ತಾಲ್ಲೂಕು: ಬೆಂಗಳೂರು ಪೂರ್ವ ಹೋಬಳಿ: ಕೆ.ಆರ್ ಪುರಂ ಗ್ರಾಮ: ಸಾದರಮಂಗಲ

ಖಾತೆದಾರರ ಹೆಸರು			ಸರ್ವೆ ನಂ.	ಬಿಬಿಎಂಪಿ ಖಾತಾ ನಂಬರ್	ಖಾತಾ ನಂಬರಿನ ಸ್ವತ್ತಿನಲ್ಲಿ ಇರುವ ಒಟ್ಟು ವಿಸ್ತೀರ್ಣ (ಚ.ಮೀಗಳಲ್ಲಿ)	ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ ಚ.ಮೀಗಳಲ್ಲಿ			ತರಹೆ	ಚಕ್ಕುಬಂದಿ/ಸರಹದ್ದು			
ಭೂಮಾಲೀಕರ/ ಹಿಡುವಳಿದಾರರ ಹೆಸರು (ಪಹಣಿಯಂತೆ)	ಮಾಲೀಕರ ಹೆಸರು (ಬಿಬಿಎಂಪಿ ಖಾತೆಯಂತೆ)	ಅನುಭವದಾರರ ಹೆಸರು				ಕೃಷಿ/ ಕೃಷಿಯೇತರ	ಖರಾಬು	ಒಟ್ಟು		ಪೂ	ಪ	ಉ	ದ
ವಿಜಯಲಕ್ಷ್ಮಿ ಕೋಂ. ಲೇ ಎಂ.ಎಸ್ ಪೃಥ್ವೀರಾಜ್	ಎಂ. ಮಂಜುನಾಥ್	–	2/4	Form-B Property Reg No.1755 ನಿವೇಶನ ಸಂ:5	111.48	111.48	–	111.48	ಖಾಲಿ ನಿವೇಶನ	ಕುಂಬೇನ ಅಗ್ರಹಾರ ಗ್ರಾಮದ ಗಡಿ	ರಸ್ತೆ	ಸೈಟ್ ನಂ.4	ರಸ್ತೆ
				ಒಟ್ಟು ವಿಸ್ತೀರ್ಣ	111.48 ಚ.ಮೀ								

ಸಹಿ/– ಉಪ ಆಯುಕ್ತರು (ಭೂಸ್ವಾಧೀನ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕುಂಟುತ್ತಾ ಸಾಗಿದ ವೈಟ್ ಟಾಪಿಂಗ್ ಕಾಮಗಾರಿ • ಸವಾರರು ಹೈರಾಣ, ವ್ಯಾಪಾರಸ್ಥರು ಕಂಗಾಲು

ಸಂಚಾರ ದಟ್ಟಣೆ, ದೂಳಿನ ಮಜ್ಜನ

• ವರುಣ ಹೆಗಡೆ

ವೈಟ್ ಟಾಪಿಂಗ್ ಕಾಮಗಾರಿಯಿಂದ ಜೆ.ಸಿ. ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿರುವುದು (ಎಡ ಚಿತ್ರ). ಜೆ.ಸಿ. ರಸ್ತೆಯಲ್ಲಿರುವ ಒಳಚರಂಡಿ ಕೊಳವೆಗಳು
ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಆಸ್ಪತ್ರೆಯ ಮುಂಭಾಗವೇ ಬಾಯಿ ತೆರೆದ ಒಳಚರಂಡಿ, ರಸ್ತೆಯಲ್ಲಿಯೇ ಮಣ್ಣಿನ ರಾಶಿ, ಅಲ್ಲಲ್ಲಿ ಬಿದ್ದಿರುವ ಬೃಹತ್ ಕೊಳವೆಗಳು, ರಸ್ತೆ ಮಧ್ಯೆಯೇ ಬ್ಯಾರಿಕೇಡ್ ಅಳವಡಿಕೆ, ಅಮೆ ವೇಗದಲ್ಲಿ ಸಂಚರಿಸುವ ವಾಹನಗಳು, ದೂಳಿನಿಂದ ರಕ್ಷಿಸಿಕೊಳ್ಳಲು ಮುಖಗವಸು ಧರಿಸಿರುವ ವ್ಯಾಪಾರಿಗಳು...

ಇದು ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಯ ಚಿತ್ರಣ. ಈ ರಸ್ತೆಯಲ್ಲಿ ನಾಲಾ ಜಂಕ್ಷನ್‌ನಿಂದ ಪುರಭವನ ಜಂಕ್ಷನ್‌ವರೆಗೆ ವೈಟ್‌ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದೆ. ಕಳೆದ ನವೆಂಬರ್‌ನಿಂದ ಪ್ರಾರಂಭವಾದ ಈ ಕಾಮಗಾರಿ ಕುಂಟುತ್ತಾ ಸಾಗುತ್ತಿದ್ದು, ಸದ್ಯ ಒಳಚರಂಡಿ ಕೊಳವೆ ಹಾಗೂ 'ಆಪ್ಟಿಕಲ್ ಫೈಬರ್ ಕೇಬಲ್' (ಒಎಫ್‌ಸಿ) ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಒಳಚರಂಡಿ ಕೊಳವೆ ಅಳವಡಿಕೆ ಸಂಬಂಧ ರಸ್ತೆಯ ಕೆಲವೆಡೆ ಅಗೆದು ಹಾಗೆಯೇ ಬಿಡಲಾಗಿದೆ. ಈ ರಸ್ತೆಯಲ್ಲಿ ಭಾಗಶಃ ಸಂಚಾರ ನಿರ್ಬಂಧ ವಿಧಿಸಿರುವುದರಿಂದ ದಿನದಿಂದ ದಿನಕ್ಕೆ ವಾಹನ ದಟ್ಟಣೆ ಹೆಚ್ಚುತ್ತಲೇ ಇದೆ. ಇನ್ನೊಂದೆಡೆ ಮಣ್ಣು ನಡು ರಸ್ತೆವರೆಗೂ ವ್ಯಾಪಿಸಿ ಕೊಂಡಿರುವುದರಿಂದ ಇಲ್ಲಿ ಸಂಚರಿಸುವವರಿಗೆ ದೂಳಿನ ಮಜ್ಜನವಾಗಲಿದೆ.

ಮಿನರ್ವ ವೃತ್ತದಿಂದ ಪ್ರಾರಂಭವಾಗುವ ಈ ರಸ್ತೆ, ಮೈಸೂರು ರಸ್ತೆಯನ್ನು ಸೇರಿಕೊಳ್ಳಲಿದೆ. 1.4 ಕಿ.ಮೀ. ಉದ್ದದ ಈ ರಸ್ತೆಯಲ್ಲಿ ದಿನದ ಬಹುತೇಕ ಅವಧಿ ವಾಹನ ದಟ್ಟಣೆ ಇರುತ್ತದೆ. ರಸ್ತೆಯುದ್ದಕ್ಕೂ ವಾಹನಗಳ ಬಿಡಿ ಭಾಗ ಹಾಗೂ ಗೃಹೋಪಯೋಗಿ ವಸ್ತುಗಳ ಮಳಿಗೆ, ಆಸ್ಪತ್ರೆ, ರಂಗಮಂದಿರ, ಬ್ಯಾಂಕ್‌ಗಳ ಶಾಖೆ ಹಾಗೂ ವಿವಿಧ ವಾಣಿಜ್ಯ ಮಳಿಗೆಗಳಿವೆ. ಇದರಿಂದಾಗಿ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಗೆ ಬರಲಿವೆ. ಇಲ್ಲಿನ ರಸ್ತೆ ಕಾಮಗಾರಿಯಿಂದಾಗಿ ಬೆಳಿಗ್ಗೆ 10 ಗಂಟೆಯ ಬಳಿಕ ದಟ್ಟಣೆಯು ಶಿವಾಜಿ ಜಂಕ್ಷನ್‌ನಿಂದ ಭಾರತ್ ಜಂಕ್ಷನ್‌ವರೆಗೂ ವಿಸ್ತರಿಸಿಕೊಳ್ಳುತ್ತಿದೆ.

ಈಗಾಗಲೇ ಕಾಮಗಾರಿ ಪ್ರಾರಂಭವಾಗಿ ನಾಲ್ಕು ತಿಂಗಳು ಕಳೆದಿದ್ದು, ಇನ್ನೂ ಒಳಚರಂಡಿ ಕೊಳವೆ ಹಾಗೂ 'ಆಪ್ಟಿಕಲ್ ಫೈಬರ್ ಕೇಬಲ್' (ಒಎಫ್‌ಸಿ) ಅಳವಡಿಕೆ ಕಾಮಗಾರಿಯೇ ಪೂರ್ಣಗೊಂಡಿಲ್ಲ.

ಪ್ರಯಾಣಿಕರಿಗೆ ಸವಾಲು: ಈ ರಸ್ತೆಯಲ್ಲಿ 10 ನಿಮಿಷಗಳ ಪ್ರಯಾಣಕ್ಕೆ ಅರ್ಧ ಗಂಟೆ ಹಿಡಿಯುತ್ತಿದೆ. ಮೂರು ಜಂಕ್ಷನ್‌ಗಳನ್ನು ದಾಟಿ, ಸಾಗುವುದು ವಾಹನ ಸವಾರರಿಗೆ ಸವಾಲಾಗಿದೆ. ಮಧ್ಯಾಹ್ನದ ವೇಳೆಗೆ ದಟ್ಟಣೆ, ದೂಳಿನ ಜತೆಗೆ ಬಿಸಿಲು ವಾಹನ ಸವಾರರನ್ನು ಹೈರಾಣಗೊಳಿಸುತ್ತಿದೆ. ರಸ್ತೆಯ ನಡು ನಡುವೆ ಇರುವ ಮಣ್ಣಿನ ರಾಶಿಗಳು ಸುಗಮ ಸಂಚಾರಕ್ಕೆ ಅಡ್ಡಿ ಪಡಿಸುತ್ತಿವೆ. ಇನ್ನೊಂದೆಡೆ ಒಳಚರಂಡಿ ಕೊಳವೆಗಳೂ ಎಲ್ಲೆಂದರಲ್ಲಿ ಬಿದ್ದಿವೆ. ಅವುಗಳ ನಡುವೆಯೇ ವಾಹನ ಸವಾರರು ಸಾಹಸ ಪ್ರದರ್ಶಿಸಿ, ಸಂಚರಿಸಬೇಕಾಗಿದೆ. ದಟ್ಟಣೆಯಲ್ಲಿ ಹೈರಾಣಾಗುವ ವಾಹನ ಸವಾರರು, ವೃತ್ತಗಳಲ್ಲಿ ಹಸಿರು ದೀಪ ಬೆಳಗುತ್ತಿದ್ದಂತೆ ಶರವೇಗದಲ್ಲಿ ಹೋಗಲು ಪ್ರಯತ್ನಿಸುತ್ತಾರೆ. ಇದರಿಂದ ಅಪಘಾತದ ಅಪಾಯವೂ ಎದುರಾಗಿದೆ.

ಚಾಮರಾಜಪೇಟೆ, ಬಸವನಗುಡಿ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ತಲುಪುತ್ತಾರೆ. ಅದೇ ರೀತಿ, ಜೆ.ಪಿ. ನಗರ, ಜಯನಗರ, ವಿವಿ ಪುರ ಭಾಗದಿಂದ ಬರುವವರು ಡಯಾಗನಲ್ ರಸ್ತೆ ಹಾಗೂ ಆರ್.ವಿ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ಸೇರುತ್ತಾರೆ. ಎಚ್.ಸಿ. ಜವರಾಯ ವೃತ್ತದ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಜೆ.ಸಿ. ರಸ್ತೆ ತಲುಪುತ್ತಾರೆ. ಇದರಿಂದಾಗಿ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯನ್ನು ಸೇರಲಿವೆ. ಸಹಜವಾಗಿ ದಟ್ಟಣೆಯಿಂದ ಕೂಡಿರುತ್ತಿದ್ದ ಈ ರಸ್ತೆಯಲ್ಲಿ ಈಗ ವಾಹನ ಸಂಚಾರ ಸವಾಲಾಗಿ ಪರಿಣಮಿಸಿದೆ.

ವ್ಯಾಪಾರ, ವಹಿವಾಟಿಗೆ ಹೊಡೆತ

ಮಿನರ್ವ ವೃತ್ತದಿಂದ ಭಾರತ್ ಜಂಕ್ಷನ್‌ವರೆಗೆ ಎಡಭಾಗದಲ್ಲಿ ವಾಹನಗಳ ಬಿಡಿ ಭಾಗದ ಮಳಿಗೆಗಳಿದ್ದು, ಕಾರುಗಳು ಹಾಗೂ ದ್ವಿಚಕ್ರ ವಾಹನಗಳಿಗೆ ಎಲ್ಲ ರೀತಿಯ ಬಿಡಿ ಭಾಗಗಳನ್ನು ಅಳವಡಿಸಲಾಗುತ್ತದೆ. ಇದೇ ರಸ್ತೆಯಲ್ಲಿ ವಾಹನಗಳ ಚಕ್ರಗಳ ಮಳಿಗೆಗಳು, ಹೋಟೆಲ್, ಬ್ಯಾಂಕ್, ಆಸ್ಪತ್ರೆಯಿದೆ. ಗೃಹೋಪಯೋಗಿ ವಸ್ತುಗಳ ಮಳಿಗೆಗಳೂ ಇವೆ. ಮೂರು–ನಾಲ್ಕು ತಿಂಗಳಿಂದ ಕಾಮಗಾರಿ ನಡೆಯುತ್ತಿರುವುದರಿಂದ ವ್ಯಾಪಾರ ವಹಿವಾಟಿಗೂ ಹೊಡೆತ ಬಿದ್ದಿದೆ. ರಸ್ತೆಯ ಇಕ್ಕೆಲಗಳಲ್ಲಿ ವಾಹನ ನಿಲುಗಡೆಗೆ ಅವಕಾಶ ಇರದಿದ್ದರಿಂದ ಗ್ರಾಹಕರ ಸಂಖ್ಯೆ ಶೇ 50 ರಷ್ಟು ಇಳಿಕೆಯಾಗಿದೆ.

'ಜನರ ಹಣವನ್ನು ದುಂದುವೆಚ್ಚ ಮಾಡಲಾಗುತ್ತಿದೆ. ಒಮ್ಮೆ ಅಗೆದ ರಸ್ತೆಯನ್ನೇ ಮತ್ತೆ ಅಗೆಯಲಾಗುತ್ತಿದೆ. ನಾವು ಕಟ್ಟುವ ತೆರಿಗೆ ಹಣವನ್ನು ಪೋಲು ಮಾಡಲಾಗುತ್ತಿದೆ' ಎಂದು ಜಯನಗರದ ಸುತನ್ ಬೇಸರ ವ್ಯಕ್ತಪಡಿಸಿದರು.

ಪಾದಚಾರಿ ಮಾರ್ಗ ಕಣ್ಮರೆ

ಒಳಚರಂಡಿ ಕೊಳವೆ ಹಾಗೂ 'ಆಪ್ಟಿಕಲ್ ಫೈಬರ್ ಕೇಬಲ್' (ಒಎಫ್‌ಸಿ) ಅಳವಡಿಕೆ ಕಾಮಗಾರಿಯಿಂದಾಗಿ ಪಾದಚಾರಿ ಮಾರ್ಗ ಕಣ್ಮರೆಯಾಗಿದೆ. ಅಗೆದ ಮಣ್ಣನ್ನು ಪಾದಚಾರಿ ಮಾರ್ಗದಲ್ಲಿಯೇ ಹಾಕಲಾಗಿದೆ. ಕೆಲ ಕೊಳವೆಗಳನ್ನೂ ಇರಿಸಲಾಗಿದೆ. ರಸ್ತೆಯಲ್ಲಿ ವಾಹನ ದಟ್ಟಣೆ ಇರುವುದರಿಂದ ಪಾದಚಾರಿಗಳು ಮಣ್ಣಿನ ರಾಶಿಯ ನಡುವೆಯೇ ಸಾಹಸ ಮಾಡಿ, ಸಾಗಬೇಕಾಗಿದೆ. ಇದರಿಂದ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸಮಸ್ಯೆ ಎದುರಿಸುತ್ತಿದ್ದಾರೆ.

'ಪಾದಚಾರಿ ಮಾರ್ಗದಲ್ಲಿ ಮಣ್ಣನ್ನು ಹಾಕಿರುವುದರಿಂದ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆತರುವುದು ಕಷ್ಟಸಾಧ್ಯವಾಗಿದೆ. ವಾಹನಗಳು ವೇಗವಾಗಿ ಬರುವುದರಿಂದ ರಸ್ತೆಯಲ್ಲಿಯೂ ಹೋಗಲು ಸಾಧ್ಯವಿಲ್ಲ. ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದೇವೆ' ಎಂದು ಸ್ಥಳೀಯ ನಿವಾಸಿ ಆನಂದವಲ್ಲಿ ತಿಳಿಸಿದರು.

ವೈಟ್ ಟಾಪಿಂಗ್ ಕಾಮಗಾರಿ ಕುಂಟುತ್ತಾ ಸಾಗಿದೆ. ಇದರಿಂದಾಗಿ ದೂಳು, ದಟ್ಟಣೆ ಹೆಚ್ಚುತ್ತಿದೆ. ಮರು ಡಾಂಬರೀಕರಣ ಮಾಡಿದರೆ ಸಾಕಿತ್ತು
ಮನೋಹರ್, ಜೆ.ಸಿ.ರಸ್ತೆ

ವ್ಯಾಪಾರ ಶೇ 50 ರಷ್ಟು ಕುಸಿತವಾಗಿದ್ದು, ಊಟ–ತಿಂಡಿಗೆ ಜನರು ಬರುತ್ತಿಲ್ಲ. ಕಾಮಗಾರಿಗೆ ವೇಗ ನೀಡಿ, ಬೇಗ ಮುಗಿಸಬೇಕಿದೆ
ಪ್ರವೀಣ, ಉಡುಪಿ ಸಾಗರ್ ಹೋಟೆಲ್ ವ್ಯವಸ್ಥಾಪಕ

ರಸ್ತೆಯನ್ನು ಪದೇ ಪದೇ ಅಗೆಯುತ್ತಿರುವುದರಿಂದ ಕಾಮಗಾರಿ ವಿಳಂಬವಾಗುತ್ತಿದೆ. ಈಗಾಗಲೇ ಮೂರು ಬಾರಿ ಅಗೆಯಲಾಗಿದೆ. ನಿತ್ಯ ಸಮಸ್ಯೆ ಎದುರಿಸುತ್ತಿದ್ದೇವೆ
ಭೀಮೇಶ್, ಜೆ.ಸಿ. ರಸ್ತೆ

ವಾಹನ ಪಾರ್ಕಿಂಗ್‌ಗೆ ಅವಕಾಶ ಇಲ್ಲದ ಕಾರಣ ಗ್ರಾಹಕರು ಬರುತ್ತಿಲ್ಲ. ಮೂರು ತಿಂಗಳಲ್ಲಿ ₹ 3 ಲಕ್ಷದಷ್ಟು ನಷ್ಟವಾಗಿದೆ
ಎನ್. ನಟರಾಜ್, ಚೆರ‍್ರಿ ಟೈರ್ ಪಾರ್ಕ್

ದೂಳಿನಿಂದ ಅಲರ್ಜಿ ಸಮಸ್ಯೆ ಉಂಟಾಗುತ್ತಿದೆ. ಆದ್ದರಿಂದ ಮುಖಗವಸು ಅನಿವಾರ್ಯವಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಬೇಕು
ಸುನೀತಾ, ಜೆ.ಸಿ. ರಸ್ತೆ

ನಟಿಯರಿಗೆ 'ದಿಟ್ಟ ಮಹಿಳಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಭಾರತಿ ವಿಷ್ಣುವರ್ಧನ್

ಜಯಮಾಲಾ

ಬೆಂಗಳೂರು: ಮಹಿಳಾ ದಿನಾಚರಣೆ ಅಂಗವಾಗಿ ನಟಿಯರಾದ ಭಾರತಿ, ಜಯಮಾಲಾ, ಸರಿತಾ, ಅಂಬಿಕಾ, ಗೀತಾ ಅವರಿಗೆ 'ದಿಟ್ಟ ಮಹಿಳಾ ಪ್ರಶಸ್ತಿ'ಯನ್ನು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಪ್ರದಾನ ಮಾಡಲಿದೆ.

ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಗಾಜಿನಮನೆಯಲ್ಲಿ ಮಾರ್ಚ್ 10ರಂದು ನಡೆಯುವ ಕಾರ್ಯಕ್ರಮದಲ್ಲಿ ಬಿಬಿಎಂಪಿ ಆಡಳಿತಾಧಿಕಾರಿ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ರಾಜ್ಯ ಸರ್ಕಾರಿ ನೌಕರರ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದ್ದಾರೆ.

ನಿರ್ಮಾಪಕಿಯರಾದ ಲಕ್ಷ್ಮೀ ಗೋವಿಂದರಾಜು, ಪೂರ್ಣಿಮಾ ರಾಮ್‌ಕುಮಾರ್, ಸಹಾಯಕ ಪೊಲೀಸ್ ಕಮಿಷನರ್ ಗೀತಾ, ದೂರದರ್ಶನದ ಮುಖ್ಯಸ್ಥೆ ಆರತಿ ಎಚ್.ಎನ್, ಪೊಲೀಸ್ ಇನ್‌ಸ್ಪೆಕ್ಟರ್ ಪ್ರಶೀಲ, ಬೆಂಗಳೂರು ನಗರ ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷೆ ಸೌಮ್ಯ, ವಕೀಲೆ ಶ್ರುತಿ, ಪತ್ರಕರ್ತೆಯರಾದ ಮಧುನಾಗರಾಜ್, ಕಾವ್ಯಶ್ರೀ ರಾಘವಸೂರ್ಯ, ಪ್ರಗತಿ, ರ‍್ಯಾಪಿಡ್ ರಶ್ಮಿ, ಡಾ.ಪೂರ್ವಿ ಜಯರಾಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಹಿನ್ನೆಲೆ ಗಾಯಕಿ ಅನುರಾಧ ಭಟ್ ಅವರ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದ್ದಾರೆ.

ಖರ್ಗೆ ಭೇಟಿಯಾದ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡದೆ ಬಿಜೆಪಿ ಕಚೇರಿಗೆ ಭೇಟಿ ನೀಡಬೇಕೆ? ಎಐಸಿಸಿ ಅಧ್ಯಕ್ಷರಾದ ಅವರು ರಾಜ್ಯಕ್ಕೆ ಬಂದಾಗ ಭೇಟಿ ಮಾಡುವುದು ನಮ್ಮ ಕೆಲಸ. ಪಕ್ಷದ ವಿಚಾರಗಳ ಕುರಿತು ಚರ್ಚೆ, ನೂತನ ಕಾಂಗ್ರೆಸ್ ಕಚೇರಿಗೆ ಗುದ್ದಲಿ ಪೂಜೆಗೆ ದಿನ ನಿಗದಿಪಡಿಸಲು ಅವರ ಬಳಿ ಹೋಗಿದ್ದೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಭೇಟಿಯನ್ನು ಯಾವ ರೀತಿ ಬೇಕಾದರೂ ಅರ್ಥ ಮಾಡಿಕೊಳ್ಳಲಿ' ಎಂದರು.

ನಿಧನ ವಾರ್ತೆ

ಮಂಜುಳಾ

ಬೆಂಗಳೂರು: ಬಿಬಿಎಂಪಿ ಶಿವನಗರ ವಾರ್ಡ್‌ನ ಮಾಜಿ ಸದಸ್ಯೆ ಮಂಜುಳಾ ವಿಜಯಕುಮಾರ್ (46) ಅವರು ಮಂಗಳವಾರ ನಿಧನರಾದರು.

ಮೃತರಿಗೆ ಪತಿ, ಪಾಲಿಕೆ ಮಾಜಿ ಸದಸ್ಯ ವಿಜಯಕುಮಾರ್, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಶ್ರೀರಾಮಪುರದಲ್ಲಿರುವ ರುದ್ರಭೂಮಿಯಲ್ಲಿ ಬುಧವಾರ (ಮಾರ್ಚ್ 5) ಬೆಳಿಗ್ಗೆ 10ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಾಂಧಿ ಅಧ್ಯಯನ ಕೇಂದ್ರ: ಸುಧಾರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಜ್ಞಾನ ಭಾರತಿ ಆವರಣದಲ್ಲಿರುವ ಗಾಂಧಿ ಅಧ್ಯಯನ ಕೇಂದ್ರದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಲು ಬೆಂಗಳೂರು ವಿಶ್ವವಿದ್ಯಾಲಯ ಮುಂದಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿರುವ ಗಾಂಧಿ ಅಧ್ಯಯನ ಕೇಂದ್ರದ ಅವ್ಯವಸ್ಥೆ ಕುರಿತು 'ಪ್ರಜಾವಾಣಿ'ಯ ಫೆಬ್ರುವರಿ 7ರ ಸಂಚಿಕೆಯಲ್ಲಿ 'ಗಾಂಧಿ ಅಧ್ಯಯನ ಕೇಂದ್ರಕ್ಕೆ ಪುಂಡರ ಕಾಟ' ಎಂಬ ಶೀರ್ಷಿಕೆ ಅಡಿಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು. ವರದಿಗೆ ಸ್ಪಂದಿಸಿದ ಮುಖ್ಯಮಂತ್ರಿಯವರ ಸಚಿವಾಲಯವು, ಈ ಬಗ್ಗೆ ಅನುಪಾಲನ ವರದಿ ನೀಡುವಂತೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿತ್ತು.

'ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರು ಗಾಂಧಿ ಭವನದ ಕಟ್ಟಡವನ್ನು ಜೀರ್ಣೋದ್ಧಾರ ಮಾಡುವಂತೆ ಪ್ರಸ್ತಾವ ಸಲ್ಲಿಸಿದ್ದರು. ಕೇಂದ್ರದ ಕಿಟಕಿಗಳಿಗೆ ಗ್ರಿಲ್, ಗೋಡೆಗಳಿಗೆ ಪ್ಲಾಸ್ಟಿಂಗ್, ನೀರು ಸರಬರಾಜು ಸೇರಿದಂತೆ ಕಟ್ಟಡದ ವಿವಿಧ ದುರಸ್ತಿ ಕೆಲಸಗಳಿಗೆ ₹ 9.58 ಲಕ್ಷ ವೆಚ್ಚದಲ್ಲಿ ಪ್ರಸ್ತಾವ ತಯಾರಿಸಲಾಗಿದೆ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಕೆ. ವೈಷ್ಣವಿ ಅವರಿಗೆ ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ ತಿಳಿಸಿದ್ದಾರೆ. ಗಾಂಧಿ ಅಧ್ಯಯನ ಕೇಂದ್ರಕ್ಕೆ ಭದ್ರತಾ ಸಿಬ್ಬಂದಿ ನಿಯೋಜನೆಗೂ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಇಂದು

'ಸಾಮಾಜಿಕ ನ್ಯಾಯ–ಡಿ. ದೇವರಾಜ ಅರಸು ಅವರ ಕೊಡುಗೆ' ವಿಚಾರಗೋಷ್ಠಿ: ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ರವಿ ಡಿ. ಚನ್ನಣ್ಣನವರ್, ಕಾಂತರಾಜು ಕೆ.ಜಿ.ಎಸ್., ಬಂಜಗೆರೆ ಜಯಪ್ರಕಾಶ್, ಟಿ.ಜವರೇಗೌಡ, ರಮೇಶ್.ಬಿ., ಎಂ.ವಿ. ವಿಜಯಲಕ್ಷ್ಮಿ, ನಿರ್ಮಲ ಎಂ., 'ಮಹಿಳಾ ಸಬಲೀಕರಣ ಮತ್ತು ದೇವರಾಜ ಅರಸು ಕೊಡುಗೆ' ಉಪನ್ಯಾಸ: ವಿ. ಅನುರಾಧ, ಅಧ್ಯಕ್ಷತೆ: ಡಿ.ಕೆ. ಚಿತ್ತಯ್ಯ, 'ಡಿ. ದೇವರಾಜ ಅರಸು ಮತ್ತು ಸಾಮಾಜಿಕ ನ್ಯಾಯ' ಉಪನ್ಯಾಸ: ಎಂ. ಗುರುಲಿಂಗಯ್ಯ, ಅಧ್ಯಕ್ಷತೆ: ಹೊನ್ನು ಸಿದ್ಧಾರ್ಥ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಇತರೆ ಹಿಂದುಳಿದ ವರ್ಗಗಳ ಕೋಶ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30ರಿಂದ

ಇಗ್ನೊ 38ನೇ ಘಟಿಕೋತ್ಸವ: ಅತಿಥಿ: ಎಂ. ವೆಂಕಟೇಶ್ವರಲು, ಆಯೋಜನೆ ಮತ್ತು ಸ್ಥಳ: ಇಗ್ನೊ ಪ್ರಾದೇಶಿಕ ಕೇಂದ್ರ ಬೆಂಗಳೂರು, ಸಿಂಗೇನ ಅಗ್ರಹಾರ ರಸ್ತೆ, ಹುಸ್ಕೂರು, ಬೆಳಿಗ್ಗೆ 11

ವಿಮಲಾ ರಂಗಾಚಾರ್ ಅವರಿಗೆ ನುಡಿನಮನ: ಭಾಗವಹಿಸುವವರು: ವಿಜಯಾ, ಶ್ರೀನಾಥ್, ಶುಭಾ ಧನಂಜಯ, ಶ್ರೀನಿವಾಸ್ ಜಿ. ಕಪ್ಪಣ್ಣ, ಜೆ. ಶ್ರೀನಿವಾಸ್, ಬಿ.ವಿ. ರಾಜಾರಾಮ್, ಶಶಿಧರ ಭಾರಿಘಾಟ್, ಸುಮಾ ಸುಧೀಂದ್ರ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ ಆವರಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ರಾಘವೇಂದ್ರ ಸಪ್ತಾಹ ಮಹೋತ್ಸವ: ಭಜನೆ: ಭಾರ್ಗವಿ ದೇವರನಾಮ ಸಂಘ, 'ಗುರುರಾಘವೇಂದ್ರ ವೈಭವ' ಪ್ರವಚನ: ವೆಂಕಟ ನರಸಿಂಹಾಚಾರ್ ರಾಜ್ ಪುರೋಹಿತ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ ಜಯನಗರ, ಸಂಜೆ 5ರಿಂದ



ಕಳೆದ ಬಜೆಟ್‌ನಲ್ಲಿ ಯೋಜನೆಗಳ ಮಹಾಪೂರ: ಇನ್ನೂ ಕೈಗೂಡದ ‘ಹೊಸ ಆದಾಯ’

ಆರಂಭ ಕಾಣದ ‘ಬ್ರ್ಯಾಂಡ್ ಬೆಂಗಳೂರು’

• ಆರ್. ಮಂಜುನಾಥ್

ಬೆಂಗಳೂರು: ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ಬೆಂಗಳೂರಿಗೆ ಹೊಸ ರೂಪ ನೀಡಲು ಮಂಡನೆಯಾದ 2024–25ನೇ ಸಾಲಿನ ಬಿಬಿಎಂಪಿ ಬಜೆಟ್, ಅದರ ಅವಧಿ ಅಂತ್ಯವಾಗುತ್ತಿದ್ದರೂ ಮೂಲ ಉದ್ದೇಶದ ಯೋಜನೆಗಳಲ್ಲಿ ಹಲವು ಆರಂಭವನ್ನೇ ಕಂಡಿಲ್ಲ.

50 ಹೊಸ ಇಂದಿರಾ ಕ್ಯಾಂಟೀನ್, ವಿದ್ಯುತ್ ಚಾಲಿತ ವಾಹನಗಳಲ್ಲಿ ನಾಗರಿಕರ ಮನೆ ಬಾಗಿಲಿಗೆ ತೆರಳಿ ರೋಗ ನಿರೋಧಕ ಶಕ್ತಿ ಸುಧಾರಿಸಲು ಚುಚ್ಚುಮದ್ದು ನೀಡುವ ‘ಆರೋಗ್ಯ ಸಾರಥಿ’, ‘ಸಮಗ್ರ ಸದೃಢ ಆರೋಗ್ಯ’ ಯೋಜನೆಯಡಿ 40 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ, ಪೌರ ಕಾರ್ಮಿಕರಿಗೆ ‘ಶರಣೆ ಸತ್ಯಕ್ಕ’ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ನೀಡುವ ಯೋಜನೆ, ಮಹಿಳೆಯರಿಗಾಗಿ ‘ಶಿ ಟಾಯ್ಲೆಟ್’ ನಿರ್ಮಾಣದಂತಹ ಯೋಜನೆಗಳು ಬಜೆಟ್‌ನಲ್ಲಿ ಪ್ರಕಟವಾಗಿದ್ದವು. ಆದರೆ, 2025–26ರ ಬಜೆಟ್ ಮಂಡನೆ ಸಮಯ ಹತ್ತಿರವಾಗುತ್ತಿದ್ದರೂ ಹಿಂದಿನ ವರ್ಷದ ಪ್ರಕಟಿತ ಯೋಜನೆಗಳು ಆರಂಭವಾಗುವ ಲಕ್ಷಣಗಳೂ ಕಂಡುಬಂದಿಲ್ಲ.

ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ಆರಂಭವಾದ ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯ ಯೋಜನೆ, ಶಿಕ್ಷಣ ಸಂಸ್ಥೆಗಳು ಸೇರಿದಂತೆ ನಾಗರಿಕರ ಸಂವಾದಗಳ ಮೂಲಕ ವಿಷಯ ಸಂಗ್ರಹಿಸಿ ವರದಿ ತಯಾರಿಸಲಾಯಿತು. ಅದನ್ನೇ ಬಿಬಿಎಂಪಿ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲೂ ಸೂಚಿಸಿದ್ದರು.

ಶಿವಕುಮಾರ್ ಅವರ ಆಣತಿಯಂತೆ ‘ಬ್ರ್ಯಾಂಡ್ ಬೆಂಗಳೂರು’ ಎಂಬ ಶೀರ್ಷಿಕೆಯಡಿ ಏಳು ವಿಭಾಗಗಳಲ್ಲಿ ಬಿಬಿಎಂಪಿ ಬಜೆಟ್ ಅನ್ನು ಮಂಡಿಸಲಾಗಿತ್ತು. ಈ ಯೋಜನೆಗಳ ಅನುಷ್ಠಾನಕ್ಕೆ ಪ್ರೀಮಿಯಂ ಎಫ್‌ಎಆರ್ ಹಾಗೂ ಜಾಹೀರಾತು ನೀತಿಯಿಂದ ಬರುವ ಹೆಚ್ಚುವರಿ ಆದಾಯವನ್ನು ಬಳಸಲು ಉದ್ದೇಶಿಸಲಾಗಿತ್ತು.

ಇದಕ್ಕಾಗಿ ‘ಎಸ್ಕ್ರೊ’ ಖಾತೆ ₹1,580 ಕೋಟಿಗಳನ್ನು ವರ್ಗಾಯಿಸಲಾಗುತ್ತದೆ ಎಂದೂ ಹೇಳಲಾಗಿತ್ತು. ಆದರೆ, ಪ್ರೀಮಿಯಂ ಎಫ್‌ಎಆರ್‌ಗೆ 2025ರ ಫೆಬ್ರುವರಿ 21ರಂದು ಅಧಿಸೂಚನೆ ಹೊರಡಿಸಲಾಗಿದೆ. ಇನ್ನು, ಜಾಹೀರಾತು ನೀತಿ ಅನುಷ್ಠಾನವಾಗಿಲ್ಲ. ಆದ್ದರಿಂದ ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯ ಯೋಜನೆಗಳು ನನೆಗುದಿಗೆ ಬಿದ್ದಿವೆ.

‘ಬ್ರ್ಯಾಂಡ್ ಬೆಂಗಳೂರು’ಗೆ ₹1,580 ಕೋಟಿ



₹12,371.63 ಕೋಟಿ
2024–25ರ ಬಜೆಟ್ ಗಾತ್ರ
(₹ಕೋಟಿಗಳಲ್ಲಿ)

ಸಾರ್ವಜನಿಕ ಕಾಮಗಾರಿ	₹7,280.93
ಘನತ್ಯಾಜ್ಯ ನಿರ್ವಹಣೆ	₹1,952.19
ಸಮಾಜ ಕಲ್ಯಾಣ	₹829.63
ಸಾರ್ವಜನಿಕ ಆರೋಗ್ಯ	₹483.26
ತೋಟಗಾರಿಕೆ	₹248.08
ಸಾರ್ವಜನಿಕ ಶಿಕ್ಷಣ	₹214.82
ನಗರ ಯೋಜನೆ	₹62.30

ಪೌರಕಾರ್ಮಿಕರಿಗೆ ಸಿಗಲಿಲ್ಲ ಪ್ರಶಸ್ತಿ

‘ಸ್ವಚ್ಛ ಬೆಂಗಳೂರು’ ಕಲ್ಪನೆಯಡಿ, ತ್ಯಾಜ್ಯ ಸಂಸ್ಕರಿಸಲು ನಾಲ್ಕು ದಿಕ್ಕುಗಳಲ್ಲಿ ತಲಾ 100 ಎಕರೆ ಜಮೀನು ಖರೀದಿಸಲು ₹100 ಕೋಟಿ ಮೀಸಲಿಡಲಾಗಿದೆ. ಇದು ಆರಂಭದ ಹಂತದಲ್ಲೇ ಇದೆ. ಘನತ್ಯಾಜ್ಯ ನಿರ್ವಹಣೆ, ವಿಂಗಡಣೆ, ಭೂಭರ್ತಿ ಪ್ರದೇಶದ ಅಭಿವೃದ್ಧಿ, ಘನತ್ಯಾಜ್ಯ ಸಂಸ್ಕರಣ ಘಟಕಗಳ ನಿರ್ವಹಣೆಗೆ ₹1 ಸಾವಿರ ಕೋಟಿ ಮೀಸಲಿಟ್ಟಿದ್ದರೂ, ಬಿಎಸ್‌ಡಬ್ಲ್ಯುಎಂಎಲ್ ಟೆಂಡರ್ ಹಂತದಲ್ಲೇ ಯೋಜನೆಗಳನ್ನು ಸ್ಥಗಿತಗೊಳಿಸಿದೆ.

ಪ್ರತಿ ವಲಯದಲ್ಲಿ ಒಬ್ಬ ಪೌರ ಕಾರ್ಮಿಕರಂತೆ ಎಂಟು ಜನರಿಗೆ ‘ಶರಣೆ ಸತ್ಯಕ್ಕ’ ಪ್ರಶಸ್ತಿ ನೀಡಿ, ತಲಾ ₹50 ಸಾವಿರ ನಗದು ನೀಡುವ ಯೋಜನೆ, ಕೆಂಪೇಗೌಡ ದಿನಾಚರಣೆ ಹಾಗೂ ಕೆಂಪೇಗೌಡ ಪ್ರಶಸ್ತಿ ವಿತರಣೆಗೆ ಚಾಲನೆ ನೀಡಲಾಗಿಲ್ಲ.

ವರ್ಷವಾದರೂ ಸಾಕಾರಗೊಳ್ಳದ ‘ಪ್ರತ್ಯೇಕ ಆರೋಗ್ಯ ಆಯುಕ್ತಾಲಯ’

‘ಆರೋಗ್ಯಕರ ಬೆಂಗಳೂರು’ ಹೆಸರಿನಡಿ ಆರೋಗ್ಯ ಸೇವೆ ಉನ್ನತೀಕರಿಸಲು ₹100 ಕೋಟಿಯನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿತ್ತು. ಬೆಂಗಳೂರಿಗೇ ಪ್ರತ್ಯೇಕ ಆರೋಗ್ಯ ಆಯುಕ್ತಾಲಯ ಸ್ಥಾಪಿಸಿ, ಎಲ್ಲ ರೀತಿಯ ಆರೋಗ್ಯ ಸೇವೆಗಳ ನಿರ್ವಹಣೆ ಮಾಡುವ ಯೋಜನೆ ನನೆಗುದಿಗೆ ಬಿದ್ದಿವೆ. ‘ಆರೋಗ್ಯ ಸಾರಥಿ’, ‘ಮನೋಬಿಂಬ’ ಸಂವಾದ ಯುಟ್ಯೂಬ್, ‘ಸದೃಢ ಆರೋಗ್ಯ’ ಯೋಜನೆಗಳು ಬಜೆಟ್ ಪುಸ್ತಕದ ಪ್ರಕಟಣೆಗಳಾಗಿಯೇ ಉಳಿದಿವೆ.

‘ಟೆಕ್ ಬೆಂಗಳೂರು’ ಪರಿಕಲ್ಪನೆಯಡಿ ನಾಗರಿಕ ಸೇವೆಗಳಿಗೆ ಸಮಗ್ರವಾದ ವ್ಯವಸ್ಥೆ ರೂಪಿಸಲಾಗುತ್ತದೆ ಎಂದು ಪ್ರಕಟಿಸಲಾಗಿತ್ತು. ರಸ್ತೆ ಗುಂಡಿಗಳನ್ನು ಮುಚ್ಚಲು ಆರಂಭಿಸಲಾಗಿದ್ದ ‘ರಸ್ತೆ ಗುಂಡಿ ಗಮನ ತಂತ್ರಾಂಶ’ದ ಆ್ಯಪ್ ಕೆಲವೇ ದಿನಗಳಲ್ಲಿ ಮುಚ್ಚಿಕೊಂಡಿದೆ. ನಾಗರಿಕರು ನೀಡುವ ದೂರಿಗೆ ಇಲ್ಲಿ ಪ್ರತಿಕ್ರಿಯೆಯೇ ಇಲ್ಲದಂತಾಗಿದೆ. ನಾಗರಿಕರು ನೀಡುವ ದೂರಿಗೆ ಪರಿಹಾರ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂದು ತಿಳಿಸುವ ಯೋಜನೆಯಾದ ‘ಸೇವಾ ವೇದಿಕೆ’ ಇನ್ನೂ ಅಭಿವೃದ್ಧಿಯೇ ಆಗಿಲ್ಲ.

ಆರಂಭವಾಗದ ‘ಇಂದಿರಾ ಕ್ಯಾಂಟೀನ್’

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲು ಅನಾವರಣಗೊಳಿಸಿದ ‘ಇಂದಿರಾ ಕ್ಯಾಂಟೀನ್’ ಸೇರಿದಂತೆ ಯಾವ ಕ್ಯಾಂಟೀನ್‌ಗಳು ಸುಸ್ಥಿತಿಯಲ್ಲಿಲ್ಲ. ಹೊಸ ಮೆನು ಬರಲಿಲ್ಲ. ಹೊಸದಾಗಿ 50 ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಭರವಸೆ ಎರಡು ವರ್ಷದಿಂದ ಬಾಕಿ ಉಳಿದಿದೆ. ‘ಸ್ವಚ್ಛ ಬೆಂಗಳೂರು’ ಎಂದು ಹೇಳಿಕೊಳ್ಳುವ ಯೋಜನೆಯಡಿ ಘನತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಹದಗೆಟ್ಟಿದೆ. ಕಸ ಗುಡಿಸುವವರೊಬ್ಬರು, ತೆಗೆಯುವವರೊಬ್ಬರು, ಸಂಗ್ರಹಿಸುವವರೊಬ್ಬರು, ಸಾಗಿಸುವವರೊಬ್ಬರು... ಹೀಗೆ ಪ್ರತಿಯೊಂದಕ್ಕೂ ಬೇರೆ ಬೇರೆ ಏಜೆನ್ಸಿ ಎಂದು ತ್ಯಾಜ್ಯ ನಿರ್ವಹಣೆ ವ್ಯವಸ್ಥೆ ಹದಗೆಟ್ಟಿದೆ. ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆ ಎಂದು ಹೇಳಿಕೊಂಡು ಬಿಬಿಎಂಪಿ ಬಜೆಟ್ ಮಂಡಿಸಿದ್ದರೂ, ಹಳೆ ಯೋಜನೆಯಾದ ವೈಟ್ ಟಾಪಿಂಗ್ ಬಿಟ್ಟರೆ ಬೇರೆ ಯಾವ ಕಾಮಗಾರಿಯೂ ನಗರದಲ್ಲಿ ಆರಂಭಗೊಂಡಿಲ್ಲ’ ಎಂದು ಬಿಬಿಎಂಪಿಯ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಅಭಿಪ್ರಾಯಪಟ್ಟರು.

‘ಖಾಸಗಿ ಕಲಾ ಕೇಂದ್ರ ನಿಲುವು ಸ್ಪಷ್ಟಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಲಾ ಕೇಂದ್ರ ನಿರ್ಮಿಸುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಬ್ಬನ್ ಉದ್ಯಾನದಲ್ಲಿ ಖಾಸಗಿ ಕಲಾ ಕೇಂದ್ರ ನಿರ್ಮಿಸಲು ಐದು ಎಕರೆ ಜಾಗವನ್ನು ಉದ್ಯಮಿಯೊಬ್ಬರಿಗೆ ಗುತ್ತಿಗೆ ಆಧಾರದಲ್ಲಿ ನೀಡುತ್ತಿರುವುದು ಖಂಡನೀಯ. ಇದರಿಂದ ಉದ್ಯಾನದ ಸೌಂದರ್ಯಕ್ಕೆ ಧಕ್ಕೆಯಾಗಲಿದೆ. ಈಗಾಗಲೇ ಅಭಿವೃದ್ಧಿ ಹೆಸರಿನಲ್ಲಿ ಉದ್ಯಾನದಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸಲಾಗಿದೆ’ ಎಂದು ಆರೋಪಿಸಿದರು.

‘ಕಬ್ಬನ್ ಉದ್ಯಾನ ಸಂರಕ್ಷಿತ ಪ್ರದೇಶ. ಉದ್ಯಾನದ ಅಂದಕ್ಕೆ ಯಾವುದೇ ಧಕ್ಕೆ ಆಗಬಾರದು. ಈ ಉದ್ಯಾನವನ್ನು ಸಂರಕ್ಷಿಸುವುದು ಸರ್ಕಾರ ಹಾಗೂ ಸಾರ್ವಜನಿಕರ ಜವಾಬ್ದಾರಿಯಾಗಿದೆ’ ಎಂದು ತಿಳಿಸಿದರು.

‘ಉದ್ಯಾನದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳದಂತೆ ಸರ್ಕಾರಕ್ಕೆ ನಿರ್ದೇಶಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಲಾಗಿದೆ’ എಂದು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

LAWRENCE HIGH School Koramangla (state board) requires Hindi teacher for middle school and Senior coordinator. Call: 8123397089/ 8296338807 Email: lawrenceschool99@gmail.com

FIRST STEPS SCHOOL
Jakkur Agrahara Village
JOIN OUR DYNAMIC TEAM
First Steps, Jakkur is seeking professional and dedicated educators to inspire and nurture our students. We have a collaborative and supportive work environment. We offer competitive salary package and opportunities for personal growth.
Positions Available
- High School French
- Middle School English
- Primary English
- Special Educators (OBE & NIOS)
Bachelor's degree in the relevant field
Fresh B.Com / BA Economics graduates.
Contact No: 9343633303/9060950351

APS EDUCATIONAL TRUST
N.R.Colony, Bangalore-560 019.
Email: apsedutrust@gmail.com, Website: www.apstrust.org
REQUIRED
I. PRINCIPAL: APS PUBLIC SCHOOL – ICSE N.R.Colony, B'lore: Preferably Ph.D. with ten years of experience in ICSE institutions.
II. APS COLLEGE OF ENGINEERING, Somanahalli Prof. / Assoc. Prof. / Asst. Prof.- Dept.: CSE, Cyber Security CSE -AIML
III. PRINCIPAL: APS COMMERCE COLLEGE, Somanahalli Retired Persons also apply
Interested candidates are informed to send their resume with Photograph and previous experience and expected salary details by Post or apsedutrust@gmail.com
Sd/- (CA Dr. Vishnu Bharath Alampalli) President
Sd/- (Prof. A. Prakash) General Secretary

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75. Ph: 080-25292930 www.ppecin.org
A longstanding premier institute having chain of institutions across the country is looking for the following posts:
HIGH SCHOOL PRINCIPAL
M A or M.Sc with B.Ed or M.Ed having a minimum of 5 years experience as a Principal. We are seeking a dynamic candidate with proven track record of leading teams to success with exceptional leadership traits and administrative capabilities.
ENGLISH TEACHER
B A/ M A (English) with B Ed, 5 years experience in teaching.
COUNSELLOR
A graduate or post graduate in Psychology or child development with 3 years experience.
LABORATORY DEMONSTRATOR
B.Sc / M.Sc with 3 years experience
Apply to the Hon. Secretary before 08-03-2025 through post or email to contact.indiranagar@ppec.edu.in

APPOLLO NATIONAL PUBLIC SCHOOL
Affiliated to CBSE, New Delhi.
#86, 7th cross, Chowdeshwarinagar, Laggere, Bangalore – 560058
Job Openings: Walk in Interview: 8th March 2025 & 17th March 2025 Time: 9:30 am to 12:00 noon

Pre – Primary	Graduate with NTT
Primary Teachers - English, Hindi & Mathematics	Graduate + D.ed/B.Ed (grades 1 – 5)
Secondary Teachers – Mathematics & Science	Graduate/Postgraduate + B.Ed (grades 6 – 10)
Computer Teacher	Graduate with BCA/MCA (grades 1 to 9)
Co-ordinator (Primary & Secondary)	Graduate/Postgraduate + B.Ed (grades 6 – 10)
Vice Principal	Postgraduate + B.Ed with experience as HOD or Secondary Co-ordinator.
Admin officer, Receptionist	Graduate

All applicants must have good written and verbal communication with relevant board experience (min 2 to 5 years of experience). Tel : 9538555257 / 9448933336, 080-28378666
Candidates can also apply resume on "anpswestbengaluru@gmail.com"

HERITAGE PUBLIC SCHOOL Konanakunte requires PRINCIPAL/ HEAD MISTRESS Experienced female post graduates with BEd,below 45`years HIGH SCHOOL TEACHERS for`Maths Physics Chemistry Biology,Social subjects PRIMARY TEACHERS for`Maths EVS English subjects KINDERGARTEN COORDINATOR and teachers Salary is not a constraint for deserving candidates Resume can`be sent through WhatsApp or email Mob:9901733776 Ph:080-26322111 Email: heritagepublicschoolkk@gmail.com

NEW OXFORD ENGLISH SCHOOL 6th CROSS GANDHINAGAR BANGALORE- 560009, REQUIRES EXPERIENCED TEACHERS TO TEACH MATHS, SCIENCE, SOCIAL, HINDI, DRAWING, PHYSICAL EDUCATION FOR NURSERY, PRIMARY, HIGH SCHOOL FOR THE ACADEMIC YEAR 2025-26. SCIENCE/ ARTS GRADUATES WITH B.Ed., N.T.T/TCH, D.Ed./CPEd. CALL/SEND RESUME- MAIL: noes.school@gmail.com PHONE: 080-41475015, 8884440204.

LAWRENCE HIGH School ICSE HSR, require Librarian and Teachers for History, English, Social for primary and middle school Call: 080-40903777/ 8971485310, 9080479986. lawrence.school.icse@gmail.com

ELITE PUBLIC SCHOOL Kempegowda Layout Laggere Bengaluru requires BA, B Ed, D Ed (History & English & Geography) Qualified Teachers. 9447727526/ 9980200444

REQUIRED NTT TRAINED TEACHERS. Contact for Further Details. Mobile Number. 8618293621

WANTED B.ED & D.Ed Trained Graduates with Teaching Experience in SCIENCE and MATHEMATICS for Higher Primary Classes. Salary negotiable. Apply/ Contact in person immediately. PRINCIPAL, HOLY CHILD CONVENT, 1133/44, 9th Cross, Ashoknagar, Near Vidya Peeta Circle, Bangalore- 560050. Ph: 26608485/ 74833-97848 Drop your resume or mail to: hcchs1371@yahoo.com

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc., B.Ed M.A./M.Sc., M.Ed, N.T.T. CP.Ed. Only English Medium Candidates need to apply

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail- maxmullerpublicschool.mlayout@gmail.com

New Baldwin Public School
KempegowdaNagar, Magadi Main Road, Bengaluru-560091.
Required Teachers
2-5 years Experience in CBSE, ICSE or State Board, Qualification: Graduation/ Post-Graduation with B.Ed, Fluent in English for
* Pre-Primary,
* Primary,
* Middle & Secondary - for all Subjects
* IT Teachers- Relevant Qualifications in Information &Technology
* Passionate Counselor
* Front Office Staff- Fluent in spoken English, Necessary qualifications
* Sub Staff-Basic knowledge of school work.
Salary is negotiable. The right salary will be offered to deserving candidates.
Walk in Interview on 09-03-2025 Sunday @ 10 AM onwards
for more details Contact: 6360957789 | 7019169636
EMail newbaldwinpublicschool789@gmail.com

Walk-in

'LIFE GUARD Required for Swimming Pool. Please Contact Mobile 8970050795, Jp nagar phase 2

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
WALK-IN-INTERVIEW
PRINCIPAL - Expertise in English / Social Science having 10 years experience or above
PGT - Mathematics, English, Social, Biology,
TGT & PRT - All Subjects
Physical Education (Female),
Primary Coordinator, Event & Marketing Manager,
Pre Primary Teachers (NTT, MTT, ECCEd)
Eligible candidates mail your application with updated Bio-data to : email: infoharwardints@gmail.com
Contact : 9880112833 / 9945230285

Hospital & Medical Jobs

REQUIRED OT trained NURSES with minimum 2 years experience RECEPTION, OFFICE STAFF with work experience in Hospitals Salary as per experience DEEPAK HOSPITAL 7th Block,Jayanagar Kanakapura Main Road Bangalore Apply in Person or Call: 9845782987 9538765487 9686112888 9686112889

Wanted

SURIE POLEX
URGENT REQUIREMENT
OFFICE ASSISTANCE (Female)
Good Communication Skill & Basic Computer Knowledge
M/s SURIE POLEX INDUSTRIES Pvt. Ltd
17/40, 6th Cross, B.G. Road, B'lore-30
Mob: 93419 69809

WANTED COMPUTER Billing Staff Female for a Reputed Plant Nursery in Yelahanka Contact: 9845202274/ 9620498866

Accounts & Finance

REQUIRED LADY Accountant with 1-2 years Experience with Commerce Background, Tally Knowledge For Yeshwanthpur: 9845684886

Receptionist/ Secretary

REQUIRED LADY STENO / RECEPTIONIST with 1- 3 years of Experience For Yeshwanthpur. Contact: 9845684886

"MATERNITY CLINIC Vijaynagar Require Female Data Entry Operator/ Receptionist. Experience and Local Preferred. Contact: 9448068082"

Part-Time Jobs

OPPORTUNITY FEMALE/MALE GRADUATES Age 30-55years,Free Training, Good income & Foreign trip. @ Malleshwaram. JITENDRA:9901469625

Engg/ Production Technical

S.N. ENGINEERING MATHIKERE COMPUTER OPERATOR, SUPERVISOR, CLERK, FITTER, MILLER, HELPER, HOUSE KEEPER, OFFICE BOY. 9448558947

General

WANTED FOR an established CA firm on Richmond Road, Bangalore. Semi qualified CA inter 1 or 2 groups passed candidates. Please call 9741511255 to fix a date & time for interview.

Drivers

WANTED HEAVY DUTY DRIVERS for 1214 and LMV Drivers for Bada dost Salary Rs. 25,000 to 30,000/- net plus incentives and Room provided. CALL: 9600597690, 9380144915

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds DECCAN HERALD More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
*Conditions apply
For more details contact:
+91 9901641752 | +91 9845114560 | +91 9900428036 | +91 9731810277 | +91 9886213331 | 080- 45557163/164

RENTAL PROPERTIES

Accommodation Available

House

1/2 BHK semi-furnished, ground floor, vegetarians only, Jayanagar, no brkrs, Contact 9902089324

REAL ESTATE SELLING

House

Jayanagar

1400 SFT 2 bedroom 2 balcony apartment in Oakyard 9th block immediate possession. Call 8217271840

Sites

Mallathalli

SALE, RAILWAY layout 1st-stage Mallathahalli 40*60 west facing 60ft road near Vidyaniketan early years. 9591805278

SITE ULLAL road, near SVK Choultry Mallathahalli 30*40 (SF) Ring road commercial Backsite Owner- 9591805278

Uttarahalli

POORNAPRAGNANAGAR 50 X 80 Site For Sale. 13500/SFT. Sarakki Homes, 9663676464.

TRAVEL CORNER

ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ Orchid ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
ರಿಯಾಯಿತಿ ದರದಲ್ಲಿ ಪ್ರವಾಸಗಳು 2025
99000 99252
Email : info@orchidtours.net, Website : www.orchidtours.net

20 ದಿನಗಳ ಅಮೇಜಿಂಗ್ ಅಮೇರಿಕಾ – ಈಸ್ಟ್ ಕೋಸ್ಟ್ ಮತ್ತು ವೆಸ್ಟ್ ಕೋಸ್ಟ್, ಆರ್ಲ್ಯಾಂಡೊ ಮತ್ತು ಬಹಮಾಸ್‌ಕ್ರೂಸ್	ಮೇ, ಜೂನ್
18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್ (10 ದೇಶಗಳು) – ಯು.ಕೆ. ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಇಟಲಿ, ಆಸ್ಟ್ರಿಯಾ	ಏಪ್ರಿಲ್‌ನಿಂದ ಸೆಪ್ಟೆಂಬರ್
ಗ್ರಾಂಡ್ ಆಸ್ಟ್ರೇಲಿಯಾ ಹಾಗೂ ನ್ಯೂಜಿಲ್ಯಾಂಡ್ (21 ದಿನಗಳು) – ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್, ಮೆಲ್ಬೋರ್ನ್, ಆಕ್ಲೆಂಡ್, ರೋಟುರಾ, ಕ್ವೀನ್ಸ್‌ಟೌನ್,	ಮಾರ್ಚ್, ಏಪ್ರಿಲ್
10 ದಿನಗಳ ಸೌತ್ ಆಫ್ರಿಕಾ (ಲ್ಯಾಂಡ್ ಆಫ್ ಅನಿಮಲ್ ಅಂಡ್ ಸಫಾರಿ) – ಕೇಪ್‌ಟೌನ್, ಜೊಹನ್ಸ್‌ಬರ್ಗ್	ಮೇ, ಜೂನ್, ಜುಲೈ
7/11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್ – ಎನ್‌ಜಾಯ್ ವಿತ್ ಫ್ಯಾಮಿಲಿ ಅಂಡ್ ಫ್ರೆಂಡ್ಸ್	ಏಪ್ರಿಲ್, ಮೇ, ಜೂನ್
6 ದಿನಗಳ ಬಾಲಿ–ಇಂಡೊನೇಷಿಯ (ಲ್ಯಾಂಡ್ ಆಫ್ ಗಾಡ್) – ಗರುಡ ವಿಷ್ಣು, ಉಲುವಟು ದೇವಸ್ಥಾನ, ಗೋವಾ ಗಜಾ ಕೇವ್	ಏಪ್ರಿಲ್, ಮೇ
6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್) – ಕೊಲೊಂಬೊ, ನೆಗೊಂಬೊ, ಕ್ಯಾಂಡಿ, ದಾಂಬುಲಾ, ಸೀತಾ ಅಶೋಕವನ	ಏಪ್ರಿಲ್, ಮೇ
7/11 ದಿನಗಳ ವಿಯೆಟ್ನಾಮ್ ಮತ್ತು ಕಾಂಬೋಡಿಯಾ – ಹನಾಯಿ ಸಿಟಿ, ದಾನಾಂಗ್, ಹಾ ಲಾಂಗ್ ಬೇ, ಸೀಮ್ ರೀಪ್, ಪಾಂಪ್ ಪೆನ್	ಏಪ್ರಿಲ್, ಮೇ, ಜೂನ್
ಕಾಶಿ, ಗಯಾ, ಅಯೋಧ್ಯಾ, ಪ್ರಯಾಗ್‌ರಾಜ್ ಹಾಗೂ ಇತರೆ 5 /9 ದಿನಗಳು	ಏಪ್ರಿಲ್, ಮೇ, ಜೂನ್
7 ದಿನಗಳ ಲೇ ಲಡಾಕ್ (ಲ್ಯಾಂಡ್ ಆಫ್ ಬುದ್ದಿಸಮ್) – ಲೇ, ಶ್ಯಾಂ ವ್ಯಾಲಿ, ನುಬ್ರಾ ವ್ಯಾಲಿ, ಟುರ್‌ಟುಕ್ ಪ್ಯಾಂಗಾಂಗ್ ಲೇಕ್	ಜುಲೈ, ಆಗಸ್ಟ್
ಚಾರ್‌ಧಾಮ್ (ಹೆಲಿಕಾಪ್ಟರ್ ಸ್ಪೆಷಲ್) 7 ದಿನಗಳು – ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ	ಮೇ, ಜೂನ್
ಶಕ್ತಿಪೀಠ ಹಿಮಾಚಲ ಸ್ಪೆಷಲ್ 14 ದಿನಗಳು – ಶಿಮ್ಲಾ, ಮನಾಲಿ, ಜ್ವಾಲಾಮುಖಿ, ನೈನಾದೇವಿ, ವೈಷ್ಣೋದೇವಿ, ಜಮ್ಮು	ಸೆಪ್ಟೆಂಬರ್, ಅಕ್ಟೋಬರ್

9900080793 / 9900093613 / 9900093615

OTHERS

Exhibition Halls/Art Gallery

TRADE FAIR showcasing Kadamba, chalukya Portuguese, and British-era coins, banknotes, medals, tokens, and more. Get free valuation of gold and silver coins by experts. (Note: Modern Republic Indian coins are not included. No Entry for YouTubers) Dates : 7th to 9th March 2025. Time: 11:00 AM to 7:30 PM. Venue : Kala Academy, Panaji, Goa. Entry: Free. Don't miss this unique opportunity! 9820010483.

BUSINESS

Business to Business

Business

WANTED INVESTORS for Industrial projects. Dubai based business. Dubai Properties. Get high returns. Call: 9353220417

Business Offers

Finance

NRI'S INVESTMENTS and finance NOW available (HIGH VALUE FUNDS) on low interest against LANDs & PROPERTIES call -7204995189

PERSONAL

Lost

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರಾದ ಶ್ರೀಮತಿ ಎಸ್.ವಿದ್ಯಾಶ್ರೀ ಕೋಂ ಶ್ರೀಧರ್‌ರವರು ಮೈಲನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ.75 ಖಾತಾ ನಂಬರ್.610/75, ಇ–ಖಾತಾ ನಂಬರ್–150300700700820879 ಮತ್ತು ಡಿಟೋ ಮೈಲನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ.72 ಖಾತಾ ನಂಬರ್. 610/72, ಇ–ಖಾತಾ ನಂಬರ್. 150300700700820875ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ನೆಲಮಂಗಲ ಉಪ– ನೋಂದಣಾಧಿಕಾರಿ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ 09471/2022–23 ಆಗಿ ಮತ್ತು ದಸ್ತಾವೇಜು ಸಂಖ್ಯೆ 09470/2022–23 ಆಗಿ ನೋಂದಣಿಯಾಗಿರುವ ಕ್ರಯಪತ್ರಗಳನ್ನು, ದಿನಾಂಕ: 15.10.2022ರ ಮೂಲ ಕ್ರಯಪತ್ರವನ್ನು, ದಿನಾಂಕ:01.11.2024ರಂದು ನೆಲಮಂಗಲ ಜೆರಾಕ್ಸ್ ಅಂಗಡಿ ಹತ್ತಿರ ಕಳೆದುಕೊಂಡಿದ್ದು, ಈ ಸಂಬಂಧವಾಗಿ ನೆಲಮಂಗಲ ಟೌನ್ ಪೋಲೀಸ್ ಘಟಕಕ್ಕೆ ದಿನಾಂಕ: 17–12–2024ರಂದು ಕಳೆದು ಹೋದ ವಸ್ತು/ದಾಖಲೆಯ ವರದಿ ಕ್ರಮ ಸಂಖ್ಯೆ 1386104/2024ರಂತೆ ದೂರನ್ನು ದಾಖಲು ಮಾಡಿರುತ್ತಾರೆ. ಆದ ಕಾರಣ ಸದರಿ ಅಸಲು ಮೂಲ ಪತ್ರಗಳು ಯಾರಿಗಾದರೂ ಸಿಕ್ಕರೆ ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.
ವಿಳಾಸ: R & L Associates ಮಂಜುನಾಥ್.ಎಸ್.ಹೆಚ್., ವಕೀಲರು, ಮೊದಲನೇ ಮಹಡಿ, ಕೆ.ಆರ್.ಪಿ ಬಿಲ್ಡಿಂಗ್ ಪರಮಣ್ಣ ಲೇಔಟ್, ನೆಲಮಂಗಲ– 562 123

LOST
I, Suresh Gunashetty Jayagopal S/o G.B.Jayagopal R/a No.5, 5th A Cross, Subbanna Garden, Vijayanagar, Bengaluru-560040 have lost my Property Sale Deed Documents, registration at Sri Rampura Sub-Registrar office.1st Book, No. 420, 80 to 82 Page, No. 1050, 1974-75 year. Above said documents if anbody found please call: 9880408888 or nearby police station.

Change of Name

I, AMRITA SINHA R/a Flat #.403, Tower-06, LT Raintree, Boulevard, Bellary Road, Byatarayanapura, Bangalore- 560092 Have Changed My Name From AMRITA SINHA To AMRITA AMIT RANJAN Affidavit Dated 03/03/2025 before Notary Mohammed Hussain.K Bangalore

CHANGE OF NAME
I, LAKSHMAPPA BADIGER R/at Flat No.169/1, H. No. 103, MM Pravalika Meadows Sun City Road, Kengeri Satellite Town, Bengaluru-560060, have changed my name to LAXMAPPA M BADIGER, vide affidavit dated 04.03.2025 before Notary H G Padmanabha Rao, Bengaluru Henceforth I shall be called as LAXMAPPA M BADIGER only

I, VENKATARAVANAPPA. C.L. Residing at #156, 5th B Cross, Chamindinagar Laggere Bangalore-58 have changed my son name from JASHWANTH RAJ. V to JASHWANTH RAJ YADAV. V vide affidavit dated 4/3/2025 before Notary K.S.Bammappanavar, Bangalore

AUTOMOTIVE

Four Wheelers Selling

Multiple

SALE SCHOOL bus 37' seater 2016 model 12 lakhs Sparinglyused upto date documents and Vento, 2012 Four lakhs call 9845048193

Honda

HONDA JAZZ, 2018 Model, 28500 kms. Excellent Condition.Single Owner. Call 9740078827, 9844008827. Brokers Excuse

ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಕಾರ್ಯಾಚರಣೆ • ನೈಜೀರಿಯಾದ ಇಬ್ಬರ ಸೆರೆ

ವಿದೇಶಿ ಡ್ರಗ್ಸ್ ಪೆಡ್ಲರ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಗಾರ್ಡನ್ ಸಿಟಿ ಕಾಲೇಜು ಬಳಿಯ ರಸ್ತೆಯೊಂದರಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಸಿಬ್ಬಂದಿ ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ನೈಜೀರಿಯಾದ ಪ್ರಜೆಗಳಾದ ಎಸ್ಸೊ ಜರ್ಮನ್ ಮತ್ತು ಜಾನ್ ಚುಕುವಾ ಬಂಧಿತರು.

ಬಂಧಿತರಿಂದ ₹17 ಲಕ್ಷ ಮೌಲ್ಯದ 108 ಗ್ರಾಂ ಬಿಳಿ ಬಣ್ಣದ ಎಂ.ಡಿ.ಎಂ.ಎ ಕ್ರಿಸ್ಟಲ್, ಎರಡು ಮೊಬೈಲ್ ಹಾಗೂ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ತಿಳಿಸಿದರು.

‘ಇಬ್ಬರೂ ಡ್ರಗ್ಸ್ ಪೆಡ್ಲರ್‌ಗಳು ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದರು. ಐದು ವರ್ಷಗಳಿಂದ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಇಬ್ಬರೂ ಮೋಜಿನ ಜೀವನ ನಡೆಸುವ ಉದ್ದೇಶದಿಂದ ಕಡಿಮೆ ಅವಧಿಯಲ್ಲಿ ಹೆಚ್ಚಿನ ಹಣ ಗಳಿಸಲು ಡ್ರಗ್ಸ್ ಮಾರಾಟ ದಂಧೆಗೆ ಇಳಿದಿದ್ದರು. ದೆಹಲಿಯಲ್ಲಿ ನೆಲಸಿದ್ದ ತಮ್ಮ ಸ್ನೇಹಿತರ ಮೂಲಕ ಕಡಿಮೆ ಮೊತ್ತಕ್ಕೆ ಮಾದಕ ವಸ್ತುಗಳನ್ನು ಖರೀದಿಸಿ, ನಗರಕ್ಕೆ ತರುತ್ತಿದ್ದರು. ಅದನ್ನು ನಗರದಲ್ಲಿ ಪರಿಚಿತ ಗ್ರಾಹಕರು, ಸಾಫ್ಟ್‌ವೇರ್ ಎಂಜಿನಿಯರ್, ಕಾಲೇಜು ವಿದ್ಯಾರ್ಥಿಗಳು ಹಾಗೂ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದವರಿಗೆ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುತ್ತಿದ್ದರು’ ಎಂದು ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಮಾದಕ ವಸ್ತು ಎಂಡಿಎಂಎ ಅನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪರಿಶೀಲಿಸಿದರು

ವೀಸಾ ಅವಧಿ ಮುಕ್ತಾಯ: ಬಂಧನ

ವೀಸಾ ಅವಧಿ ಮುಕ್ತಾಯವಾಗಿದ್ದರೂ ನಗರದಲ್ಲಿ ಅಕ್ರಮವಾಗಿ ನೆಲಸಿದ್ದ ಬ್ರೆಜಿಲ್‌ನ ಲೂಕೋಸ್ ಹೆನ್ರಿಕ್ (24) ಹಾಗೂ ಅರ್ಜೆಂಟಿನಾದ ಸ್ಯಾಮ್ಯುವೆಲ್ (26) ಎಂಬುವರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯ ಆನಂದ್‌ನಗರದ ಮನೆಯೊಂದರಲ್ಲಿ ಅವರು ನೆಲಸಿದ್ದರು ಎಂದು ಮೂಲಗಳು ತಿಳಿಸಿವೆ.

‘ಭಾರತೀಯ ಪ್ರಜೆಯೊಬ್ಬರು ಇಬ್ಬರು ವಿದೇಶಿಗರನ್ನು ಬ್ಯುಸಿನೆಸ್ ವೀಸಾದ ಅಡಿ ಭಾರತಕ್ಕೆ ಕರೆ ತಂದಿದ್ದರು. ಅವರಿಗೆ ಭಾರತದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಿದ್ದರು. ಪೂರ್ವಾಪರ ವಿಚಾರಣೆ ನಡೆಸದೇ ಬಾಡಿಗೆ ಮನೆ ನೀಡಿದ ಮಾಲೀಕ, ಅವರನ್ನು ಭಾರತಕ್ಕೆ ಕರೆಸಿಕೊಂಡಿದ್ದ ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ವಿದೇಶಿ ಪ್ರಜೆಗಳಿಗೆ ಮನೆ: 70 ಪ್ರಕರಣ ದಾಖಲು

ನಿಯಮ ಪಾಲಿಸದೇ ವಿದೇಶಿ ಪ್ರಜೆಗಳಿಗೆ ಮನೆ ನೀಡಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

‘2020ರಿಂದ ಇದುವರೆಗೆ 70 ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವುಗಳ ಪೈಕಿ, 42 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. 26 ಪ್ರಕರಣಗಳು ತನಿಖಾ ಹಂತದಲ್ಲಿವೆ. ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ಈ ಹಿಂದೆ ದಾಖಲಾಗಿದ್ದ ಪ್ರಕರಣದ ಸಂಬಂಧ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ನ್ಯಾಯಾಲಯವು ಪ್ರಕರಣದ ವಿಚಾರಣೆ ನಡೆಸಿ, ಮನೆ ಮಾಲೀಕರಿಗೆ ₹5 ಸಾವಿರ ದಂಡ ವಿಧಿಸಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

‘ವಿದೇಶಿಯರ ಕಾಯ್ದೆ–1946ರ ಕಲಂ 7ರ ಅಡಿ ಯಾವುದೇ ಮನೆಯ ಮಾಲೀಕ ಅಥವಾ ನಿರ್ವಹಣೆ ಮಾಡುವ ವ್ಯಕ್ತಿ ವಿದೇಶಿ ಪ್ರಜೆಗಳಿಗೆ ತನ್ನ ಮನೆಯನ್ನು ಬಾಡಿಗೆ ನೀಡಿದ 24 ಗಂಟೆಯ ಒಳಗಾಗಿ ವಿದೇಶಿಯರ ನೋಂದಣಿ ಇಲಾಖೆಯ ಆನ್‌ಲೈನ್ ಪೋರ್ಟಲ್ (http://indianfrro.gov.in/frro/FormC/dummy1.jsp) ಮೂಲಕ ಫಾರಂ–ಸಿ ನಮೂನೆಯನ್ನು ನೋಂದಣಿ ಅಧಿಕಾರಿಗೆ ಸಲ್ಲಿಸಬೇಕು. ಆ ಅಧಿಕಾರಿ ನಮೂನೆ–ಸಿ ಅನ್ನು ಅನುಮೋದಿಸಿದ ನಂತರ ಮನೆಯ ಮಾಲೀಕರು, ವಿದೇಶಿ ಪ್ರಜೆಗಳಿಗೆ ತಮ್ಮ ಮನೆಯನ್ನು ಬಾಡಿಗೆಗೆ ನೀಡಬಹುದು’ ಎಂದು ಮಾಹಿತಿ ನೀಡಿದರು.

ಇನ್ನು ಮುಂದೆ ಯಾವುದೇ ವಿದೇಶಿ ಪ್ರಜೆಗೆ ತಮ್ಮ ಮನೆಯನ್ನು ಬಾಡಿಗೆ ನೀಡುವ ಮುನ್ನ ಅವರ ಪೂರ್ವಾಪರ ವಿಚಾರಣೆ ನಡೆಸಬೇಕು. ನಿಯಮ ಪಾಲಿಸದ ಮನೆಯ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು. ‘ವಿದೇಶಿ ಪ್ರಜೆಗಳು ಮಾದಕ ವಸ್ತುಗಳ ಮಾರಾಟ, ಸಾಗಣೆ ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಕುರಿತು ಮಾಹಿತಿ ಬಂದಿದ್ದು, ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ರಾ’ ಸಂಸ್ಥೆಯ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಗುಪ್ತಚರ ಸಂಸ್ಥೆ ‘ರಾ’ದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, 30ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ತೆಲಂಗಾಣದ ವೇಣುಗೋಪಾಲ್ ಕುಲಕರ್ಣಿ ಮತ್ತು ಜಯನಗರದ ಅರವಿಂದ ಬಂಧಿತರು.


ವೇಣುಗೋಪಾಲ್ ಕುಲಕರ್ಣಿ

ಅರವಿಂದ್

ಗಾಂಧಿನಗರ ಲಾಡ್ಜ್‌ವೊಂದರಲ್ಲಿದ್ದ ‘ರಾ’ ಹೆಸರಿನ 86 ನಕಲಿ ಲೆಟರ್‌ಹೆಡ್‌ಗಳು, ನಕಲಿ ಗುರುತಿನ ಚೀಟಿ, ಆರು ಸೇವಾ ಪುಸ್ತಕಗಳು, ನೇಮಕಾತಿಗೆ ಸಂಬಂಧಿಸಿದ ನಕಲಿ ಪತ್ರಗಳು ಹಾಗೂ ಒಂಬತ್ತು ಮುದ್ರೆಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಯಲಹಂಕದ ಸುಪ್ರೀಂ ಲೇಔಟ್‌ನಲ್ಲಿ ಆರೋಪಿಗಳ ಕಚೇರಿಯಿಂದ ಕಲರ್ ಪ್ರಿಂಟರ್, ಲ್ಯಾಪ್‌ಟಾಪ್ ವಶಪಡಿಸಿಕೊಳ್ಳಲಾಗಿದೆ ಎಂದೂ ತಿಳಿಸಿದರು.

ಅಪರಾಧ ಸುದ್ದಿಗಳು

‘ಜಯನಗರದ 9ನೇ ಬ್ಲಾಕ್‌ನಲ್ಲಿ ಆರೋಪಿ ಅರವಿಂದ್ ಜೆರಾಕ್ಸ್ ಅಂಗಡಿ ನಡೆಸುತ್ತಿದ್ದ. ದೂರುದಾರ ಶ್ರೀರಾಮಚಂದ್ರ ಅವರು ಜೆರಾಕ್ಸ್ ಹಾಗೂ ಪ್ರಿಂಟ್ ತೆಗೆದುಕೊಳ್ಳಲು ಅದೇ ಅಂಗಡಿಗೆ ಬರುತ್ತಿದ್ದರು. ಆಗ ದೂರುದಾರರಿಗೆ ಆರೋಪಿ ವೇಣುಗೋಪಾಲ್ ಬಗ್ಗೆ ಅರವಿಂದ್ ತಿಳಿಸಿದ್ದ. ವೇಣುಗೋಪಾಲ್ ‘ರಾ’ ಅಧಿಕಾರಿಯಾಗಿದ್ದು, ತಮ್ಮ ಪತ್ನಿಗೆ ಉದ್ಯೋಗ ಕೊಡಿಸಿದ್ದಾನೆ ಎಂದು ಹೇಳಿಕೊಂಡಿದ್ದ. ಅರವಿಂದ್ ಮಾತು ನಂಬಿದ್ದ ದೂರುದಾರರು, ವೇಣುಗೋಪಾಲ್‌ನನ್ನು ಭೇಟಿ ಮಾಡಿದ್ದರು. ಕೆಲಸ ಕೊಡಿಸುವಂತೆ ಕೇಳಿಕೊಂಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ
> **ಬಿ.ದಯಾನಂದ,** ನಗರ ಪೊಲೀಸ್ ಕಮಿಷನರ್

‘ಗುಪ್ತಚರ ಸಂಸ್ಥೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿಯಿದ್ದು, ಬೆಂಗಳೂರು ಕಚೇರಿಗೆ ನಾನೇ ಮುಖ್ಯಸ್ಥ. ನಾನು ಕೆಲಸ ಕೊಡಿಸುತ್ತೇನೆ. ಈ ವಿಷಯನ್ನು ಬೇರೆ ಯಾರಿಗೂ ತಿಳಿಸುವಂತಿಲ್ಲ ಎಂದು ವೇಣುಗೋಪಾಲ್, ದೂರುದಾರರಿಗೆ ಷರತ್ತು ವಿಧಿಸಿದ್ದ. ಆತನ ಮಾತು ನಂಬಿದ್ದ ಶ್ರೀರಾಮಚಂದ್ರ ಅವರು ಮೂವರಿಗೆ ಕೆಲಸ ಕೊಡಿಸುವಂತೆ ₹17 ಲಕ್ಷ ನೀಡಿದ್ದರು’ ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

‘ಬಳಿಕ ಮೂವರಿಗೆ ‘ರಾ’ ಸಂಸ್ಥೆಯ ಕಾರ್ಯದರ್ಶಿ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ಪತ್ರ ನೀಡಿದ್ದ. ಕೆಲವು ದಿನ ಕಳೆದ ಮೇಲೆ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ಸಂಪರ್ಕಕ್ಕೆ ಸಿಗದೆ ತಲೆಮರೆಸಿಕೊಂಡಿದ್ದ. ಅದಾದ ಮೇಲೆ ರಾಮಚಂದ್ರ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು’ ಎಂದರು.

‘ದೂರು ನೀಡಿದ ಬಳಿಕ ಅರವಿಂದನನ್ನು ಭೇಟಿಯಾಗಿ ವಿಚಾರಿಸಿದ್ದರು. ತಮ್ಮ ಪತ್ನಿಗೂ ನಕಲಿ ನೇಮಕಾತಿ ಆದೇಶ ಪತ್ರ ನೀಡಿ ವೇಣುಗೋಪಾಲ್ ವಂಚಿಸಿದ್ದಾನೆ ಎಂಬುದಾಗಿ ಅರವಿಂದ್ ಹೇಳಿಕೊಂಡಿದ್ದ’ ಎನ್ನಲಾಗಿದೆ.

‘10 ವರ್ಷಗಳಿಂದ ವೇಣುಗೋಪಾಲ್ ಕುಲಕರ್ಣಿ ನಗರದಲ್ಲಿ ನೆಲಸಿದ್ದ. ಸುಮಾರು 30 ಮಂದಿಯಿಂದ ₹1 ಕೋಟಿಗೂ ಹೆಚ್ಚಿನ ಹಣ ಪಡೆದು ವಂಚಿಸಿದ್ದಾನೆ’ ಎಂದು ತನಿಖೆಯಲ್ಲಿ ಗೊತ್ತಾಗಿದೆ. ‘ತೆಲಂಗಾಣದಿಂದ ನಗರಕ್ಕೆ ಬಂದು ವಿವಿಧೆಡೆ ಬಾಡಿಗೆ ಮನೆಯಲ್ಲಿ ನೆಲಸಿದ್ದ ವೇಣುಗೋಪಾಲ್, ವಂಚನೆಯಿಂದ ಬಂದ ಹಣದಿಂದ ಹೋಟೆಲ್‌ಗಳಲ್ಲಿಯೇ ವಾಸ್ತವ್ಯ ಮಾಡುತ್ತಿದ್ದ’ ಎಂದು ಮೂಲಗಳು ತಿಳಿಸಿವೆ.

ಯುವತಿ ಮೇಲೆ ಹಲ್ಲೆ: ಪಿಎಸ್‌ಐ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಗರಾಜ್‌ಗೆ ಕರೆದೊಯ್ದು ಯುವತಿ ಮೇಲೆ ಹಲ್ಲೆ ಮಾಡಿ, ಅಸಭ್ಯವಾಗಿ ವರ್ತಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ವಿರುದ್ಧ ಮಡಿವಾಳ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಉತ್ತಮ್ ಸಿಂಗ್

ಇಂದಿರಾನಗರದ ಖಾಸಗಿ ಕಂಪನಿಯ ಉದ್ಯೋಗಿ ನೀಡಿದ ದೂರಿನ ಮೇರೆಗೆ ಕಲಬುರಗಿ ಕಂಟ್ರೋಲ್ ರೂಮ್ ವಿಭಾಗದ ಪಿಎಸ್‌ಐ ಉತ್ತಮ್‌ಸಿಂಗ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಪ್ರಕರಣ ದಾಖಲಾದ ಬೆನ್ನಲ್ಲೇ ಬಂಧನ ಭೀತಿಯಿಂದ ಪಿಎಸ್‌ಐ ರಜೆ ಮೇಲೆ ತೆರಳಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕಲಬುರಗಿಯ ಚಂದ್ರಕಾಂತ್ ಕ್ರೀಡಾಂಗಣದಲ್ಲಿ ಈಜು ತರಬೇತಿ ವೇಳೆ ಪಿಎಸ್‌ಐ ಉತ್ತಮ್ ಸಿಂಗ್ ಪರಿಚಯವಾಯಿತು. ಹೊಸ ಕಾರಿನಲ್ಲಿ ಸ್ನೇಹಿತರೊಂದಿಗೆ ಹೈದರಾಬಾದ್‌ನಿಂದ ಅಯೋಧ್ಯೆಗೆ ತೆರಳುತ್ತಿದ್ದು, ಜತೆಯಲ್ಲಿ ಬರುವಂತೆ ಆಹ್ವಾನಿಸಿದರು. ಅದಕ್ಕಾಗಿ ಬೆಂಗಳೂರಿನಿಂದ ಹೈದರಾಬಾದ್‌ಗೆ ವಿಮಾನ ಟಿಕೆಟ್ ಬುಕ್ ಮಾಡಿದ್ದರು. ಫೆಬ್ರುವರಿ 19 ರಂದು ವಿಮಾನದ ಮೂಲಕ ಹೈದರಾಬಾದ್‌ಗೆ ತೆರಳಿ ಅವರನ್ನು ಭೇಟಿ ಮಾಡಿದೆ. ಅವರೊಂದಿಗೆ ಕಲಬುರಗಿ ಇನ್‌ಸ್ಪೆಕ್ಟರ್ ಪ್ರಹ್ಲಾದ್, ಪಿಎಸ್‌ಐ ಅಮರೇಶ, ಸತೀಶ್ ಮತ್ತು ಚಾಲಕ ಇದ್ದರು’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

‘ಅವರ ಜತೆ ಪ್ರಯಾಗರಾಜ್‌ನಿಂದ ಅಯೋಧ್ಯೆಗೆ ತೆರಳಿದ ಬಳಿಕ ಅಲ್ಲಿಂದ ಮನಾಲಿಗೆ ತೆರಳುತ್ತಿರುವುದಾಗಿ ಉತ್ತಮ್ ಸಿಂಗ್ ಹೇಳಿದರು. ಅದಕ್ಕೆ ನಾನು ಒಪ್ಪಿಗೆ ನೀಡಲಿಲ್ಲ. ಆಗ ನನ್ನ ಮೇಲೆ ಹಲ್ಲೆ ಮಾಡಿ, ಮೊಬೈಲ್ ಕಿತ್ತುಕೊಂಡು ಬೆದರಿಕೆ ಹಾಕಿದರು. ಅಲ್ಲದೇ ಅಸಭ್ಯವಾಗಿ ವರ್ತಿಸಿದರು. ಸ್ಥಳೀಯರ ನೆರವಿನಿಂದ ಎಲ್ಲರನ್ನೂ ಪೊಲೀಸ್ ಠಾಣೆಗೆ ಕರೆದೊಯ್ದು ದೂರು ನೀಡಿದೆ. ಬೆಂಗಳೂರಿನಲ್ಲಿಯೇ ದೂರು ದಾಖಲಿಸುವಂತೆ ಅಲ್ಲಿನ ಠಾಣಾಧಿಕಾರಿ ಡೆಹರಾಡೂನ್‌ನಿಂದ ವಿಮಾನದಲ್ಲಿ ನನ್ನನ್ನು ಕಳುಹಿಸಿಕೊಟ್ಟರು. ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

ಪ್ರಯಾಗರಾಜ್‌ನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಔಷಧಿ ಅಂಗಡಿ, ಮಿಲ್ಕ್ ಪಾರ್ಲರ್‌ಗಳಲ್ಲಿ ಕಳ್ಳತನ ಮಾಡಿ ಪ್ರಯಾಗರಾಜ್ ಕುಂಭಮೇಳಕ್ಕೆ ತೆರಳಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಕೆ.ಪಿ.ಅಗ್ರಹಾರ ಪೊಲೀಸರು ಬಂಧಿಸಿದ್ದಾರೆ.

ದಾಸನಪುರ ಹೋಬಳಿಯ ರಾವುತ್ತನಹಳ್ಳಿ ನಿವಾಸಿ ಉದಯ್ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ.

‘ಆರೋಪಿ ಉದಯ್ ತನ್ನ ಸಹಚರನ ಜತೆ ಸೇರಿಕೊಂಡು ಚೋಳೂರು ಪಾಳ್ಯದಲ್ಲಿರುವ ಮೆಡಿಕಲ್ ಸ್ಟೋರ್ ಮತ್ತು ಮಿಲ್ಕ್ ಪಾರ್ಲರ್ ರೋಲಿಂಗ್ ಶೆಟ್ಟರ್ ಬೀಗ ಒಡೆದು ಹಣ ಹಾಗೂ ವಸ್ತುಗಳನ್ನು ದೋಚಿದ್ದರು. ಪೊಲೀಸರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಉದಯ್ ಪ್ರಯಾಗರಾಜ್ ಕುಂಭಮೇಳಕ್ಕೆ ಹೋಗಿ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮೊಬೈಲ್ ಲೊಕೇಷನ್ ಆಧರಿಸಿ ಆರೋಪಿಯನ್ನು ಪತ್ತೆ ಹಚ್ಚಲಾಯಿತು. ವಿಚಾರಣೆ ವೇಳೆ ಕಳವು ಮಾಡಿರುವುದನ್ನು ಒಪ್ಪಿಕೊಂಡ. ಆತ ನೀಡಿದ ಮಾಹಿತಿ ಮೇರೆಗೆ ಮತ್ತೊಬ್ಬನನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ’ ಎಂದು ಹೇಳಿದರು.

ಅಣ್ಣನನ್ನು ಆಸ್ಪತ್ರೆಗೆ ಕರೆದೊಯ್ದ ತಮ್ಮನಿಗೂ ಹೃದಯಾಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸ್ತಂಭನಕ್ಕೆ ಒಳಗಾದ ಅಣ್ಣನನ್ನು ಆಸ್ಪತ್ರೆಗೆ ಕರೆದೊಯ್ದ ಸಹೋದರನೂ ಹೃದಯಾಘಾತದಿಂದ ಮೃತಪಟ್ಟ ಘಟನೆ ನಗರದಲ್ಲಿ ನಡೆದಿದೆ.

ಎಂ. ಚಂದ್ರಶೇಖರ್ (55) ಮತ್ತು ಎಂ. ಜಗದೀಶ್ (53) ಮೃತ ಸಹೋದರರಾಗಿದ್ದಾರೆ. ಇಬ್ಬರಿಗೂ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದ ಎಂ. ಚಂದ್ರಶೇಖರ್ ಅವರಿಗೆ, ಮಾರ್ಚ್ 3ರಂದು ಟ್ರೆಡ್‌ಮಿಲ್ ಮೇಲೆ ಜಾಗಿಂಗ್ ಮಾಡುವಾಗ ಎದೆ ನೋವು ಕಾಣಿಸಿಕೊಂಡಿತ್ತು. ದೇಹವು ಅತಿಯಾಗಿ ಬೆವರಿದ ಕಾರಣ, ವೃತ್ತಿಯಲ್ಲಿ ವೈದ್ಯರಾಗಿದ್ದ ಜಗದೀಶ್ ಅವರು ತಮ್ಮ ಕಾರಿನಲ್ಲಿ ಸಹೋದರನನ್ನು ಆರ್‌ಬಿಐ ಲೇಔಟ್‌ನಲ್ಲಿರುವ ನೈಬರ್ ಹುಡ್ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಚಂದ್ರಶೇಖರ್ ಅವರು ಹೃದಯ ಸ್ತಂಭನದಿಂದ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ ಎಂದು ವೈದ್ಯರು ಖಚಿತಪಡಿಸಿದರು.

ಹೃದಯ ಸಮಸ್ಯೆ ಹೊಂದಿದ್ದ ಜಗದೀಶ್ ಅವರಿಗೆ ಈ ಹಿಂದೆ ಸ್ಟಂಟ್ ಅಳವಡಿಕೆ ಮಾಡಲಾಗಿತ್ತು. ಸಹೋದರ ಮೃತಪಟ್ಟ ಆಘಾತದಿಂದ ಜಗದೀಶ್ ಅವರಿಗೂ ಆಸ್ಪತ್ರೆಯಲ್ಲಿ ಹೃದಯಾಘಾತವಾಗಿ, ಮೃತಪಟ್ಟಿದ್ದಾರೆ. ಇವರು ನೀಲಸಂದ್ರದ ಲಕ್ಷ್ಮೀ ಮತ್ತು ದಿವಂಗತ ಮುನಿಬುಡ್ಡ ಅವರ ಪುತ್ರರಾಗಿದ್ದಾರೆ. ಕೊತ್ತನೂರು ಗ್ರಾಮದಲ್ಲಿ ನೆಲಸಿದ್ದರು. ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕನಕಪುರ ರಸ್ತೆಯ ರಮೇಶ್ ನಗರದ ಸ್ವಾನ್‌ಲೇನ್ ಸ್ಟುಡಿಯೊ ಹತ್ತಿರ ಇರುವ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಮೃತರ ಕುಟುಂಬಸ್ಥರು ತಿಳಿಸಿದ್ದಾರೆ.

ಇಬ್ಬರು ಮನೆಗಳ್ಳರ ಬಂಧನ: ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ್ಳತನ ಮಾಡುತ್ತಿದ್ದ ಹಾಗೂ ಕದ್ದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ಇಬ್ಬರು ಆರೋಪಿಗಳನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಸರಘಟ್ಟ ನಿವಾಸಿ ನಾಸಿರ್ ಖಾನ್ ಮತ್ತು ಚಿಕ್ಕಸಂದ್ರದ ಡಿ.ಕೆ. ಸಂತೋಷ್ ಅವರನ್ನು ಬಂಧಿಸಿ, ₹18 ಲಕ್ಷ ಮೌಲ್ಯದ 220 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಫೆಬ್ರುವರಿ 11 ರಂದು ಠಾಣಾ ವ್ಯಾಪ್ತಿಯ ರಾಯಲ್ ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳವು ಮಾಡಲಾಗಿತ್ತು. ಮನೆ ಮಾಲೀಕರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಸಿಸಿಟಿವಿ ಕ್ಯಾಮೆರಾಗಳ ಪರಿಶೀಲನೆ, ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಆರೋಪಿಗಳ ಮಾಹಿತಿ ಮತ್ತು ಬೆರಳಚ್ಚು ಆಧರಿಸಿ ನಾಸೀರ್ ಖಾನ್ ಅವರನ್ನು ಬಂಧಿಸಿ ವಿಚಾರಣೆ ನಡೆಸಿದರು.

‘ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡ ಆರೋಪಿ ನಾಸಿರ್, ಕಳವು ಮಾಡಲು ಸ್ನೇಹಿತ ಸಂತೋಷ್ ಪ್ರಚೋದನೆ ನೀಡಿದ್ದಾನೆ. ಕದ್ದ ಚಿನ್ನಾಭರಣವನ್ನು ಆತ ಮಾರಾಟ ಮಾಡಿ ಹಣ ನೀಡುತ್ತಿದ್ದ ಎಂಬುದನ್ನು ವಿಚಾರಣೆ ವೇಳೆ ತಿಳಿಸಿದ್ದಾನೆ. ಆರೋಪಿ ನೀಡಿದ ಮಾಹಿತಿ ಮೇರೆಗೆ ವರ್ತೂರಿನಲ್ಲಿ ಸಂತೋಷನನ್ನು ಬಂಧಿಸಲಾಯಿತು. ಆತ ತನ್ನ ಸಂಬಂಧಿಯೊಬ್ಬರಿಗೆ 44 ಗ್ರಾಂ ಚಿನ್ನ ಹಾಗೂ 700 ಗ್ರಾಂ ಬೆಳ್ಳಿ ನೀಡಿರುವುದಾಗಿ ತಿಳಿಸಿದ’ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ

ಶೈಕ್ಷಣಿಕ, ಸಂಶೋಧನಾ ಭವನಗಳಿಗೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಶೈಕ್ಷಣಿಕ ಮತ್ತು ಸಂಶೋಧನ ಭವನಗಳ ಶಂಕುಸ್ಥಾಪನೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಂಗಳವಾರ ನೆರವೇರಿಸಿದರು.

ನಂತರ ಮಾತನಾಡಿದ ಶಿವಕುಮಾರ್, ‘ಪಿಎಂ–ಉಷಾ ಯೋಜನೆ ಅಡಿಯಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಈ ಭವನಗಳು ನಿರ್ಮಾಣವಾಗುತ್ತಿವೆ. ಈ ಎರಡು ಕಟ್ಟಡಗಳ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆ ಮಾಡಲು ಸಲಹೆ ನೀಡಿದ್ದೇನೆ’ ಎಂದರು.

‘ಈ ವಿಶ್ವವಿದ್ಯಾಲಯದಲ್ಲಿ ಓದಿದವರು ಇಂದು ಸಾಕಷ್ಟು ಉನ್ನತ ಹುದ್ದೆಗಳಲ್ಲಿದ್ದಾರೆ. ನಾನು ಕೂಡ ಈ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯನಾಗಿದ್ದೆ. ಇಂದು ಭೂಮಿ ಪೂಜೆ ನೆರವೇರಿಸಿರುವುದು ಸಂತಸ ತಂದಿದೆ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಮುನಿರತ್ನ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ, ಕುಲಸಚಿವ ಶೇಕ್ ಲತೀಫ್, ಕುಲಸಚಿವ (ಮೌಲ್ಯಮಾಪನ) ಶ್ರೀನಿವಾಸ್ ಸಿ., ಸಿಂಡಿಕೇಟ್ ಸದಸ್ಯರಾದ ಬಿ.ಡಿ.ಗಂಗರಾಜು, ರಮೇಶ್ ಬಾಬು, ದಂಡಿಕೆರೆ ನಾಗರಾಜ್, ಮಹದೇವ ನಾಯ್ಕ್,ಕೆ. ಷರೀಫಾ, ಜಯಶ್ರೀ ಹೆಗ್ಡೆ ಉಪಸ್ಥಿತರಿದ್ದರು.

ಶೈಕ್ಷಣಿಕ ಮತ್ತು ಸಂಶೋಧನಾ ಭವನ ನಿರ್ಮಾಣ ಕಾಮಗಾರಿಗೆ ಡಿ.ಕೆ.ಶಿವಕುಮಾರ್ ಮತ್ತು ಡಾ.ಎಂ.ಸಿ.ಸುಧಾಕರ ಭೂಮಿಪೂಜೆ ನೆರವೇರಿಸಿದರು.

ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಿ: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಅಧ್ಯಯನ ಕೇಂದ್ರದ ಕಾಮಗಾರಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವೀಕ್ಷಿಸಿದರು. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ದೀಪಕ್ ನಯ್ಯರ್ ಉಪನ್ಯಾಸ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ದೀಪಕ್ ನಯ್ಯರ್ ಅವರ ಉಪನ್ಯಾಸವನ್ನು ಇದೇ 6ರಂದು ಸಂಜೆ 6.30ಕ್ಕೆ ದೊಮ್ಮಲೂರಿನಲ್ಲಿ ಇರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಹಮ್ಮಿಕೊಳ್ಳಲಾಗಿದೆ.


ದೀಪಕ್

ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಗಳನ್ನು ಈ ಉಪನ್ಯಾಸವು ಕೇಂದ್ರೀಕರಿಸಲಿದೆ. ಉಪನ್ಯಾಸದ ನಂತರ ಪ್ರೇಕ್ಷಕರಿಗೆ ಪ್ರಶ್ನೋತ್ತರಕ್ಕೂ ಅವಕಾಶ ಇರಲಿದೆ.

ದೀಪಕ್ ನಯ್ಯರ್ ಅವರು ಅರ್ಥಶಾಸ್ತ್ರಜ್ಞ ಮತ್ತು ಶಿಕ್ಷಣ ತಜ್ಞರಾಗಿದ್ದಾರೆ. ಇವರ ಲೇಖನಗಳು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿದ್ದು, ಪುಸ್ತಕಗಳನ್ನೂ ಬರೆದಿದ್ದಾರೆ. ಇವರ ಉಪನ್ಯಾಸಕ್ಕೆ ಪ್ರವೇಶ ಉಚಿತ.

ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದಿಂದ ನಗರದಲ್ಲಿ ಪ್ರತಿಭಟನೆ

ಗೌರವಧನ ಹೆಚ್ಚಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವಧನ ಹೆಚ್ಚಳವೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

2014ರಿಂದಲೂ ಕೇಂದ್ರ ಸರ್ಕಾರವು ಗೌರವಧನ ಹೆಚ್ಚಳ ಮಾಡಿಲ್ಲ. ತಕ್ಷಣವೇ ಗೌರವಧನವನ್ನು ₹26 ಸಾವಿರಕ್ಕೆ ಹೆಚ್ಚಿಸಿ ಅನುಷ್ಠಾನಕ್ಕೆ ತರಬೇಕು. ಅದುವರೆಗೂ ಕೇರಳ, ತಮಿಳುನಾಡು ಹಾಗೂ ಹರಿಯಾಣ ರಾಜ್ಯಗಳಲ್ಲಿ ಇರುವಂತೆಯೇ ಕರ್ನಾಟಕದಲ್ಲೂ ವೇತನ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನಿವೃತ್ತರಾದವರಿಗೆ ಇಡುಗಂಟು ನೀಡಬೇಕು. ಎಸ್‌ಡಿಎಂಸಿಯವರು ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕು. ಹಲವು ಕಡೆ ಅಡುಗೆ ಕೋಣೆಗಳು ಉತ್ತಮವಾಗಿಲ್ಲ. ಅಂತಹ ಕಡೆ ಸುಸಜ್ಜಿತ ಅಡುಗೆ ಕೋಣೆಗಳನ್ನು ನಿರ್ಮಿಸಬೇಕು ಎಂದೂ ಒತ್ತಾಯಿಸಿದರು.

ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

‘ಕ್ಲಸ್ಟರ್ ಸಭೆಗಳನ್ನು ಕಡ್ಡಾಯವಾಗಿ ಪ್ರತಿ ಜಿಲ್ಲೆಯಲ್ಲೂ ನಡೆಸಬೇಕು. ಅಕ್ಷರ ದಾಸೋಹ ಯೋಜನೆಯನ್ನು ಸಂಪೂರ್ಣವಾಗಿ ಶಿಕ್ಷಣ ಇಲಾಖೆ ಅಡಿಯಲ್ಲಿಯೇ ನಡೆಸಬೇಕು. ಕೆಲಸದ ಸ್ಥಳದಲ್ಲಿ ಮರಣ ಹೊಂದಿದರೆ ₹25 ಲಕ್ಷ ಪರಿಹಾರ ವಿತರಿಸಬೇಕು. ಹಾಜರಾತಿ ಆಧಾರದಲ್ಲಿ ಕೆಲಸದಿಂದ ವಜಾಗೊಳಿಸುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು’ ಎಂದು ಆಗ್ರಹಿಸಿದರು.

‘ಬೇಸಿಗೆ ರಜೆ, ದಸರಾ ರಜೆ ಹಾಗೂ ಚುನಾವಣೆ ಸಂದರ್ಭದ ವೇತನವನ್ನು ಕಡ್ಡಾಯವಾಗಿ ವಿತರಣೆ ಮಾಡಬೇಕು’ ಎಂದು ಒತ್ತಾಯಿಸಿದರು.

ಗೌರವ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಅಧ್ಯಕ್ಷೆ ಲಕ್ಷ್ಮೀದೇವಿ, ಖಜಾಂಚಿ ಮಹಾದೇವಮ್ಮ, ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಚಿತ್ರಾವಳಿ

ವಿಧಾನಸಭೆ ನಡೆದು ಬಂದ ದಾರಿ ಕುರಿತು ವಿಧಾನಸಭೆಯ ಮೊಗಸಾಲೆಯಲ್ಲಿ ಅಳವಡಿಸಲಾಗಿರುವ ಚಿತ್ರಪಟಗಳನ್ನು ಉದ್ಘಾಟಿಸಿದ ನಂತರ ಯು.ಟಿ.ಖಾದರ್, ಡಿ.ಕೆ.ಶಿವಕುಮಾರ್, ರವಿಕುಮಾರ್ ಗಣಿಗ ವೀಕ್ಷಿಸಿದರು

ಮಂತ್ರಾಲಯದಲ್ಲಿ ನಡೆದ ಗುರುವೈಭವೋತ್ಸವದಲ್ಲಿ ಜಯದೇವ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ನಟರಾಜ್ ಶೆಟ್ಟಿ ಅವರನ್ನು ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಸನ್ಮಾನಿಸಿದರು

ವಿಶೇಷ ಸಂದರ್ಭಗಳಲ್ಲಿ ಕೆಲಸಕ್ಕೆ ಕರೆಯುವ ಬದಲಾಗಿ ಪೂರ್ಣಾವಧಿ ಕೆಲಸ ನೀಡುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಲೇಬರ್ ರೈಟ್ಸ್ ಫೋರಂ ನೇತೃತ್ವದಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಪಾಕಿಸ್ತಾನ: ಆತ್ಮಾಹುತಿ ಬಾಂಬ್ ದಾಳಿಗೆ 10 ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ವಾಯವ್ಯ ಭಾಗದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಮಂಗಳವಾರ ನಡೆದ ಆತ್ಮಾಹುತಿ ಬಾಂಬ್ ದಾಳಿಗೆ 10 ನಾಗರಿಕರು ಮೃತಪಟ್ಟಿದ್ದು, 16 ಮಂದಿ ಗಾಯಗೊಂಡಿದ್ದಾರೆ. ಭದ್ರತಾ ಪಡೆಗಳು ಆರು ಉಗ್ರರನ್ನು ಹತ್ಯೆ ಮಾಡಿವೆ.

ಆತ್ಮಾಹುತಿ ಬಾಂಬರ್‌ಗಳು ಪಾಕ್ ಸೇನೆಗೆ ಸೇರಿದ ಬನ್ನು ಕಂಟೋನ್ಮೆಂಟ್‌ನ ಕಾಂಪೌಂಡ್‌ಗೆ ಸ್ಫೋಟಕ ತುಂಬಿದ ವಾಹನಗಳನ್ನು ಗುದ್ದಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಫೋಟದ ತೀವ್ರತೆಗೆ ಸಮೀಪದ ಕಟ್ಟಡದಲ್ಲಿದ್ದ 6 ಮಂದಿ ಮೃತಪಟ್ಟಿದ್ದಾರೆ. ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇದ್ದ ಮಸೀದಿ ಕುಸಿದಿದ್ದು, ಅದರ ಅವಶೇಷಗಳಡಿ ನಾಲ್ವರ ಮೃತದೇಹಗಳು ದೊರೆತಿವೆ.

ಜೈಶ್ ಅಲ್ ಫುರ್ಸಾನ್ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿದೆ. ಸ್ಫೋಟದ ಬೆನ್ನಲ್ಲೇ ಕಂಟೋನ್ಮೆಂಟ್ ಒಳಗೆ ಪ್ರವೇಶಿಸಿದ ಆರು ಉಗ್ರರನ್ನು ಭದ್ರತಾ ಸಿಬ್ಬಂದಿ ಗುಂಡಿಟ್ಟು ಕೊಂದಿದ್ದಾರೆ.

ಬಾರ್‌ನಲ್ಲಿ ಗಲಾಟೆ: ಕೊಲೆ

ಬೆಂಗಳೂರು: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಾರ್‌ವೊಂದರಲ್ಲಿ ಮಂಗಳವಾರ ರಾತ್ರಿ ನಡೆದ ಗಲಾಟೆಯಲ್ಲಿ ರೌಡಿಯನ್ನು ಕೊಲೆ ಮಾಡಲಾಗಿದೆ.

ಯಲಹಂಕ ಪೊಲೀಸ್ ಠಾಣೆಯ ರೌಡಿಶೀಟರ್ ಜಯರಾಮ್ ಎಂಬಾತನನ್ನು ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದಾರೆ.

ಸ್ನೇಹಿತರೊಂದಿಗೆ ಬಾರ್‌ನಲ್ಲಿ ಜಯರಾಮ್ ಮದ್ಯ ಸೇವಿಸುತ್ತಾ ಕುಳಿತಿದ್ದ. ರಾತ್ರಿ 9 ಗಂಟೆಯ ಸುಮಾರಿಗೆ ಬಾರ್‌ಗೆ ನುಗ್ಗಿದ ನಾಲ್ಕು ಜನರು ಜಯರಾಮ್ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸ್ಥಳಕ್ಕೆ ಸೋಲದೇವನಹಳ್ಳಿ ಠಾಣೆಯಲ್ಲಿ ಭೇಟಿ ನೀಡಿ ಪರಿಶೀಲಿಸಿದರು.

ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯ ರಕ್ಷಣೆ

ಬಂಟ್ವಾಳ (ದಕ್ಷಿಣ ಕನ್ನಡ): ನೇತ್ರಾವತಿ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿಯೊಬ್ಬರನ್ನು ಸ್ಥಳೀಯರು ಮಂಗಳವಾರ ರಕ್ಷಿಸಿದ್ದಾರೆ.

ಬೆಂಗಳೂರಿನ ಕತ್ರಿಗುಪ್ಪೆ ನಿವಾಸಿ ಶಂಕರಯ್ಯ(50) ಆತ್ಮಹತ್ಯೆಗೆ ಯತ್ನಿಸಿದವರು. ಸ್ಥಳೀಯ ನಿವಾಸಿ ಸಿದ್ದಿಕ್ ಮತ್ತಿತರರು ಅವರನ್ನು ನದಿಯಿಂದ ಮೇಲೆತ್ತಿ ರಕ್ಷಿಸಿದ್ದಾರೆ.



ಒಬೆಲಿಸ್ಕ್: ಮಾನವನ ಭವಿಷ್ಯಕ್ಕೆ ಹೊಸ ಕುತ್ತು?

ಎಸ್. ಎನ್. ಹೆಗಡೆ

ಇತ್ತೀಚೆಗೆ ವಿಜ್ಞಾನಿಗಳ ನಿದ್ದೆಗೆಡಿಸುವಂಥ ಜೀವಾಣುವೊಂದರ ಆವಿಷ್ಕಾರವಾಗಿದೆ. ಇದೇ 'ಒಬೆಲಿಸ್ಕ್' ಎಂಬ ಸೂಕ್ಷ್ಮಾತಿ ಸೂಕ್ಷ್ಮ ಜೀವಕಣ.

ಮಲೇರಿಯಾ, ಬೇಧಿ, ಅತಿಸಾರದಂತಹ ರೋಗಗಳಿಗೆ ಕಾರಣ ಏಕಕೋಶಜೀವಿಗಳು. ಕಾಲರಾ, ಕ್ಷಯ, ಗೊನೊರಿಯ ಮುಂತಾದ ರೋಗಗಳಿಗೆ ಕಾರಣ ವಿವಿಧ ಬಗೆಯ ಬ್ಯಾಕ್ಟೀರಿಯಾಗಳು. ಇವು ಅರೆ ಜೀವಕೋಶಗಳು. ವೈರಸ್ಸುಗಳು ಬ್ಯಾಕ್ಟೀರಿಯಾಗಳಿಗಿಂತಲೂ ಚಿಕ್ಕವು. ಅವುಗಳ ಗಾತ್ರ 20ರಿಂದ 300 ನ್ಯಾನೊಮೀಟರ್‌ಗಳು (ಒಂದು ನ್ಯಾ.ಮೀ. ಅಂದರೆ ಒಂದು ಸಾವಿರ ಮೈ.ಮೀ.ನ ಒಂದು ಭಾಗ). ವೈರಸ್ಸುಗಳು ಸ್ವತಂತ್ರವಾಗಿ ಜೀವಿಸಲಾರವು. ಬೇರೆ ಜೀವಿಗಳ ಕೋಶಗಳನ್ನು ಆಕ್ರಮಿಸಿ, ಆ ಜೀವಕೋಶಗಳಲ್ಲಿ ವೃದ್ಧಿಸಿ ಆರೋಗ್ಯವಂತ ಜೀವಿಗಳ ಜೀವಕೋಶಗಳನ್ನು ಸೇರಿ ಸೋಂಕನ್ನು ಉಂಟುಮಾಡುತ್ತವೆ. ಮನುಷ್ಯನಲ್ಲಿ ಏಡ್ಸ್, ಕೊರೊನಾ, ಇನ್‌ಫ್ಲುಯೆಂಜಾ, ಮಿದುಳುಜ್ವರ ಮುಂತಾದ ಮಾರಕ ರೋಗಗಳು ವೈರಸ್ಸುಗಳಿಂದ ಉಂಟಾಗುತ್ತವೆ.

ವೈರಸ್ಸುಗಳಿಗಿಂತ ಸಾವಿರ ಪಟ್ಟು ಚಿಕ್ಕವು ವೈರಾಯಿಡ್; ಅವು ಪರಾವಲಂಬಿ ಆನುವಂಶೀಯ ಅಣುಗಳು. ಈ ಸೋಂಕುಜೀವಾಣುಗಳು ಸಸ್ಯಗಳಲ್ಲಿ ಹಲವು ರೋಗಗಳನ್ನು ಉಂಟುಮಾಡುತ್ತವೆ. 'ಹಸುಗಳಲ್ಲಿ ಹುಚ್ಚು' (ಮ್ಯಾಡ್ ಕೌ ರೋಗ), ಮಾನವನ 'ಸರ್ಪಸುತ್ತು ಡಿ' (ಹರ್ಪಿಸ್ ಡಿ) ವೈರಾಯಿಡ್ ಸೋಂಕಿನಿಂದ ಉಂಟಾಗುವ ರೋಗಗಳು.

ಈಗ ಕಂಡುಹಿಡಿಯಲಾದ ಒಬೆಲಿಸ್ಕ್‌ಗಳು ವೈರಾಯಿಡ್‌ಗಳಿಗಿಂತ ಚಿಕ್ಕವು, ಅವು ಚಿಕ್ಕ ಆರ್‌ಎನ್‌ಎ ತುಣುಕುಗಳು. ಕೇವಲ ರೈಬೊನ್ಯೂಕ್ಲಿಯೊಟೈಡುಗಳ ಸರಣಿಯನ್ನು ಮಾತ್ರ ಹೊಂದಿರುವ ಒಬೆಲಿಸ್ಕ್‌ಗಳಲ್ಲಿ,



ಒಬೆಲಿಸ್ಕ್‌ನ ಗೋಲಾಕಾರದ ಅಣುರಚನೆ

2000ದಿಂದ 3000 ನ್ಯೂಕ್ಲಿಯೊಟೈಡುಗಳನ್ನು ಒಳಗೊಂಡ ಒಂದು ಎಳೆ ಮಾತ್ರ ಇದ್ದು ಅದು ವಿವಿಧ ಆಕಾರಗಳಲ್ಲಿ ಸುರುಳಿಯಾಗಿರುತ್ತದೆ (ಚಿತ್ರ ನೋಡಿ). ಇವು ನ್ಯಾನೊಕಣಗಳು. ಇವುಗಳನ್ನು ಪತ್ತೆ ಹಚ್ಚಿದವರು 2006ರಲ್ಲಿ ಶರೀರಕ್ರಿಯಾವಿಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಪಡೆದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಆಂಡ್ರ್ಯೂ ಜಕಾರಿ ಫೈರ್.

ಅಣುಜೀವವಿಜ್ಞಾನಿಗಳು ಮಾನವಶರೀರದ ಪ್ರತಿಯೊಂದು ಜೀವಕೋಶಗಳಲ್ಲಿ ಇರುವ ಮಾನವನ ಆನುವಂಶೀಯತೆಯನ್ನು ನಿರ್ಧರಿಸುವ ಡಿಎನ್‌ಎಯ ರಾಸಾಯನಿಕ ರಚನೆಯನ್ನು ವಿಶ್ಲೇಷಿಸಿ ಅದರಲ್ಲಿರುವ ನ್ಯೂಕ್ಲಿಯೊಟೈಡುಗಳ ಸರಣಿಯನ್ನು ಕಂಡುಹಿಡಿಯುವ ಯೋಜನೆಯನ್ನು ಹಮ್ಮಿಕೊಂಡರು. ಈ ಯೋಜನೆಯ ಉದ್ದೇಶ ಮಾನವ ಆನುವಂಶೀಯತೆಯ ಸಂಪೂರ್ಣ ಲಕ್ಷಣಗಳನ್ನು ಅರಿತು, ಅದರ ನೀಲನಕ್ಷೆಯನ್ನು ತಯಾರಿಸುವುದು. ಮಾನವ ಡಿಎನ್‌ಎಯಲ್ಲಿರುವ ಬಿಲಿಯಗಟ್ಟಲೆ ಸಾರಜನಕ ಕ್ಷಾರಗಳ ಸರಣಿಯನ್ನು 2003ರಲ್ಲಿ ಬೇಧಿಸಿ, ಮಾನವ ಆನುವಂಶೀಯ ನಕ್ಷೆಯನ್ನು ತಯಾರಿಸಲಾಯಿತು. ಹೀಗೆ ಕಂಡುಹಿಡಿದ ಸಾರಜನಕ ಕ್ಷಾರಗಳ (ನ್ಯೂಕ್ಲಿಯೊಟೈಡ್) ಸರಣಿಯನ್ನು 2004ರಲ್ಲಿ ಕಂಪ್ಯೂಟರ್ ದತ್ತಾಂಶ ಮೂಲಕ್ಕೆ ಸೇರಿಸಲಾಯಿತು. ಇತ್ತೀಚೆಗೆ, ಅಂದರೆ 2024ರ ಅಂತ್ಯದಲ್ಲಿ ಆಂಡ್ರ್ಯೂ ಜಕಾರಿ ಫೈರ್ ಮತ್ತು ಸಂಗಡಿಗರು ಅಂತರ್ಜಾಲದ ದತ್ತಾಂಶದಲ್ಲಿ ಸೇರಿಸಲಾದ ಮಾನವ ಡಿಎನ್‌ಎಯ ಸರಣಿಯನ್ನು ಒಂದು ತುದಿಯಿಂದ ಇನ್ನೊಂದು ಕಡೆಗೆ ವಿಶ್ಲೇಷಿಸುತ್ತಿದ್ದಾಗ ಅದರಲ್ಲಿ ಪ್ರತಿಲೇಖನಗೊಳ್ಳಬಹುದಾದ ಭಾಗವನ್ನು ಗುರುತಿಸಿದರು. ಅವು ಆರ್‌ಎನ್‌ಎ ತುಣುಕುಗಳನ್ನು ತಯಾರಿಸಬಲ್ಲುವಾದರೂ, ಆನುವಂಶೀಯತೆ ನಿರ್ಧರಿಸುವಲ್ಲಿ ಅವುಗಳ ಪಾತ್ರವಿರುವುದಿಲ್ಲ. ಈ ಆರ್‌ಎನ್‌ಎ ಸಂಕೇತಗಳು ಆಕಾರದಲ್ಲಿ ಈಜಿಪ್ಟ್ ಮತ್ತು ಗ್ರೀಸ್‌ನ ಕೆಲವು ಸ್ಮಾರಕಗಳನ್ನು ಹೋಲುತ್ತವೆ. ಈ ಸ್ಮಾರಕಗಳಿಗೆ 'ಒಬೆಲಿಸ್ಕ' ಎಂಬ ಹೆಸರಿದೆ. ಅದರಿಂದ ಈ ಆರ್‌ಎನ್‌ಎಗಳಿಗೂ 'ಒಬೆಲಿಸ್ಕ್' ಎಂದು ಹೆಸರಿಸಲಾಯಿತು.

ಜಕಾರಿ ಫೈರ್ ಅವರೇ ಒಬೆಲಿಸ್ಕ್‌ಗಳ ಸಂಶೋಧನಾ ತಂಡ ಮುನ್ನಡೆಸುತ್ತಿದ್ದಾರೆ. 2024ರ ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ಒಬೆಲಿಸ್ಕ್‌ಗಳ ಆವಿಷ್ಕಾರವಾಗಿದ್ದರೂ, ಅವುಗಳ ಕುರಿತ ಅಧಿಕೃತ ವರದಿ ಇನ್ನೂ ಪ್ರಕಟವಾಗಿಲ್ಲ. ಕೋಲ್ಡ್ ಸ್ಪ್ರಿಂಗ್ ಹಾರ್ಬರ್ ಪ್ರಯೋಗಾಲಯದ ನಿಯತಕಾಲಿಕೆ 'ಬಯೋಆರ್'ನಲ್ಲಿ ಹಾಗೂ 'ನೇಚರ್ ಲೈಫ್ ಸೈನ್ಸ್' ಪತ್ರಿಕೆಯಲ್ಲಿ ಪುಟ್ಟ ಟಿಪ್ಪಣಿಗಳು ಪ್ರಕಟವಾಗಿವೆ. ಈ ಶೋಧವು ಈಗ ಸೂಕ್ಷ್ಮಜೀವಿಯ ಸಮುದಾಯಗಳನ್ನು ಅಧ್ಯಯನ ಮಾಡುವ ವಿಜ್ಞಾನಿಗಳ ಆಸಕ್ತಿಯನ್ನು ಕೆದರಿದೆ.

ಜಕಾರಿ ಫೈರ್ ಅವರ ಆವಿಷ್ಕಾರವು ಈ ಆಶ್ಚರ್ಯಕರ ವಸ್ತುಗಳ ಕುರಿತು ಹಲವು ಊಹೆಗಳಿಗೆ ಎಡೆಮಾಡಿಕೊಟ್ಟಿದೆ. ಈ ವಸ್ತುಗಳು ನಿಜವಾಗಿಯೂ ಮಾನವ ಜೀವಕೋಶಗಳಲ್ಲಿ ಇವೆಯೇ? ಅಥವಾ ಅವು ಅಂತರ್ಜಾಲದ ಸರಣಿಗೆ ಮಾತ್ರ ಸೀಮಿತವಾಗಿರುವ ಕಣಗಳೇ? ಸದ್ಯಕ್ಕೆ ಮಾನವನ ಜೀವಕೋಶಗಳಿಂದ ಇಂಥ ಆರ್‌ಎನ್‌ಎ ತುಣುಕುಗಳನ್ನು ಪ್ರತ್ಯೇಕಿಸಲಾಗಿದ್ದು, ಅವುಗಳ ಅಸ್ತಿತ್ವವನ್ನು ದೃಢೀಕರಿಸಿವೆ. ಮಾನವ ತಳಿನಕ್ಷೆ ಮತ್ತು ಜೀನ್‌ಗಳ ಸಂಗ್ರಹವನ್ನು ಪರಿಶೀಲಿಸಿದಾಗ ಅವು ಈವರೆಗೆ ಕಂಡುಹಿಡಿಯಲಾದ ಯಾವುದೇ ಸೋಂಕುಜೀವಿಗಳೊಂದಿಗೆ ಹೊಂದಿಕೆಯಾಗುತ್ತಿಲ್ಲ.

ಒಬೆಲಿಸ್ಕ್‌ಗಳು ಸಸ್ಯಗಳಲ್ಲಿ ಕೆಲವು ವಿಶಿಷ್ಟವಾದ ಕಾಯಿಲೆಗಳನ್ನು ಉಂಟುಮಾಡುವ ವೈರಾಯಿಡ್‌ಗಳನ್ನು ಹೋಲುತ್ತವೆಯಾದರೂ ಅವುಗಳಿಗಿಂತ ಇವು ಚಿಕ್ಕವು. ಆದರೆ ಇದುವರೆಗೆ ಒಬೆಲಿಸ್ಕ್‌ಗಳಿಂದ ಉಂಟಾಗುವ ಯಾವುದೇ ಕಾಯಿಲೆ ಕಂಡುಬಂದಿಲ್ಲ. ವೈರಸ್ ಮತ್ತು ವೈರಾಯಿಡ್‌ಗಳ ಆನುವಂಶೀಯ ವಸ್ತುವಿನ ಸರಣಿಯಲ್ಲಿ ಒಂದು ಅಣು ಬದಲಾದರೂ ಅದು ಮಾರಕ ಸೋಂಕುಜೀವಿಯಾಗಿ ಬದಲಾಗಬಹುದು. ಒಬೆಲಿಸ್ಕ್‌ಗಳು ಕೂಡ ಹಾಗೆಯೇ ಮುಂದೊಂದು ದಿನ ಸಾಂಕ್ರಾಮಿಕವಾಗಿ ಪರಿಣಮಿಸಬಹುದೆ?

ಲೊಕೇಷನ್ ಟ್ರ್ಯಾಕಿಂಗ್ ನಿಯಂತ್ರಣ ಹೇಗೆ?



ನಮ್ಮ ಚಲನವಲನಗಳ ಜಾಡನ್ನು ಹಿಡಿಯುವ ಜಿಪಿಎಸ್ ವ್ಯವಸ್ಥೆ

ಅವಿನಾಶ್ ಬಿ.

ಮೊಬೈಲ್ ಫೋನ್ ಹೆಚ್ಚು ಸ್ಮಾರ್ಟ್ ಆಗಿದೆ. ಅದೀಗ ನಮ್ಮನ್ನು ಹಿಂಬಾಲಿಸುತ್ತದಷ್ಟೇ ಅಲ್ಲದೆ, ಬೇಕಿದ್ದವರಿಗೆ, ಬೇಡವಾದವರಿಗೂ ನಾವು ಯಾವಾಗ ಎಲ್ಲೆಲ್ಲಾ ಓಡಾಡಿದೆವು, ಎಲ್ಲಿದ್ದೇವೆ ಎಂಬಿತ್ಯಾದಿಯಾಗಿ ನಮ್ಮ ಚಲನವಲನದ ಮಾಹಿತಿಯನ್ನು ತಿಳಿಸಿಬಿಡುತ್ತದೆ ಎಂಬುದು ಎಷ್ಟು ಮಂದಿಗೆ ತಿಳಿದಿದೆ?

ದೈನಂದಿನ ಬದುಕಿನಲ್ಲಿ ಸ್ಮಾರ್ಟ್‌ಫೋನ್ ಒಂದು ಉಪಯುಕ್ತವಾದ ಟೂಲ್ ಆಗಿದ್ದರೂ, ಅದು ನೀವಿರುವ ಸ್ಥಳವೂ (ಲೊಕೇಷನ್) ಸೇರಿದಂತೆ ಹೆಚ್ಚು ಕಡಿಮೆ ನಮ್ಮ ಬಗೆಗಿನ ಎಲ್ಲ ಮಾಹಿತಿಯನ್ನೂ ನಮಗೆ ಗೊತ್ತಿದ್ದು ಮತ್ತು ಗೊತ್ತಾಗದೆಯೂ ಸಂಗ್ರಹಿಸಿಟ್ಟುಕೊಳ್ಳಬಲ್ಲುದು. ಇದಕ್ಕೆ ಕಾರಣ, ನಮ್ಮಲ್ಲಿನ ಅರಿವಿನ ಕೊರತೆ. ಹೊಸ ಫೋನ್ ಖರೀದಿಸಿದಾಗ ಅಥವಾ ಹೊಸ ಆ್ಯಪ್ ಅಳವಡಿಸಿಕೊಳ್ಳುವಾಗ, ನಾವು ಅದು ಕೇಳುವ ಎಲ್ಲ ಮಾಹಿತಿಗೂ, ಸರಿಯಾಗಿ ಓದುವ ಪುರುಸೊತ್ತು ಮಾಡಿಕೊಳ್ಳದೆ, 'ಯಸ್ ಯಸ್' ಎಂದು ಕ್ಲಿಕ್ ಮಾಡುತ್ತಾ ಹೋಗಿರುತ್ತೇವೆ. ಹೀಗೆ ಮಾಡುವಾಗ, ನಮ್ಮ ಇಮೇಲ್ ಐಡಿ, ನಮ್ಮ ಮೊಬೈಲ್ ಫೋನ್ ನಂಬರ್, ನಮ್ಮ ಲೊಕೇಷನ್, ನಮ್ಮ ಫೋನ್‌ನಲ್ಲಿರುವ ಇತರ ಸಂಪರ್ಕ ಸಂಖ್ಯೆಗಳು, ನಮ್ಮ ಫೋಟೊ, ನಮ್ಮ ಬ್ಯಾಂಕಿಂಗ್ ವಿವರ ಹಾಗೂ ಇತರ ಮಾಹಿತಿಗಳನ್ನು ಕೂಡ ಧಾರಾಳವಾಗಿ ಹಂಚಿಕೊಳ್ಳಲು ನಮಗೆ ತಿಳಿದೋ, ತಿಳಿಯದೆಯೋ ಅನುಮತಿ ಕೊಟ್ಟಿರುತ್ತೇವೆ. ಯಾವುದಕ್ಕೆ ಒಪ್ಪಿಗೆ ಕೊಡುತ್ತೇವೆ ಎಂಬ ಬಗ್ಗೆ ನೋಡುವ ವ್ಯವಧಾನ ತೋರದಿದ್ದರೆ ಹೀಗೆಲ್ಲ ಆಗುತ್ತದೆ ಮತ್ತು ಮುಂದಕ್ಕೆ ಅಪಾಯಗಳಿಗೂ ಕಾರಣವಾಗುತ್ತದೆ.

ಈ ಕಾರಣದಿಂದ, ಬಹು ಮುಖ್ಯವಾಗಿ ನಾವು ಹೋದಲ್ಲೆಲ್ಲಾ ನಮ್ಮ ಜಾಡುಹಿಡಿಯುವ ಮೊಬೈಲ್ ಫೋನ್‌ಗೆ ಅಗತ್ಯವಿದ್ದಷ್ಟೇ ಅನುಮತಿ ನೀಡುವುದು ಜಾಣತನ.

ನಾವಿರುವ ಸ್ಥಳದ ಬಗ್ಗೆ ಮಾಹಿತಿ ಯಾರಿಗೆ ಅಥವಾ ಯಾವ ಆ್ಯಪ್‌ಗೆ ಬೇಕಾಗುತ್ತದೆ? ಪ್ರಮುಖವಾಗಿ ಮ್ಯಾಪ್ ನೋಡಲು, ಫಿಟ್‌ನೆಸ್ ಟ್ರ್ಯಾಕಿಂಗ್ (ನಾವು ನಡೆಯುವ ದೂರ, ಹೆಜ್ಜೆ ತಿಳಿಯಲು), ನಮ್ಮ ಯಾತ್ರಿ, ಓಲಾ, ಉಬರ್‌ನಂತಹಾ ಕ್ಯಾಬ್ ಬುಕ್ ಮಾಡುವ ಆ್ಯಪ್‌ಗಳಿಗೆ ಹಾಗೂ ನಮ್ಮ ಸಾಧನವು ಎಲ್ಲಾದರೂ ಕಳೆದುಹೋದರೆ ಅದರ ಜಾಡುಹಿಡಿಯಲು ಅತ್ಯಗತ್ಯವಾಗಿ ಈ ಲೊಕೇಷನ್ ಮಾಹಿತಿ ಬೇಕಾಗುತ್ತದೆ. ಇದಲ್ಲದೆ, ತೀರಾ ಅಗತ್ಯ ಸಂದರ್ಭಗಳಲ್ಲಿ, ಫೋಟೊ ಅಥವಾ ವಿಡಿಯೊವನ್ನು ಎಲ್ಲಿ ಸೆರೆಹಿಡಿದೆವು ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಬೇಕಾಗಬಹುದು.

ಆದರೆ, ಬಹುತೇಕ ಆ್ಯಪ್‌ಗಳು ತಮಗೆ ಅಗತ್ಯವಿಲ್ಲದಿದ್ದರೂ ಲೊಕೇಷನ್ ಆ್ಯಕ್ಸೆಸ್ (ಪ್ರವೇಶಾನುಮತಿ) ಕೇಳುತ್ತವೆ. ಹೀಗಾಗಿ, ಅಗತ್ಯವಿದ್ದಾಗ ಮಾತ್ರ ಅಥವಾ ಸಂಬಂಧಿತ ಆ್ಯಪ್ ಉಪಯೋಗ ಮಾಡುವಾಗ ಮಾತ್ರವೇ ಸ್ಥಳದ ಮಾಹಿತಿಯನ್ನು ಅದಕ್ಕೆ ಅನುಮತಿಸುವ ಆಯ್ಕೆ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಯಾವುದೇ ಆ್ಯಪ್ ಮೊದಲ ಬಾರಿಗೆ ತೆರೆದಾಗ ಅದು ಸ್ಥಳ ತಿಳಿಯುವ ಅನುಮತಿ ಕೇಳಿದಾಗ, 'Allow Only While Using the App' ಎಂಬ ಆಯ್ಕೆಯನ್ನು ನಾವು ನೋಡಿ ಕ್ಲಿಕ್ ಮಾಡಬೇಕು.

ಈಗಾಗಲೇ ನೀಡಲಾದ ಅನುಮತಿಯನ್ನು ವಾಪಸ್ ಪಡೆಯಲು ಇಲ್ಲಿವೆ ಕೆಲವೊಂದು ವಿಧಾನಗಳು:
ನಮ್ಮ ಫೋನ್‌ನ ಸೆಟ್ಟಿಂಗ್ಸ್ ಆ್ಯಪ್‌ನಲ್ಲಿ ಸ್ವಲ್ಪ ಕೆಳಗೆ ನೋಡಿದರೆ, ಆ್ಯಪ್‌ಗಳಿರುವ ಪಟ್ಟಿ ಕಾಣಿಸುತ್ತದೆ. ಒಂದೊಂದಾಗಿ ಆ್ಯಪ್‌ನ ವಿವರ ನೋಡಿದಾಗ ಕಾಣಿಸುವ 'Permissions' ಎಂಬಲ್ಲಿ ಆ್ಯಪ್‌ಗೆ ನಾವು ನೀಡಿರುವ ಅನುಮತಿಗಳನ್ನು ನೋಡಬಹುದು. ಆ್ಯಪ್ ಬಳಸುವಾಗ ಮಾತ್ರ ಅನುಮತಿಸುವ, ಪ್ರತಿ ಬಾರಿ ಕೇಳುವ ಅಥವಾ ಅನುಮತಿ ನಿರಾಕರಿಸುವ ಆಯ್ಕೆಗಳು ಅಲ್ಲೇ ಇರುತ್ತವೆ. ನೋಡಿಕೊಂಡು ಅನುಮತಿ ಕೊಟ್ಟರಾಯಿತು. ಆ್ಯಂಡ್ರಾಯ್ಡ್ ಮತ್ತು ಐಒಎಸ್ - ಎರಡರಲ್ಲೂ ಈ ವಿಧಾನ ಬಹುತೇಕ ಇದೇ ರೀತಿ ಇರುತ್ತದೆ.

ಇದಲ್ಲದೆ, ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ, ಪರ್ಮಿಷನ್ ಮ್ಯಾನೇಜರ್ ಎಂಬುದನ್ನು ಹುಡುಕಿದರೆ, ಯಾವೆಲ್ಲ ಅನುಮತಿಗಳನ್ನು ಯಾವ್ಯಾವ ಆ್ಯಪ್‌ಗಳಿಗೆ ನೀಡಿದ್ದೇವೆ ಎಂಬುದನ್ನು ತಿಳಿಯಬಹುದು ಮತ್ತು ಅಲ್ಲಿಂದಲೇ ತಿದ್ದುಪಡಿ ಮಾಡಬಹುದು.

ಐಒಎಸ್ ಇರುವ ಆ್ಯಪಲ್ ಸಾಧನಗಳಲ್ಲಾದರೆ, ಪ್ರೈವೆಸಿ ಮತ್ತು ಸೆಕ್ಯುರಿಟಿ ಎಂಬ ವಿಭಾಗದಲ್ಲಿ 'ಲೊಕೇಷನ್ ಸರ್ವಿಸಸ್' ವಿಭಾಗ ನೋಡಿದರೆ, ಎಷ್ಟೆಲ್ಲ ಆ್ಯಪ್‌ಗಳಿಗೆ ನಾವು ಅನುಮತಿ ನೀಡಿದ್ದೇವೆ ಎಂಬುದು ಕಾಣಿಸುತ್ತದೆ. ಇದರ ಜೊತೆಗೆ, ಟ್ರ್ಯಾಕಿಂಗ್ ಎಂಬ ಟ್ಯಾಬ್ ಕ್ಲಿಕ್ ಮಾಡಿದರೆ, ಯಾವೆಲ್ಲ ಆ್ಯಪ್‌ಗಳು ನಮ್ಮನ್ನು ಟ್ರ್ಯಾಕ್ ಮಾಡುತ್ತಿವೆ ಎಂಬುದನ್ನು ತಿಳಿದುಕೊಂಡು, ಸೂಕ್ತವಾಗಿ ತಿದ್ದುಪಡಿ ಮಾಡಿಕೊಳ್ಳಬಹುದು.

ನಾವು ಬಳಸುವ ಸೆಲ್ಯುಲಾರ್ ನೆಟ್‌ವರ್ಕ್, ಬ್ಲೂಟೂತ್, ವೈಫೈ ಮುಂತಾದವುಗಳ ಮೂಲಕವೂ, ಅವುಗಳ ಸಿಗ್ನಲ್ ಆಧರಿಸಿ ಅದಕ್ಕೆ ಸಂಪರ್ಕಿಸಿರುವ ಸಾಧನಗಳ ಸ್ಥಳ (ಲೊಕೇಷನ್) ತಿಳಿದುಕೊಳ್ಳಬಹುದಾಗಿದೆ ಎಂಬುದೂ ನೆನಪಿರಲಿ. ಆದರೆ, ನಮ್ಮ ಜಾಡು ಹಿಡಿಯುವ ಗ್ಲೋಬಲ್ ಪೊಸಿಶನಿಂಗ್ ಸಿಸ್ಟಂ (ಜಿಪಿಎಸ್) ವ್ಯವಸ್ಥೆಯು, ನಮ್ಮ ಫೋನ್ ಕಳೆದುಹೋದಾಗ, ಅಥವಾ ನಾವೇ ಚಾರಣಕ್ಕೆ, ಪ್ರವಾಸ, ಪ್ರಯಾಣ ತೆರಳಿದಾಗ ದಾರಿ ತಪ್ಪಿದರೆ, ನಮ್ಮ ಇರುವಿಕೆಯನ್ನು ಪತ್ತೆ ಮಾಡುವುದಕ್ಕೂ ನೆರವು ನೀಡುತ್ತದೆ ಎಂಬುದು ಗಮನದಲ್ಲಿರಲಿ.

ತಂತ್ರಜ್ಞಾನದಿಂದ ಪ್ರಯೋಜನ ಹೆಚ್ಚು ಇದೆಯಾದರೂ, ಅದಕ್ಕಿಂತಲೂ ಹೆಚ್ಚು ಅಪಾಯವೂ ಇದೆ. ಹೀಗಾಗಿ, ಈ ಸೈಬರ್-ಅಪರಾಧಗಳ ಕಾಲದಲ್ಲಿ ಹೊಣೆಯರಿತು, ಬೇಕಾದಾಗ ಮತ್ತು ಬೇಕಾದಷ್ಟೇ ತಂತ್ರಜ್ಞಾನವನ್ನು ಬಳಸುವುದೇ ಅತ್ಯಂತ ಸೂಕ್ತ.

ಎಸ್ಸೆಸ್ಸೆಲ್ಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

56) ಮಿಶ್ರ ಲೋಹದ ಬಗ್ಗೆ ಬರೆಯಿರಿ

ಉತ್ತರ:– ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ, ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್‌ಅನ್ನು (0.05%) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

57) ಮಾನವನ ವಿಸರ್ಜನಾಂಗ ವ್ಯೂಹವನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಮೂತ್ರಕೋಶವನ್ನು ಗುರುತಿಸಿ

ಉತ್ತರ:–



58) ನಕ್ಷತ್ರಗಳ ಮಿನುಗುವಿಕೆಯ ಬಗ್ಗೆ ಬರೆಯಿರಿ

ಉತ್ತರ:– ನಕ್ಷತ್ರಗಳ ಮಿನುಗುವಿಕೆಯು ವಾಯುಮಂಡಲದಲ್ಲಿ ನಕ್ಷತ್ರಗಳ ಬೆಳಕಿನ ವಕ್ರೀಭವನದಿಂದುಂಟಾಗಿದೆ. ನಕ್ಷತ್ರಗಳ ಬೆಳಕು ಭೂಮಿಯ ವಾಯುಮಂಡಲವನ್ನು ಪ್ರವೇಶಿಸಿ, ಭೂಮಿಯನ್ನು ತಲುಪುವ ಮುನ್ನ ಸತತವಾಗಿ ವಕ್ರೀಭವನ ಹೊಂದುತ್ತದೆ. ವಾಯುಮಂಡಲದಲ್ಲಿನ ವಕ್ರೀಭವನವು ಮಾಧ್ಯಮದ ವಕ್ರೀಭವನ ಸೂಚ್ಯಂಕವು ಬದಲಾಗುತ್ತಿರುವುದರಿಂದ ಉಂಟಾಗುತ್ತದೆ. ವಾಯುಮಂಡಲವು ನಕ್ಷತ್ರದ ಬೆಳಕನ್ನು ಲಂಬದ ಕಡೆ ಬಾಗಿಸುವುದರಿಂದ ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆಯಾಗಿರುತ್ತದೆ. ದಿಗಂತದಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ. ಮತ್ತೆ ನಕ್ಷತ್ರದ ಈ ತೋರಿಕೆಯ ಸ್ಥಾನವು ಸ್ಥಿರವಲ್ಲ. ಅದು ಲಘುವಾಗಿ ಬದಲಾಗುತ್ತದೆ. ಏಕೆಂದರೆ, ಭೂಮಿಯ ವಾಯುಮಂಡಲದ ಭೌತಿಕ ಪರಿಸ್ಥಿತಿಗಳು ಸ್ಥಿರವಾಗಿಲ್ಲದ ಕಾರಣ ನಕ್ಷತ್ರಗಳು ತುಂಬಾ ದೂರದಲ್ಲಿರುವುದರಿಂದ ಅವು ಅಂದಾಜು ಬಿಂದು ಗಾತ್ರದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಕ್ಷತ್ರಗಳಿಂದ ಬರುವ ಬೆಳಕಿನ ಕಿರಣಗಳ ಹಾದಿಯು ಸ್ವಲ್ಪ ಮಟ್ಟಿಗೆ ಬದಲಾಗುವುದರಿಂದ ನಕ್ಷತ್ರಗಳ ತೋರಿಕೆಯ ಸ್ಥಾನದಲ್ಲಿ ಸ್ಥಿತ್ಯಂತರವಾಗುತ್ತದೆ ಮತ್ತು ಕಣ್ಣನ್ನು ಪ್ರವೇಶಿಸುವ ನಕ್ಷತ್ರಗಳ ಬೆಳಕು ಮಿನುಗುತ್ತದೆ. ನಕ್ಷತ್ರಗಳು ಕೆಲವೊಮ್ಮೆ ಪ್ರಕಾಶಮಾನವಾಗಿ ಮತ್ತು ಕೆಲವೊಮ್ಮೆ ಕಂದಿದಂತೆ ಕಾಣುತ್ತವೆ. ಇದೇ ನಕ್ಷತ್ರಗಳ ಮಿನುಗುವಿಕೆಯ ಪರಿಣಾಮ.

59) 4.0 cm ಗಾತ್ರದ ವಸ್ತುವನ್ನು, 15 cm ಸಂಗಮ ದೂರವನ್ನು ಹೊಂದಿರುವ ನಿಮ್ನ ದರ್ಪಣದ ಮುಂದೆ 25 cm ದೂರದಲ್ಲಿ ಇರಿಸಿದೆ. ಸ್ಪಷ್ಟ ಪ್ರತಿಬಿಂಬವನ್ನು ಪಡೆಯಲು ಪರದೆಯನ್ನು ದರ್ಪಣದಿಂದ ಎಷ್ಟು ದೂರದಲ್ಲಿ ಇರಿಸಬೇಕು? ಪ್ರತಿಬಿಂಬದ ಸ್ವಭಾವ ಮತ್ತು ಗಾತ್ರವನ್ನು ಲೆಕ್ಕಿಸಿ.

ಪರಿಹಾರ :

ವಸ್ತುವಿನ ಗಾತ್ರ $h = +4.0$ cm;

ವಸ್ತುವಿನ ದೂರ $u = -25.0$ cm;

ಸಂಗಮ ದೂರ $f = -15.0$ cm;

ಪ್ರತಿಬಿಂಬದ ದೂರ, $v = ?$ ಪ್ರತಿಬಿಂಬದ ಗಾತ್ರ, $h' = ?$

ಸಮೀಕರಣ 10.1 ರಿಂದ $\frac{1}{v}+\frac{1}{u}=\frac{1}{f}$

ಅಥವಾ $\frac{1}{v}=\frac{1}{f}-\frac{1}{u}=\frac{1}{-15.0}-\frac{1}{-25.0}=-\frac{1}{15.0}+\frac{1}{-25.0}$

ಅಥವಾ $\frac{1}{v}=\frac{-5.0+3.0}{75.0}=\frac{-2.0}{75.0}$

ಅಥವಾ $v = -37.5$ cm.

ಪರದೆಯನ್ನು ದರ್ಪಣದಿಂದ 37.5 cm ದೂರದಲ್ಲಿ ಇರಿಸಬೇಕು. ಪ್ರತಿಬಿಂಬವು ಸತ್ಯ ಪ್ರತಿಬಿಂಬವಾಗಿದೆ. ಹಾಗೂ, ವರ್ಧನೆ,

$m=\frac{h'}{h}=-\frac{v}{u}$

ಅಥವಾ $h'=-\frac{vh}{u}=-\frac{(-37.5cm)(+4.0cm)}{(-25.0cm)}$

ಪ್ರತಿಬಿಂಬದ ಎತ್ತರವು $h' = -6.0$ cm ಪ್ರತಿಬಿಂಬವು ತಲೆಕೆಳಗಾಗಿದೆ ಮತ್ತು ದೊಡ್ಡದಾಗಿದೆ.

60) ತೆರೆದ ಪತ್ರರಂಧ್ರವನ್ನು ತೋರಿಸುವ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ (ಜೂನ್ 2019)

1) ಕಾವಲು ಕೋಶ 2) ಪತ್ರರಂಧ್ರ 3) ಕ್ಲೋರೋ ಪ್ಲಾಸ್ಟ್

ಉತ್ತರ:–



ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CET CHEMISTRY

PUC-CET : CHEMISTRY

MULTIPLE CHOICE QUESTIONS

1) Which of the following set of polymers are used as fibres?

(i) Teflon (ii) Starch
(iii) Terylene (iv) Orlon

Choose the correct answer:

(a) (i) and (ii) (b) (ii) and (iii)
(c) (iii) and (iv) (d) (i) and (iv)

Ans:- (C)

Expln:- Terylene and Orlon are classified as fibres due to their structural properties and usability in fabric production. Terylene, a type of polyester, is widely used for making textiles due to its strength, durability, and resistance to stretching. Orlon, a type of acrylic polymer, is also used as a fibre because of its wool-like texture and lightweight nature. Teflon and starch do not have fibre-forming characteristics, which makes them unsuitable in this context.

2). Which of the following vitamins is not stored in the adipose tissue?

a. D b. E
c. A d. B_6

Answer: (d)

Expln:- Adipose tissue stores those vitamins which are fat-soluble. Among the given vitamins, only A, D and E are fat-soluble. Vitamin B_6 is water-soluble and hence, is not stored in adipose tissue.

2) Hypothyroidism is caused by the deficiency of:

a. Thyroxine b. Glucocorticoid
c. Vitamin B-12 d. Adrenalin

Ans: (a)

Expln:- Hypothyroidism is caused by the deficiency of the hormone thyroxine which is produced by the thyroid gland.

3) Which of the following is NOT a characteristic of a covalent compound?

a) Low melting point b) No definite geometry
c) Insoluble in polar solvent
d) Small difference in electronegativity between the combining atoms

Ans:- (b)

Expln:-: A key characteristic of a covalent compound is that it has a definite geometry due to the directional nature of the covalent bonds.

4) The biodegradable polymer obtained by polymerisation of Glycine and Aminocaproic acid is:…………..

(a) Nylon 6 b) PHBV
(c) Nylon 2 – Nylon 6 (d) Nylon 6, 10

Ans:- (C)

Expln:- *Nylon 2-nylon-6 is a copolymer of glycine and aminocaproic acid.
*Glycine is an alpha amino acid.
*Aminocaproic acid is also known as 6-aminohexanoic acid.
*The chemical formula for glycine is H2N-CH2-COOH.

5) Conductivity of a saturated solution of a sparingly salt AB at 298 K is 1.85 x 10^{-5} S m^{-1}. Solubility product of the salt AB at 298 K is

Given: $\Lambda^{\circ}_m (AB) = 140 \times 10^{-4}$ S m^2 mol^{-1}

a) 5.7 x 10^{-12} b) 1.32 x 10^{-12}
c) 7.5 x 10^{-12} d) 1.74 x 10^{-12}

Ans:- (d)

Expln:-using the relationship between solubility of sparingly soluble salt and Λ^0_m,

$K = 1.85 \times 10^{-5}\ S\ m^{-1} = 1.85 \times 10^{-7}\ S\ cm^{-1}$

$\Lambda^0_m = 140 \times 10^{-4}\ S\ m^2\ mol^{-1} = 140\ S\ cm^2\ mol^{-1}$

$s = \frac{k \times 1000}{\Lambda^0_m} = \frac{1.85 \times 10^{-7} \times 1000}{140}$

$= 1.32 \times 10^{-6}$

$K_{sp} = (s)^2$ [For AB type of salt]

$= (1.32 \times 10^{-6})^2 = 1.74 \times 10^{-12}$

6) The last element of the p-block in the 6^{th} period is represented by the outermost electronic configuration:

a) $4f^{14} 5d^{10} 6s^2 6p^4$ b) $4f^{14} 5d^{10} 6s^2 6p^6$
c) $7s^2 7p^6$ d) $4f^{14} 6d^{10} 7s^2 7p^6$

Answer: (b)

Expln:- The last element of the p-block in 6th period is Radon (Rn)
The electronic configuration of Rn is
$[Xe]4f^{14} 5d^{10} 6s^2 6p^6$

7) When $KMNO_4$ solution is added to oxalic acid solution, the decolourisation is slow in the beginning but becomes instantaneous after some time because

a) CO_2 is formed as the product
b) Reaction is exothermic
c) MnO^-_4 catalyses the reaction
d) Mn^{2+} acts as autocatalyst

Ans:-(d)

8) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- (d)

9) H_2O_2 cannot oxidize..............

(a) Na_2SO_3 (b) KI
(c) PbS (d) O_3

Ans: - (d)

Expln:- O_3 is a stronger oxidizing agent than H_2O_2.

10) The set of quantum numbers for the outermost electron for copper in its ground state is ……….

a) 3, 2 , 2 , + ½ b) 4, 1, 1, + ½
c) 4 , 2 , 2 , + ½ d) 4 , 0 , 0 , + ½

Ans:- (d)

ಚಿತ್ರರಂಗದವರ ನಡೆ ಕುರಿತು 'ನಟ್ಟು ಬೋಲ್ಟು' ಹೇಳಿಕೆ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥನೆ

'ಅದು ಹಿತವಚನ, ಹಳ್ಳಿ ಭಾಷೆಯಲ್ಲಿ ಹೇಳಿದ್ದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದರ್ಪ ಸುಮ್ಮನೆ ಬರುವುದಿಲ್ಲ. ಜನರು ಕೊಟ್ಟ ಅಧಿಕಾರದಿಂದ ಬರುತ್ತದೆ. ಆ ಅಧಿಕಾರ ದರ್ಪ ಇದ್ದ ಕಾರಣಕ್ಕೆ ರಾಜೇಂದ್ರಸಿಂಗ್ ಬಾಬು ಅವರನ್ನು ಈ ಹಿಂದೆ ಚಲನಚಿತ್ರ ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೆವು. ಪಕ್ಷಕ್ಕೆ ಹಾಗೂ ಚಿತ್ರರಂಗಕ್ಕೆ ಸಹಾಯ ಮಾಡಲಿ ಎಂದು ಸ್ಥಾನ ನೀಡಿದ್ದೆವು. ನಂತರದಲ್ಲಿ ಅವರು ಒಂದು ದಿನವೂ ಪಕ್ಷದ ಕೆಲಸಕ್ಕೆ ಬರಲಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೂರಿದರು.

'ಚಿತ್ರರಂಗದವರ ಕುರಿತು ಅಧಿಕಾರ ದರ್ಪದಿಂದ ಹೀಗೆ ಹೇಳಿದ್ದಾರೆ' ಎಂಬ ಚಿತ್ರನಿರ್ದೇಶಕ ರಾಜೇಂದ್ರಸಿಂಗ್ ಬಾಬು ಅವರ ಹೇಳಿಕೆಗೆ ಶಿವಕುಮಾರ್ ಹೀಗೆ ಪ್ರತಿಕ್ರಿಯಿಸಿದರು.

'ನಟ್ಟು- ಬೋಲ್ಟು' ಪದ ಶಿವಕುಮಾರ್ ಅವರ ಸಂಸ್ಕಾರ ತೋರಿಸುತ್ತದೆ ಎನ್ನುವ ಚಿತ್ರನಿರ್ದೇಶಕ ನಾಗಾಭರಣ ಅವರ ಮಾತಿಗೆ, 'ನಾನು ಹೇಳಿದ್ದು ಹಿತವಚನ, ನನ್ನ ಹಳ್ಳಿ ಭಾಷೆಯಲ್ಲಿ ಒರಟಾಗಿ ಹೇಳಿದ್ದೇನೆ. ಅವರ ಬಳಿ ಹೊಸ ಭಾಷೆಯಿದ್ದರೆ ಕಲಿಸಿಕೊಡಲಿ, ಅದೇ ರೀತಿ ಮಾತನಾಡುತ್ತೇನೆ' ಎಂದು ತಿವಿದರು.

'ಕಾರ್ಯಕ್ರಮಕ್ಕೆ ಆಹ್ವಾನ ನೀಡದೇ ಇದ್ದರೆ ತಪ್ಪು. ಇದು ಬೇರೆ ವಿಚಾರ. ಮನೆ ಹಬ್ಬವನ್ನು ಎಲ್ಲರೂ ಸೇರಿ ಆಚರಿಸಬೇಕು. ಟೀಕೆ, ಹೋರಾಟ, ಜೈಕಾರಕ್ಕೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಅದು ನನಗೆ ಸಂತಸದ ವಿಚಾರ' ಎಂದರು.

'ಕಾಂಗ್ರೆಸ್ ರೂಪಿಸಿದ ಮೇಕೆದಾಟು ಹೋರಾಟದಲ್ಲಿ ಚಿತ್ರರಂಗ ಹೇಗೆ ಭಾಗವಹಿಸಲು ಸಾಧ್ಯ' ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದ ನೆಲ-ಜಲ ಭಾಷೆ ರಕ್ಷಣೆಗೆ ಎಲ್ಲರೂ ಹೋರಾಡಬೇಕು. ಹಾಗಾದರೆ, ಇದೇ ಚಿತ್ರರಂಗದವರು ಕಳಸಾ-ಬಂಡೂರಿ ಹೋರಾಟಕ್ಕೆ ಹುಬ್ಬಳ್ಳಿಗೆ ಯಾಕೆ ಹೋಗಿದ್ದರು? ರಾಜ್‌ಕುಮಾರ್ ಅವರು ಪಕ್ಷ ಭೇದ ಮರೆತು ಹೋರಾಟಕ್ಕೆ ಏಕೆ ಬರುತ್ತಿದ್ದರು? ರಾಜ್‌ಕುಮಾರ್ ಇವರಿಗೆ ಮಾದರಿ ಅಲ್ಲವೇ' ಎಂದು ಮರು ಪ್ರಶ್ನಿಸಿದರು.

'ಇದು ಬೆಂಗಳೂರಿಗೆ ನೀರು ತರುವ ಹೋರಾಟ. ಬೆಂಗಳೂರಲ್ಲಿ ಬರೀ ಕಾಂಗ್ರೆಸ್ ಕಾರ್ಯಕರ್ತರಷ್ಟೇ ಇಲ್ಲ. ಚಿತ್ರರಂಗದವರೂ ಇದ್ದಾರೆ. ದುನಿಯಾ ವಿಜಯ್, ಪ್ರೇಮ್, ಸಾಧು ಕೋಕಿಲ, ಸಾ.ರಾ.ಗೋವಿಂದು ಮತ್ತಿತರರು ಹೋರಾಟದಲ್ಲಿ ಭಾಗವಹಿಸಿದ್ದರು. ಇವರೆಲ್ಲಾ ಕಾಂಗ್ರೆಸ್‌ನಿಂದ ಬಂದಿದ್ದರೇ? ಚಿತ್ರರಂಗದವರು ಬರದಿದ್ದರೂ ಹೋರಾಟ ಮಾಡುತ್ತೇವೆ. ರಾಜಕೀಯವಾಗಿ ಯಾರ್ಯಾರದ್ದು ಏನೇನಿದೆ ಎಂದು ನನಗೆ ತಿಳಿದಿಲ್ಲವೇ? ಇನ್ನಾದರೂ ಬುದ್ಧಿ ಕಲಿಯಿರಿ ಎಂದಷ್ಟೇ ಹೇಳುತ್ತಿದ್ದೇನೆ. ತಗೊಳ್ಳೋದು ಬಿಡೋದು ಅವರಿಗೆ ಬಿಟ್ಟದ್ದು' ಎಂದು ಹೇಳಿದರು.

'ಕನ್ನಡ ಚಿತ್ರರಂಗ ಇತ್ತೀಚೆಗೆ ಒಂದೆರಡು ಸಿನಿಮಾಗಳಿಂದ ಬಾಲಿವುಡ್‌ಗಿಂತ ಕೊಂಚ ಎತ್ತರಕ್ಕೆ ಬೆಳೆದಿದೆ. ಗುಣಮಟ್ಟದಲ್ಲೂ ಹಾಲಿವುಡ್‌ಗೆ ಸಮನಾಗಿದೆ. ಈ ಹೆಜ್ಜೆ ಗುರುತುಗಳು ಉಳಿಯಬೇಕು, ಇನ್ನೂ ಎತ್ತರಕ್ಕೆ ಚಿತ್ರರಂಗವನ್ನು ತೆಗೆದುಕೊಂಡು ಹೋಗಬೇಕು ಎಂಬುದು ನನ್ನ ಉದ್ದೇಶ ಮತ್ತು ಆಶಯ' ಎಂದು ಪ್ರತಿಕ್ರಿಯಿಸಿದರು.

ಮುಂದಿನ ವರ್ಷ 'ಐಫಾ' ಪ್ರಶಸ್ತಿ

ಶಿವಕುಮಾರ್

'ಮುಂದಿನ ವರ್ಷ ಬೆಂಗಳೂರಿನಲ್ಲಿ ಐಫಾ (ಐಐಎಫ್‌ಎ) ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸುವ ಕುರಿತು ಆಲೋಚನೆ ಮಾಡಿದ್ದೇನೆ. ಈ ಬಗ್ಗೆ ಎರಡು ಸುತ್ತಿನ ಮಾತುಕತೆ ನಡೆದಿದೆ. ಪ್ರಶಸ್ತಿ ನೀಡುವ ತಂಡದವರು ಬಂದು ನನ್ನ ಬಳಿ ಚರ್ಚಿಸಿದ್ದಾರೆ. ಇತ್ತೀಚೆಗೆ ಅಬುಧಾಬಿಗೆ ಹೋದಾಗಲೂ ಚರ್ಚೆ ನಡೆಸಿದ್ದೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'ಕಲಾವಿದರ ಜೊತೆ ದುರ್ವರ್ತನೆ ಸರಿಯಲ್ಲ'

ಕಂಗನಾ ರನೌತ್

ಮೂಲ್ಕಿ (ದಕ್ಷಿಣ ಕನ್ನಡ): 'ಕಲಾವಿದರ ರಕ್ಷಣೆಗಾಗಿ ದೇವರುಗಳೇ ಅವತಾರ ಎತ್ತಿದ್ದ ಉದಾಹರಣೆಗಳು ಪುರಾಣದಲ್ಲಿವೆ' ಎನ್ನುವ ಮೂಲಕ ಸಂಸದೆ ಹಾಗೂ ಬಾಲಿವುಡ್ ನಟಿ ಕಂಗನಾ ರನೌತ್ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಿರುಗೇಟು ನೀಡಿದರು.

ಸಮೀಪದ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಮಂಗಳವಾರ ಭೇಟಿ ನೀಡಿ ದೇವಿಯ ದರ್ಶನ ಪಡೆದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ನಟ್ಟು ಬೋಲ್ಟ್ ಟೈಟ್ ಮಾಡಬೇಕಾಗುತ್ತದೆ' ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಕಂಗನಾ, 'ಕಲಾವಿದರ ಜೊತೆ ದುರ್ವರ್ತನೆ ಸರಿಯಲ್ಲ. ನಟ್ಟು ಬೋಲ್ಟ್ ಟೈಟ್ ಮಾಡಲು ಹೋಗಿ ಬೇರೆಯದ್ದೇ ಆಗಬಹುದು. ದಮನಕ್ಕೊಳಗಾದವರ ರಕ್ಷಣೆಗೆ ವಿಷ್ಣು ಜನ್ಮ ತಾಳಿದ್ದೂ ಇದೆ. ಕಲಾವಿದರ ರಕ್ಷಣೆಗೆ ದೇವರು ಬಂದೇ ಬರುತ್ತಾರೆ' ಎಂದರು.

ಅಧಿಕಾರ ಶಾಶ್ವತವಲ್ಲ, ಯಾರೂ ನಿಮ್ಮ ಗುಲಾಮರಲ್ಲ, ಭಂಡತನ ಬಿಟ್ಟು ತಪ್ಪಿಗೆ ಕ್ಷಮೆಯಾಚಿಸಿ

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಆಲಮಟ್ಟಿಯ ಚಂದ್ರಮ್ಮ ದೇವಾಲಯದ ಬಳಿ ಅಖಂಡ ಕರ್ನಾಟಕ ರೈತ ಸಂಘದ ಮುಖಂಡರು ಕೃಷ್ಣಾ ನದಿಗೆ ಇಳಿದು ಮಂಗಳವಾರ ಪ್ರತಿಭಟನೆ ನಡೆಸಿದರು

ತೆಲಂಗಾಣಕ್ಕೆ ನೀರು ನದಿಗೆ ಇಳಿದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಆಲಮಟ್ಟಿ, ನಾರಾಯಣಪುರ ಜಲಾಶಯಗಳಿಂದ ತೆಲಂಗಾಣಕ್ಕೆ ನೀರು ಹರಿಸಿದ್ದನ್ನು ಖಂಡಿಸಿ ಅಖಂಡ ಕರ್ನಾಟಕ ರೈತ ಸಂಘದ ಸದಸ್ಯರು ಮಂಗಳವಾರ ಕೃಷ್ಣಾ ನದಿಗಿಳಿದು ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರ ಅಣಕು ಶ್ರದ್ಧಾಂಜಲಿ ನಡೆಸಿದರು. ರೈತ ಮುಖಂಡ ಅರವಿಂದ ಕುಲಕರ್ಣಿ ಮಾತನಾಡಿ, 'ರಾಜ್ಯದ ರೈತರ ಮೇಲೆ ಕಳಕಳಿ ಇಲ್ಲದ ಸರ್ಕಾರ ತೆಲಂಗಾಣ ರಾಜ್ಯಕ್ಕೆ ನಿರಂತರ ನೀರು ಹರಿಸಿ ಆಲಮಟ್ಟಿ ಜಲಾಶಯದ ನೀರನ್ನು ಸಂಪೂರ್ಣ ಖಾಲಿ ಮಾಡುತ್ತಿದೆ' ಎಂದು ಆರೋಪಿಸಿದರು.

ತೆಲಂಗಾಣಕ್ಕೆ ಕೇವಲ 1.24 ಟಿಎಂಸಿ ಅಡಿ ನೀರು ಹರಿ ಬಿಟ್ಟಿದ್ದೇವೆ ಎಂದು ಸುಳ್ಳು ಹೇಳಿ 10 ಟಿಎಂಸಿ ಅಡಿಗೂ ಹೆಚ್ಚು ನೀರು ಹರಿಸಲಾಗಿದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದರು.

'ನಿತ್ಯ ಆಲಮಟ್ಟಿಯಿಂದ 12,500 ಕ್ಯುಸೆಕ್‌ನಷ್ಟು ನೀರನ್ನು ನಾರಾಯಣಪುರ ಜಲಾಶಯಕ್ಕೆ ಹರಿಸುವ ಉದ್ದೇಶ ಏನು? ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಗಳು ಇದನ್ನು ಪ್ರಶ್ನಿಸುತ್ತಿಲ್ಲ, ಪ್ರತಿಭಟಿಸುತ್ತಿಲ್ಲ. ಪ್ರತಿಪಕ್ಷದವರು ಸುಮ್ಮನಿರುವುದು ಜಿಲ್ಲೆಯ ದೌರ್ಭಾಗ್ಯ' ಎಂದು ತಿಳಿಸಿದರು.

ಮುಖಂಡ ವಿಠ್ಠಲ ಬಿರಾದಾರ, ಹೊನಕೇರೆಪ್ಪ ತೆಲಗಿ, ಈರಪ್ಪ ಹಂಚನಾಳ, ಸೋಮು ಬಿರಾದಾರ, ಬಾಲಪ್ಪಗೌಡ ಲಿಂಗದಳ್ಳಿ ರಾಮನಗೌಡ ಹಾದಿಮನಿ ಮಲ್ಲಪ್ಪ ಪಡಸಲಗಿ, ಗಿರಿಮಲ್ಲಪ್ಪ ದೊಡ್ಡಮನಿ ಇದ್ದರು.

ಅಂಗನವಾಡಿ: ಕೇಂದ್ರ-ರಾಜ್ಯಕ್ಕೆ ನೋಟಿಸ್

ಬೆಂಗಳೂರು: 'ಅಂಗನವಾಡಿ ಸಹಾಯಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಕಾಯಂಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ದಾಕು ಹಿತ್ಲು ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಫಿಲೋಮಿನಾ ಫರ್ನಾಂಡಿಸ್ ಸೇರಿದಂತೆ ಒಟ್ಟು 292 ಅಂಗನವಾಡಿ ಕಾರ್ಯಕರ್ತೆಯರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶಂಕರ ಎಸ್.ಭಟ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಮತ್ತು ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

'ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರಂತೆಯೇ, ಅಂಗನವಾಡಿ ಸಹಾಯಕಿಯರನ್ನೂ ಗ್ರೂಪ್ 'ಡಿ' ಹಾಗೂ ಕಾರ್ಯಕರ್ತೆಯರನ್ನು ಗ್ರೂಪ್ 'ಸಿ' ದರ್ಜೆಗೆ ಅನ್ವಯಿಸಿ ಕಾಯಂಗೊಳಿಸಬೇಕು. ಅವರಿಗೆ ಕಾನೂನುಬದ್ಧವಾಗಿ ಸಲ್ಲಬೇಕಾದ ವೇತನ, ಭತ್ಯೆ ಸೇರಿದಂತೆ ಇತರೆ ಹಿಂಬಾಕಿ ನೀಡಬೇಕು. ಈ ನಿಟ್ಟಿನಲ್ಲಿ ಗುಜರಾತ್ ಹೈಕೋರ್ಟ್ ತೀರ್ಪನ್ನು ರಾಜ್ಯದಲ್ಲೂ ಪಾಲಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಭ್ರಷ್ಟಾಚಾರ ತನಿಖೆ ಕೋರಿದ ಪ್ರಕರಣ: ಹೈಕೋರ್ಟ್ ತೀಕ್ಷ್ಣ ಪ್ರಶ್ನೆ

ಸರ್ಕಾರ ಕೆಲಸ ಮಾಡುವುದಾದರೂ ಹೇಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಪ್ರತಿಯೊಂದು ಕೆಲಸದಲ್ಲೂ ಕೊಂಕು ಹುಡುಕಿ; ತನಿಖೆ ನಡೆಸಲು ಅನುಮತಿ ನೀಡಬೇಕು ಎಂದು ಕೋರ್ಟ್ ಮೆಟ್ಟಿಲೇರಿದರೆ ಸರ್ಕಾರ ಆಡಳಿತ ನಡೆಸುವುದಾದರೂ ಹೇಗೆ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಅರ್ಜಿದಾರರನ್ನು ತೀಕ್ಷ್ಣವಾಗಿ ಪ್ರಶ್ನಿಸಿದೆ.

'ಲೋಕೋಪಯೋಗಿ ಇಲಾಖೆ ಮತ್ತು ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ನಿಗಮದಲ್ಲಿನ ಭ್ರಷ್ಟಾಚಾರದ ಕುರಿತಂತೆ ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಿ ಬೀದರ್‌ನ ಗುರುನಾಥ್ ವಡ್ಡೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್. ಮೋಹನ್, 'ಹಣ ದುರ್ಬಳಕೆಯಾಗಿದೆ ಎಂದು ಮಹಾಲೇಖಪಾಲರ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸರ್ಕಾರದ ಹಣ ಎಲ್ಲೆಲ್ಲಿ ದುರ್ಬಳಕೆಯಾಗಿದೆ ಎಂದು ವಿವರವಾಗಿ ದಾಖಲಿಸಲಾಗಿದೆ. ಹಾಗಾಗಿ, ಈ ಕುರಿತಂತೆ ತನಿಖೆ ನಡೆಸಲು ಆದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, 'ತನಿಖೆ ನಡೆಸುವಂತೆ ಕೋರಲು ನಿಮ್ಮ ಹಕ್ಕೇನಿದೆ? ನೀವು ಯಾರು? ದುರ್ಬಳಕೆಯಾಗಿದೆ ಎಂದು ಮೇಲ್ನೋಟಕ್ಕೆ ತೋರ್ಪಡಿಸಲು ನಿಮ್ಮ ಬಳಿ ಏನು ದಾಖಲೆ ಇದೆ? ನೀವು ಬಾಧಿತರೇ ಆಗಿದ್ದರೆ ಲೋಕಾಯುಕ್ತಕ್ಕೆ ದೂರು ನೀಡಿ. ಅವರು ಪರಿಶೀಲಿಸುತ್ತಾರೆ. ಈ ರೀತಿಯಲ್ಲಿ ಸರ್ಕಾರದ ಪ್ರತಿಯೊಂದು ಕೆಲಸದಲ್ಲೂ ತನಿಖೆಗೆ ಅನುಮತಿ ಕೇಳಿದರೆ ಹೇಗೆ' ಮೌಖಿಕವಾಗಿ ಅಸಹನೆ ವ್ಯಕ್ತಪಡಿಸಿತು.

'ಅರ್ಜಿದಾರರು ಸಾಮಾನ್ಯ ಮೌಲ್ಯಮಾಪನ ಆಧರಿಸಿ ಸಾರ್ವಜನಿಕ ಹಿತಾಸಕ್ತಿ ವೇದಿಕೆಯ ಮೂಲಕ ಇಂತಹುದಕ್ಕೆಲ್ಲಾ ಪರಿಹಾರ ಕೋರಿದರೆ ಅನುಮತಿ ನೀಡಲಾಗದು. ನೀವು ಇದಕ್ಕೆ ಲೋಕಾಯುಕ್ತದ ಮೂಲಕ ಅಥವಾ ಪ್ರತ್ಯೇಕವಾಗಿ ಕಾನೂನಿನ ಮೂಲಕ ಪರಿಹಾರ ಪಡೆಯಬಹುದು' ಎಂದು ಅರ್ಜಿದಾರರಿಗೆ ಸೂಚಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿತು.

ಸಚಿವ ಚಲುವರಾಯಸ್ವಾಮಿ ವಿರುದ್ಧದ ದೂರು ರದ್ದು

ಬೆಂಗಳೂರು ನಗರದ ದಾಸನಪುರ ಹೋಬಳಿಯ ಮಾಕಳಿ ಗ್ರಾಮದಲ್ಲಿ 9 ಗುಂಟೆ ಜಾಗವನ್ನು ಒತ್ತುವರಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ದಾಖಲಾಗಿದ್ದ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಸ್ವಯಂಪ್ರೇರಿತವಾಗಿ ದಾಖಲಿಸಿ ಕೊಂಡಿರುವ ದೂರನ್ನು ರದ್ದುಪಡಿಸಬೇಕು' ಎಂದು ಕೋರಿ ಚಲುವರಾಯ ಸ್ವಾಮಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ಪುರಸ್ಕರಿಸಿದೆ. 'ವಿವಾದಿತ ಜಮೀನಿನ ಕ್ರಯ 1923ರಿಂದಲೂ ಅಸ್ತಿತ್ವದಲ್ಲಿದೆ. ಅರ್ಜಿದಾರರು ಒತ್ತುವರಿ ಅಥವಾ ಕಬಳಿಕೆ ಮಾಡಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ದೂರನ್ನು ರದ್ದುಪಡಿಸಿ ಆದೇಶಿಸಿದೆ.

ನರೇಂದ್ರ ಸ್ವಾಮಿ ನೇಮಕ ಪ್ರಶ್ನಿಸಿ ಪಿಐಎಲ್: ನೋಟಿಸ್

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಅವರನ್ನು ನೇಮಕ ಮಾಡಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಚಿಕ್ಕಬಳ್ಳಾಪುರದ, 'ಶಾಶ್ವತ ನೀರಾವರಿ ಹೋರಾಟ ಸಮಿತಿ' ಅಧ್ಯಕ್ಷ ಆರ್. ಆಂಜನೇಯ ರೆಡ್ಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಕ್ಸ್.ಎಂ.ಜೋಸೆಫ್ ಮತ್ತು ಕೆಎಸ್‌ಪಿಸಿಬಿ ಪರ ವಕೀಲ ಮಹೇಶ್ ಚೌಧರಿ ವಾದ ಆಲಿಸಿದ ನ್ಯಾಯಪೀಠ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಒಟ್ಟು ಎಂಟು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಮುಡಾ ಸಿಬಿಐ ತನಿಖೆ: ಮೇಲ್ಮನವಿ ಸಲ್ಲಿಕೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆ ಅಕ್ರಮ ಆರೋಪ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ನಿರಾಕರಿಸಿರುವ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಮೈಸೂರಿನ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಫೆಬ್ರುವರಿ 7ರಂದು ವಜಾ ಮಾಡಿತ್ತು.

40 ಡಿಗ್ರಿ ಸೆಲ್ಸಿಯಸ್ ತಲುಪಿದ ಉಷ್ಣಾಂಶ

ಬೆಂಗಳೂರು: ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ, ಮಂಗಳವಾರ ರಾಜ್ಯದ ಕೆಲವೆಡೆ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ ತಲುಪಿದೆ.

ರಾಯಚೂರಿನ ಕಲ್ಲೂರಿನಲ್ಲಿ ಗರಿಷ್ಠ ಉಷ್ಣಾಂಶ (41 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಕಲಬುರಗಿಯ ಏಳು ಹೋಬಳಿ, ರಾಯಚೂರಿನ ಆರು, ಉತ್ತರ ಕನ್ನಡ, ಧಾರವಾಡ, ವಿಜಯಪುರದ ತಲಾ ಎರಡು, ವಿಜಯನಗರ, ಹಾವೇರಿ ಹಾಗೂ ಬಾಗಲಕೋಟೆಯ ತಲಾ ಒಂದು ಹೋಬಳಿಯಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ತಲುಪಿದೆ.

ರಾಜ್ಯದ 11 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶವು 37 ಡಿಗ್ರಿ ಸೆಲ್ಸಿಯಸ್ ದಾಟಿದೆ. ಬೆಂಗಳೂರು ಸೇರಿ ರಾಜ್ಯದ ಬಹುತೇಕ ಕಡೆ ಸಾಮಾನ್ಯಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್‌ವರೆಗೆ ಉಷ್ಣಾಂಶ ಹೆಚ್ಚಳವಾಗಿದೆ.

ಲೇಖಕಿಯರ ಸಮ್ಮೇಳನಕ್ಕೆ ಎಚ್.ಎಸ್. ಶ್ರೀಮತಿ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಕರ್ನಾಟಕ ಲೇಖಕಿಯರ ಸಂಘವು ಇದೇ 22 ಮತ್ತು 23ರಂದು 8ನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಹಮ್ಮಿಕೊಂಡಿದ್ದು, ಲೇಖಕಿ ಎಚ್.ಎಸ್. ಶ್ರೀಮತಿ ಅವರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಇಲ್ಲಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಹಿಂದಣ ಹೆಜ್ಜೆ, ಮುಂದಣ ನೋಟ' ಎಂಬ ಶೀರ್ಷಿಕೆಯಡಿ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುತ್ತಾರೆ. ಸಮಾರೋಪ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭಾಗವಹಿಸಿ, ಸಮಾರೋಪ ನುಡಿಗಳನ್ನಾಡಲಿದ್ದಾರೆ.

ಎರಡು ದಿನಗಳ ಸಮ್ಮೇಳನದಲ್ಲಿ ವಿವಿಧ ಗೋಷ್ಠಿಗಳು ಹಾಗೂ ಕವಿಗೋಷ್ಠಿಗಳು ನಡೆಯಲಿದ್ದು, ರಾಜ್ಯದ ವಿವಿಧೆಡೆ ಇರುವ ಲೇಖಕಿಯರು, ಕವಯಿತ್ರಿಯರು ಭಾಗವಹಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಡಿತ ಕುಮಾರದಾಸ್‌ಗೆ ಮನಸೂರ ಸಂಗೀತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಕುಮಾರದಾಸ್


ವಿನಾಯಕ

ಧಾರವಾಡ: ಇಲ್ಲಿನ ಡಾ.ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಟ್ರಸ್ಟ್ ನೀಡುವ ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿಗೆ ಬೆಂಗಳೂರಿನ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ ಪಂಡಿತ ಡಿ.ಕುಮಾರದಾಸ್ ಮತ್ತು ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಯುವ ಪ್ರಶಸ್ತಿಗೆ ಶಿರಸಿ ತಾಲ್ಲೂಕು ಮುತ್ತಮುರ್ಡು ಗ್ರಾಮದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದ ವಿನಾಯಕ ಹೆಗಡೆ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿ ₹1 ಲಕ್ಷ ನಗದು, ಫಲಕ ಹಾಗೂ ಯುವ ಪ್ರಶಸ್ತಿ ₹25 ಸಾವಿರ ನಗದು, ಫಲಕ ಒಳಗೊಂಡಿದೆ.

'ಮಾರ್ಚ್ 10ರಂದು ಜರುಗುವ ಮಲ್ಲಿಕಾರ್ಜುನ ಮನಸೂರ ಅವರ ಜನ್ಮದಿನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪ್ರಕಟಣೆ ತಿಳಿಸಿದೆ.

ಯಳಂದೂರು ತಾಲ್ಲೂಕಿನ ಕೆಸ್ತೂರು ಗ್ರಾಮದಲ್ಲಿ ಮಂಗಳವಾರ ರಾತ್ರಿ ಮಂಟೇಸ್ವಾಮಿ ಕಂಡಾಯವನ್ನು ದಲಿತರು ಹೊತ್ತು ಮೆರವಣಿಗೆಯಲ್ಲಿ ಸಾಗಿದರು

ದಲಿತರ ಹೆಗಲೇರಿದ ಮಂಟೇಸ್ವಾಮಿ

ಪ್ರಜಾವಾಣಿ ವಾರ್ತೆ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಕೆಸ್ತೂರಿನಲ್ಲಿ ಮಂಗಳವಾರ ರಾತ್ರಿ ನಡೆದ ಧಾರ್ಮಿಕ ಸಮಾರಂಭದಲ್ಲಿ ದಲಿತ ಸಮುದಾಯದ ನೀಲಗಾರರು ಮೊದಲ ಬಾರಿಗೆ ಮಂಟೇಸ್ವಾಮಿ ಕಂಡಾಯವನ್ನು ಹೊತ್ತು ಗಮನ ಸೆಳೆದರು. ಸಮಾನತೆ ಮತ್ತು ಸಹೋದರತೆಗೆ ಕಾರಣರಾದ ಗ್ರಾಮಸ್ಥರು ಐತಿಹಾಸಿಕ ಘಟನೆಗೆ ಸಾಕ್ಷಿಯಾದರು.

ಗ್ರಾಮದ ನಂಜುಂಡಸ್ವಾಮಿ ಕುರುಬನಕಟ್ಟೆ ಕಂಡಾಯ ಪೂಜೆಗೆ ಸಿದ್ಧತೆ ನಡೆಸಿದ್ದರು. ಧಾರ್ಮಿಕ ಉತ್ಸವದಲ್ಲಿ ತಮ್ಮ ಪುತ್ರನಿಗೆ ನೀಲಗಾರ ದೀಕ್ಷೆ ನೀಡುವ ಉದ್ದೇಶ ಹೊಂದಿದ್ದರು. ಈ ಸಮಯದಲ್ಲಿ ಗ್ರಾಮದ ದಲಿತರೇ ಕಂಡಾಯ ಹೊತ್ತು ಸ್ವಾಮಿಯ ಪೂಜೆ ನೆರವೇರಿಸಿದರು.

ಕಂಡಾಯ ಹೊತ್ತು ಪೂಜಿಸುವ ಪರಂಪರೆ ಕುರುಬ, ಲಿಂಗಾಯತ, ನಾಯಕ ಸಮುದಾಯದವರಿಗೆ ಇದೆ. ದಲಿತ ಮುಖಂಡರು ಕುರುಬನ ಕಟ್ಟೆಯ ಧರ್ಮಾಧಿಕಾರಿ ವರುಣರಾಜೇ ಅರಸು ಜೊತೆ ಚರ್ಚಿಸಿ ಕಂಡಾಯವನ್ನು ತಾವೇ ಹೊತ್ತು ಸಾಗುವ ಬಗ್ಗೆ ಹರಕೆ ಸಲ್ಲಿಸಿದ್ದರು. ಅದರಂತೆ, ಮಂಗಳವಾರ ಮಂಟೇಸ್ವಾಮಿ ಕಂಡಾಯ ಹೊತ್ತು ಮೊದಲ ಸಲ ಪೂಜೆ ಪುನಸ್ಕಾರದಲ್ಲಿ ಭಾಗಿಯಾದರು ಎಂದು ಯಜಮಾನರು ತಿಳಿಸಿದರು.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ವಿಶಾಲಾಕ್ಷಿ ಮರಿಯಪ್ಪನವರು

08-05-1944 - 03-03-2025

ನಮ್ಮ ತಾಯಿಯವರಾದ ಇವರು ದಿನಾಂಕ 03-03-2025 ರಂದು ರಾತ್ರಿ 8.30 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

"ತಾಯಿಯ ಪ್ರೀತಿ ಎಂದಿಗೂ ಮರೆಯಲಾಗುವುದಿಲ್ಲ.
ಆ ಪ್ರೀತಿಯ ಛಾಯೆ ನಮ್ಮ ಹೃದಯದಲ್ಲಿ ಸದಾಕಾಲ ಉಳಿಯುತ್ತದೆ.
ನೀವು ನಮ್ಮ ಹೃದಯದಲ್ಲಿದ್ದೀರಿ. ನಿಮ್ಮ ಪ್ರೀತಿಯ ಆರಾಧನೆ
ನಮ್ಮ ಜೀವನದ ದಾರಿ ದೀಪ"

ಭಗವಂತನು ಇವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಕೋರುವ.

ಇಂತಿ ದುಃಖತಪ್ತರು

ಡಾ|| ಹೇಮಲತಾ ಮತ್ತು ಡಾ|| ಚಿದಾನಂದ ಮೂರ್ತಿ, ಶ್ರೀಮತಿ. ಪುಷ್ಪಲತಾ ಮತ್ತು ಶ್ರೀ. ತಿಮ್ಮೇಗೌಡ ಶ್ರೀಮತಿ. ಚೈತ್ರ ಮತ್ತು ಶ್ರೀ. ಶಶಿಕುಮಾರ್, ಡಾ|| ಪದ್ಮಾವತಿ ಮತ್ತು ಶ್ರೀ. ಸತೀಶ್ ಕುಮಾರ್.
ಮೊಮ್ಮಕ್ಕಳು: ಡಾ|| ಜಯಂತ್, ವರುಣ್, ಡಾ|| ಚಂದನ ಭಾನುಪ್ರಕಾಶ್, ಚಿರಂಜಿತ್, ಡಾ|| ಜತಿನ್ ಭೂಪಾಲ, ಉನ್ನತಿ ಅನ್ನಪೂರ್ಣ, ಜಿಷ್ಣು ಭಾಸ್ಕರ, ಕೃಪಾ ಶಂಕರಿ ಮತ್ತು ಮರಿ ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಗೂ ಬಂಧು ಮಿತ್ರರು

ಮೊಬೈಲ್: 9845898268

ಉದ್ಯೋಗ ವಾಣಿ

Rashtrotthana Parishat
RASHTROTTHANA GROUP OF CBSE SCHOOLS - KARNATAKA
Keshava Shilpa, Kempegowdanagar, Bangalore-560019
Website: www.rvkcbse.in

JOB VACANCY

POSITION : PRINCIPAL
Location : Bengaluru
Qualifications : Postgraduate with B.Ed.
Experience : Minimum 10+ years in a core subject, with at least 5 years as a Principal in a CBSE School (preferred).

Interested candidates can send their CVs to
hr.ho@rvkcbse.in
Short listed candidates will be contacted via call or email.
Remuneration is not a constraint for the deserving candidates.

AIR FORCE SCHOOL JALAHALLI-560014
Email ID:- afsjal@rediffmail.com
Website :-www.afsjal.org

VACANCY

Application are invited for Appoint-ment/Empanel of Teaching in Air FORCE School, Jalahalli for the Academic Session 2025-26 as per the following details:

PRT	Contractual Academic (All Subjects)	08
PRT	Empanel Academic (All Subjects)	08
TGT	Social Science - Regular	01
PGT	Physics - Empanel	01

Note :
1. For details of eligibility criteria, Please visit School website.
2. Application alongwith the Photocopies of supportive documents to reach Executive Director AF School Jalahalli before 14-03-2025.
3. For any queries Contact Tel.No. 080-23455069/63.

- Executive Director, AF School, Jalahalli

ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-560001.

ಸಂಖ್ಯೆ:ಸಶಿಕ/ಸಿ3/ಆ/ಸಮಾ/ನೇ-07/2024-25 ದಿನಾಂಕ:01.03.2025

ಅಧಿಸೂಚನೆ

ವಿಷಯ: ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸಮಾಲೋಚಕರ ನೇಮಿಸಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.
ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳನ್ವಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಈ ಕಛೇರಿಗೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ನೇರ ಗುತ್ತಿಗೆ ಆಧಾರದ ಮೇಲೆ ಕೋಷ್ಟಕದಲ್ಲಿ ನಮೂದಿಸಿರುವ ನಾಲ್ಕು ಸಮಾಲೋಚಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl.No	Section	Posts	Qualifications and Eligibilities
1	Planning Consultant	01	**Qualifications:** Post Graduation or Professional Degree in Education, Public Policy, Social Sciences, Data Sciences **Experience:** 3-10 Years experience in planning, Project management and Data Analytics. **Essential Skills:** 1. Proficiency in Kannada and English(verbal and written) 2. Strong analytical, presentation and communication skills. 3. Competency in data analysis tools and statistical software. 4. Advanced computer literacy (MS Office, data visualization tools, etc.) **Age:** Maximum 35 Years.
2	Accounts Consultant	01	**Qualifications:** M.com, CA-Internship or CA Articleship, **Experience:** 1. Minimum 5 Years experience as Finance Manager or Equivalent Accounting. 2. Minimum 5 Years of Experience working in Tally, Data analytical skills. Computer Working Skills. Years Experience in Double entry system of accounting. 4. Good Communication skills both kannada and English, should be wellversed in Kannada & English typing. **Age:** 35 to 70 Years.
3	Consultant for Vocational Education and Quality Section	01	**Qualifications:** Master Degree in Social work from any recognized University with a minimum of 70% in their Degree. **Experience:** 1. Minimum 2 Years experience in Managing Projects under Social Sector, Advanced Computer proficiency in Excel, PPT and AI, Familiarity with Web Development and Content creation, Good Knowledge of Quality Initiatives undertaken in the department of School Education, Strong Oral and written communication skills in both Kannada and English. 5. Ready to travel for field visit. **Age:** 35 to 60 Years.
4	Consultant for Media and Documen-tation	01	**Qualifications:** Bachelor's Degree in IT or Mass media and Communication or In Equivalent Fields. **Experience:** Minimum 2 Years experience in Managing and development of Media content for Social media Platforms like Website, Twitter and LinkedIn etc. **Age:** 35 to 60 Years.

ಅರ್ಜಿಗಳನ್ನು ದಿನಾಂಕ: **15.03.2025 ರೊಳಗಾಗಿ,** ಈ ಕಛೇರಿಯ ಆಡಳಿತ ಶಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಅಗತ್ಯ ವಿವರಗಳನ್ನು ಪಡೆದು ಎಲ್ಲಾ ದಾಖಲೆಗಳೊಂದಿಗೆ ಭೌತಿಕವಾಗಿ ಅಥವಾ ssajda123@gmail.com ಗೆ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಲು ತಿಳಿಸಿದೆ.
ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಆಡಳಿತ ಶಾಖೆಯ ಅಧಿಕಾರಿಗಳ ದೂರವಾಣಿ ಸಂಖ್ಯೆ: 9448999310, 9448999423 ನ್ನು ಸಂಪರ್ಕಿಸಲು ತಿಳಿಸಿದೆ.

ಸಹಿ/- ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ -ಕರ್ನಾಟಕ

ವಾಸಾಸಂಇ/ವಾಪ್ರ/ಜಿಎ/5415/2024-25

ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ತಡೆಯಲು ಬಿಜೆಪಿ– ಜೆಡಿಎಸ್ ಶಾಸಕರ ಆಗ್ರಹ

ಹಳ್ಳಿಗಳಲ್ಲಿ ಮದ್ಯ ಮಾರಾಟ: ಅಸಮಾಧಾನ

ಪ್ರಜಾವಾಣಿ ವಾರ್ತೆ

ವಿಧಾನಸಭೆಯ ಅಧಿವೇಶನದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿದರು. ಸಚಿವರಾದ ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಜ್ಯದ ಹಲವೆಡೆ ಹಳ್ಳಿ ಹಳ್ಳಿಗಳಲ್ಲಿ ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟವಾಗುತ್ತಿದೆ. ಅಬಕಾರಿ ಇಲಾಖೆಯು ಮದ್ಯದಂಗಡಿ ಮಾಲೀಕರಿಗೆ ಮಾರಾಟದ ಗುರಿ ನಿಗದಿಪಡಿಸಿರುವುದೇ ಅಕ್ರಮಕ್ಕೆ ಕಾರಣ' ಎಂಬ ಅಸಮಾಧಾನ ವಿಧಾನಸಭೆಯಲ್ಲಿ ಮಂಗಳವಾರ ವ್ಯಕ್ತವಾಯಿತು.

ಕಾಂಗ್ರೆಸ್‌ನ ಮಹಾಂತೇಶ್ ಕೌಜಲಗಿ ಅವರ ಪ್ರಶ್ನೆಗೆ ಉತ್ತರಿಸಿದ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, 'ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. 2024–25ರಲ್ಲಿ ಈ ಸಂಬಂಧ 17,390 ಪ್ರಕರಣಗಳನ್ನು ದಾಖಲಿಸಿ, 18,253 ಮಂದಿಯನ್ನು ಬಂಧಿಸಲಾಗಿದೆ' ಎಂದರು.

ಆಗ ಸಚಿವರ ಉತ್ತರಕ್ಕೆ ಬಿಜೆಪಿ, ಜೆಡಿಎಸ್‌ನ ಹಲವರು ಆಕ್ಷೇಪ ವ್ಯಕ್ತಪಡಿಸಿದರು.

'ಅಬಕಾರಿ ಇಲಾಖೆಯವರು ಪ್ರತಿ ಮದ್ಯದಂಗಡಿಗೂ ಮಾರಾಟದ ಗುರಿ ನಿಗದಿಪಡಿಸಿದ್ದಾರೆ. ಗುರಿ ತಲುಪುವುದಕ್ಕಾಗಿ ಹಳ್ಳಿ, ಹಳ್ಳಿಗೂ ಬೈಕ್‌ಗಳಲ್ಲಿ ಮದ್ಯ ತೆಗೆದುಕೊಂಡು ಹೋಗಿ ಮಾರಾಟ ಮಾಡಲಾಗುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಹೇಳಿದರು.

'ಅಬಕಾರಿ ಇಲಾಖೆ ಅಧಿಕಾರಿಗಳು, ಪೊಲೀಸರಿಗೆ ಗೊತ್ತಿಲ್ಲದೇ ಹಳ್ಳಿಗಳಲ್ಲಿ ಮದ್ಯ ಮಾರಾಟ ಆಗುವುದಿಲ್ಲ. ಮಾಮೂಲಿ ತೆಗೆದುಕೊಂಡು ಮದ್ಯದ ಅಕ್ರಮ ಮಾರಾಟಕ್ಕೆ ಅವಕಾಶ ನೀಡುತ್ತಿದ್ದಾರೆ. ಕಿರಾಣಿ ಅಂಗಡಿಗಳಲ್ಲೂ ಮದ್ಯ ಮಾರಾಟಕ್ಕೆ ಅಧಿಕೃತ ಪರವಾನಗಿ ಕೊಡಿ. ಸರ್ಕಾರಕ್ಕೂ ತೆರಿಗೆ ಬರುತ್ತದೆ' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಆಗ್ರಹಿಸಿದರು.

'ಕಳಪೆ ಗುಣಮಟ್ಟದ ಮದ್ಯವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೊನಿಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಇದರಿಂದ ಆ ಕಾಲೊನಿಗಳಲ್ಲಿ 35ರಿಂದ 40 ವರ್ಷದೊಳಗಿನ ಯುವಕರೂ ಸಾಯುತ್ತಿದ್ದಾರೆ' ಎಂಬ ಜ್ಞಾನೇಂದ್ರ ಮಾತಿಗೆ ಕಾಂಗ್ರೆಸ್‌ನ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ., 'ಪರಿಶಿಷ್ಟರು ಮಾತ್ರ ಮದ್ಯ ಸೇವಿಸುತ್ತಾರಾ? ನೀವು ಮದ್ಯ ಸೇವಿಸುವುದಿಲ್ಲವೆ? ಪ್ರಮಾಣ ಮಾಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಆರಗ ಜ್ಞಾನೇಂದ್ರ ಗೃಹ ಸಚಿವರಾಗಿದ್ದರು. ಆಗ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಎಷ್ಟು ಅಂಗಡಿಗಳನ್ನು ಬಂದ್ ಮಾಡಿಸಿದ್ದರು ಎಂಬುದನ್ನು ಹೇಳಲಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಬಿಜೆಪಿಯ ಸಿದ್ದು ಸವದಿ, ವಿ. ಸುನಿಲ್ ಕುಮಾರ್ ಸೇರಿದಂತೆ ಹಲವರು ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ತಡೆಗೆ ಆಗ್ರಹಿಸಿದರು.

ಕರಾವಳಿ ರಾತ್ರಿ ಏಳಕ್ಕೇ ಸ್ತಬ್ಧವಾಗುವುದೇಕೆ: ಡಿಕೆಶಿ ಪ್ರಶ್ನೆ

'ರಾತ್ರಿ ಏಳು ಗಂಟೆಗೇ ಕರಾವಳಿ ಸಂಪೂರ್ಣ ಸ್ತಬ್ಧ (ಡೆಡ್) ಆಗುತ್ತದೆ. ಹೀಗಾದರೆ ಪ್ರವಾಸಿಗರು ಏಕೆ ಬರುತ್ತಾರೆ? ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಕರಾವಳಿಯ ಶಾಸಕರು ಕುಳಿತು ಚರ್ಚಿಸಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿ ಮಂಗಳವಾರ ಸಲಹೆ ನೀಡಿದರು.

ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಪ್ರಶ್ನೆ ಕೇಳಿದ ಬಿಜೆಪಿಯ ಗುರುರಾಜ್ ಶೆಟ್ಟಿ ಗಂಟಿಹೊಳೆ, 'ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕು. ಪ್ರವಾಸೋದ್ಯಮ ನೀತಿಯಲ್ಲೇ ಬದಲಾವಣೆಗಳನ್ನು ತರಬೇಕು' ಎಂದು ಆಗ್ರಹಿಸಿದರು.

ಉತ್ತರ ನೀಡಿದ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, 'ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಮ್ಮ ಹೊಸ ನೀತಿಯಲ್ಲಿ ಹಲವು ಉತ್ತೇಜನಗಳನ್ನು ಘೋಷಿಸಿದ್ದೇವೆ. ಸಮುದ್ರ ತೀರದ 40 ತಾಣಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ' ಎಂದರು.

ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, 'ಕರಾವಳಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಶಾಸಕರು ಅಲ್ಲಿ ಸೌಹಾರ್ದಕ್ಕೆ ಒತ್ತು ಕೊಡುವ ಕೆಲಸ ಮಾಡಿ. ಬಾಯಿಗೆ ಬಂದಂತೆ ಮಾತಾಡಿ ಸೌಹಾರ್ದ ಕೆಡಿಸುತ್ತೀರಿ. ದೂರದಿಂದ ಬರುವವರು ಹೆದರುವ ಪರಿಸ್ಥಿತಿ ಇದೆ' ಎಂದು ಹೇಳಿದರು. ಆಗ ಶಿವಕುಮಾರ್, 'ಕರಾವಳಿಯಲ್ಲಿ ಧಾರ್ಮಿಕ, ಶಿಕ್ಷಣ, ಆರೋಗ್ಯ, ಪರಿಸರ ಪ್ರವಾಸೋದ್ಯಮಕ್ಕೆ ಅವಕಾಶಗಳಿವೆ. ರಾತ್ರಿ ಏಳು ಗಂಟೆ ಬಳಿಕ ಅಲ್ಲಿ ಭಜನೆ, ಯಕ್ಷಗಾನ ಹೊರತುಪಡಿಸಿ ಏನೂ ಇರುವುದಿಲ್ಲ. ಅತ್ಯಧಿಕ ಎಂಜನಿಯರಿಂಗ್ ಕಾಲೇಜುಗಳಿದ್ದರೂ ಅಲ್ಲಿ ಐ.ಟಿ. ಕಂಪನಿಗಳು ಬರುವುದಿಲ್ಲ. ಇದೆಲ್ಲ ಏಕೆ ಎಂದು ಚರ್ಚಿಸಿ. ಸಮಸ್ಯೆ ಪರಿಹಾರಕ್ಕೆ ನಾನು ಮತ್ತು ಪ್ರವಾಸೋದ್ಯಮ ಸಚಿವರು ಜೊತೆಯಾಗಿ ನಿಮ್ಮೊಂದಿಗೆ ಶೀಘ್ರದಲ್ಲಿ ಸಭೆ ನಡೆಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

'ವಿವಿಗಳ ಮುಚ್ಚುವ ಪ್ರಸ್ತಾವವಿಲ್ಲ'

ಬೆಂಗಳೂರು: 'ಯಾವುದೇ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ. 20- 30 ಕಾಲೇಜುಗಳಿಗೆ ಒಂದು ವಿಶ್ವವಿದ್ಯಾಲಯ ಮಾಡಲು ಸಾಧ್ಯವಿಲ್ಲ. ಕುಲಪತಿ ಹುದ್ದೆಗಾಗಿ ವಿಶ್ವವಿದ್ಯಾಲಯ ಸ್ಥಾಪಿಸಲು ಆಗುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ಬಗ್ಗೆ ಪ್ರತಿಭಟನೆ ನಡೆಯುತ್ತಿದೆ ಎಂದು ಮಾಧ್ಯಮದವರು ಕೇಳಿದಾಗ, 'ವಿಶ್ವವಿದ್ಯಾಲಯ ಸ್ಥಾಪನೆಗೆ ನೂರಾರು ಎಕರೆ ಜಾಗ ಬೇಕು. ಹೊಸ ವಿಶ್ವವಿದ್ಯಾಲಯಗಳಿಗಾಗಿ ಹಿಂದಿನ ಬಿಜೆಪಿ ಸರ್ಕಾರ ತೆಗೆದಿಟ್ಟಿರುವ ₹2 ಕೋಟಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಲು ಸಾಧ್ಯವಿಲ್ಲ' ಎಂದರು.

'ತೆಗೆದಿಟ್ಟಿರುವ ₹2 ಕೋಟಿಯೂ ಬಿಡುಗಡೆಯಾಗಿಲ್ಲ. ಪ್ರತಿಭಟನೆ ಮಾಡುತ್ತಿರುವವರು ಕೇಂದ್ರದಿಂದ ನೂರಾರು ಕೋಟಿ ಅನುದಾನ ತಂದು ಕೊಟ್ಟರೆ ಅಗತ್ಯವಿರುವ ಜಾಗ ಖರೀದಿಸಿ, ವಿಶ್ವವಿದ್ಯಾಲಯ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಬಹುದು' ಎಂದು ತಿಳಿಸಿದರು.

'ಮಂಡ್ಯ, ಕೊಡಗು ಭಾಗದ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾಲಯದ ಹೆಸರಿನಲ್ಲೇ ಓದಬೇಕೆಂದು ಮನವಿ ಮಾಡಿದ್ದಾರೆ. ತಮ್ಮ ಸೇವಾ ಜ್ಯೇಷ್ಠತೆ ವ್ಯರ್ಥವಾಗುತ್ತದೆ ಎಂದು ಹೊಸ ವಿಶ್ವವಿದ್ಯಾಲಯಗಳಿಗೆ ಬರಲು ಸಿಬ್ಬಂದಿ ತಯಾರಿಲ್ಲ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿ ನೀಡಿದ್ದ ವರದಿಯನ್ನು ಸಚಿವ ಸಂಪುಟ ಉಪ ಸಮಿತಿಯಲ್ಲಿ ಚರ್ಚಿಸಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇನೆ. ಇನ್ನು ಯಾವುದೇ ಅಂತಿಮ ತೀರ್ಮಾನ ಮಾಡಿಲ್ಲ' ಎಂದು ವಿವರಿಸಿದರು.

ರಾತ್ರಿ ವೇಳೆ ಯಕ್ಷಗಾನ ನಿಯಮ ಸಡಿಲಿಕೆಗೆ ಆಗ್ರಹ

ಬೆಂಗಳೂರು: ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ರಾತ್ರಿ ವೇಳೆ ಯಕ್ಷಗಾನ ಪ್ರದರ್ಶನ ಮಾಡಿದರೆ ಪೊಲೀಸರು ಕಿರುಕುಳ ನೀಡುತ್ತಾರೆ. ಇದಕ್ಕೆ ಕಡಿವಾಣ ಹಾಕಬೇಕು. ರಾತ್ರಿ ವೇಳೆ ಯಕ್ಷಗಾನ ನಡೆಸುವುದಕ್ಕಾಗಿ ನಿಯಮಗಳನ್ನು ಸರಳೀಕರಣ ಮಾಡಬೇಕು ಎಂದು ಬಿಜೆಪಿಯ ವಿ.ಸುನಿಲ್ ಕುಮಾರ್ ಅವರು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಗಮನ ಸೆಳೆಯುವ ಸೂಚನೆಯಡಿ ವಿಷಯ ಪ್ರಸ್ತಾಪಿಸಿ, ಕಲಾವಿದರ ಮೇಲೆ ಎಫ್‌ಐಆರ್ ಹಾಕಲಾಗುತ್ತಿದೆ. ಇದು ಸರಿಯಲ್ಲ ಯಕ್ಷಗಾನಕ್ಕೆ ವಿಶೇಷ ಆದ್ಯತೆ ನೀಡಬೇಕು ಎಂದರು.

ಇದಕ್ಕೆ ಧ್ವನಿಗೂಡಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ಹಿಂದೆ ಈ ಸಮಸ್ಯೆ ಇರಲಿಲ್ಲ. ರಾತ್ರಿ 10 ನಂತರ ಧ್ವನಿವರ್ಧಕ ಬಳಸಬಾರದು ಎಂಬ ಆದೇಶ ಹಿಂದಿನ ಸರ್ಕಾರದ ಅವಧಿಯಲ್ಲಿ ಹೊರಡಿಸಲಾಯಿತು. ಯಕ್ಷಗಾನ, ನೇಮೋತ್ಸವ ಇತ್ಯಾದಿ ಆಚರಣೆಗಳು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಒಬ್ಬೊಬ್ಬ ಎಸ್ಪಿ ಬಂದಾಗಲೂ ಅವರಿಗೆ ಬೇಕಾದಂತೆ ನಡೆದುಕೊಳ್ಳುತ್ತಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಈ ಸಮಸ್ಯೆ ಹೆಚ್ಚಾಗಿದೆ ಎಂದರು.

ಧಾರ್ಮಿಕ ಆಚರಣೆಯ ಭಾಗವಾಗಿ ಕೋಳಿ ಅಂಕ ನಡೆಸಲು ಅವಕಾಶ ನೀಡಬೇಕು. ಜೂಜಿನ ಉದ್ದೇಶಕ್ಕೆ ಅವಕಾಶ ನೀಡುವುದು ಬೇಡ ಎಂದು ಬಿಜೆಪಿಯ ಯಶಪಾಲ್ ಸುವರ್ಣ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, 'ಯಕ್ಷಗಾನ ಶ್ರೀಮಂತ ಕಲೆ. ನಮ್ಮ ಸಂಸ್ಕೃತಿ ಮತ್ತು ಕಲೆಯನ್ನು ಬಿಡಲು ಆಗುವುದಿಲ್ಲ. ಇದಕ್ಕೆ ನೆರವಾಗುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಗೃಹ ಸಚಿವರಿಂದ ಉತ್ತರ ಕೊಡಿಸುತ್ತೇನೆ' ಎಂದರು.

ಶಾಸಕರ ವಿರುದ್ಧ ಎಫ್‌ಐಆರ್ ಬಿಜೆಪಿ ಸದಸ್ಯರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನ ಶಕ್ತಿನಗರದಲ್ಲಿ ಭಾನುವಾರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಶಾಸಕ ಡಿ. ವೇದವ್ಯಾಸ ಕಾಮತ್ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಬಿಜೆಪಿ ಸದಸ್ಯರು ವಿಧಾನಸಭೆಯಲ್ಲಿ ಮಂಗಳವಾರ ತೀವ್ರವಾಗಿ ವಿರೋಧಿಸಿದರು.

'ಯಾರೋ ಒಬ್ಬ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿದೆ ಎಂಬ ಆರೋಪ ಹೊರಿಸಿ ಶಾಸಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಹೀಗಾದರೆ ಶಾಸಕರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಹೇಗೆ' ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಪ್ರಶ್ನಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, 'ಶಾಸಕರು ಗಲಭೆಗೆ ಪ್ರಚೋದನೆ ನೀಡಿದ್ದಾರೆ ಎಂಬ ಆರೋಪಕ್ಕೆ ಸಾಕ್ಷ್ಯ ಬೇಕಲ್ಲವೆ? ಇದೇನು ಗೂಂಡಾ ರಾಜ್ಯವೆ? ಅಧಿವೇಶನದ ಸಂದರ್ಭದಲ್ಲೇ ಹೀಗಾದರೆ ಹೇಗೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿರೋಧ ಪಕ್ಷದ ಶಾಸಕರನ್ನು ಗುರಿಯಾಗಿಸಿ ಪ್ರಕರಣ ದಾಖಲಿಸಲಾಗುತ್ತಿದೆ. ಹರೀಶ್ ಪೂಂಜಾ ವಿರುದ್ಧ ಮೂರು ಪ್ರಕರಣ ದಾಖಲಿಸಲಾಗಿದೆ. ನನ್ನ ವಿರುದ್ಧವೂ ಪ್ರಕರಣ ದಾಖಲಿಸಿದ್ದಾರೆ. ಈಗ ವೇದವ್ಯಾಸ ಕಾಮತ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಬಿಜೆಪಿಯ ಭರತ್ ಶೆಟ್ಟಿ ಆರೋಪಿಸಿದರು.

ಪ್ರತಿಕ್ರಿಯೆ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, 'ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಅಧಿಕಾರಿಗಳಿಂದ ವರದಿ ಪಡೆದ ಬಳಿಕ ಸದನಕ್ಕೆ ಉತ್ತರ ನೀಡುತ್ತೇನೆ' ಎಂದರು.

ನಂತರ ಮಾತನಾಡಿದ ವೇದವ್ಯಾಸ ಕಾಮತ್, 'ಭಾನುವಾರ ನಾನು ದೇವಸ್ಥಾನದ ಬಳಿ ಹೋಗುವಾಗಲೇ ಗದ್ದಲ ನಡೆಸಿದರು. ಒಂದೂವರೆ ಗಂಟೆ ವೇದಿಕೆ ಮೇಲಿದ್ದೆ. ಆಗ ಏನೂ ನಡೆಯಲಿಲ್ಲ. ವೇದಿಕೆಯಲ್ಲಿದ್ದ ವಿಧಾನ ಪರಿಷತ್‌ನ ಸದಸ್ಯರೊಬ್ಬರು ನನಗಿಂತ ಮೊದಲು ಹೊರಟರು. ಆ ಬಳಿಕ ನಾನು ಹೊರಟಾಗ ಕೆಲವರು ನನ್ನ ಮೇಲೆ ಮುಗಿಬಿದ್ದರು. ನನ್ನ ಬಳಿ ಇದ್ದ ಪ್ರಸಾದವನ್ನು ಅವರಿಗೆ ನೀಡಿ ಸಮಾಧಾನಪಡಿಸಲು ಯತ್ನಿಸಿದ್ದೆ. ವಿಧಾನ ಪರಿಷತ್ ಸದಸ್ಯರ ಕುಮ್ಮಕ್ಕಿನಿಂದ ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಆರೋಪಿಸಿದರು.

'ನನ್ನ ವಿರುದ್ಧ ದೂರು ನೀಡಿರುವ ವ್ಯಕ್ತಿಯೇ ಸ್ಥಳದಲ್ಲಿದ್ದ ಪರಿಶಿಷ್ಟ ಜಾತಿಯ ಯುವಕನ ಮೇಲೆ ಹಲ್ಲೆ ನಡೆಸಿದ್ದರು. ಅವರೇ ಹೋಗಿ ಆಸ್ಪತ್ರೆಗೆ ದಾಖಲಾಗಿ, ದೂರು ನೀಡಿದರು. ನಾನು ಹಲ್ಲೆ ನಡೆಸಿರುವುದು ನಿಜ ಎಂದು ಸಾಬೀತುಪಡಿಸಿದರೆ ಈಗಲೇ ಎದ್ದು ಸದನದಿಂದ ಹೊರ ನಡೆಯುವೆ' ಎಂದು ಸವಾಲು ಹಾಕಿದರು.

ವಿಪಕ್ಷ ಸದಸ್ಯರ ಕಡೆ ತಿರುಗದ ಕ್ಯಾಮೆರಾ

ವಿಧಾನಸಭೆ ಕಲಾಪದ ನೇರಪ್ರಸಾರದಲ್ಲಿ ಲೋಪ; ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಕಲಾಪದ ನೇರ ಪ್ರಸಾರದಲ್ಲಿ ವಿರೋಧ ಪಕ್ಷದ ಸದಸ್ಯರನ್ನು ತೋರಿಸದೇ, ಕೇವಲ ಆಡಳಿತ ಪಕ್ಷದವರನ್ನು ತೋರಿಸುತ್ತಿರುವ ಪ್ರಮಾದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತು ಮಾಡುವಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ರೂಲಿಂಗ್ ನೀಡಿದರು.

ಸೋಮವಾರ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ಬಗ್ಗೆ ವಿರೋಧಪಕ್ಷದ ಪ್ರಮುಖರು ಸಭಾಧ್ಯಕ್ಷರಿಗೆ ದೂರು ನೀಡಿದ್ದರು. ಆದರೆ, ಮಂಗಳವಾರ ಅದನ್ನು ಸರಿಪಡಿಸಿರಲಿಲ್ಲ. ಬೆಳಿಗ್ಗೆ ಕಲಾಪದ ವೇಳೆ ತೀವ್ರ ಗದ್ದಲ ನಡೆದು ಕೆಲಕಾಲ ಕಲಾಪ ಮುಂದೂಡಿಕೆಗೂ ಈ ವಿಷಯ ಕಾರಣವಾಯಿತು.

ಪ್ರಶ್ನೋತ್ತರ, ಶೂನ್ಯ ವೇಳೆಯ ಬಳಿಕ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕ ಆರ್. ಅಶೋಕ ಮುಂದಾದರು. ಅವರು ಮಾತನಾಡುತ್ತಿರುವುದು ಸದನದೊಳಗಿನ ಟಿ.ವಿ ಪರದೆಯಲ್ಲಿ ಬಿತ್ತರವಾಗುತ್ತಿರಲಿಲ್ಲ. ಆಗ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ, 'ಆಡಳಿತ ಪಕ್ಷದ ಸದಸ್ಯರನ್ನು ಮಾತ್ರ ನೇರ ಪ್ರಸಾರದಲ್ಲಿ ತೋರಿಸಲಾಗುತ್ತಿದೆ. ವಿರೋಧ ಪಕ್ಷದವರನ್ನು ತೋರಿಸದೇ ಇರುವುದಕ್ಕೆ ಕಾರಣವೇನು' ಎಂದು ಪ್ರಶ್ನಿಸಿದರು.

'ಹಿಂದೆ ಸದನದ ಕಲಾಪವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೇರ ಪ್ರಸಾರ ಮಾಡುತ್ತಿತ್ತು. ಈಗ ಕಾಂಗ್ರೆಸ್ ಕಾರ್ಯಕರ್ತರಿಗೆ ಆ ಕೆಲಸ ಕೊಟ್ಟಿದ್ದಾರೆ. ನಾನು ಜವಾಬ್ದಾರಿಯಿಂದ ಈ ಆಪಾದನೆ ಮಾಡುತ್ತಿದ್ದೇನೆ' ಎಂದು ಬೆಲ್ಲದ ಹೇಳಿದರು.

ಆಡಳಿತ– ವಿರೋಧ ಪಕ್ಷದ ಸದಸ್ಯರ ಮಧ್ಯೆ ವಾಕ್ಸಮರ ಜೋರಾಯಿತು. ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅವರು ಸಮಜಾಯಿಷಿ ನೀಡಲು ಮುಂದಾದರು. 'ತಾಂತ್ರಿಕ ಕಾರಣದಿಂದ ಈ ಸಮಸ್ಯೆ ಆಗಿದೆ. ವಿರಾಮದ ವೇಳೆ ಸಿಬ್ಬಂದಿ ಕರೆಸಿ ವಿಚಾರಿಸಿ, ಸರಿಪಡಿಸುವೆ' ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಭರವಸೆ ನೀಡಿದರು.

ಚರ್ಚೆ ಮುಂದುವರಿದಾಗ ವಿರೋಧ ಪಕ್ಷದವರು ಮಾತನಾಡುವಾಗಲೆಲ್ಲ ಆ ದೃಶ್ಯ ನೇರ ಪ್ರಸಾರ ಆಗಲಿಲ್ಲ. ಆ ಸಮಯದಲ್ಲಿ ಸಭಾಧ್ಯಕ್ಷರ ಪೀಠದ ದೃಶ್ಯ ಪ್ರಸಾರವಾಗುತ್ತಿತ್ತು. ಆಡಳಿತ ಪಕ್ಷದವರು ಮಾತನಾಡುವಾಗ ಮಾತನಾಡುವ ಆ ಸದಸ್ಯರ ದೃಶ್ಯ ಪ್ರಸಾರವಾಗುತ್ತಿತ್ತು. ಬಿಜೆಪಿ, ಜೆಡಿಎಸ್ ಸದಸ್ಯರು ಮತ್ತೆ ತಕರಾರು ಎತ್ತಿದರು. ಸಮಸ್ಯೆ ಪರಿಹಾರ ಆಗುವವರೆಗೂ ಕಲಾಪ ಮುಂದೂಡುವಂತೆ ಪಟ್ಟು ಹಿಡಿದರು. ಹತ್ತು ನಿಮಿಷ ಕಲಾಪ ಮುಂದೂಡಿದ ಸಭಾಧ್ಯಕ್ಷರು, ತಮ್ಮ ಕೊಠಡಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರಮುಖರೊಂದಿಗೆ ಚರ್ಚಿಸಿದರು.

ಆದರೂ ಸಮಸ್ಯೆ ಬಗೆಹರಿಯದೇ ಇದ್ದಾಗ, ಅಧಿಕಾರಿ ಅಮಾನತಿಗೆ ಸಭಾಧ್ಯಕ್ಷರು ಸೂಚಿಸಿದರು.

ಸಿಟ್ಟಿಗೆದ್ದ ಸಭಾಧ್ಯಕ್ಷ ಖಾದರ್

ಭೋಜನ ವಿರಾಮದ ಬಳಿಕ ಕಲಾಪ ಸೇರಿದಾಗ ಸಮಸ್ಯೆ ಮುಂದುವರಿದಿತ್ತು. ಅಶೋಕ ಅವರು ಮಾತನಾಡುವಾಗ ಅವರ ಚಿತ್ರ ಪ್ರಸಾರ ಆಗುತ್ತಿರಲಿಲ್ಲ. ಈ ಬಗ್ಗೆ ಬಸನಗೌಡ ಪಾಟೀಲ ಯತ್ನಾಳ ಮತ್ತು ಅರವಿಂದ ಬೆಲ್ಲದ ಆಕ್ಷೇಪ ವ್ಯಕ್ತಪಡಿಸಿದರು.

ಇದರಿಂದ ಸಿಟ್ಟಿಗೆದ್ದ ಸಭಾಧ್ಯಕ್ಷ ಖಾದರ್, 'ಅಧಿಕಾರಿಯನ್ನು ಕರೆಸಿದ್ದೆ, ಸರಿ ಮಾಡುತ್ತೇನೆ ಎಂದಿದ್ದರು. ಇನ್ನೂ ಸರಿ ಆಗಿಲ್ಲ. ಇದಕ್ಕೆ ಕಾರಣ ಯಾರು ಎನ್ನುವುದು ತನಿಖೆ ಮಾಡಿ, ಅಮಾನತು ಮಾಡಿ' ಎಂದು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರಿಗೆ ಸೂಚಿಸಿದರು.

ಸಚಿವ ಎಚ್.ಕೆ.ಪಾಟೀಲ ಮಾತನಾಡಿ, 'ತಾಂತ್ರಿಕ ಸಮಸ್ಯೆಯಿಂದ ಲೋಪವಾಗಿದೆ. ತಪ್ಪು ಕಲ್ಪನೆ ಬೇಡ. ಆಡಳಿತ ಮತ್ತು ವಿರೋಧಪಕ್ಷದ ಸದಸ್ಯರು ಮಾತನಾಡುವಾಗ ಸಮಾನವಾಗಿ ಪ್ರಸಾರ ಮಾಡುತ್ತೇವೆ. ತಪ್ಪು ಮಾಡಿದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸುತ್ತೇನೆ' ಎಂದರು.

'ಇನ್ವೆಸ್ಟ್ ಕರ್ನಾಟಕ'ದಿಂದ ₹ 6.23 ಲಕ್ಷ ಕೋಟಿ ಬಂಡವಾಳ'

ಎಂ.ಬಿ.ಪಾಟೀಲ

ಬೆಂಗಳೂರು: 'ಇತ್ತೀಚೆಗೆ ನಡೆದ 'ಇನ್ವೆಸ್ಟ್ ಕರ್ನಾಟಕ-2025'ದಲ್ಲಿ 98 ಕಂಪನಿಗಳೊಂದಿಗೆ ಹೂಡಿಕೆ ಒಪ್ಪಂದ ಮಾಡಿಕೊಂಡಿದ್ದು, ₹ 6.23 ಲಕ್ಷ ಕೋಟಿ ಬಂಡವಾಳ ಹರಿದು ಬರಲಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಸ್.ವಿ. ಸಂಕನೂರ ಪ್ರಶ್ನೆಗೆ ಉತ್ತರಿಸಿದ ಅವರು, '₹ 4,03,533 ಕೋಟಿ ಬಂಡವಾಳ ಹೂಡಿಕೆ ಮಾಡಲು 1,101 ಕಂಪನಿಗಳು ಸಂಬಂಧಿಸಿದ ಸಮಿತಿಗಳಿಂದ ಅನುಮೋದನೆ ಪಡೆದಿವೆ' ಎಂದರು.

'ರಾಜ್ಯದ 2,892, ಹೊರರಾಜ್ಯಗಳ 286 ಮತ್ತು ವಿದೇಶಗಳ 72 ಹೂಡಿಕೆದಾರ ಉದ್ಯಮಿಗಳು ₹26,331 ಕೋಟಿ, ಬೆಂಗಳೂರು ನಗರ ಜಿಲ್ಲೆಯಲ್ಲಿ 14 ಕಂಪನಿಗಳು ₹ 35,297 ಕೋಟಿ, ಉಳಿದ ಜಿಲ್ಲೆಗಳಲ್ಲಿ 54 ಯೋಜನೆಗಳಿಗೆ ಕಂಪನಿಗಳು ಬಂಡವಾಳ ಹೂಡಿಕೆ ಮಾಡಲಿವೆ. ಉತ್ತರ ಕರ್ನಾಟಕ ಭಾಗದಲ್ಲೇ ಶೇ 45ರಷ್ಟು ಹೂಡಿಕೆ ಆಗಲಿದೆ' ಎಂದು ವಿವರಿಸಿದರು.

ಇನ್ಫೊಸಿಸ್– ವಿಳಂಬಕ್ಕೆ ಅಸಮಾಧಾನ: 'ಹುಬ್ಬಳ್ಳಿಯಲ್ಲಿ ಇನ್ಫೊಸಿಸ್‌ಗೆ 42 ಎಕರೆ ಭೂಮಿ ನೀಡಿ ಹಲವು ವರ್ಷ ಕಳೆದರೂ ಇನ್ನೂ ಕಾರ್ಯಾಚರಣೆ ಆರಂಭಿಸಿಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಹಲವು ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಈ ಸಂಬಂಧ ಮತ್ತೊಮ್ಮೆ ಸಭೆ ಕರೆದು, ಕ್ಯಾಂಪಸ್ ಕಾರ್ಯಾರಂಭಕ್ಕೆ ಸೂಚಿಸಲಾಗುವುದು' ಎಂದರು.

'ಅಡಿಕೆಗೆ ರೋಗ: ಪರಿಹಾರಕ್ಕೆ ಪ್ರಸ್ತಾವ'

ಬೆಂಗಳೂರು: 'ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗಗಳಲ್ಲಿ ಅಡಿಕೆಗೆ ಎಲೆ ಚುಕ್ಕಿ ಹಾಗೂ ಹಳದಿ ರೋಗಗಳಿಂದ ತೊಂದರೆಗೆ ಒಳಗಾಗಿರುವ ರೈತರಿಗೆ ಪರಿಹಾರ ಸಂಬಂಧ ಹೆಚ್ಚುವರಿ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಕಿಶೋರ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಎಲೆಚುಕ್ಕಿ ರೋಗದಿಂದ ಹಾನಿಯಾಗಿರುವ ರಾಜ್ಯದ 53,977 ಹೆಕ್ಟೇರ್ ಪ್ರದೇಶಕ್ಕೆ ₹ 225.73 ಕೋಟಿ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ₹ 112.83 ಕೋಟಿಗೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ₹ 37 ಕೋಟಿ ಮಂಜೂರು ಮಾಡಿದೆ' ಎಂದರು.

'60 ಲಕ್ಷ ಮನೆಗಳಿಗೆ ಅನಿಲ ಸಂಪರ್ಕ'

'ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಒಂದೊಂದು ದರ ನಿಗದಿಪಡಿಸಿದ್ದ ಕಾರಣ ಮನೆ ಮನೆಗೆ ಅನಿಲ ಸಂಪರ್ಕ ಒದಗಿಸುವುದು ವಿಳಂಬವಾಗಿದೆ. ಈ ಸಮಸ್ಯೆ ಸದ್ಯ ಬಗೆಹರಿದಿದ್ದು, 2030ರೊಳಗೆ ಉಳಿದ 60 ಲಕ್ಷ ಮನೆಗಳಿಗೆ ಕೊಳವೆ ಮಾರ್ಗದ ಮೂಲಕ ಅಡುಗೆ ಅನಿಲ ಪೂರೈಸಲಾಗುವುದು' ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಬಿಜೆಪಿಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ನಗರ ಅನಿಲ ಸರಬರಾಜು ನೀತಿ ಅನ್ವಯ (ಸಿಜಿಡಿ) ಅನಿಲ ಪೈಪ್ ಅಳವಡಿಕೆ ಮತ್ತು ಮೇಲ್ವಿಚಾರಣಾ ಶುಲ್ಕವನ್ನು ಮೀಟರ್‌ಗೆ ₹1 ನಿಗದಿಪಡಿಸಲಾಗಿದೆ. ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕೆಂದು ಅನಿಲ ಪೂರೈಕೆ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ 66.25 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸುವ ಮತ್ತು 1,022 ಸಿಎನ್‌ಜಿ ಮರುಪೂರಣ ಕೇಂದ್ರಗಳನ್ನು ತೆರೆಯುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದರು.

'200 ಆನೆಗಳು ಕಾಡಿನಿಂದ ಹೊರಗೆ'

ಪ್ರಜಾವಾಣಿ ವಾರ್ತೆ

ಈಶ್ವರ ಬಿ. ಖಂಡ್ರೆ

ಬೆಂಗಳೂರು: ಅರಣ್ಯ ಪ್ರದೇಶದಿಂದ ಹೊರಗೆ ಉಳಿದಿರುವ 200ಕ್ಕೂ ಹೆಚ್ಚು ಆನೆಗಳನ್ನು ಸುರಕ್ಷಿತವಾಗಿ ಕಾಡಿಗೆ ಮರಳಿಸಲು ಶೀಘ್ರದಲ್ಲೇ ಕಾರ್ಯಾಚರಣೆ ಆರಂಭಿಸಲಾಗುವುದು. ಅದಕ್ಕಾಗಿ ಪ್ರತ್ಯೇಕ ಕೇಂದ್ರ ತೆರೆಯಲಾಗುತ್ತದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಶಾಂತಾರಾಮ ಬುಡ್ನಸಿದ್ಧಿ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ಮಾನವ–ಆನೆ ಸಂಘರ್ಷ ತಡೆಯಲು ರೈಲ್ವೆ ಹಳಿಗಳನ್ನು ಬಳಸಿಕೊಂಡು ಬ್ಯಾರಿಕೇಡ್ ನಿರ್ಮಿಸಲಾಗುತ್ತಿದೆ. ಕಾಡಿನಿಂದ ಜನವಸತಿ ಪ್ರದೇಶಕ್ಕೆ ಬರುವ ಆನೆಗಳ ತಡೆಗೆ ಈ ಯೋಜನೆ ಸಹಕಾರಿಯಾಗಿದೆ. ಆದರೆ, ಕಾಡಿನಿಂದ ಹೊರಬಂದು ಕಾಫಿ ತೋಟಗಳು, ಜನವಸತಿ ಪ್ರದೇಶಗಳ ಸುತ್ತ ಹಲವು ವರ್ಷಗಳಿಂದ ಬೀಡುಬಿಟ್ಟಿರುವ ಆನೆಗಳನ್ನು ಕಾಡಿಗೆ ಮರಳಿಸಬೇಕಿದೆ. ಇದು ಅತ್ಯಂತ ಕಷ್ಟಕರ ಕಾರ್ಯಾಚರಣೆ ಎಂದರು.

ಕಾಡಿನಿಂದ ಸೊಪ್ಪು, ದರಗು, ಮೇವು ಸಂಗ್ರಹಿಸುವ ಅರಣ್ಯ ವಾಸಿಗಳಿಗೆ ಕಿರುಕುಳ ಆಗದಂತೆ ಕ್ರಮ ಕೈಗೊಳ್ಳಲು ಸ್ಥಳೀಯರ ಜತೆ ಕಂದಾಯ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆ ನಡೆಸಲು ಸೂಚಿಸಲಾಗುವುದು ಎಂದು ತಿಳಿಸಿದರು.

ಶೇ 47.8 ಮಹಿಳೆಯರಿಗೆ ರಕ್ತಹೀನತೆ

ರಾಜ್ಯದಲ್ಲಿ 18ರಿಂದ 40ರ ವಯಸ್ಸಿನ ಶೇ 47.8ರಷ್ಟು ಹೆಣ್ಣು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ವಿಧಾನ ಪರಿಷತ್ ಸಭಾನಾಯಕ ಎಸ್.ಎನ್. ಬೋಸರಾಜು ಹೇಳಿದರು.

ಬಿಜೆಪಿಯ ತಳವಾರ್ ಸಾಬಣ್ಣ ಅವರ ಪ್ರಶ್ನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪರವಾಗಿ ಉತ್ತರ ನೀಡಿದ ಅವರು, ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸರ್ವೆ–4 ವರದಿಗೆ ಹೋಲಿಸಿದರೆ ರಕ್ತಹೀನತೆಯಿಂದ ಬಳಲುತ್ತಿರುವ ಮಹಿಳೆಯರ ಪ್ರಮಾಣ ಶೇ 3.8ರಷ್ಟು ಇಳಿಕೆಯಾಗಿದೆ. ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೌಷ್ಟಿಕಾಂಶ ಇರುವ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ ಎಂದರು.

ವಿದ್ಯುತ್ ಸ್ವಾವಲಂಬನೆಗೆ ಒತ್ತು

ಗ್ರಾಮ ಪಂಚಾಯಿತಿ, ಸರ್ಕಾರಿ ಕಚೇರಿಗಳು, ಮನೆಗಳ ಚಾವಣಿಗಳ ಮೇಲೆ ಸೋಲಾರ್, ಪವನ, ಜಲ ವಿದ್ಯುತ್ ಸ್ಥಾವರಗಳನ್ನು ಹೆಚ್ಚಿಸುವ ಮೂಲಕ ಕರ್ನಾಟಕ ಕೆಲ ವರ್ಷಗಳಲ್ಲಿ ಸ್ವಾವಲಂಬನೆ ಪಡೆಯಲಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಈಗಾಗಲೇ 5,713 ಸೌರ ಮೇಲ್ಚಾವಣಿ ಘಟಕಗಳನ್ನು ಸ್ಥಾಪಿಸಲಾಗಿದೆ. ಇದರಿಂದ 700 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಜೋಗ–ವರಾಹಿ ಜಲವಿದ್ಯುತ್ ಯೋಜನೆಗಳ ಕಾಮಗಾರಿ ಶೀಘ್ರ ಆರಂಭಿಸಲಾಗುವುದು. ಗ್ರಾಮ ಪಂಚಾಯಿತಿಗಳ ವಿದ್ಯುತ್ ಬಾಕಿ ಕುರಿತು ಗ್ರಾಮೀಣಾಭಿವೃದ್ಧಿ ಸಚಿವರ ಜತೆ ಚರ್ಚಿಸಲಾಗುವುದು ಎಂದರು.

ಅಪೆಕ್ಸ್ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ– ಡಿಕೆಶಿ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಭೇಟಿ ಮಾಡಲು ವಿಧಾನಸೌಧದಲ್ಲಿರುವ ಅವರ ಕಚೇರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೋದರೂ, ಭೇಟಿ ಸಾಧ್ಯವಾಗಲಿಲ್ಲ.

ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅಪೆಕ್ಸ್ ಬ್ಯಾಂಕ್ ವಿಚಾರವಾಗಿ ಮಾತನಾಡಲು ರಾಜಣ್ಣ ಕಚೇರಿಗೆ ಹೋಗಿದ್ದೆ. ಸಿ.ಎಂ ಮತ್ತು ನಾನು ಮಾತನಾಡಿದ್ದೆವು' ಎಂದರು.

'ಅಪೆಕ್ಸ್ ಬ್ಯಾಂಕ್ ಉಳಿಸಲು ಹಾಲಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿ ನಮ್ಮ ಪಕ್ಷದವರನ್ನು ಅಧ್ಯಕ್ಷರನ್ನಾಗಿ ಮಾಡಬೇಕಿದೆ' ಎಂದರು.

'ರಾಜಣ್ಣ ನಮ್ಮ ಪಕ್ಷದ ನಾಯಕ. ಅವರು ವಿಧಾನಸಭೆಯಲ್ಲಿ ಇದ್ದರಂತೆ. ಆದರೆ, ಅನಾರೋಗ್ಯದ ಕಾರಣ ಬೇಗ ಹೋಗಿದ್ದಾರೆ. ವಯಸ್ಸಿನ ಸಮಸ್ಯೆ ಇರುತ್ತದೆಯಲ್ಲವೇ? ನನಗೂ ಕುತ್ತಿಗೆ ನೋವು' ಎಂದರು.

ಶಿವಕುಮಾರ್ ಚರ್ಚೆ: ಸಹಕಾರ ಕ್ಷೇತ್ರದ ವಿವಿಧ ವಿಷಯಗಳ ಕುರಿತು ಸಚಿವರಾದ ಶಿವಾನಂದ ಪಾಟೀಲ, ಡಿ. ಸುಧಾಕರ್, ಶಾಸಕರಾದ ಲಕ್ಷ್ಮಣ ಸವದಿ, ಬಿಜೆಪಿಯ ಶಿವರಾಮ ಹೆಬ್ಬಾರ್, ರಂಗನಾಥ್, ಕದಲೂರು ಉದಯ್, ಪರಿಷತ್ ಸದಸ್ಯ ಎಸ್. ರವಿ ಜೊತೆ ಡಿ.ಕೆ. ಶಿವಕುಮಾರ್ ಚರ್ಚಿಸಿದರು.

ಐದು ಮಸೂದೆಗಳ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅರಮನೆ ಮೈದಾನದ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವ ಉದ್ದೇಶದ ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ಮಸೂದೆ 2025 ಸೇರಿ ಒಟ್ಟು ಐದು ಮಸೂದೆಗಳನ್ನು ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಮಂಡನೆಯಾದ ಮಸೂದೆಗಳು: ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಗಿರವಿದಾರರ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ಮಸೂದೆ 2025, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆ 2025.

ಬಿಎಸ್‌ವೈ ಲಿಂಗಾಯತರೇ ಅಲ್ಲ: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಡಿಯೂರಪ್ಪ ಅವರು ಲಿಂಗಾಯತರೇ ಅಲ್ಲ. ಅವರು ಬಳೆಗಾರ ಶೆಟ್ಟರು. ಅವರ ಹುಟ್ಟೂರಾದ ಮಂಡ್ಯದ ಬೂಕನಕೆರೆಗೆ ಹೋಗಿ ಕೇಳಿದರೆ, ನಿಜ ಗೊತ್ತಾಗುತ್ತದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವೀರೇಂದ್ರ ಪಾಟೀಲ, ಜೆ.ಎಚ್.ಪಟೇಲ್ ನಂತರ ಸಮುದಾಯದಲ್ಲಿ ಯಾರೂ ನಾಯಕರು ಇರಲಿಲ್ಲ. ಜನರು ಅನಿವಾರ್ಯವಾಗಿ ಯಡಿಯೂರಪ್ಪ ಅವರನ್ನು ಒಪ್ಪಿದರು. ಆದರೆ ಅವರು ವೀರಶೈವರು ಮತ್ತು ಪಂಚಮಸಾಲಿಗಳಿಗೆ ಮೀಸಲಾತಿ ನೀಡದೆ, ಮೋಸ ಮಾಡಿದರು' ಎಂದರು.

'ಯಡಿಯೂರಪ್ಪ ಲಿಂಗಾಯತರ ಹೆಸರಿನಲ್ಲಿ ಬಿಜೆಪಿಯನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಕಾಂಗ್ರೆಸ್ ಅನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ನಮ್ಮ ಆಕ್ಷೇಪ ಇರುವುದು ಕುಟುಂಬ ರಾಜಕಾರಣದ ಬಗ್ಗೆ ಮಾತ್ರ. ನರೇಂದ್ರ ಮೋದಿ ಸಹ ಕುಟುಂಬ ರಾಜಕಾರಣ ಒಪ್ಪುವುದಿಲ್ಲ' ಎಂದರು.

ರಾಜ್ಯ ಘಟಕದ ಅಧ್ಯಕ್ಷ ಯಾರು ಎಂಬುದು ಫೆಬ್ರುವರಿ 20ಕ್ಕೆ ಗೊತ್ತಾಗುತ್ತದೆ ಎಂದು ವಿಜಯೇಂದ್ರ ಹೇಳಿದ್ದರು. ಅವರು ಯಥಾಸ್ಥಿತಿ ಆದೇಶ ಪಡೆದಿದ್ದಾರಷ್ಟೆ. ನಮಗೆ ಫಲ ಸಿಗುತ್ತದೆ

ಬಸನಗೌಡ ಪಾಟೀಲ ಯತ್ನಾಳ
ಬಿಜೆಪಿ ಶಾಸಕ

ರೇಣುಕಾಚಾರ್ಯ ಅವರು ತಮ್ಮನ್ನು ನಾಯಿ ನರಿ ಎಂದಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾಯಿಗಳಿಗೆ ನಿಯತ್ತು ಇದೆ. ಆದರೆ ಹಂದಿಗಳಿಗೆ ನಿಯತ್ತು ಇಲ್ಲ. ಯಡಿಯೂರಪ್ಪ ಮತ್ತು ವಿಜಯೇಂದ್ರ ಪರ ರೇಣುಕಾಚಾರ್ಯ ಇಂದು ಮಾತನಾಡುತ್ತಿದ್ದಾರೆ. ಆದರೆ, ಅಂದು ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಲು ಗೋವಾಗೆ ಹೋಗಿ ಸಂಚು ಮಾಡಿದ್ದು ಇದೇ ರೇಣುಕಾಚಾರ್ಯ' ಎಂದರು.

'ಯತ್ನಾಳಗೆ ಬುದ್ಧಿಭ್ರಮಣೆ ಆಗಿದೆಯಾ'

'ಯಡಿಯೂರಪ್ಪ ಅವರು ವೀರಶೈವ ಲಿಂಗಾಯತರ ಮಹಾನಾಯಕ. ಬಸನಗೌಡ ಪಾಟೀಲ ಯತ್ನಾಳ ಅವರು ನಮ್ಮ ನಾಯಕರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ನಾಯಿ ಉಚ್ಚೆ ಹೊಯ್ದರೆ, ಕಲ್ಲಿನ ತೂಕ ಕಡಿಮೆ ಆಗುವುದಿಲ್ಲ' ಎಂದು ರೇಣುಕಾಚಾರ್ಯ ಕಿಡಿಕಾರಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಯಡಿಯೂರಪ್ಪ ರಾಜಕಾರಣಕ್ಕೆ ಬಂದು, ರಾಜ್ಯದಲ್ಲಿ ಪಕ್ಷ ಕಟ್ಟುವಾಗ ಈ ಬೊಗಳೆ ಮನುಷ್ಯ ಇನ್ನೂ ರಾಜಕಾರಣ ನೋಡಿರಲಿಲ್ಲ. ಈ ಮಂದಿಯ ಜತೆಗೆ ಇರುವುದೇ ಮೂರು ಮತ್ತೊಬ್ಬ ಜನ. ಅವರೇನು ಮಾಡಿಕೊಳ್ಳುತ್ತಾರೆ. ಯತ್ನಾಳಗೆ ಬುದ್ಧಿಭ್ರಮಣೆ ಆಗಿದೆಯಾ? ಹುಚ್ಚಾಸ್ಪತ್ರೆಗೆ ಸೇರಿಸಬೇಕಾ' ಎಂದು ಅವರು ಪ್ರಶ್ನಿಸಿದರು.

'ಈ ಮನುಷ್ಯರು ವೀರಶೈವ ಲಿಂಗಾಯತರನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಅವರ ಷಡ್ಯಂತ್ರವನ್ನು ಸಮಾಜ ಅರ್ಥ ಮಾಡಿಕೊಂಡಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ಮುಖಂಡ ರೇಣುಕಾಚಾರ್ಯ ಹೇಳಿಕೆ

'ಬಿಎಸ್‌ವೈ, ಬಿವೈವಿ ಬೆಂಬಲಿಸಿ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ವೀರಶೈವ ಲಿಂಗಾಯತ ನಾಯಕರು, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರನ್ನು ಬೆಂಬಲಿಸಿ ವೀರಶೈವ ಲಿಂಗಾಯತ ಮಹಾಸಂಗಮ ಸಭೆ ನಡೆಸಲಾಗುವುದು' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ತಮ್ಮನ್ನು ಬೆಂಬಲಿಸಿ ಯಾವ ನಾಯಕರೂ ವೀರಶೈವ ಲಿಂಗಾಯತ ಸಭೆ ನಡೆಸಬಾರದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೂಚಿಸಿದ್ದರು. ಇದರ ಮಧ್ಯೆಯೂ ಹಲವು ಸಭೆ ನಡೆಸಿರುವ ರೇಣುಕಾಚಾರ್ಯ, ಮಂಗಳವಾರವೂ ನಗರದಲ್ಲಿ ವೀರಶೈವ ಲಿಂಗಾಯತ ಮಹಾಸಂಗಮ ಪೂರ್ವಭಾವಿ ಸಭೆ ನಡೆಸಿದರು.

ನೆಲಮಂಗಲದ ಬಸವಣ್ಣ ದೇವರ ಮಠದ ಸಿದ್ದಲಿಂಗ ಮಹಾಸ್ವಾಮಿ, ತುಮಕೂರಿನ ಖಾರದೇಶ್ವರ ಮಠ, ತಿ.ನರಸೀಪುರದ ವಿರಕ್ತಮಠ, ನೆಲಮಂಗಲದ ಕುಲುಮೆ ಮಠ, ಕೋಲಾರದ ಬೆಳ್ಳಾವಿ ಮಠ, ವಿಜಯಪುರದ ಬಸವಕಲ್ಯಾಣ ಮಠದ ಸ್ವಾಮೀಜಿ, ಮಾಜಿ ಶಾಸಕರಾದ ಸಿ.ಎಸ್.ನಿರಂಜನ ಕುಮಾರ್, ಡಿ.ಎಸ್.ಸುರೇಶ್, ಮಾಡಾಳ್ ವಿರೂಪಾಕ್ಷಪ್ಪ ಮತ್ತು ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದರು. ಯಡಿಯೂರಪ್ಪ ಮತ್ತು ವಿಜಯೇಂದ್ರ ಪರವಾಗಿ ಸಮಾವೇಶ ನಡೆಸುವುದಕ್ಕೆ ಸಭೆಯಲ್ಲಿ ಬೆಂಬಲ ವ್ಯಕ್ತವಾಯಿತು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ರೇಣುಕಾಚಾರ್ಯ, 'ಯಡಿಯೂರಪ್ಪ ಅವರು ವೀರಶೈವ ಲಿಂಗಾಯತ ಸಮುದಾಯದ ನಾಯಕರು. ಅವರನ್ನು ಗೌರವಿಸುವ ಉದ್ದೇಶದಿಂದ ದಾವಣಗೆರೆಯಲ್ಲಿ ಬೃಹತ್ ಸಮಾವೇಶ ನಡೆಸಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಕಲ್ಯಾಣ ಕರ್ನಾಟಕ, ಮುಂಬೈ ಕರ್ನಾಟಕ ಭಾಗಗಳಲ್ಲೂ ಸಭೆ ನಡೆಸಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದರು.

'ರಾಜ್ಯ ಸರ್ಕಾರವು ನಡೆಸಿದ ಜಾತಿಗಣತಿ ವೇಳೆ ನಮ್ಮ ಸಮುದಾಯದವರ ಮನೆಗಳಿಗೆ ಯಾರೂ ಭೇಟಿ ನೀಡಿಯೇ ಇಲ್ಲ. ವರದಿಯಲ್ಲಿ ಇರುವುದು ಸುಳ್ಳು ಸಂಖ್ಯೆ. ನಮ್ಮ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ನಮ್ಮ ಸಮಾಜದ ಹಲವರು ಇನ್ನೂ ಬಡವರಾಗಿಯೇ ಇದ್ದಾರೆ. ಹೀಗಾಗಿ ವೀರಶೈವ ಲಿಂಗಾಯತರನ್ನು ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸುವ ನಿರ್ಣಯ ತೆಗೆದುಕೊಳ್ಳಲಾಯಿತು' ಎಂದರು.

‘ಮಾಣಿಕ್ಯ’ ಚಿತ್ರದ ನಟಿಯಿಂದ 15 ಕೆ.ಜಿ ಚಿನ್ನ ವಶ

ನಟಿ ರನ್ಯಾ ರಾವ್ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 15 ದಿನದಲ್ಲಿ ನಾಲ್ಕು ಬಾರಿ ದುಬೈಗೆ ಹೋಗಿ ಬಂದಿದ್ದ ನಟಿ ರನ್ಯಾ ರಾವ್
- ಡಿಐಜಿ ಮಲಮಗಳು ಎಂದು ಹೇಳಿಕೆ ನೀಡಿದ ನಟಿ
- ನ್ಯಾಯಾಂಗ ಬಂಧನಕ್ಕೆ ರನ್ಯಾ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದಲ್ಲಿ ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದಾರೆ.



ರನ್ಯಾ ರಾವ್

ಸೋಮವಾರ ರಾತ್ರಿ ಎಮಿರೇಟ್ ಏರ್‌ಲೈನ್ ವಿಮಾನದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಟಿಯನ್ನು ತಪಾಸಣೆ ಮಾಡಿದಾಗ ಅವರ ಬಳಿ 14.80 ಕೆ.ಜಿ ಚಿನ್ನ ಪತ್ತೆಯಾಗಿದೆ.

ವಿಚಾರಣೆಯ ನಂತರ ನಟಿಯನ್ನು ಬಂಧಿಸಿದ ಡಿಆರ್‌ಐ ಅಧಿಕಾರಿಗಳು ಆಕೆಯನ್ನು ಬೆಂಗಳೂರಿನ ಎಚ್‌ಬಿಆರ್ ಲೇಔಟ್‌ನಲ್ಲಿರುವ ಡಿಆರ್‌ಐ ಕಚೇರಿಗೆ ಕರೆದೊಯ್ದರು.

ಸುದೀಪ್ ನಟಿಸಿರುವ ‘ಮಾಣಿಕ್ಯ’ ಚಿತ್ರದಲ್ಲಿ ನಾಯಕಿಯಾಗಿ ನಟಿಸಿರುವ ರನ್ಯಾ ರಾವ್, ತಾನು ಡಿಐಜಿ ಡಾ.ಕೆ. ರಾಮಚಂದ್ರರಾವ್ ಅವರ ಮಲಮಗಳು ಎಂದು ಪ್ರಾಥಮಿಕ ತನಿಖೆ ವೇಳೆ ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದುಬೈನ ಚಿನ್ನ ಕಳ್ಳಸಾಗಣೆ ಜಾಲದಲ್ಲಿ ಕನ್ನಡದ ನಟಿಯೊಬ್ಬರು ಸಕ್ರಿಯರಾಗಿರುವ ಬಗ್ಗೆ ಡಿಆರ್‌ಐ ಅಧಿಕಾರಿಗಳಿಗೆ ಕೆಲವು ದಿನಗಳ ಹಿಂದೆ ಮಾಹಿತಿ ದೊರೆತ್ತಿತ್ತು. ಪದೇ ಪದೇ ದುಬೈಗೆ ಹೋಗಿ ಬರುತ್ತಿದ್ದ ರನ್ಯಾ ಓಡಾಟದ ಮೇಲೆ ಅಧಿಕಾರಿಗಳು ಕಣ್ಣಿಟ್ಟಿದ್ದರು.

15 ದಿನಗಳಲ್ಲಿ ರನ್ಯಾ ರಾವ್ ನಾಲ್ಕು ಬಾರಿ ದುಬೈಗೆ ಹೋಗಿ ಬಂದಿದ್ದರು. ಅಧಿಕಾರಿಗಳು ಸೋಮವಾರ ರಾತ್ರಿ ಆಕೆ ಬರುವುದನ್ನೇ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದರು. ನಟಿ ಬಂದಿಳಿಯುತ್ತಲೇ ವಶಕ್ಕೆ ಪಡೆದು ತಪಾಸಣೆ ನಡೆಸಿದಾಗ ಅವರ ಶಂಕೆ ನಿಜವಾಯಿತು. ವಿಮಾನ ನಿಲ್ದಾಣದಲ್ಲಿಯೇ ಪ್ರಾಥಮಿಕ ವಿಚಾರಣೆ ನಡೆಸಿದ ಬಳಿಕ ನಟಿಯನ್ನು ಬಂಧಿಸಿ ಡಿಆರ್‌ಐ ಕಚೇರಿಗೆ ಕರೆದೊಯ್ದರು.

ಕೋರಮಂಗಲದಲ್ಲಿರುವ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಮನೆಗೆ ಆರೋಪಿಯನ್ನು ಮಂಗಳವಾರ ರಾತ್ರಿ ಹಾಜರು ಪಡಿಸಲಾಯಿತು.

ಡಿಆರ್‌ಐ ಅಧಿಕಾರಿಗಳು ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಕೋರಿದ ಕಾರಣ ನ್ಯಾಯಾಧೀಶರು ಮಾರ್ಚ್ 18ರ ವರೆಗೆ ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಚಿಕ್ಕಮಗಳೂರಿನ ರನ್ಯಾ 2014ರಲ್ಲಿ ‘ಮಾಣಿಕ್ಯ’ ಚಿತ್ರದ ಮೂಲಕ ಬಣ್ಣದ ಬದುಕು ಆರಂಭಿಸಿದ್ದರು. ನಟ ಗಣೇಶ್ ಎದುರು ನಾಯಕಿಯಾಗಿ ‘ಪಟಾಕಿ’ ಸಿನಿಮಾ ಹಾಗೂ ತಮಿಳು ಸಿನಿಮಾವೊಂದರಲ್ಲಿ ಆಕೆ ನಟಿಸಿದ್ದಾರೆ. ಆದರೆ, ವೃತ್ತಿ ಬದುಕಿನಲ್ಲಿ ಅಷ್ಟೇನೂ ಯಶಸ್ಸು ಗಳಿಸಲಿಲ್ಲ ಎಂದು ಹೇಳಲಾಗಿದೆ.

ಬಜೆಟ್ ರೈತರ ಹಿತ ಕಾಯಲಿ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಪರ ಬಜೆಟ್ ಮಂಡಿಸಲಿ. ರೈತರ ಸಂಕಷ್ಟಕ್ಕೆ ಸ್ಪಂದಿಸುವ ಸದ್ಬುದ್ಧಿಯನ್ನು ಚಾಮುಂಡೇಶ್ವರಿ ದೇವಿ ನೀಡಲೆಂದು ಪ್ರಾರ್ಥಿಸುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ತಾಲ್ಲೂಕಿನ ಕೊತ್ತತ್ತಿಯಲ್ಲಿ ಮಂಗಳವಾರ ಭತ್ತದ ಪೈರು ನಾಟಿ ಕಾರ್ಯಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಬಂದ ನಂತರ ಕಾವೇರಿ ಕೊಳ್ಳದ ರೈತರಿಗೆ ಅನ್ಯಾಯವಾಗಿದೆ. ತಮಿಳುನಾಡಿನ ಸ್ಟಾಲಿನ್ ಅವರನ್ನು ಖುಷಿ ಪಡಿಸಲು ಕದ್ದುಮುಚ್ಚಿ ಕಾವೇರಿ ನೀರು ಬಿಟ್ಟು ರಾಜ್ಯದ ರೈತರಿಗೆ ಅನ್ಯಾಯ ಮಾಡಿದೆ’ ಎಂದು ದೂರಿದರು.

‘ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ತಾಕತ್ತಿದ್ದರೆ ಮತ್ತೊಂದು ವಿ.ವಿ ಮಾಡಲಿ. ಆದರೆ ಕರ್ನಾಟಕಕ್ಕೆ ಕೊಟ್ಟ ಕೃಷಿ ವಿಶ್ವವಿದ್ಯಾಲಯವನ್ನು ಕಿತ್ತು ಇಲ್ಲಿಗೆ ತರುವ ಅವಶ್ಯಕತೆ ಇಲ್ಲ. ಈ ವಿಚಾರದಲ್ಲಿ ರಾಜಕಾರಣ ಮಾಡಬಾರದು’ ಎಂದು ಅವರು ಪ್ರತಿಕ್ರಿಯಿಸಿದರು.

ಸಿ.ಎಂ ನಿವಾಸ ನವೀಕರಣ: ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸ ನವೀಕರಣಕ್ಕೆ ಸೂಕ್ತ ಕಾರ್ಯ ವಿಧಾನ ಅನುಸರಿಸಲಾಗಿದೆಯೇ ಹಾಗೂ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆಯೇ ಎಂಬುದನ್ನು ಕಾಂಗ್ರೆಸ್ ಸ್ಪಷ್ಟಪಡಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಸುಧಾಂಶು ದ್ವಿವೇದಿ, ‘ಹಣಕಾಸು ಇಲಾಖೆಯ ಅನುಮೋದನೆ ಪಡೆಯದೇ ಮುಖ್ಯಮಂತ್ರಿ ನಿವಾಸದ ನವೀಕರಣ ನಡೆಸುತ್ತಿದ್ದರೆ ಅದು ಮಾದ್ಯಮ ಗಳಲ್ಲಿ ವರದಿಯಾಗಿದೆ. ಕಾರ್ಯವಿಧಾನ ಅನುಸರಿಸಿದ್ದರೆ ರಾಜ್ಯ ಸರ್ಕಾರವು ದಾಖಲೆಗಳನ್ನು ಬಹಿರಂಗಪಡಿಸಲಿ’ ಎಂದರು.

‘ಕಾಂಗ್ರೆಸ್‌ನ ಮಿತ್ರ ಪಕ್ಷ ಎಎಪಿಯು ದೆಹಲಿಯಲ್ಲಿ ಮುಖ್ಯಮಂತ್ರಿ ನಿವಾಸ ನವೀಕರಣ ಮಾಡಿತ್ತು. ಆದರೆ, ನಿಯಮಗಳನ್ನು ಉಲ್ಲಂಘಿಸಿ ಈ ಕಾರ್ಯ ಕೈಗೆತ್ತಿಕೊಳ್ಳಲಾಗಿತ್ತು. ಈ ವಿಷಯದಲ್ಲಿ ಕಾಂಗ್ರೆಸ್ ಸಹ ಎಎಪಿ ಹಾದಿಯಲ್ಲಿದೆ’ ಎಂದು ಟೀಕಿಸಿದರು.

‘ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಳವಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಆರೋಪಿಸಿದೆ. ಇದು ಕಳವಳಕಾರಿ ಹಾಗೂ ಅವಮಾನಕರ ಪರಿಸ್ಥಿತಿ. ಕಾಂಗ್ರೆಸ್ ಸರ್ಕಾರದಲ್ಲಿನ ಭಾರಿ ಭ್ರಷ್ಟಾಚಾರವನ್ನು ಗುತ್ತಿಗೆದಾರರ ಸಂಘ ಬಹಿರಂಗಪಡಿಸಿದೆ. ಕಾಂಗ್ರೆಸ್ ಪಕ್ಷವು ಎಲ್ಲ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ. ಭ್ರಷ್ಟಾಚಾರದಲ್ಲಿ ಮುಳುಗಿದೆ’ ಎಂದು ಅವರು ಆರೋಪಿಸಿದರು.

ತರಬೇತಿ ವೇಳೆ ಮಹಿಳೆಗೆ ಗುಂಡು

ಕೊಪ್ಪಳ: ತಾಲ್ಲೂಕಿನ ಬಿಜ್ಜಲಗುಡ್ಡ ಗ್ರಾಮದ ಬಳಿ ಕುಮ್ಮಟದುರ್ಗದ ಬಳಿ ಡಿಎಆರ್ ಪೊಲೀಸರು ಮಂಗಳವಾರ ಫೈರಿಂಗ್ ತರಬೇತಿ ವೇಳೆ ಆಕಸ್ಮಿಕವಾಗಿ ಮಹಿಳೆಗೆ ಗುಂಡು ತಗುಲಿದೆ. ಗಾಯಾಳು, ಕುರಿಗಾಹಿ ರೇಣುಕಮ್ಮ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ.16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು - 560 052. ದೂರವಾಣಿ : 080-22268677/78/79 ಫ್ಯಾಕ್ಸ್ : 080-22268667 ಇ-ಮೇಲ್ : kerc-ka@nic.in ವೆಬ್‌ಸೈಟ್ : https://kerc.karnataka.gov.in

ಸಂಖ್ಯೆ:ಕವಿನಿಆ/F-31/ವಾ-1402/1485 ದಿನಾಂಕ:04.03.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು-ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅನ್ವಯಿಕ ಸರ್ವೀಸಸ್) ವಿನಿಯಮಗಳು 2024 ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ದಿನಾಂಕ:19.03.2025 ಮಧ್ಯಾಹ್ನ 3.00 ಗಂಟೆಗೆ ಬುಧವಾರದಂದು,** ಆಯೋಗದ ಕೋರ್ಟ್‌ಹಾಲ್‌ನ ಒಂದನೆಯ ಮಹಡಿ, ನಂ.16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ. ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ವಾಸಾಸಂಇ/ಉನಿ-ಸಿ.ಪಿ/5441/ಕೆಎಸ್‌ಎಂಸಿಎ/2024-25 ಸಹಿ/- ಕಾರ್ಯದರ್ಶಿ, ಕ.ವಿ.ನಿ.ಆ.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560001

ಸಂಖ್ಯೆ:ಡಿಟಿಇ/03/ಎಂಟಿಎಸ್(2)/2025 ದಿನಾಂಕ: 03-03-2025

ಇ-ಟೆಂಡರ್ ಅಧಿಸೂಚನೆ

ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಈ ಕೆಳಕಂಡ ಹೊರಗುತ್ತಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ 08 ಎಸಿ ಕಾರುಗಳನ್ನು ಪಡೆಯುವ ಸಂಬಂಧ ಅರ್ಹ ಬಿಡ್‌ದಾರರಿಂದ ಇ-ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳು ಮತ್ತು ಇತರ ವಿವರಗಳಿಗಾಗಿ **http://kppp.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ಮಾಹಿತಿ ಈ ಕೆಳಗಿನಂತಿದೆ

ಟೆಂಡರ್ ಮಾಹಿತಿ	ಕೆಪಿಪಿ ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರಿ ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ಟೆಂಡರ್ ಸಂಖ್ಯೆ: ಡಿಟಿಇ/2024-25/ಎಸ್‌ಇ0003, ಹೊರಗುತ್ತಿಗೆಗೆ ಮಾಸಿಕ ಬಾಡಿಗೆ ಆಧಾರದ ಮೇಲೆ 08 ಎಸಿ ಕಾರುಗಳು	01.03.2025	12.03.2025 11.00 a.m.	17.03.2025 3.00 p.m.

The Department reserves the right to cancel or reject the tenders without any notification. Details in this regard may be obtained from the website **https://kppp.karnataka.gov.in.**

ಸಹಿ/- ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ

DIPR/CP/RO/5422/AAPL/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಕೆರೆಗಳು (ಮಹದೇವಪುರ) ರವರ ಕಛೇರಿ, # 306, 3ನೇ ಮಹಡಿ, ಅನೆಕ್ಸ್-3 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು - 560002

ಸಂ. ಕಾಅ/ಕೆರೆಗಳು-ಮಹದೇವಪುರ/ಟೆಂಡರ್-08/ತಿದ್ದುಪಡಿ-1/2024-25 ದಿನಾಂಕ : 04-03-2025

ತಿದ್ದುಪಡಿ - 1

ಟೆಂಡರ್ ಪ್ರಕಟಣೆ ಸಂ. ಕಾಅ/ಕೆರೆಗಳು-ಮದೇಪು/ಟೆಂಡರ್-08/2024-25 ದಿನಾಂಕ : 01-03-2025 ಗಾಗಿ ಉಲ್ಲೇಖ (1) ಅನ್ವಯ ಕೆಳಕಂಡಂತೆ ಪರಿಷ್ಕೃತ ವೇಳಾಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದಾಗಿ ನೀಡಲಾಗಿದೆ. ಕೆಳಕಂಡಂತೆ ದಿನಾಂಕಗಳನ್ನು ಪರಿಷ್ಕರಿಸಲಾಗಿದೆ.

ವೇಳಾಪಟ್ಟಿ :

ಕ್ರ	ವಿವರಣೆ	ಮುಂಚಿನ ಟೆಂಡರ್ ಪ್ರಕಟಣೆಗೆ ಅನುಸಾರವಾಗಿ	ವಿಸ್ತರಿಸಿದ ದಿನಾಂಕಗಳನ್ನು ಇದರಂತೆ ಓದಿಕೊಳ್ಳುವುದು
1	ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾದ ದಿನಾಂಕ	05-03-2025	06-03-2025
2	ಆಸಕ್ತಿ ವ್ಯಕ್ತಪಡಿಸುವಿಕೆಯ ಕೊನೆಯ ದಿನಾಂಕ	20-03-2025 ರಂದು 16:00 ಗಂಟೆಗೆ ಮುಂಚಿತವಾಗಿ	07-04-2025 ರಂದು 16:00 ಗಂಟೆಗೆ ಮುಂಚಿತವಾಗಿ
3	ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ತೆರೆಯುವ ದಿನಾಂಕ	21-03-2025 ರಂದು 16:30 ಗಂಟೆಯ ನಂತರ	08-04-2025 ರಂದು 16:30 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆರೆಗಳು-ಮಹದೇವಪುರ

ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ಆಯ್ಕೆ ಪ್ರಶ್ನಿಸಿದ್ದ ಅರ್ಜಿ

ಮರು ಮತ ಎಣಿಕೆ ವರದಿ ‘ಸುಪ್ರೀಂ’ಗೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಅವರ ಆಯ್ಕೆ ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿ ಮಾಡಿದೆ.

ಕ್ಷಮಾಯ ಕಣ್ಣದಲ್ಲಿ ನಡೆದ ಮರು ಮತ ಎಣಿಕೆ ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿ ಮೀನಾ ನಾಗರಾಜ್ ನ್ಯಾಯಾಲಯಕ್ಕೆ ಸಲ್ಲಿಸಿದರು. ವಾದ ಆಲಿಸಿದ ನ್ಯಾಯಪೀಠವು, ಪುರಸಭೆ, ಪಟ್ಟಣ ಪಂಚಾಯಿತಿಯ 12 ನಾಮನಿರ್ದೇಶಿತ ಸದಸ್ಯರ ಮತಗಳನ್ನು ಪರಿಗಣಿಸುವ ಬಗ್ಗೆ ಆಯೋಗದಿಂದ ಮಾಹಿತಿ ಕೇಳಿತು. ವಿಚಾರಣೆಯನ್ನು 25ಕ್ಕೆ ಮುಂದೂಡಲಾಯಿತು.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ 2021ರ ಡಿ.10ರಂದು ಮತದಾನ ನಡೆದಿತ್ತು. ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ ಸೇರಿ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಮತದಾನ ಮಾಡಿದ್ದರು.

2021ರ ಡಿ. 14ರಂದು ಮತ ಎಣಿಕೆ ನಡೆದಿತ್ತು. ಚಲಾವಣೆಯಾದ 2,410 ಮತಗಳ ಪೈಕಿ 39 ಮತ ಅಸಿಂಧುವಾಗಿದ್ದವು. ಬಾಕಿ 2,371 ಮತ ಸಿಂಧು ಆಗಿದ್ದವು. ಅವುಗಳ ಪೈಕಿ ಬಿಜೆಪಿಯ ಎಂ.ಕೆ. ಪ್ರಾಣೇಶ್ 1,188 ಮತ ಪಡೆದಿದ್ದರು. ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ 1,182 ಮತ ಪಡೆದಿದ್ದರು. ಪ್ರಾಣೇಶ್ ಆರು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಣೆ ಮಾಡಿದ್ದರು.

ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಮೂಡಿಗೆರೆ ಪಟ್ಟಣ ಪಂಚಾಯಿತಿಗಳ ಒಟ್ಟು 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ಇಲ್ಲ ಎಂದು ಗಾಯತ್ರಿ ಶಾಂತೇಗೌಡ ನ್ಯಾಯಾಲಯದ ಮೆಟ್ಟಿಲೇರಿದ್ದರು. 12 ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮರು ಎಣಿಕೆ ಮಾಡಿ ವರದಿ ಕಳುಹಿಸುವಂತೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಸೂಚನೆ ನೀಡಿದ್ದವು.

ಯಾವ ನೈತಿಕತೆ ಮೇಲೆ ಹೋರಾಟ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಪರಿಶಿಷ್ಟರ ನಿಧಿಯನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿದೆ ಎಂದು ಆರೋಪಿಸಿ ಬಿಜೆಪಿಯವರು ಯಾವ ನೈತಿಕತೆ ಮೇಲೆ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮಹಾರಾಷ್ಟ್ರ ಸರ್ಕಾರ ಸಾಲ ಮನ್ನಾ ಮಾಡಲು ಪರಿಶಿಷ್ಟರ ಹಣವನ್ನು ಬಳಸಿದೆ. ಈ ಬಗ್ಗೆ ಬಿಜೆಪಿಯವರು ಏನು ಹೇಳುತ್ತಾರೆ’ ಎಂದು ಕೇಳಿದರು.

ಅಲ್ಲದೆ, ಬಿಜೆಪಿ ಅಧಿಕಾರದಲ್ಲಿರುವ ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್‌ನಲ್ಲಿ ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ಅನುದಾನದ ಪಟ್ಟಿಯನ್ನು ಅವರು ಬಿಡುಗಡೆ ಮಾಡಿದರು.

‘ಕೇಂದ್ರ ಸರ್ಕಾರ ಕೂಡ ಪರಿಶಿಷ್ಟರ ₹1.65 ಲಕ್ಷ ಕೋಟಿಯನ್ನು ಅನ್ಯ ಉದ್ದೇಶಕ್ಕೆ ಬಳಸಿದೆ. ಈ ಬಗ್ಗೆ ಪ್ರಧಾನಿಯನ್ನು ಪ್ರಶ್ನಿಸುತ್ತೀರಾ’ ಎಂದು ಬಿಜೆಪಿ ನಾಯಕರನ್ನು ಕೇಳಿದರು.

‘ಪರಿಶಿಷ್ಟರ ಕಲ್ಯಾಣ ಉದ್ದೇಶದಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯಡಿ ರಾಜ್ಯ ಸರ್ಕಾರ ಒದಗಿಸಿ ಅನುದಾನಕ್ಕೆ ಸಂಬಂಧಿಸಿದಂತೆ ಬಿಜೆಪಿಯವರು ಕೆಲವು ತಿಂಗಳಿಂದ ತಪ್ಪು, ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ಪರಿಶಿಷ್ಟ ಕಲ್ಯಾಣಕ್ಕೆ ತಮ್ಮ ಕೊಡುಗೆ ಏನು ಎನ್ನುವುದನ್ನು ಬಿಜೆಪಿಯವರು ವಿವರಿಸಲಿ’ ಎಂದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟಿದ್ದ ಹಣ ದುರುಪಯೋಗ ಆಗಿತ್ತು. ಆ ಕಾರಣಕ್ಕೆ ಕಾಯ್ದೆಯ 7ಡಿ ಸೆಕ್ಷನ್ ಅನ್ನು ನಮ್ಮ ಸರ್ಕಾರ ರದ್ದು ಮಾಡಿದೆ. ತಮ್ಮ ಅವಧಿಯಲ್ಲಿ ಈ ಕಾಯ್ದೆಯನ್ನು ಬಿಜೆಪಿಯವರು ಏಕೆ ರದ್ದುಪಡಿಸಲಿಲ್ಲ’ ಎಂದೂ ಪ್ರಶ್ನಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, (ಕೆರೆಗಳು-ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ), ಕೊಠಡಿ ಸಂಖ್ಯೆ.309, 3ನೇ ಮಹಡಿ, ಅನೆಕ್ಸ್ ಕಟ್ಟಡ-3, ಎನ್.ಆರ್ ಚೌಕ, ಬೆಂಗಳೂರು - 560 002.

ಸಂಖ್ಯೆ:ಕಾಪಾಅ(ಕೆರೆಗಳು-ಬೋವಿ)/ಟೆಂಡರ್/07/ತಿದ್ದುಪಡಿ-1/2024-25 ದಿನಾಂಕ: 04-03-2025

ತಿದ್ದುಪಡಿ-01

ವಿಷಯ : ಟೆಂಡರ್ ಅಧಿಸೂಚನೆಯ ಪರಿಷ್ಕೃತ ದಿನಾಂಕ ಸಂಖ್ಯೆ: ಕಾಪಾಅ(ಕೆರೆಗಳು-ಬೋವಿ)/ಟೆಂಡರ್/07/2024-25, ದಿನಾಂಕ: 01-03-2025

ಉಲ್ಲೇಖ: 1. ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ಕಾಪಾಅ(ಕೆರೆಗಳು-ಬೋವಿ)/ಟೆಂಡರ್/07/2024-25, ದಿನಾಂಕ: 01-03-2025

ಟೆಂಡರ್ ಅಧಿಸೂಚನೆ ಕಾಪಾಅ(ಕೆರೆಗಳು-ಬೋವಿ)/ಟೆಂಡರ್/07/2024-25, ದಿನಾಂಕ: 01-03-2025ರ ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಕಂಡಂತೆ ಪರಿಷ್ಕೃತ ದಿನಾಂಕವನ್ನು ತಿದ್ದುಪಡಿ ಮಾಡಲಾಗಿದೆ.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟ್‌ಲ್‌ನಿಂದ **ದಿನಾಂಕ: 05-03-2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)** ಪೂರ್ವ ಬಿಡ್ ಸಭೆಯನ್ನು **ದಿನಾಂಕ: 14-03-2025 ರಂದು ಸಂಜೆ 4.00 ಗಂಟೆಗೆ** ನಡೆಸಲಾಗುವುದು. **3)** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04-04-2025 ಸಂಜೆ 4.00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 05-04-2025 ಸಂಜೆ 4.30 ಗಂಟೆಗೆ. 5)** ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು. ಟೆಂಡರ್‌ನ ಉಳಿದ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ, ಬೃಬೆಂಮಪಾ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ. ರಜತಾದ್ರಿ, ಮಣಿಪಾಲ

Email ID: ad@udupitourism.com ದೂರವಾಣಿ ಸಂಖ್ಯೆ: 0820-2574868

ಸೆಕ್ಷನ್ 1. ಟೆಂಡರ್ ಆಹ್ವಾನ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ

ಆದಾಯ ಹಂಚಿಕೆ ಆಧಾರದಲ್ಲಿ ಉಡುಪಿ ತಾಲೂಕು ಮಟ್ಟು ಕಡಲ ತೀರದಿಂದ ಸೀ ಕಯಾಕ್ ಮೂಲಕ ಮಟ್ಟು ಐಲ್ಯಾಂಡ್ ಗೆ ಸಾಹಸ ಪ್ರವಾಸ ಹಾಗೂ ಮಟ್ಟು ಐಲ್ಯಾಂಡ್ ನಲ್ಲಿ ಪ್ರವಾಸೋದ್ಯಮ ಚಟುವಟಿಕೆ ನಡೆಸಲು 03 ವರ್ಷಗಳ ಅವಧಿಗೆ ಖಾಸಗಿಯವರಿಗೆ ನೀಡಲು ದ್ವಿ-ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ.

(1) ಟೆಂಡರ್ ಉಲ್ಲೇಖ: ಪ್ರಇ/ಸನಿಕ/ಉಜಿ/ಮ/86/2024-25/ ದಿನಾಂಕ: 15-02-2025 (2) ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಸಲ್ಲಿಸುವ ಪ್ರಾರಂಭ **ದಿನಾಂಕ: 04-03-2025** (3) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಯನ್ನು ಸಲ್ಲಿಸುವ ಕೊನೆಯ **ದಿನಾಂಕ: 21-03-2025 ಸಂಜೆ: 3.45 ಗಂಟೆಗೆ** (4) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **24-03-2025 ಸಂಜೆ 3.50 ಗಂಟೆ** (5) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **26-03-2025 ಸಂಜೆ 4.00 ಗಂಟೆ** (6) ಟೆಂಡರ್ ತೆರೆಯುವ ಸ್ಥಳ: ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಉಡುಪಿ ರಜತಾದ್ರಿ (7) EMD ಮೊತ್ತ: **ರೂ.50,000** (8) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ: **https: kppp.karnataka.gov.in** (9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರಜತಾದ್ರಿ, ಮಣಿಪಾಲ “ಎ” ಬ್ಲಾಕ್, ಎರಡನೇ ಮಹಡಿ, ಕೊಠಡಿ ಸಂಖ್ಯೆ: 303 **ದೂರವಾಣಿ: 0820-2574868**

ಸಹಿ/- (ಡಾ.ಕೆ.ವಿದ್ಯಾ ಕುಮಾರಿ. ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಉಡುಪಿ ಜಿಲ್ಲೆ, ಮಣಿಪಾಲ

ವಾಸಾಇ/ಉಡುಪಿ/ಕೆಎಸ್‌ಎಂಸಿಎ/776/24-25 ದಿ: 04.03.2025

ಹಕ್ಕಿ ಜ್ವರ: ರಂಗನತಿಟ್ಟಿನಲ್ಲಿ ಪರಿಶೀಲನೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ರಂಗನತಿಟ್ಟು ಪಕ್ಷಿಧಾಮಕ್ಕೆ ಪಶು ವೈದ್ಯಕೀಯ ಇಲಾಖೆಯ ಕ್ಷಿಪ್ರ ಕಾರ್ಯಪಡೆ ತಂಡ ಮಂಗಳವಾರ ಭೇಟಿ ನೀಡಿತು.

ಇಲಾಖೆಯ ಸಹಾಯಕ ನಿರ್ದೇಶಕ ಡಾ.ಜಿ.ಜೆ.ಸುರೇಶ್ ನೇತೃತ್ವದ ತಂಡ ಪಕ್ಷಿಗಳ ಚಲನ ವಲನ ಕುರಿತು ಪಕ್ಷಿಧಾಮದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಜತೆ ಚರ್ಚೆ ನಡೆಸಿತು. ಹಕ್ಕಿಗಳ ಹಿಕ್ಕೆಯನ್ನು ಸಂಗ್ರಹಿಸಿತು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667 ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಡಿಡಿಡಿ/ಸಿ.ಜಿ.ಆರ್.ಎಫ್/1254/2024-25/1583 ದಿನಾಂಕ: 04.03.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾಗೂ ಓಂಬುಡ್ಸ್‌ಮನ್) ವಿನಿಯಮಗಳು, (ಮೂರನೇ ತಿದ್ದುಪಡಿ) 2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾಗೂ ಓಂಬುಡ್ಸ್‌ಮನ್) ವಿನಿಯಮಗಳು (ಮೂರನೇ ತಿದ್ದುಪಡಿ) 2025ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 20.01.2025 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲತಾಣ **https://kerc.karnataka.gov.in** ನಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಯೋಗವು **ದಿನಾಂಕ: 19.03.2025ರಂದು ಮಧ್ಯಾಹ್ನ 2.30ಕ್ಕೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು** ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂಚೆ ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/5442/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಎಸ್‌ಡಬ್ಲ್ಯೂಡಿ - ದಕ್ಷಿಣ ವಲಯ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು - 560011.

ಸಂಖ್ಯೆ:ಕಾಅ/ಎಸ್‌ಡಬ್ಲ್ಯೂಡಿ/ದಕ್ಷಿಣ/ಟೆಂಡರ್/01/2024-25 ದಿನಾಂಕ: 04-03-2025

ಟೆಂಡರ್ ತಿದ್ದುಪಡಿ

ವಿಷಯ: ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುವ ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಮೊತ್ತವನ್ನು ತಿದ್ದುಪಡಿ ಮಾಡಿರುವ ಬಗ್ಗೆ.

ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ: ಕಾಅ/ಎಸ್‌ಡಬ್ಲ್ಯೂಡಿ/ದಕ್ಷಿಣ/ಟೆಂಡರ್/01/2024-25, ದಿನಾಂಕ: 03-03-2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಂತೆ ಪ್ರಕಟಿಸಲಾಗಿರುವ ಟೆಂಡರ್ ಪ್ರಕಟಣೆಯಲ್ಲಿ ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ ಮೊತ್ತವನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ತಿದ್ದುಪಡಿ ಮಾಡಲಾಗಿರುವ ಟೆಂಡರ್ ಮೊತ್ತ ಹಾಗೂ ಇ.ಎಂ.ಡಿ ಮೊತ್ತ

ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): **1425.00,** ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): **ರೂ. 1,00,000/- ಕೆಪಿಪಿ ಪೋರ್ಟಲ್ ಮೂಲಕ ಹಾಗೂ ರೂ. 13,25,000/- ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ - ದಕ್ಷಿಣ ವಲಯ) ಇವರ ಹೆಸರಿಗೆ ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸುವುದು.**

ಸಹಿ/- ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ-ದಕ್ಷಿಣ ವಲಯ, ಬಿಬಿಎಂಪಿ.

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-01, 3ನೇ ಮಹಡಿ, ಟಿಟಿಎಂಸಿ, ಬಿಎಂಟಿಸಿ ಕಟ್ಟಡ, ಯಶವಂತಪುರ, ಬೆಂಗಳೂರು-560 022. ದೂ: 080-23570382, ಇ-ಮೇಲ್: **jcctdgsto1.bng@ctd.ka.gov.in**

ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ-1/ಬಿಎಮ್/ಸಿಆರ್-11/2024-25 ದಿನಾಂಕ: 03.03.2025

ಸಾಮಾನ್ಯ ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-1, ಯಶವಂತಪುರ, ಬೆಂಗಳೂರು ಇವರ ವಿಭಾಗದ ಕಛೇರಿ ಕರ್ತವ್ಯ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ 12 ಖಾಸಗಿ ವಾಹನಗಳನ್ನು (ಹಳದಿ ಬೋರ್ಡ್ ಹೊಂದಿರುವ 2018 ಮತ್ತು ನಂತರದ ವರ್ಷದಲ್ಲಿ ತಯಾರಾದ ವಾಹನಗಳು) ಸರಬರಾಜು ಮಾಡಲು ಟ್ರಾವೆಲ್ ಏಜೆನ್ಸಿ ಅಥವಾ ಮಾಲೀಕರೇ ಚಾಲಕರಾಗಿರುವವರಿಂದ ಮೊಹರಾದ ಲಕೋಟೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಮತ್ತು ಟೆಂಡರ್ ಅಧಿಸೂಚನೆಯನ್ನು ಈ ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಅರ್ಜಿಯನ್ನು ಮೊಹರಾದ ಲಕೋಟೆಯಲ್ಲಿ ಸಲ್ಲಿಸಲು ಅಂತಿಮ ದಿನಾಂಕ: **15.03.2025.**

ಹೆಚ್ಚಿನ ವಿವರಗಳಿಗಾಗಿ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂ.ಕ), ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿ.ಸ&ಸೇ.ತೆ.ಕ-01, ಯಶವಂತಪುರ, ಬೆಂಗಳೂರು ಇವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-1, ಯಶವಂತಪುರ, ಬೆಂಗಳೂರು-560022.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜರಾಜೇಶ್ವರಿನಗರ ವಿಭಾಗ-ಕೆರೆಗಳು, ಎನ್.ಆರ್. ಚೌಕ, ಬೆಂಗಳೂರು-560 002

ನಂ.: ಕಾಪಾಅ/ರಾರಾನ/ಟೆಂಡರ್/08/2024-25 ದಿನಾಂಕ: 04.03.2025

ಆಸಕ್ತಿ ವ್ಯಕ್ತಪಡಿಸುವಿಕೆ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಬೆಂಗಳೂರು ನಗರದ ಕೆರೆಗಳಲ್ಲಿ ನೀರಿನ ಗುಣಮಟ್ಟವನ್ನು ಸುಧಾರಿಸಲು ಜೈವಿಕ ಕಿಣ್ವಗಳನ್ನು ಸರಬರಾಜುಮಾಡಲು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) 2006 ರಿಂದ ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ 132 ಕೆರೆಗಳನ್ನು ಅಭಿವೃದ್ಧಿಪಡಿಸಿದ್ದು, ಅವುಗಳನ್ನು ಕೊಳಚೆ ನೀರು ಮುಕ್ತಗೊಳಿಸಿದೆ. ಮಳೆಗಾಲದಲ್ಲಿ ಕೊಳಚೆ ನೀರು ಮಳೆನೀರಿನ ಚರಂಡಿಯ ಮೂಲಕ ಕೆರೆಗಳನ್ನು ಪ್ರವೇಶಿಸುತ್ತದೆ.

ಇದರಿಂದ ಉಂಟಾಗುವ ದುರ್ವಾಸನೆಯನ್ನು ನಿಯಂತ್ರಿಸಲು ಪರಿಸರ ಸ್ನೇಹಿ, ಅಪಾಯಕಾರಿಯಲ್ಲದ ಮತ್ತು ಜೈವಿಕವಾಗಿ ವಿಘಟನೀಯ ಜೈವಿಕ ಕಿಣ್ವಗಳನ್ನು ಬಳಸುವ ಮೂಲಕ ಬೆಂಗಳೂರು ನಗರದ ಕೆರೆಗಳಲ್ಲಿ ನೀರಿನ ಗುಣಮಟ್ಟವನ್ನು ಸುಧಾರಿಸಲು ಬಿಬಿಎಂಪಿಯು ಉದ್ದೇಶಿಸಿದೆ.

ಸಂಸ್ಥೆಯು ತಮ್ಮ ತಾಂತ್ರಿಕ ಪ್ರಸ್ತಾವನೆಯ ಬಗ್ಗೆ ವಿವರವಾದ ಪ್ರಸೆಂಟೇಷನ್ ಅನ್ನು ನೀಡಬೇಕು. ತಾಂತ್ರಿಕವಾಗಿ ಅರ್ಹತೆ ಪಡೆದವರಿಂದ ಆರ್ಥಿಕ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗುತ್ತದೆ. ಆಯ್ದ ಏಜೆನ್ಸಿ/ವ್ಯಕ್ತಿಗಳು ತಮ್ಮ ತಾಂತ್ರಿಕ ಪ್ರಸ್ತಾವನೆಯ ವಿವರವಾದ ಪ್ರಸೆಂಟೇಷನ್ ಅನ್ನು ಮೌಲ್ಯಮಾಪನ ಸಮಿತಿಗೆ ನೀಡಬೇಕು.

ವೇಳಾಪಟ್ಟಿ: (1) ತಾಂತ್ರಿಕ ಅನುಮೋದನೆಗೆ ಸೀಲ್‌ಮಾಡಲಾದ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18.03.2025ರ ಸಂಜೆ 4:00 ಗಂಟೆವರೆಗೆ. (2)** ಅರ್ಹ ಏಜೆನ್ಸಿ/ವ್ಯಕ್ತಿಗಳಿಗೆ ಪ್ರಸೆಂಟೇಷನ್ ನೀಡಲು ತಿಳಿಸುವುದು: **ತಾಂತ್ರಿಕ ಅನುಮೋದನೆಯ ನಂತರ.**

ಹೆಚ್ಚಿನ ಮಾಹಿತಿಗಾಗಿ ಆಸಕ್ತ ಏಜೆನ್ಸಿ/ವ್ಯಕ್ತಿಗಳು ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಬಿಎಂಪಿ, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬೆಂಗಳೂರು-560002ರವರನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ರಾರಾ ನಗರ ವಿಭಾಗ - ಕೆರೆಗಳು, ಬಿಬಿಎಂಪಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 10 ದಿನಾಂಕ: 04/03/2025

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು ಮಾಡಲು / ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in.** ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ-ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ @17.00 ಗಂಟೆ
KSRTC/2024-25/IND189	ಸಪ್ಲೈ, ಇನ್ಸ್ಟಲೇಶನ್ & ಕಮೀಶನಿಂಗ್ ಆಫ್ ಆರ್‌ಓ ವಾಟರ್ ಪ್ಯೂರಿ ಫೈಯರ್ ಪ್ಲಾಟ್ಸ್‌ಗಳನ್ನು ನಿಗಮದ ವಿಭಾಗಗಳಲ್ಲಿ ಮತ್ತು ಪ್ರಾದೇಶಿಕ ಕಾರ್ಯಾಗಾರಗಳಲ್ಲಿ (ಟರ್ನ್‌ಕೀ ಆಧಾರದ ಮೇಲೆ)	2.10	04/04/2025
KSRTC/2024-25/IND0191	ಮ್ಯಾಪಲಿತೊ ಪೇಪರ್	0.40	18/03/2025
KSRTC/2024-25/IND0192	ಕೊರೊಗೇಟೆಡ್ ಭಾಕ್ಸ್‌ಗಳ ಖರೀದಿ	0.07	18/03/2025
KSRTC/2024-25/IND0193	ಎಂ.ಎಸ್. ಆಂಗ್ಯಲ್ಸ್ ಮತ್ತು ಫ್ಲಾಟ್ಸ್‌ಗಳ ಖರೀದಿ	0.48	04/04/2025
KSRTC/2024-25/IND0194	ಬ್ರೆಕ್ಸ್ ಮತ್ತು ಬ್ರೆಕ್ಸ್ ಬಿಡಿ ಭಾಗಗಳ (ಸ್ಲಾಕ್ ಅಡ್ಜಸ್ಟರ್) ಅಸೆಂಬ್ಲಿಗಳ ಖರೀದಿ	6.00	04/04/2025
KSRTC/2024-25/IND0195	ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಲ್ಯಾಪ್‌ಟಾಪ್, ಸರ್ವರ್ ಮತ್ತು ವೈಫೈ ರೂಟರ್‌ಗಳು	2.00	04/04/2025
KSRTC/2024-25/IND0196	ಅಶ್ವಮೇಧ ಬಿಎಸ್ VI ವಾಹನಗಳಿಗೆ ಪರಿಕರಗಳು (ಪ್ಲಾಸ್ಟಿಕ್ ಬ್ಯಾಕ್ ಪ್ಯಾಡ್, ಟಿ-ಟೈಪ್ ಬಾಟಲ್ ಹೊಲ್ಡರ್, ಮ್ಯಾಗಜೀನ್ ಪೌಚ & ಗ್ರಾಬ್ ಹ್ಯಾಂಡಲ್).	0.48	04/04/2025
ಅಲ್ಪಾವಧಿ ಟೆಂಡರ್			
KSRTC/2024-25/IND0196	ಲಿಕ್ವಿಡ್ ಯೂರಿಯಾ AUS – 32 ಖರೀದಿ	9.20	13/03/2025
KSRTC/2024-25/IND0197	ಸಪ್ಲೈ, ಇನ್ಸ್ಟಲೇಶನ್ & ಕಮೀಶನಿಂಗ್ ಆಫ್ ಸ್ಕ್ರ್ಯೂ ಟೈಪ್ ಏರ್ ಕಂಪ್ರೆಸರ್ ಮತ್ತು ನೈಟ್ರೋಜನ್ ಜನರೇಶನ್ ಇನ್‌ಫ್ಲೇಟರ್ ಸುಟೆಬಲ್ ಫಾರ್ ಟೈರ್ ಫಿಲ್ಲಿಂಗ್ ಆಫ್ ಪ್ಯಾಸೆಂಜರ್ ಬಸ್ (ಟರ್ನ್‌ಕೀ ಆಧಾರದ ಮೇಲೆ)	2.00	11/03/2025

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ, ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿ ಸಲಾಗುವುದು.

ಸೂಚನೆ:-ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in.** ಅಥವಾ ದೂರವಾಣಿ ಸಂಖ್ಯೆ: 080-46010000/080-68948777, ಕರೆಮಾಡಿ **support@eprochelpdesk.com,** ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ಡುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ **cosp@ksrtc.org**ನಲ್ಲಿ ಸಂಪರ್ಕಿಸ ಬಹುದಾಗಿದೆ. (ಸಂಪರ್ಕಿಸಿ: 7760990225, 7760990224)

ಸಹಿ/-
ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/5447/2024-25

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ-584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ. ದೂರವಾಣಿ: 08537-275463, 276339, ಇ-ಮೇಲ್: **material276339@gmail.com** ವೆಬ್‌ಸೈಟ್: **www.huttigold.karnataka.gov.in**

ಟೆಂಡರ್ ಪ್ರಕಟಣೆ ನಂ.24/ 24-25 ದಿನಾಂಕ: 05.03.2025 (KPPP ಮುಖಾಂತರ ಮಾತ್ರ)

ಹಿರಿಯ ವ್ಯವಸ್ಥಾಪಕರು (ಸರಕು) ಇವರಿಂದ ಈ ಕೆಳಗಿನ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿ ವಿವರ	ಇ.ಎಂ.ಡಿ. ಮೊತ್ತ. ರೂ.ಗಳಲ್ಲಿ
1	3 ಸಂ.ಗಳಲ್ಲಿ 11ಮೀ. ವ್ಯಾಸದ ಅಜಿಟೇಟರ್ ಟ್ಯಾಂಕ್ ಫೌಂಡೇಶನ್‌ನ ನಿರ್ಮಾಣ. **HGML/2024-25/OW/WORK_INDENT92.**	1,98,000/-
2	ವೇರಿಯಬಲ್ ಫ್ರೀಕ್ವೆನ್ಸಿ ಡ್ರೈವ್‌ಗಳ ಪೂರೈಕೆ. **HGML/2024-25/IND0281.**	22,500/-
3	ವಿಂಡರ್ ವ್ಯವಸ್ಥೆಗಾಗಿ ಪವರ್ ಮಾಡ್ಯೂಲ್ ಬಿಡಿಭಾಗಗಳ ಪೂರೈಕೆ. **HGML/2024-25/IND0285.**	52,000/-
4	ಇಂಜಿನಿಯರಿಂಗ್ ಅಧಿಕಾರಿಗಳಿಗೆ (ಎಸ್‌ಟಿ ವರ್ಗ) ಕಚೇರಿ ಕಟ್ಟಡಗಳ ನಿರ್ಮಾಣ **HGML/2024-25/BD/WORK_INDENT95.**	49,000/-
5	ಆಫೀಸರ್ಸ್ ಕ್ಲಬ್‌ನಲ್ಲಿ ಪೇವರ್ ಹಾಕುವ ಕೆಲಸ. **HGML/2024-25/OW/WORK_INDENT91.**	27,500/-
6	ದೂರವಾಣಿ ವಿನಿಮಯ ಕೊಠಡಿಗೆ ವಿಸ್ತರಣೆ (ಎಸ್‌ಸಿ ವರ್ಗ). **HGML/2024-25/BD/WORK_INDENT94.**	11,000/-
7	ಎಕ್ಸಿಕ್ಯೂಟಿವ್ ಹಾಸ್ಟೆಲ್‌ನ ನವೀಕರಣ. **HGML/2024-25/BD/WORK_INDENT97.**	60,000/-
8	ಸಾರಿಗೆ ವಿಭಾಗಕ್ಕೆ ವಿವಿಧ ಗಾತ್ರದ ಟೈರ್‌ಗಳ ಪೂರೈಕೆ. **HGML/2024-25/IND0283.**	89,000/-
9	ಡಿಟೋನೇಟಿಂಗ್ ಫ್ಯೂಸ್ 10ಗ್ರಾಂ/ಮೀ. ಪೂರೈಕೆ. **HGML/2024-25/IND0278.**	1,10,000/-
10	18 ಅಡಿಯಿಂದ 20 ಅಡಿ ಉದ್ದದ ಬಿದಿರು ಪೂರೈಕೆ. **HGML/2024-25/IND0211/CALL-2.**	36,000/-
11	ಯುಜಿ ಕ್ರೂಷರ್ ಬಳಕೆಗಾಗಿ ಜಾವ್ ಪ್ಲೇಟ್‌ಗಳ ಪೂರೈಕೆ. **HGML/2024-25/IND0286.**	76,000/-
12	ಯುಜಿ ಕ್ರೂಷರ್ ವ್ಯವಸ್ಥೆಗಾಗಿ ಕನ್ವೇಯರ್ ಬೆಲ್ಟ್‌ಗಳ ಪೂರೈಕೆ. **HGML/2024-25/IND0279.**	55,000/-
13	2 ಲಕ್ಷ ಲೀಟರ್ ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕ್‌ಗಳ ನಿರ್ಮಾಣ. **HGML/2024-25/WS/WORK_INDENT93.**	1,60,000/-

ವೇಳಾ ಪಟ್ಟಿ: (1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **17-03-2025 ರಂದು ಸಂಜೆ 4.00 ಗಂಟೆಗೆ. (2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **19-03-2025 ರಂದು ಬೆಳಿಗ್ಗೆ 10.00 ಗಂಟೆಗೆ.** ಆಸಕ್ತಿವುಳ್ಳವರು ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www.kppp.karnataka.gov.in** ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಕೆಳಗೆ ನಮೂದಿಸಿದ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು KPPP ನೊಂದಾಯಿತರಾಗಿರಬೇಕು.

ಸಹಿ /-ಹಿರಿಯ ವ್ಯವಸ್ಥಾಪಕರು (ಸರಕು)

ಭಾರತದ ಪ್ರಮುಖ ಚಿನ್ನದ ಉತ್ಪಾದಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

Ref: No. No: EE/ UTP /RNR/Restoration & Protection Wall Works/SD-3/ PB-1/2024-25/ 2672 Date: 13-02-2025

(ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ)
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ ದ್ವಿ - ಲಕೋಟೆ ಪದ್ಧತಿ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಕಾಲುವೆ ರೆಸ್ಟೋರೇಶನ್ ಹಾಗೂ ಪ್ರೊಟೆಕ್ಷನ್ ವಾಲ್ ಗಳ 02 ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ಯು.ಟಿ.ಪಿ. ಎಂ. & ಎಂ.ಐ. ರಡಿ ಕಾಮಗಾರಿಯ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ. ಸದರಿ 02 ಕಾಮಗಾರಿಗಳ ಟೆಂಡರ್ ಮೊತ್ತ ರೂ. 169.20 ಲಕ್ಷಗಳಿಂದ ರೂ:495.04 ಲಕ್ಷಗಳ ವರೆಗೆ (GST ಸೇರಿ) ಇರುತ್ತದೆ. ಮತ್ತು ಇ.ಎಂ.ಡಿ ಮೊತ್ತವು ರೂ:2.15 ಲಕ್ಷಗಳಿಂದ ರೂ:6.30 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.in ನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 05-03-2025 ರಿಂದ 14-03-2025 ರ ಸಂಜೆ 5.00 ರ ವರೆಗೆ (2) ಪ್ರೀ - ಬಿಡ್ ಮೀಟಿಂಗ್ ದಿನಾಂಕ:13-03-2025 ಮುಂಜಾನೆ 11.30 (3) ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 13-03-2025 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 14-03-2025 ರ ಸಂಜೆ 5.00 ರ ವರೆಗೆ (5) ದಿನಾಂಕ 15-03-2025 ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ,
ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

1786

❦ ಸುಭಾಷಿತ ❦
ಇತಿಹಾಸವು ಒಂದು ರಾತ್ರಿಯ ನಾಟಕವಲ್ಲ, ಶತಾನುಶತಕದ ಉದ್ಭವ, ಅದ್ಭುತ.
-ದ.ರಾ.ಬೇಂದ್ರೆ

ಜಿಡಿಪಿ ಬೆಳವಣಿಗೆ ಆಶಾದಾಯಕ ಅನಿಶ್ಚಿತ ಸ್ಥಿತಿಯಿಂದಾಗಿ ಸಮಸ್ಯೆ?

ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಪ್ರಸಕ್ತ ಆರ್ಥಿಕ ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಶೇಕಡ 6.2ಕ್ಕೆ ಹೆಚ್ಚಳವಾಗಿದೆ. ಎರಡನೆಯ ತ್ರೈಮಾಸಿಕದಲ್ಲಿ ಬೆಳವಣಿಗೆ ದರವು ಪರಿಷ್ಕೃತ ಅಂದಾಜಿನ ಪ್ರಕಾರ ಶೇ 5.6ರಷ್ಟು ಇತ್ತು. ಈ ಬೆಳವಣಿಗೆಯು ಸಂಪೂರ್ಣವಾಗಿ ಅನಿರೀಕ್ಷಿತವೇನೂ ಅಲ್ಲ. ಆರ್ಥಿಕ ಬೆಳವಣಿಗೆಯನ್ನು ಹೇಳುವ ಹಲವು ಸೂಚಕಗಳು ಈ ಪ್ರಮಾಣದ ಬೆಳವಣಿಗೆಯ ಸಾಧ್ಯತೆಯನ್ನು ಹೇಳಿದ್ದವು. ಅವು ಹೇಳಿದ್ದನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಕಳೆದ ವಾರ ಬಿಡುಗಡೆ ಮಾಡಿದ ಅಂಕಿ-ಅಂಶಗಳು ದೃಢಪಡಿಸಿವೆ. ಮೂರನೆಯ ತ್ರೈಮಾಸಿಕದಲ್ಲಿ ಆಗಿರುವ ಸುಧಾರಣೆಯು ಈ ವರ್ಷದ ಡಿಸೆಂಬರ್‌ವರೆಗಿನ ಬೆಳವಣಿಗೆಯನ್ನು ಶೇ 6.1ಕ್ಕೆ ತಂದಿರಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಒಟ್ಟು ಆರ್ಥಿಕ ಬೆಳವಣಿಗೆಯು ಶೇ 6.5ರಷ್ಟು ಇರಲಿದೆ ಎಂದು ಎನ್‌ಎಸ್‌ಒ ತನ್ನ ಅಂದಾಜನ್ನು ಪರಿಷ್ಕರಿಸಿದೆ. ಬೆಳವಣಿಗೆ ದರವನ್ನು ಮೊದಲಿನ ಅಂದಾಜು ಶೇ 6.4ಕ್ಕೆ ನಿಗದಿಪಡಿಸಿತ್ತು. ಕಳೆದ ಆರ್ಥಿಕ ವರ್ಷದಲ್ಲಿ (2023-24) ದೇಶದ ಅರ್ಥ ವ್ಯವಸ್ಥೆಯು ಶೇ 9.2ರಷ್ಟು ಬೆಳವಣಿಗೆ ಕಂಡಿದೆ ಎಂದು ಪರಿಷ್ಕೃತ ಅಂದಾಜು ಹೇಳುತ್ತಿದೆ. ಆದರೆ ಈಚಿನ ಕೆಲವು ತ್ರೈಮಾಸಿಕಗಳಲ್ಲಿ ಬೆಳವಣಿಗೆ ದರದಲ್ಲಿ ಒಂದಿಷ್ಟು ಇಳಿಕೆ ಆಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 6.5ರಷ್ಟು ಬೆಳವಣಿಗೆ ಆಗಬೇಕು ಎಂದಾದರೆ, ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಶೇ 7.6ರಷ್ಟು ಬೆಳವಣಿಗೆ ಸಾಧಿಸಬೇಕಾಗುತ್ತದೆ. ಇದು ಈಗಿನ ಸ್ಥಿತಿಯಲ್ಲಿ ಕಷ್ಟಸಾಧ್ಯ.



ಜಾಗತಿಕ ಅನಿಶ್ಚಿತ ಪರಿಸ್ಥಿತಿಯು ಭಾರತದ ರಫ್ತು ವಹಿವಾಟುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು

ಕೃಷಿ ಸೇರಿದಂತೆ ಅರ್ಥ ವ್ಯವಸ್ಥೆಯ ಪ್ರಾಥಮಿಕ ವಲಯಗಳಲ್ಲಿ ಒಳ್ಳೆಯ ಬೆಳವಣಿಗೆ ಕಂಡುಬಂದಿದೆ. ಹಿಂದಿನ ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಶೇ 1.8ರಷ್ಟು ಬೆಳವಣಿಗೆ ಕಂಡಿದ್ದ ಈ ವಲಯಗಳು ಈ ಬಾರಿ ಶೇ 5.2ರಷ್ಟು ಬೆಳವಣಿಗೆ ದಾಖಲಿಸಿವೆ. ಆದರೆ ತಯಾರಿಕೆ ಮತ್ತು ಸೇವಾ ವಲಯಗಳ ಬೆಳವಣಿಗೆಯಲ್ಲಿ ಇಳಿಕೆ ಕಂಡುಬಂದಿದೆ. ತಯಾರಿಕಾ ವಲಯವು ಹಿಂದಿನ ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಶೇ 12.4ರಷ್ಟು ಬೆಳವಣಿಗೆ ಕಂಡಿತ್ತು, ಅದು ಈ ಬಾರಿ ಶೇ 4.8ರಷ್ಟು ಬೆಳೆದಿದೆ. ಸೇವಾ ವಲಯವು ಹಿಂದಿನ ಬಾರಿ ಶೇ 8.3ರಷ್ಟು ಬೆಳವಣಿಗೆ ಕಂಡಿತ್ತು, ಈ ಬಾರಿ ಶೇ 7.4ರಷ್ಟು ಬೆಳವಣಿಗೆ ಸಾಧಿಸಿದೆ. ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾದ ನಂತರ ಸಾರಿರುವ ಸುಂಕ ಸಮರದ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಅನಿಶ್ಚಿತ ಪರಿಸ್ಥಿತಿಯಿಂದಾಗಿ ಈ ಎರಡು ವಲಯಗಳು ಮುಂದಿನ ತ್ರೈಮಾಸಿಕಗಳಲ್ಲಿಯೂ ದೊಡ್ಡ ಮಟ್ಟದ ಬೆಳವಣಿಗೆ ಸಾಧಿಸದೇ ಇರಬಹುದು. ಜಾಗತಿಕ ಅನಿಶ್ಚಿತ ಪರಿಸ್ಥಿತಿಯು ಭಾರತದ ರಫ್ತು ವಹಿವಾಟುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಸರ್ಕಾರದಿಂದ ಆಗುವ ವೆಚ್ಚಗಳಲ್ಲಿನ ಹೆಚ್ಚಳ ಹಾಗೂ ವ್ಯಕ್ತಿಗಳು ಮತ್ತು ಕುಟುಂಬಗಳು ಖಾಸಗಿಯಾಗಿ ಖರೀದಿಗಾಗಿ ಮಾಡಿದ ವೆಚ್ಚಗಳಲ್ಲಿ ಏರಿಕೆ ಆಗಿದ್ದು ಮೂರನೆಯ ತ್ರೈಮಾಸಿಕದಲ್ಲಿನ ಉತ್ತಮ ಸಾಧನೆಗೆ ಪ್ರಮುಖ ಕಾರಣಗಳು. ಈ ಎರಡು ವಿನಿಯೋಗಗಳಲ್ಲಿನ ಹೆಚ್ಚಳವು ಒಂದು ಬಗೆಯಲ್ಲಿ ಶುಭ ಶಕುನ ಇದ್ದಂತೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 4.8ಕ್ಕೆ ತಗ್ಗುವ ನಿರೀಕ್ಷೆ ಇದೆ. ಆದರೆ ಜಾಗತಿಕ ಮಟ್ಟದಲ್ಲಿನ ಅನಿಶ್ಚಿತ ಸ್ಥಿತಿಯು ದೇಶದಲ್ಲಿ ಹಣದುಬ್ಬರವನ್ನು ಜಾಸ್ತಿ ಮಾಡಬಹುದು ಎಂಬ ಆತಂಕವೂ ಒಂದೆಡೆ ಇದೆ. ದೇಶದ ಕಾರ್ಮಿಕ ಮಾರುಕಟ್ಟೆಯಲ್ಲಿ ಒಂದಿಷ್ಟು ಸುಧಾರಣೆಗಳು ಕಂಡುಬಂದಿವೆ. ಆದರೆ ಇವೆಲ್ಲ ಮುಂದಿನ ದಿನಗಳಲ್ಲಿಯೂ ಹೀಗೆಯೇ ಉಳಿದುಕೊಳ್ಳಲಿವೆಯೇ ಎಂಬ ಪ್ರಶ್ನೆಗೆ ಉತ್ತರ ತಕ್ಷಣಕ್ಕೆ ಸಿಗುವುದಿಲ್ಲ. ರಾಜ್ಯಗಳ ಮಟ್ಟದಲ್ಲಿ ಜನರನ್ನು ಓಲೈಸುವ ದೃಷ್ಟಿಯಿಂದ ಆಗುತ್ತಿರುವ ಹಲವು ವೆಚ್ಚಗಳು ಸರ್ಕಾರಗಳ ಹೂಡಿಕೆ ಶಕ್ತಿಯನ್ನು ಕುಗ್ಗಿಸಬಹುದು. ಆದಾಯ ತೆರಿಗೆಯ ಮಿತಿಯನ್ನು ಹೆಚ್ಚಿಸುವುದಾಗಿ ಕೇಂದ್ರ ಬಜೆಟ್‌ನಲ್ಲಿ ಮಾಡಿರುವ ಘೋಷಣೆಯು ಜಾರಿಗೆ ಬಂದ ನಂತರದಲ್ಲಿ ದಕ್ಕುವ ಲಾಭ ಎಷ್ಟು ಎಂಬುದು ಸ್ಪಷ್ಟವಾಗಿಲ್ಲ. ಅದರಲ್ಲೂ, ಈ ಕ್ರಮದಿಂದ ಮಧ್ಯಮಾವಧಿಯಲ್ಲಿ ಲಾಭ ಆಗಬಹುದೇ ವಿನಾ ತಕ್ಷಣಕ್ಕೆ ಆಗುವುದಿಲ್ಲ. ಉತ್ತರಪ್ರದೇಶದಲ್ಲಿ ನಡೆದ ಕುಂಭಮೇಳದಿಂದಾಗಿ ಮಾರುಕಟ್ಟೆಯಲ್ಲಿ ಎಷ್ಟರಮಟ್ಟಿಗೆ ಚೈತನ್ಯ ಸೃಷ್ಟಿಯಾಗಿದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಜಾಗತಿಕ ಅನಿಶ್ಚಿತತೆ ಸೇರಿದಂತೆ ಹಲವು ಕಾರಣಗಳಿಂದಾಗಿ ಖಾಸಗಿ ವಲಯದ ಕಾರ್ಪೊರೇಟ್ ಕಂಪನಿಗಳು ದೊಡ್ಡ ಮಟ್ಟದಲ್ಲಿ ಹೂಡಿಕೆಗೆ ಹಿಂದೇಟು ಹಾಕುತ್ತಿವೆ. ಅಂದರೆ, ಆಂತರಿಕ ಹಾಗೂ ಜಾಗತಿಕ ವಿದ್ಯಮಾನಗಳ ಕಾರಣದಿಂದಾಗಿ ಒಟ್ಟಾರೆ ಪರಿಸ್ಥಿತಿಯು ಅನಿಶ್ಚಿತವಾಗಿದೆ. ವಿಶ್ವದ ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತವು ದಾಖಲಿಸಲಿದೆಯಾದರೂ ಒಂದಿಷ್ಟು ಅಡ್ಡಿಗಳನ್ನು ಎದುರಿಸಲಿದೆ ಎಂಬುದು ಖಚಿತ.

ದಿನದ ಟ್ವೀಟ್

ನೀರಿನ ಅಭಾವ: ಎಚ್ಚರ ಅಗತ್ಯ

ಮಡಿಕೇರಿಯಲ್ಲಿ ಹಿಂದಿನ ವರ್ಷದಂತೆ ಈ ಬಾರಿಯೂ ಕಾವೇರಿ ನದಿ ಬಹುತೇಕ ಒಣಗಿದೆ. ಅತಿಯಾದ ಅಭಿವೃದ್ಧಿ ಮತ್ತು ಕಾಫಿ ತೋಟಗಳಿಗೆ ನೀರಿನ ಬೇಡಿಕೆ ಅಧಿಕವಾಗಿರುವುದು ನೀರಿನ ಅಭಾವಕ್ಕೆ ಕೊಡುಗೆ ನೀಡುತ್ತಿವೆ.

ನವೀನ್ ರೆಡ್ಡಿ, ಟೆಕಿ

ಕಿಡಿನುಡಿ

ಪ್ರಸಕ್ತ ಅಧಿವೇಶನದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಕಿವಿ ಹಿಂಡುತ್ತೇವೆ. ಸರ್ಕಾರದ ನಿಜ ಬಣ್ಣವನ್ನು ರಾಜ್ಯದ ಜನರ ಮುಂದೆ ಬಿಚ್ಚಿಡುತ್ತೇವೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 5-3-2000

• ಅಕ್ರಮ ವಿದ್ಯುತ್ ಬೇಲಿ, ಗುಂಡಿಗೆ 3 ಆನೆ ಬಲಿ

ಬೆಂಗಳೂರು, ಮಾರ್ಚ್ 4– ಕಳೆದ ಎರಡು ವಾರಗಳ ಅವಧಿಯಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಅರಣ್ಯದಲ್ಲಿ ನಿರ್ಭಯವಾಗಿ ಸುತ್ತುತ್ತಿದ್ದ ಎರಡು ಸಲಗ ಹಾಗೂ ಒಂದು ಹೆಣ್ಣಾನೆ ಮೃತಪಟ್ಟಿವೆ.

ತಟ್ಟಿಗುಪ್ಪೆ ಗ್ರಾಮದ ಗಾಡಿಪಾಳ್ಯ ಕೆರೆ ಬಳಿ 20ರಿಂದ 25 ವರ್ಷದ ಸಲಗವೊಂದು ಮೃತಪಟ್ಟಿದ್ದರೆ, ದೊಡ್ಡ ರಾಗಿಗುಡ್ಡ ಬೆಟ್ಟದ ಮಾರ್ಗವಾಗಿ ಕೆರೆಯತ್ತ ಬಂದ ಇನ್ನೊಂದು ಆನೆಯು ಸಂಶಯಾಸ್ಪದ ರೀತಿಯಲ್ಲಿ ಸತ್ತಿದೆ ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆಯ (ಐಎನ್‌ಸಿಇಆರ್‌ಟಿ) ಸದಸ್ಯ ವಿ.ಸುಧೀಂದ್ರ ತಿಳಿಸಿದರು.

ಅಕ್ರಮ: ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯಲು ರೈತರು ತಮ್ಮ ಹೊಲಕ್ಕೆ ಅಕ್ರಮವಾಗಿ ಹಾಕಿರುವ ವಿದ್ಯುತ್ ತಂತಿಯನ್ನು ತುಳಿದು ಆನೆ ಸತ್ತಿದೆ ಎಂದು ಶವಪರೀಕ್ಷೆಯಿಂದ ತಿಳಿದುಬಂದಿದೆ ಎಂದು ಬನ್ನೇರುಘಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ. ಕೃಷ್ಣಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಇದೇ ರೀತಿ ತಮಿಳುನಾಡಿನ ಗಡಿಗೆ ಹೊಂದಿಕೊಂಡಿರುವ ಬೇಲುಕೆರೆಯಿಂದ ಬಂದ ಸಲಗವು ತಿಮ್ಮಯ್ಯನಕುಂಟೆಯ ಕೆರೆ ದಂಡೆಯಲ್ಲಿ ಮೃತಪಟ್ಟಿದೆ. ಪ್ರತ್ಯಕ್ಷ ಸಾಕ್ಷಿಗಳಾದ ಚೂಡನಹಳ್ಳಿ ಗ್ರಾಮಸ್ಥರು ಆನೆಗೆ ಗುಂಡೇಟು ಬಿದ್ದಿದೆ ಎಂದು ತಿಳಿಸಿದ್ದಾರೆ.

• ರಿಮೇಕ್ ಚಿತ್ರಗಳ ತೆರಿಗೆ ವಿನಾಯಿತಿ ರದ್ದಿಗೆ ಚಿಂತನೆ

ಮಂಗಳೂರು, ಮಾರ್ಚ್ 4– ಆಗಸ್ಟ್ 1ರಿಂದ ರಿಮೇಕ್ ಕನ್ನಡ ಚಿತ್ರಗಳಿಗೆ ನೀಡುತ್ತಿರುವ ಶೇ 100ರಷ್ಟು ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಲು ಉದ್ದೇಶಿಸಲಾಗಿದೆ ಎಂದು ವಾರ್ತಾ ಮತ್ತು ಪ್ರಚಾರ ಖಾತೆ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

'ಸದ್ಯ ರಿಮೇಕ್ ಚಿತ್ರಗಳಿಂದ ಕಾರ್ಮಿಕರ ಜೀವನ ನಡೆಯುತ್ತಿದೆ. ಆದರೆ, ಕನ್ನಡ ಚಿತ್ರರಂಗ ತನ್ನ ಸತ್ವವನ್ನು ಕಳೆದುಕೊಳ್ಳುವುದರಿಂದ ತಪ್ಪಿಸಲು ತರಿಗೆ ವಿನಾಯಿತಿಯನ್ನು ಹಿಂದಕ್ಕೆ ಪಡೆಯದೆ ಬೇರೆ ದಾರಿ ಉಳಿದಿಲ್ಲ' ಎಂದು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 5-3-1975

• ಹೊಲಸು ಕೈ ಅಲ್ಲ

ಬೆಂಗಳೂರು, ಮಾರ್ಚ್ 4– ವೈಯಕ್ತಿಕವಾಗಿ ತಮ್ಮ ವಿರುದ್ಧ 'ಪರೋಕ್ಷವಾಗಿ' ಮಾಡಲಾದ ಆಪಾದನೆಗಳನ್ನು ಖಡಾಖಂಡಿತವಾಗಿ ನಿರಾಕರಿಸಿದರು. ತಮ್ಮ ಇಲಾಖೆಯ ವಿರುದ್ಧದ ಟೀಕೆಗಳಲ್ಲಿ ಕೆಲವಕ್ಕೆ ತಮ್ಮ ಧ್ವನಿಯನ್ನೂ ಸೇರಿಸಿದರು.

ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಖಂಡಿಸುವಾಗ, ಸರ್ಕಾರಿ ವೈದ್ಯರು ಖಾಸಗಿ ವೈದ್ಯ ವೃತ್ತಿ ನಡೆಸಲು ನೀಡಿರುವ ರಿಯಾಯಿತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದನ್ನು ಪ್ರಸ್ತಾಪಿಸುವಾಗ, ಕುಟುಂಬ ಯೋಜನೆ ಬಗ್ಗೆ ಹೇಳುವಾಗ ಅದು ಸಚಿವರ ಮಾತೋ ವಿರೋಧಪಕ್ಷದ ಸದಸ್ಯರು ಯಾರಾದರೂ ಮಾಡುತ್ತಿರುವ ಟೀಕೆಯೋ ಎಂದು ಸಂಶಯಪಡುವಂತಿತ್ತು.

ತಮ್ಮ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಗೆ ಆರೋಗ್ಯ ಸಚಿವ ಸಿದ್ದವೀರಪ್ಪನವರು ಮಂಗಳವಾರ ವಿಧಾನಸಭೆಯಲ್ಲಿ ಉತ್ತರ ನೀಡಿದಾಗ, ವೈಯಕ್ತಿಕ ವಿಷಯ ಬಿಟ್ಟರೆ ಸದಸ್ಯರ ಟೀಕೆಗಳನ್ನು ನಿರಾಕರಿಸಿದ್ದು ಕಡಿಮೆ.

ಅಂಥ ಉಗ್ರ ಟೀಕೆಗಳೂ ಹೆಚ್ಚೇನೂ ಇರಲಿಲ್ಲ. ಆದರೂ ಕಳೆದ ಮೂರು ವರ್ಷಗಳಲ್ಲಿ ತಮ್ಮ ಇಲಾಖೆ 'ಜನಪ್ರಿಯತೆ ಕಳೆದುಕೊಂಡಿದೆಯೆಂಬುದನ್ನು' ಸಚಿವರು ತರ್ಕಿಸಿದರು.

ಕೃತಕ ಬುದ್ಧಿಮತ್ತೆ: ನಿಯಂತ್ರಣಕ್ಕೆ ನಡೆದಿರುವ ಜಾಗತಿಕ ಪ್ರಯತ್ನ ಫಲಿಸುವುದೇ?

'ಅತಿ' ಜಾಣನಿಗೆ ಬೇಕು ಕಡಿವಾಣ

ವಿಶ್ಲೇಷಣೆ

ಸುಧೀರ್ ಕೀಳಂಬಿ

ಕೃತಕ ಬುದ್ಧಿಮತ್ತೆ ಅಥವಾ ಆರ್ಟಿಫಿಷಿಯಲ್ ಇಂಟೆಲಿಜನ್ಸ್ (ಎ.ಐ) ಈಗ ಮನೆಮಾತಾಗಿದೆ. ವಿಂಡೋಸ್‌ನಲ್ಲಿನ ಕೋಪೈಲಟ್, ಗೂಗಲ್ ತೆರೆದಾಕ್ಷಣ ಕಾಣುವ ಜೆಮಿನಿ, ವಾಟ್ಸ್‌ಆ್ಯಪ್ ಜೊತೆ ಇರುವ ಮೆಟಾದಂಥ ಎ.ಐ. ಟೂಲ್‌ಗಳು ನಮ್ಮೆಲ್ಲರನ್ನೂ ಜಾದೂಗಾರರನ್ನಾಗಿಸಿವೆ. ಚಾಟ್‌ಜಿಪಿಟಿಯಿಂದ ಹಿಡಿದು ಡೀಪ್‌ಸೀಕ್‌ವರೆಗೂ ಹರಡಿರುವ ಸಾವಿರಾರು ಎ.ಐ. ಟೂಲ್‌ಗಳು ಅಂತರ್ಜಾಲದ ಬಳಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ. ಈ ತಂತ್ರಜ್ಞಾನ ನಮಗೆ ಹಲವು ರೀತಿಯಲ್ಲಿ ಸಹಕಾರಿಯಾಗಿದ್ದರೂ ಇದರ ದುರ್ಬಳಕೆಯೂ ನಡೆಯುತ್ತಿದೆ.

ಕೃತಕ ಬುದ್ಧಿಮತ್ತೆಯನ್ನು ಕೈಗಾರಿಕಾ ಕ್ರಾಂತಿಯ ನಂತರ ಬಂದ ಅತಿ ಪರಿಣಾಮಕಾರಿ ತಂತ್ರಜ್ಞಾನ ಎಂದೇ ಬಣ್ಣಿಸಲಾಗುತ್ತಿದೆ. ಪದ್ಯ ರಚನೆಯಿಂದ ಹಿಡಿದು ಕ್ಲಿಷ್ಟಕರವಾದ ಗಣಿತದ ಲೆಕ್ಕಗಳನ್ನು ಬಿಡಿಸುವುದರ ಜೊತೆಗೆ, ಕಠಿಣ ವೈದ್ಯಕೀಯ ಮಾಹಿತಿಯನ್ನು ಸರಳೀಕರಿಸುವುದೂ ಸೇರಿದಂತೆ, ಬಣ್ಣಿಸಲಾಗದ ವೈವಿಧ್ಯಮಯ ಸಹಾಯಗಳನ್ನು ನಾವು ಎ.ಐ.ನಿಂದ ಪಡೆದುಕೊಳ್ಳಲು ಸಾಧ್ಯ. ಇದರ ವ್ಯಾಪ್ತಿ ದಿನೇದಿನೇ ಹೆಚ್ಚುತ್ತಿದ್ದು, ಇದು ಎಲ್ಲಿಗೆ ತಲುಪಬಹುದು ಎಂಬುದು ಊಹಿಸಲು ಕಷ್ಟಸಾಧ್ಯ.

ಮೊದಲನೆಯದಾಗಿ, ಎ.ಐ. ಅನ್ನು ನಿಯಂತ್ರಿಸುವ ಅಗತ್ಯವಿದೆಯೇ ಎಂಬ ಸವಾಲಿಗೆ ಒಂದು ಸರಳ ಉದಾಹರಣೆಯನ್ನು ನೀಡಬಹುದು. ವಿಶ್ವದ ಅತಿ ದುಬಾರಿ ಕಾರು ಎಂದು ಕರೆಸಿಕೊಳ್ಳುವ ರೋಲ್ಸ್‌ರಾಯ್ಸ್‌ನ ಹೊಸ ಕಾರಿಗೆ ಬ್ರೇಕ್ ಅಳವಡಿಸದೇ ಇದ್ದರೆ, ಎಷ್ಟೇ ನುರಿತ ಚಾಲಕನಾದರೂ ಅದನ್ನು ಚಾಲನೆ ಮಾಡಲು ಧೈರ್ಯ ತೋರುವರೇ?

ಯಾವುದೇ ತಂತ್ರಜ್ಞಾನವಿರಲಿ, ಅದಕ್ಕೆ ಸಹಜವಾಗಿಯೇ ಎರಡು ಮಜಲುಗಳು ಇದ್ದೇ ಇರುತ್ತವೆ. ಉದಾಹರಣೆಗೆ, ಪರಮಾಣು ತಂತ್ರಜ್ಞಾನ. ಇದರಿಂದ ಅಗಾಧ ಪ್ರಮಾಣದ ಶಕ್ತಿ ಪಡೆಯಬಹುದಾದರೂ ಅಣ್ವಸ್ತ್ರಗಳ ತಯಾರಿಕೆ, ಈ ಪ್ರಕ್ರಿಯೆಯಲ್ಲಿ ಸೃಷ್ಟಿಯಾಗುವ ಅಸಮರ್ಪಕ ತ್ಯಾಜ್ಯ ವಿಲೇವಾರಿಯಂತಹ ಸವಾಲುಗಳನ್ನು ನಿಯಂತ್ರಿಸಲು ಜಾಗತಿಕ ಮಟ್ಟದಲ್ಲಿ ಹಲವಾರು ಕಾನೂನುಗಳನ್ನು ರೂಪಿಸಲಾಗಿದೆ. ಹಾಗೆಯೇ ಎ.ಐ. ಮೇಲೆ ನಿಯಂತ್ರಣವಿಲ್ಲದೇ ಹೋದರೆ ಪರಿಣಾಮ ತುಂಬಾ ಭೀಕರವಾಗಲೂಬಹುದು. ಎ.ಐ. ತಂತ್ರಜ್ಞಾನದ ಸಂಭಾವ್ಯ ಅಪಾಯಗಳನ್ನು ಪಟ್ಟಿ ಮಾಡುವುದಾದರೆ, ರಕ್ಷಣೆಗಾಗಿ ಮಾಡಿದ ಎ.ಐ. ಟೂಲ್‌ಗಳು ಸ್ವಯಂಚಾಲಿತವಾಗಿ ನಿರ್ಧಾರಗಳನ್ನು ತೆಗೆದುಕೊಂಡು, ನಾಗರಿಕರನ್ನೇ ಶತ್ರುಗಳೆಂದು ಭಾವಿಸಿ, ಅವರ ಮೇಲೆ ದಾಳಿ ಮಾಡಬಹುದು. ಪೂರ್ವಗ್ರಹ ಪೀಡಿತವಾಗಿ ನೈಜ ಮಾಹಿತಿಯನ್ನು ನೀಡದೇ ಹೋಗಬಹುದು ಅಥವಾ ತಪ್ಪಾದ ಮಾಹಿತಿ ನೀಡಿ, ಅದರ ಆಧಾರದ ಮೇಲೆ ಕೈಗೊಂಡ ನಿರ್ಧಾರಗಳು ಮಾರಕವಾಗಬಹುದು. ಉದಾಹರಣೆಗೆ, ತಪ್ಪು ಚಿಕಿತ್ಸೆ ಮತ್ತು ಅದರಿಂದ ಆಗಬಹುದಾದ ಅನಾಹುತ.

ಇತ್ತೀಚೆಗೆ ನಾನು ಹುಟ್ಟುಹಬ್ಬಕ್ಕಾಗಿ ಕೆಲವು ಚಿತ್ರಗಳನ್ನು ಸೃಷ್ಟಿಸಲು ಎ.ಐ. ಟೂಲ್ ಬಳಿ ಕೇಳಿದೆ. ಅದು ಯಾರೋ ಒಬ್ಬರ ಚಿತ್ರವನ್ನು ಪ್ರಕಟಿಸಿತು. ಅದು ಅವರ ಅನುಮತಿಯನ್ನಂತೂ ಪಡೆದಿರುವ ಸಾಧ್ಯತೆ ಇಲ್ಲ. ಇಂಥ ಹಲವಾರು ಗೋಪ್ಯ ವಿಷಯಗಳನ್ನು ಹೊರಹಾಕಿ ಗೋಪ್ಯತೆಯ ಹಕ್ಕಿಗೆ ಧಕ್ಕೆ ತರಬಹುದು. ಯಾರೋ ಸೃಷ್ಟಿಸಿದ ಬರಹ, ಚಿತ್ರ, ವಿಡಿಯೊಗಳನ್ನು ಬಳಸಿ, ಕೃತಿಸ್ವಾಮ್ಯದ ಮಾಲೀಕತ್ವದ ಹಕ್ಕನ್ನೂ ಉಲ್ಲಂಘಿಸಬಹುದು. ಸೈಬರ್ ದಾಳಿಯಂತಹ ವಿಧ್ವಂಸಕ ಕೃತ್ಯಗಳ ಮೂಲಕ ದೇಶದ ಸುರಕ್ಷತೆ ಮತ್ತು ಭದ್ರತೆಗೆ ಧಕ್ಕೆ ತರಬಹುದು. ಇನ್ನು ಚುನಾವಣೆಗಳಲ್ಲಿ ಸಾಮಾಜಿಕ ಅಭಿಪ್ರಾಯವನ್ನು ಬದಲಿಸುವ ಸಾಮರ್ಥ್ಯವು ಒಂದು ದೇಶದ ಪ್ರಜಾಪ್ರಭುತ್ವವನ್ನೇ ಹಾಳುಮಾಡಬಲ್ಲದು. ರಶ್ಮಿಕಾ ಮಂದಣ್ಣ ಪ್ರಕರಣದಲ್ಲಿ ಆದಂತೆ ಡೀಪ್‌ಫೇಕ್‌ನಂಥ ಸುಳ್ಳು ಚಿತ್ರ ಹಾಗೂ ವಿಡಿಯೊಗಳನ್ನು ಎ.ಐ. ಮೂಲಕ ಸೃಷ್ಟಿಸಿ, ಸಾಮಾಜಿಕ ಸ್ವಾಸ್ಥ್ಯವನ್ನು ಕದಡಬಹುದು. ಎರಡು ಕೋಮುಗಳ ನಡುವೆ ವೈರತ್ವವನ್ನು ಸಾರುವ ಸಾಧ್ಯತೆಯೂ ಇದೆ. ಇನ್ನು ಉದ್ಯೋಗ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅದು ಅನೇಕ ಉದ್ಯೋಗಗಳನ್ನು ನಾಶ ಮಾಡುವ ಸಂಭವವಿದೆ. ಇದರಿಂದ ಉದ್ಯೋಗಹಾನಿ ಮತ್ತು ಆರ್ಥಿಕ ಅಸ್ಥಿರತೆ ಉಂಟಾಗಬಹುದು. ಎ.ಐ.ನಲ್ಲಿ ಪಾರದರ್ಶಕತೆ ಇಲ್ಲದಿರುವುದು ಸಹ ಸಮಸ್ಯೆಯನ್ನು ಸೃಷ್ಟಿಸಬಲ್ಲದು. ಇದಲ್ಲದೆ ನೈತಿಕ ಮೌಲ್ಯ, ಬದ್ಧತೆಯಂತಹ ಹಲವಾರು ಪ್ರಶ್ನೆಗಳನ್ನು ಎ.ಐ. ಒಡ್ಡುತ್ತದೆ.

ಎ.ಐ. ನೆರವಿನಿಂದ ಎಸಗುವ ಅಪರಾಧ ಕೃತ್ಯಗಳಿಗೆ ಯಾರನ್ನು ಹೊಣೆ ಮಾಡಬೇಕು ಎನ್ನುವುದು ಪ್ರಮುಖ ಸವಾಲು. ಎ.ಐ. ಕೋಡ್ ಬರೆದವರನ್ನೇ, ಬಳಸಿದವರನ್ನೇ, ಬಳಕೆಯಾದ ಉಪಕರಣದ ಮಾಲೀಕರನ್ನೇ? ನಿಯಂತ್ರಣ ವ್ಯವಸ್ಥೆ ಮಾತ್ರ ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬಲ್ಲದು. ಈ ದಿಸೆಯಲ್ಲಿ ಜಾಗತಿಕವಾಗಿಯೂ ಹಲವು ಪ್ರಯತ್ನಗಳು ನಡೆಯುತ್ತಿವೆ. 2023ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ 'ಎ.ಐ. ಸುರಕ್ಷತೆಯ ಶೃಂಗಸಭೆ' ಮೊದಲನೆಯದು. ಫ್ರಾನ್ಸ್‌ನಲ್ಲಿ ಇತ್ತೀಚೆಗೆ ನಡೆದ 'ಎ.ಐ. ಆ್ಯಕ್ಷನ್ ಶೃಂಗಸಭೆ'ಯಲ್ಲಿ ಅಮೆರಿಕ, ಇಂಗ್ಲೆಂಡ್ ಮತ್ತು ಯುರೋಪ್‌ನ ನಡೆಗಳು ಭಿನ್ನವಾಗಿರುವುದು ಗೋಚರಿಸಿತು. ಅಮೆರಿಕವು ಎ.ಐ. ಮೇಲೆ ಯಾವುದೇ ನಿಯಂತ್ರಣ ಹೇರಲು ಬಯಸದೆ, ಅದು ಸ್ವತಂತ್ರವಾಗಿ ಅಭಿವೃದ್ಧಿ ಹೊಂದಬೇಕೆಂದು ಬಲವಾಗಿ ಪ್ರತಿಪಾದಿಸಿತು. ಆದರೆ,



ಎ.ಐ.ಗೆ ಸಂಬಂಧಿಸಿದಂತೆ ವಿಶ್ವದ ಮೊದಲ ಕಾನೂನು ಎಂದು ಕರೆಯಲಾಗುವ, ಐರೋಪ್ಯ ಒಕ್ಕೂಟ 2024ರಲ್ಲಿ ರೂಪಿಸಿದ ಕಾಯ್ದೆಯು ಈ ತಂತ್ರಜ್ಞಾನ ಒಡ್ಡುವ ಅಪಾಯಗಳನ್ನು ಆಧರಿಸಿ, ಅದನ್ನು ಸೃಷ್ಟಿಸುವ ತಂತ್ರಜ್ಞರ ಮೇಲೆ ಕೆಲವು ಕಟ್ಟುಪಾಡುಗಳನ್ನು ಹೇರಿದೆ. ಇದು ಕೆಲವು ಬಗೆಯ ಎ.ಐ. ತಂತ್ರಜ್ಞಾನಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಉದಾಹರಣೆಗೆ, ಅಪರಾಧ ಕೃತ್ಯಕ್ಕೆ ಎ.ಐ. ಬಳಕೆ, ಎ.ಐ. ಮೂಲಕ ಬಯೊಮೆಟ್ರಿಕ್ ಉಪಯೋಗದಂತಹವು. ಚೀನಾದಲ್ಲೂ ಕೆಲವು ಎ.ಐ. ಅಪ್ಲಿಕೇಷನ್‌ಗಳ ಬಳಕೆಯ ಮೇಲೆ ನಿಯಂತ್ರಣ ಇದೆ. ಇವುಗಳಲ್ಲಿ, ಸಮ್ಮತಿ ಇಲ್ಲದೆ ಡೇಟಾ ಬಳಕೆ, ಎ.ಐ. ಸೃಷ್ಟಿಸಿದ ವಿಡಿಯೊ, ಚಿತ್ರಗಳ ಬಳಕೆಯ ನಿಷೇಧ ಪ್ರಮುಖವಾಗಿವೆ. ಹೀಗೆಯೇ ಸಿಂಗಪುರ, ಜಪಾನ್ ಮತ್ತು ಇಂಗ್ಲೆಂಡ್ ಸಹ ಎ.ಐ. ಮೇಲಿನ ನಿಯಂತ್ರಣಕ್ಕೆ ಕಾಯ್ದೆಗಳನ್ನು ರೂಪಿಸಿವೆ.

ಕೃತಕ ಬುದ್ಧಿಮತ್ತೆಯ ಸುರಕ್ಷಿತ ಮತ್ತು ನಂಬಿಕಾರ್ಹ ಬಳಕೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಎ.ಐ. ತಂತ್ರಜ್ಞಾನವು ಮಾನವ ಹಕ್ಕುಗಳನ್ನು ಗೌರವಿಸಬೇಕು, ರಕ್ಷಿಸಬೇಕು ಎಂಬ ಗೊತ್ತುವಳಿಯನ್ನು 2024ರಲ್ಲಿ ಅಂಗೀಕರಿಸಿದೆ. ಭಾರತದಲ್ಲಿ ಎ.ಐ.ನಿಂದ ಉಂಟಾಗುವ ತೊಂದರೆಗಳನ್ನು ಮಾನನಷ್ಟ ಮೊಕದ್ದಮೆ, ಗೋಪ್ಯತೆ, ಹಕ್ಕುಸ್ವಾಮ್ಯ ಉಲ್ಲಂಘನೆ, ಸೈಬರ್ ಅಪರಾಧದಂತಹ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳ ಮೂಲಕ ನಿಯಂತ್ರಿಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯನ್ನು ಬಳಸಿಯೂ ಎ.ಐ.ನ ದುರುಪಯೋಗ ತಡೆಗೆ ಪ್ರಯತ್ನಿಸಲಾಗುತ್ತಿದೆ. ಆದರೂ ಈಗಿನ ಕಾನೂನುಗಳಿಂದ ಎ.ಐ. ಅನ್ನು ಸೂಕ್ತವಾಗಿ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಇದಕ್ಕೆ ತನ್ನದೇ ಅದ ಕಾನೂನಿನ ಅಗತ್ಯ ಇದೆ.

ಜಗತ್ತಿನಲ್ಲಿ ಭಾರತವು ಐದನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದು, ಅತಿ ಹೆಚ್ಚು ಯುವ ಸಮೂಹವನ್ನು ಒಳಗೊಂಡ ದೇಶವಾಗಿದೆ. ಇಲ್ಲಿ ಎ.ಐ. ತಂತ್ರಜ್ಞಾನದ ಬೆಳವಣಿಗೆಗೆ ವಿಪುಲ ಅವಕಾಶಗಳಿವೆ. ಹಾಗಾಗಿ, ಸರ್ಕಾರವು ಜವಾಬ್ದಾರಿಯುತವಾದ ಎ.ಐ. ತಂತ್ರಜ್ಞಾನವನ್ನು ಉತ್ತೇಜಿಸುತ್ತಿದೆ. ಪ್ರತಿ ಎ.ಐ. ಸೃಷ್ಟಿಕರ್ತನೂ ಬಳಕೆದಾರನೂ ತನ್ನ ಚಟುವಟಿಕೆಯಿಂದ ಸಮಾಜ ಅಥವಾ ವ್ಯಕ್ತಿಗಳಿಗೆ ಹಾನಿಯಾಗದಂತೆ ಅದನ್ನು ಬಳಸುವುದನ್ನು ರೂಢಿಸಿಕೊಂಡರೆ, ಮನುಕುಲಕ್ಕೆ ಎ.ಐ.ನಿಂದ ಅನುಕೂಲವಾಗಲಿದೆ ಎಂಬ ನಂಬಿಕೆಯನ್ನು ಸರ್ಕಾರ ಹೊಂದಿದೆ. ಈ ದಿಸೆಯಲ್ಲಿ ಆರ್ಟಿಫಿಷಿಯಲ್ ಇಂಟೆಲಿಜನ್ಸ್ ಸೇಫ್ಟಿ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಯೋಜಿಸಿದೆ. ಇಂಡಿಯಾಎಐ ಮಿಷನ್ ಎಂಬ ಸಂಸ್ಥೆಯ ಮೂಲಕ ಎ.ಐ. ಬೆಳವಣಿಗೆಗೆ ಸಹಾಯ ಮಾಡುತ್ತಿದೆ.

ಎ.ಐ. ಕ್ಷೇತ್ರದಲ್ಲಿ ಅಮೆರಿಕ, ಚೀನಾದಂತಹ ಪ್ರಬಲ ದೇಶಗಳ ನಡುವೆ ನಡೆಯುತ್ತಿರುವ ತೀವ್ರ ಪೈಪೋಟಿ, ಇದರ ನಿಯಂತ್ರಣಕ್ಕೆ ವಿಶ್ವ ಮಟ್ಟದಲ್ಲಿ ಯಾವುದೇ ಒಪ್ಪಂದಗಳು ಇಲ್ಲದೇ ಇರುವುದು ಅಪಾಯದ ಮುನ್ಸೂಚನೆಯನ್ನು ನೀಡುತ್ತಿವೆ. ಎ.ಐ. ತಂತ್ರಜ್ಞಾನದ ಉಸಿರು ಕಟ್ಟಿಸದೆ, ದುರುಪಯೋಗ ತಡೆಯಲು ತುರ್ತಾಗಿ ಮೂಗುದಾರ ಹಾಕಬೇಕಾದ ಅಗತ್ಯ ಇದೆ. ಈ ದಿಸೆಯಲ್ಲಿ ವಿವಿಧ ದೇಶಗಳು ಮತ್ತು ವಿಶ್ವಸಂಸ್ಥೆ ಮುಂದೆ ಬಂದಾವೇ?

ಲೇಖಕ: ಅಂತರರಾಷ್ಟ್ರೀಯ ಕಾನೂನು ಸಲಹೆಗಾರ, ವಿದೇಶಾಂಗ ಇಲಾಖೆ, ನವದೆಹಲಿ
(ಇಲ್ಲಿ ವ್ಯಕ್ತವಾಗಿರುವುದು ಲೇಖಕರ ವೈಯಕ್ತಿಕ ಅಭಿಪ್ರಾಯ)

ಚುರುಮುರಿ



ಇಡ್ಲಿ ಮೇಲೆ ಬ್ರಹ್ಮಾಸ್ತ್ರ

• ಮಣ್ಣೆ ರಾಜು

ಈರಭದ್ರನ ಇಡ್ಲಿ ಹೋಟೆಲ್‌ನಲ್ಲಿ ಗ್ರಾಹಕರ ನೂಕುನುಗ್ಗಲು. ಬಿಸಿ ಇಡ್ಲಿಯನ್ನು ಬಾಳೆಎಲೆಯಲ್ಲಿ ಸುತ್ತಿ, ಚಟ್ನಿ ಹಾಕಿ ಈರಭದ್ರ ಪ್ಯಾಕ್ ಮಾಡುವಲ್ಲಿ ಬ್ಯುಸಿಯಾಗಿದ್ದ.

'ಏನಯ್ಯಾ ಇವತ್ತು ಇಷ್ಟೊಂದು ರಷ್? ತಟ್ಟೆ ಇಡ್ಲಿ ಕೊಂಡವರಿಗೆ ಕುಕ್ಕರ್ ಇಡ್ಲಿ ಫ್ರೀ ಆಫರ್ ಇದೆಯೇ?' ಶಂಕ್ರಿ ಕೇಳಿದ.

'ಇಲ್ಲಾ ಸಾರ್, ಅಲ್ನೋಡಿ...' ಎಂದು 'ಪ್ಲಾಸ್ಟಿಕ್ ಬಳಸದ ಇಡ್ಲಿ ದೊರೆಯುತ್ತದೆ' ಎಂದಿದ್ದ ಬೋರ್ಡ್ ತೋರಿಸಿದ.

'ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆ ಬಳಸಿದರೆ ಅದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತವಂತೆ. ಪ್ಲಾಸ್ಟಿಕ್ ಬಳಸಿದರೆ ಇಡ್ಲಿ ಪಾತ್ರೆ ಸೀಜ್ ಮಾಡಿ ಹೋಟೆಲ್‌ಗೆ ಬೀಗ ಹಾಕ್ತೀವಿ ಅಂತ ಅಧಿಕಾರಿಗಳು ಬಂದು ಎಚ್ಚರಿಕೆ ಕೊಟ್ಟುಹೋದರು' ಇಡ್ಲಿ ಜೊತೆ ಸಾಂಬಾರನ್ನು ಪ್ಲಾಸ್ಟಿಕ್ ಕವರ್‌ಗೆ ಹಾಕಿ ಕಟ್ಟಿದ.

'ಬಿಸಿ ಸಾಂಬಾರನ್ನು ಪ್ಲಾಸ್ಟಿಕ್ ಕವರ್‌ಗೆ ಹಾಕಿದ್ರೆ ಅದರಿಂದಲೂ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತವೆ'.

'ಪ್ಲಾಸ್ಟಿಕ್ ಕವರ್‌ನಲ್ಲಿ ಸಾಂಬಾರ್ ಬೇಡ ಎನ್ನುವವರು ಮನೆಯಿಂದ ಬಾಕ್ಸ್ ತರಬೇಕು ಸಾರ್'.

'ಬೀಚ್‌ಗಳಲ್ಲಿ ಇಡ್ಲಿ- ಸಾಂಬಾರನ್ನೇ ಹೆಚ್ಚಾಗಿ ಮಾರುವುದರಿಂದ ಗೋವಾಗೆ ಬರುವ ವಿದೇಶಿ ಪ್ರವಾಸಿಗರು ಕಮ್ಮಿಯಾಗಿದ್ದಾರಂತೆ. ಆ ಸರ್ಕಾರ ಇಡ್ಲಿ ಬ್ಯಾನ್ ಮಾಡುವುದೇನೊ...'

'ಇಡ್ಲಿ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಬಾರದು. ಆ ಸರ್ಕಾರ ವಿದೇಶಿಗರಲ್ಲಿ ಇಡ್ಲಿ ರುಚಿ ಬೆಳೆಸಬೇಕು. ರುಚಿಸಿಬಿಟ್ಟರೆ ಇಡ್ಲಿ-ಸಾಂಬಾರ್‌ಗಾಗಿ ವಿದೇಶಿಗರು ದಂಡೆತ್ತಿ ಬರ್ತಾರೆ. ಇಡ್ಲಿ ಉದ್ಯಮವೂ ಬೆಳೆಯುತ್ತದೆ'.

'ಅದೇನೋ ಗೊತ್ತಿಲ್ಲ, ಸರ್ಕಾರಗಳು ಇಡ್ಲಿ ಮೇಲೆ ಕಣ್ಣು ಹಾಕುತ್ತಿವೆ. ಇಡ್ಲಿಗೆ ಹೆಚ್ಚುವರಿ ತೆರಿಗೆ ವಿಧಿಸಬಹುದೇನೊ!'

'ಗಾಬರಿಯಾಗಬೇಡಿ, ಸರ್ಕಾರ ತೆರಿಗೆ ಹೆಚ್ಚು ಮಾಡಿದರೂ ನಾನು ಇಡ್ಲಿ ಬೆಲೆ ಜಾಸ್ತಿ ಮಾಡಲ್ಲ, ಇಡ್ಲಿ ಸೈಜ್ ಕಮ್ಮಿ ಮಾಡ್ತೀನಿ ಅಷ್ಟೆ. ಹೊಟ್ಟೆಪಾಡು ಸಾರ್, ನಾನು ಇಡ್ಲಿ ಮಾರಿಯೇ ಅನ್ನ ತಿನ್ನಬೇಕಲ್ವ...' ಎನ್ನುತ್ತಾ ಇಡ್ಲಿ ಪ್ಯಾಕ್ ಮಾಡಿಕೊಟ್ಟ ಈರಭದ್ರ.

ಸಂಗತ

ಹಣ ವರ್ಗಾವಣೆ: ಹೀಗಿದೆ ವಾಸ್ತವ

ರಾಜ್ಯದಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಾಗಿದ್ದ ಹಣವನ್ನು ಸರ್ಕಾರ ದುರ್ಬಳಕೆ ಮಾಡಿಕೊಂಡಿದೆ ಎಂಬುದು ರಾಜಕೀಯಪ್ರೇರಿತ ಆರೋಪವಲ್ಲದೆ ಬೇರೇನೂ ಅಲ್ಲ

• ಡಾ. ಎಚ್.ಸಿ.ಮಹದೇವಪ್ಪ

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯ (ಟಿಎಸ್‌ಪಿ) ಅನುದಾನವು ದುರ್ಬಳಕೆ ಆಗುತ್ತಿದ್ದು, ಈ ಸಂಬಂಧ ಹೋರಾಟ ನಡೆಸುವುದಾಗಿ ವಿರೋಧ ಪಕ್ಷವಾದ ಬಿಜೆಪಿ ಹೇಳಿದೆ. ಹೋರಾಟ ಮತ್ತು ಚರ್ಚೆಗಳು ಆರೋಗ್ಯಕರ ಪ್ರಜಾಪ್ರಭುತ್ವದ ಭಾಗ. ಆದರೂ ನಮ್ಮ ಹೋರಾಟಗಳು ಎಷ್ಟು ಜನಪರವಾಗಿವೆ ಮತ್ತು ನಮ್ಮ ಮಾತಿನ ಉದ್ದೇಶ ಯಾವ ದಿಕ್ಕಿನಲ್ಲಿ ಇದೆ ಎಂಬುದು ಅತ್ಯಂತ ಮಹತ್ವದ ಸಂಗತಿಯಾಗಿರುತ್ತದೆ.

ಈ ವಿಷಯದಲ್ಲಿ ಅಪೂರ್ಣ ಮಾಹಿತಿ ಮತ್ತು ರಾಜಕೀಯಪ್ರೇರಿತ ಕಾರಣಗಳನ್ನು ಮುಂದಿಟ್ಟು ಚರ್ಚೆ ನಡೆಸಲಾಗುತ್ತಿದೆ. ಸುಮಾರು ₹10 ಸಾವಿರ ಕೋಟಿಗೂ ಹೆಚ್ಚಿನ ಅನುದಾನವನ್ನು, ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯ ನಿಯಮಗಳನ್ನು ಅಕ್ಷರಶಃ ಗಾಳಿಗೆ ತೂರಿ ವರ್ಗಾವಣೆ ಮಾಡಿದ್ದ ಬಿಜೆಪಿಯವರು ವಾಸ್ತವದಲ್ಲಿ ದಲಿತ ವಿರೋಧಿಗಳು.

ಪರಿಶಿಷ್ಟ ಸಮುದಾಯಗಳಿಗೆ ನಿರ್ದಿಷ್ಟ ಸೌಲಭ್ಯಗಳನ್ನು ತಲುಪಿಸುವ ಉದ್ದೇಶದಿಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2013-18ರ ಅವಧಿಯಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯನ್ನು ಜಾರಿಗೊಳಿಸಿತು. ಈ ಮೂಲಕ, ಸರ್ಕಾರದ ಯೋಜನೆಗಳಲ್ಲಿ ಪರಿಶಿಷ್ಟ ಸಮುದಾಯಗಳ ಜನಸಂಖ್ಯೆಯ ಅನುಪಾತಕ್ಕೆ ತಕ್ಕಂತೆ ಬಜೆಟ್‌ನಲ್ಲಿ ಅನುದಾನ ಮೀಸಲಿಡುವ ಮಹತ್ವದ ನಿರ್ಧಾರವನ್ನು ಕೈಗೊಂಡಿತು. ಅಂತೆಯೇ ಈ ಕಾಯ್ದೆಯ ಪರಿಮಿತಿಯಲ್ಲೇ ಸರ್ಕಾರದ ಯೋಜನೆಯ ಅನುಕೂಲಗಳನ್ನು ಪರಿಶಿಷ್ಟ ಸಮುದಾಯದವರಿಗೆ ಕಲ್ಪಿಸಲಾಗುತ್ತಿದ್ದು ಎಲ್ಲಿಯೂ ಈ ಹಣ ದುರುಪಯೋಗ ಆಗಿಲ್ಲ. ಅಲ್ಲದೆ ಈ ಕಾಯ್ದೆಯಡಿ ಅವರಿಗೆಂದೇ ನಿರ್ದಿಷ್ಟವಾಗಿ ರೂಪಿಸಲಾಗಿದ್ದ ಗಂಗಾ ಕಲ್ಯಾಣ, ನೇರ ಸಾಲ, ಉದ್ಯಮಶೀಲತಾ ಯೋಜನೆ, ಭೂ ಒಡೆತನ, ಐರಾವತ, ಪ್ರಬುದ್ಧ, ಔದ್ಯೋಗಿಕ ತರಬೇತಿಯಂತಹ ಯೋಜನೆಗಳಿಗೂ ಹೆಚ್ಚಿನ ಅನುದಾನ ಕಲ್ಪಿಸಲಾಗಿದೆ.

ಎಲ್ಲಾ ಅರ್ಹ ಪರಿಶಿಷ್ಟ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ, ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ, ಹೋಬಳಿಗೆ ಒಂದು ವಸತಿ ಶಾಲೆ, ಸ್ವಾವಲಂಬಿ ಸಾರಥಿ ಯೋಜನೆ, 'ಪ್ರಬುದ್ಧ' ಯೋಜನೆಯಡಿ ಆದಾಯ ಮಿತಿ ಏರಿಕೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹೆಚ್ಚಿಸುವಂತಹ ಮಹತ್ವದ ಕೆಲಸವನ್ನು ಮಾಡಿದೆ.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಉಪ ಯೋಜನೆಗಳ ಅಡಿ ಹಂಚಿಕೆಯಾಗಿರುವ ಅನುದಾನದ ಪ್ರಮಾಣ ಸರಾಸರಿ ₹27,612.03 ಕೋಟಿ. ಆದರೆ ಈಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ 2023ರಿಂದ ಈವರೆಗಿನ ಅವಧಿಯಲ್ಲಿ ಹಂಚಿಕೆಯಾದ ಸರಾಸರಿ ಅನುದಾನದ ಪ್ರಮಾಣ ₹37,648.72 ಕೋಟಿ. 2013ರಿಂದ 2018ರವರೆಗೆ ಮತ್ತು ಪ್ರಸಕ್ತ ಅಧಿಕಾರಾವಧಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಸುಮಾರು 51,401 ಕೊಳವೆ ಬಾವಿಗಳ ಸೌಲಭ್ಯವನ್ನು ನೀಡಲಾಗಿದೆ. ಆದರೆ ಬಿಜೆಪಿಯ ಅಧಿಕಾರಾವಧಿಯಲ್ಲಿ ಇವುಗಳ ಸಂಖ್ಯೆ ಇದ್ದದ್ದು 14,416 ಮಾತ್ರ.

ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಿಜೆಪಿಯವರಿಗೆ ಪರಿಶಿಷ್ಟ ಸಮುದಾಯಗಳ ಬಗ್ಗೆ ಅಸಹನೆ ಇದ್ದೇ ಇದೆ. ಅಂಬೇಡ್ಕರ್ ಅವರ ವಿಷಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಾತುಗಳೇ ಇದಕ್ಕೆ ಸ್ಪಷ್ಟ ನಿದರ್ಶನ. ಕೇಂದ್ರ ಸರ್ಕಾರಕ್ಕೆ ವಾರ್ಷಿಕವಾಗಿ ₹4.5 ಲಕ್ಷ ಕೋಟಿಯಷ್ಟು ತೆರಿಗೆ ಪಾವತಿಸುತ್ತಿರುವ ಕರ್ನಾಟಕಕ್ಕೆ ಮತ್ತು ಇಲ್ಲಿನ ಪರಿಶಿಷ್ಟ ಸಮುದಾಯಗಳ ಏಳಿಗೆಗೆ ಕೇಂದ್ರ ಯಾವ ಕೊಡುಗೆಯನ್ನೂ ನೀಡಿಲ್ಲ. ಬದಲಿಗೆ ಪರಿಶಿಷ್ಟ ಜಾತಿ ಕ್ರಿಯಾ ಯೋಜನೆಯಡಿ ರಾಜ್ಯಕ್ಕೆ ನೀಡುತ್ತಿದ್ದ ಅತಿ ಕಡಿಮೆ ಅನುದಾನದಲ್ಲಿ ₹210 ಕೋಟಿಯನ್ನು ಇನ್ನೂ ಬಾಕಿ ಉಳಿಸಿಕೊಂಡಿದೆ.

ದೇಶದ ಪರಿಶಿಷ್ಟ ಸಮುದಾಯಗಳ ಕಥೆಯಂತೂ ಇನ್ನೂ ಶೋಚನೀಯವಾಗಿದೆ. ದೇಶದಾದ್ಯಂತ ಶೇ 25ರಷ್ಟಿರುವ ಪರಿಶಿಷ್ಟ ಸಮುದಾಯಗಳಿಗೆ ಕೇಂದ್ರ ಬಜೆಟ್‌ನಲ್ಲಿ ನಿಗದಿಯಾಗಿರುವುದು ಶೇ 5.5ರಷ್ಟು ಅನುದಾನ ಮಾತ್ರ. ಅದರಲ್ಲೂ ಹಂಚಿಕೆಯಾದ ₹1.38 ಲಕ್ಷ ಕೋಟಿಯ ಪೈಕಿ ಬರೋಬ್ಬರಿ ಶೇ 94ರಷ್ಟು ಹಣವನ್ನು ಕೇಂದ್ರದ ಸಾಮಾನ್ಯ ಯೋಜನೆಗಳಿಗೆ (ಡೀಮ್ಡ್ ಎಕ್ಸ್‌ಪೆಂಡಿಚರ್) ನೀಡಲಾಗಿದೆ. ಉಳಿದ ಶೇ 6ರಷ್ಟು ಅನುದಾನದಲ್ಲಿ ಯಾವ ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿ ಸಾಧ್ಯ? ಈ ಸಂಗತಿಯನ್ನು ರಾಜ್ಯದ ಬಿಜೆಪಿ ಸಂಸದರಾಗಲಿ, ಪಕ್ಷದ ಅಧ್ಯಕ್ಷರಾಗಲಿ ಅಥವಾ ವಿರೋಧ ಪಕ್ಷದ ನಾಯಕರಾಗಲಿ ಎಂದಾದರೂ ಕೇಂದ್ರದ ಗಮನಕ್ಕೆ ತಂದು ಅನ್ಯಾಯವನ್ನು ಪ್ರಶ್ನಿಸಿದ್ದಾರೆಯೇ?

ಬಡ್ತಿ ಮೀಸಲಾತಿ ಕಾಯ್ದೆ, ಗುತ್ತಿಗೆಯಲ್ಲಿ ಮೀಸಲಾತಿ ಕಾಯ್ದೆಯನ್ನು ಸಹ ನಮ್ಮ ಸರ್ಕಾರ ಜಾರಿ ಮಾಡಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜಮೀನು ವರ್ಗಾವಣೆ ನಿಷೇಧ ಕಾಯ್ದೆಯಡಿ (ಪಿಟಿಸಿಎಲ್) ಹಲವು ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡುತ್ತಿದೆ. ವಿಶೇಷ ಪೊಲೀಸ್ ಠಾಣೆಗಳನ್ನು (ಡಿಸಿಆರ್‌ಇ) ಸ್ಥಾಪಿಸಿ ಪರಿಶಿಷ್ಟರ ಹಕ್ಕು ಮತ್ತು ಘನತೆಯ ರಕ್ಷಣೆಗೆ ಬದ್ಧವಾಗಿದೆ. ಹೀಗಾಗಿ, ರಾಜ್ಯ ಸರ್ಕಾರದ ಪರಿಶಿಷ್ಟರ ಪರವಾದ ನಿಲುವುಗಳು ದ್ರೋಹದ ಸಂಕೇತವೋ ಇಲ್ಲವೇ ಬದ್ಧತೆಯ ಕೆಲಸವೋ ಎಂಬುದನ್ನು ಜನರೇ ನಿರ್ಣಯಿಸಬೇಕು.

ಲೇಖಕ: ರಾಜ್ಯ ಸಮಾಜ ಕಲ್ಯಾಣ ಸಚಿವ

ವಾಚಕರ ವಾಣಿ

ಲಾಕರ್ ನಿರ್ವಹಣೆ: ಮಾರ್ಗಸೂಚಿ ಬದಲಾಗಲಿ

ಗ್ರಾಹಕರೊಬ್ಬರು ಬ್ಯಾಂಕ್ ಲಾಕರ್‌ನಲ್ಲಿ ಇರಿಸಿದ್ದ ಒಡವೆಗಳು ಕಾಣೆಯಾಗಿರುವ ಬಗ್ಗೆ ದೂರು ದಾಖಲಿಸಿರುವುದಾಗಿ ಇತ್ತೀಚೆಗೆ ಪತ್ರಿಕಾ ವರದಿಗಳು ತಿಳಿಸಿವೆ. ಇದರಲ್ಲಿ ಬ್ಯಾಂಕ್‌ನ ಜವಾಬ್ದಾರಿ ಸೀಮಿತವಾಗಿರುತ್ತದೆ. ಈ ವಿಷಯ ಬಹಳಷ್ಟು ಗ್ರಾಹಕರಿಗೆ ತಿಳಿದಿರುವುದಿಲ್ಲ. ಆರ್‌ಬಿಐ ಮಾರ್ಗಸೂಚಿ ಪ್ರಕಾರ, ಲಾಕರ್‌ನಲ್ಲಿ ಇರಿಸಲಾದ ವಸ್ತುಗಳಿಗೆ ಗ್ರಾಹಕರೇ ಜವಾಬ್ದಾರರಾಗಿರುತ್ತಾರೆ. ಬ್ಯಾಂಕ್ ಲಾಕರ್ ದರೋಡೆ, ಕಳ್ಳತನವಾದಲ್ಲಿ ವಾರ್ಷಿಕ ಸೇವಾ ಶುಲ್ಕದ 100 ಪಟ್ಟು ಹಣವನ್ನು ಮಾತ್ರ ಪರಿಹಾರದ ರೂಪದಲ್ಲಿ ನೀಡಲು ಬ್ಯಾಂಕ್ ಜವಾಬ್ದಾರಿಯಾಗಿರುತ್ತದೆ. ಬಂಗಾರದ ಪ್ರಸ್ತುತ ಮಾರುಕಟ್ಟೆ ಬೆಲೆಗೆ ಹೋಲಿಸಿದಲ್ಲಿ, ಪರಿಹಾರದ ರೂಪದಲ್ಲಿ ದೊರೆಯಬಹುದಾದ ಹಣ ಅತ್ಯಂತ ಕಡಿಮೆ ಇರುತ್ತದೆ. ಅಂದರೆ, ಲಾಕರ್‌ನಲ್ಲಿ ಇರಿಸಿದ್ದ ಒಡವೆಗಳ ತೂಕ ಹೆಚ್ಚಾಗಿದ್ದಲ್ಲಿ ಗ್ರಾಹಕರಿಗೆ ನಷ್ಟ ಉಂಟಾಗುತ್ತದೆ. ಈ ಮಾರ್ಗಸೂಚಿಯನ್ನು ಬ್ಯಾಂಕ್ ಸಿಬ್ಬಂದಿ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಗ್ರಾಹಕರಿಂದ ಸೇವಾ ಶುಲ್ಕ ಪಡೆದುಕೊಳ್ಳುವುದರಿಂದ, ಲಾಕರ್‌ನಲ್ಲಿ ಇರಿಸಲಾದ ಬೆಲೆಬಾಳುವ ವಸ್ತುಗಳಿಗೆ ಸಂಬಂಧಿಸಿದ ಬ್ಯಾಂಕ್‌ಗಳ ಸಿಬ್ಬಂದಿಯನ್ನು ಹೊಣೆಗಾರರನ್ನಾಗಿಸಬೇಕು. ಈ ಸಂಬಂಧ ಮಾರ್ಗಸೂಚಿಯನ್ನು ಬದಲಾಯಿಸುವ ಮೂಲಕ ಗ್ರಾಹಕರಿಗೆ ಆರ್‌ಬಿಐ ನ್ಯಾಯ ಒದಗಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ನಿರೀಕ್ಷೆಗೂ ಮೀರಿ ಹರಿದ ಪುಸ್ತಕಪ್ರೇಮ

ವಿಧಾನಸೌಧದ ಆವರಣದಲ್ಲಿ ಇತ್ತೀಚೆಗೆ ನಡೆದ ಪುಸ್ತಕ ಮೇಳದಲ್ಲಿ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುಸ್ತಕ ಖರೀದಿಸಲಿಲ್ಲ ಎಂಬ ಸುದ್ದಿಯ (ಪ್ರ.ವಾ., ಮಾರ್ಚ್ 4) ಹಿನ್ನೆಲೆಯಲ್ಲಿ ಒಂದಷ್ಟು ಅನುಮಾನಗಳು ಹಾಗೇ ಉಳಿದವು. ವಿಧಾನಸಭೆ ಸ್ಪೀಕರ್ ಅವರು, ಶಾಸಕರು ತಮ್ಮ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ₹2 ಲಕ್ಷ ವೆಚ್ಚದಲ್ಲಿ ಪುಸ್ತಕ ಖರೀದಿಸಲು ಅವಕಾಶವಿದೆ ಎಂದಿದ್ದರು. ವಿಧಾನಸಭೆಯಲ್ಲಿ ಸೋಮವಾರ ನಡೆದ ಚರ್ಚೆಯ ವೇಳೆ, ವಿರೋಧ ಪಕ್ಷದ ಸದಸ್ಯರು ₹2 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಪುಸ್ತಕ ಖರೀದಿಸಲು ಅವಕಾಶ ಕೋರಿರುವುದು ಸ್ವಾಗತಾರ್ಹ ಬೆಳವಣಿಗೆ. ಆದರೂ ನಮ್ಮ ಸಚಿವರು, ಶಾಸಕರು ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಮಿಂಚುವ ಅವಕಾಶವನ್ನು ತಪ್ಪಿಸಿಕೊಂಡದ್ದು ಜನರಲ್ಲಿ ನಿರಾಸೆ ಮೂಡಿಸಿರಬಹುದು. ಪುಸ್ತಕ ಮೇಳದಲ್ಲಿ ನಿರೀಕ್ಷೆಗೂ ಮೀರಿ ರಾಜ್ಯದ ಎಲ್ಲ ಪ್ರದೇಶಗಳ ಪುಸ್ತಕ ಪ್ರೇಮಿಗಳು ಪಾಲ್ಗೊಂಡಿದ್ದುದು ವಿಶೇಷವಾಗಿತ್ತು. ಪುಸ್ತಕ ಮೇಳದಲ್ಲಿ ಪಾಲ್ಗೊಂಡು ಪುಸ್ತಕ ಖರೀದಿಸುವುದು ಹಾಗೂ ಮನೆಮಂದಿಯೆಲ್ಲ ವಿಧಾನಸೌಧದ ಅಂದವನ್ನು ಬಹುವರ್ಷಗಳ ನಂತರ ಹತ್ತಿರದಿಂದ ಕಣ್ತುಂಬಿಕೊಳ್ಳುವ ಅಭಿಲಾಷೆ ಇದಕ್ಕೆ ಕಾರಣವಾಗಿರಬಹುದು.

ಪುಸ್ತಕ ಬಿಡುಗಡೆಗೆ, ಸಂವಾದಕ್ಕೆ ಸರ್ಕಾರ ಅನುವು ಮಾಡಿಕೊಟ್ಟಿದ್ದು ಅರ್ಥಪೂರ್ಣವಾಗಿತ್ತು. ಸರ್ಕಾರಿ ಪ್ರಾಯೋಜಿತ ಪುಸ್ತಕ ಮೇಳ ಇಷ್ಟು ಸಂಭ್ರಮಕ್ಕೆ ಒಳಗಾದುದು ಆಶ್ಚರ್ಯಕರ ಸಂಗತಿ. ಈ ಮಧ್ಯೆ, ಸರ್ಕಾರವು ಪುಸ್ತಕ ಖರೀದಿ ನಿಯಮಗಳನ್ನು ಸರಳಗೊಳಿಸಿ ಆಯಾ ತಾಲ್ಲೂಕಿನ ಲೇಖಕರ ಪುಸ್ತಕಗಳನ್ನು ಆಯಾ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಖರೀದಿಸುವ ವ್ಯವಸ್ಥೆ ಮಾಡಿದರೆ ಎಲ್ಲಾ ಲೇಖಕರು ಹಾಗೂ ಪ್ರಕಾಶಕರಿಗೆ ಅನುಕೂಲವಾಗುತ್ತದೆ. ಇದರಿಂದ ಪುಸ್ತಕ ಬರೆಯುವವರನ್ನೂ ಉತ್ತೇಜಿಸಿದಂತೆ ಆಗುತ್ತದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ನಟ್ಟು-ಬೋಲ್ಟು!

ಎಲ್ಲವನ್ನೂ
ಮಾಡಬಹುದು ಟೈಟು
ಪೂರಾ ಲಾಕು,
ರಾಜಕೀಯದವರ ನಾಲಿಗೆ
ಒಂದನ್ನು ಬಿಟ್ಟು!
ಯಾಕೆಂದರೆ...
ಅದಕ್ಕಿಲ್ಲ
ನಟ್ಟು- ಬೋಲ್ಟು
ಸದಾ ಲೂಸ್ ಟಾಕು!

ಎಲ್.ಎನ್.ಪ್ರಸಾದ್
ತುರುವೇಕೆರೆ

ಪ್ರಶ್ನೆಪತ್ರಿಕೆ ರಚನೆ ಪಾಂಡಿತ್ಯ ಪ್ರದರ್ಶನವಲ್ಲ

ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಪ್ರಾರಂಭವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪ್ರಶ್ನೆಪತ್ರಿಕೆ ವಿಚಾರವಾಗಿ ವಿದ್ಯಾರ್ಥಿಗಳು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೊದಲಿಗೆ ಪ್ರಶ್ನೆಪತ್ರಿಕೆಯನ್ನು ವಿದ್ಯಾರ್ಥಿಸ್ನೇಹಿಯಾಗಿ ಸಿದ್ಧಪಡಿಸಬೇಕು. ಪ್ರಶ್ನೆಪತ್ರಿಕೆಗಳಲ್ಲಿ ಕೆಲವು ಬಹು ಆಯ್ಕೆ ಪ್ರಶ್ನೆಗಳನ್ನು ಸುತ್ತಿಬಳಸಿ ಕೇಳಲಾಗಿರುತ್ತದೆ. ಪ್ರಶ್ನೆಪತ್ರಿಕೆ ಕ್ಲಿಷ್ಟವಾಗಿ ಇದ್ದಷ್ಟೂ ಅದರ ಗುಣಮಟ್ಟ ಹೆಚ್ಚುತ್ತದೆ ಎನ್ನುವಂತಹ ಮನಃಸ್ಥಿತಿ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಕೆಲವರಲ್ಲಿ ಇರುತ್ತದೆ. ಅದು ತಪ್ಪುಕಲ್ಪನೆ.

ಒಂದು ಪ್ರಶ್ನೆಪತ್ರಿಕೆ ಹೊಂದಿರಬೇಕಾದ ಸಾಮಾನ್ಯ ನಿಯಮವೆಂದರೆ, ಶೇಕಡ 50ರಷ್ಟು ಪ್ರಶ್ನೆಗಳು ಎಲ್ಲಾ ವಿದ್ಯಾರ್ಥಿಗಳು ಸರಳವಾಗಿ ಉತ್ತರಿಸುವಂತೆ ಇರಬೇಕು, ಇನ್ನು ಶೇಕಡ 30ರಷ್ಟು ಪ್ರಶ್ನೆಗಳು ಯೋಚಿಸಿ ಉತ್ತರಿಸಬೇಕಾದಂತಹವು ಆಗಿರಬೇಕು, ಇನ್ನುಳಿದ ಶೇಕಡ 20ರಷ್ಟು ಪ್ರಶ್ನೆಗಳನ್ನು ಆಳವಾಗಿ ಅಧ್ಯಯನ ಮಾಡಿ ಬರೆಯಬೇಕಾಗಿರುತ್ತದೆ ಎಂಬುದನ್ನು ಗಮನದಲ್ಲಿ ಇಡಬೇಕಾಗುತ್ತದೆ.

ಕೆ.ಎನ್.ರಂಗಸ್ವಾಮಿ, ಉಜಿರೆ

ಜನನಾಯಕರೇ... ಮಾನವೀಯತೆ ಮೆರೆಯಿರಿ

ಹಳ್ಳಿ ಕಡೆ ಕುಡಿಯುವ ನೀರಿಗೆ ಹಾಹಾಕಾರ, ರೈತರ ಬದುಕು ದುಸ್ತರ, ಕಾರ್ಮಿಕರ ಸ್ಥಿತಿ ಶೋಚನೀಯ, ಆಶಾ ಕಾರ್ಯಕರ್ತರ ಕನಿಷ್ಠತಮ ಬದುಕು, ಸಂಪರ್ಕ ರಸ್ತೆಗಳ ಅವ್ಯವಸ್ಥೆ, ಕೆಲವು ಸರ್ಕಾರಿ ಶಾಲೆಗಳಿಗೆ ಚಾವಣಿಯೇ ಇಲ್ಲದಿರುವುದು, ಪೀಠೋಪಕರಣ, ಪಾಠೋಪಕರಣ ಪೂರೈಕೆಯಾಗದೆ ಮಕ್ಕಳು ಬವಣೆಪಡುತ್ತಿರುವುದು... ಹೀಗೆ ರಾಜ್ಯದ ಜನ ನರಳುತ್ತಿರುವಾಗ, ಇಂತಹ ಜನರನ್ನು ಪ್ರತಿನಿಧಿಸುವ ನಿಮ್ಮ ಸಂಬಳ ಹೆಚ್ಚಳ, ಆರಾಮವಾಗಿ ಮಲಗಲು ದುಬಾರಿ ಸೋಫಾಗಳು, ಪಿಂಚಣಿ, ಸವಲತ್ತುಗಳನ್ನು ಪಡೆದುಕೊಂಡು ಮೋಜಿನ ಬದುಕು ನಡೆಸಲು ನಿಮಗೆ ಮನಸ್ಸಾದರೂ ಹೇಗೆ ಬರುತ್ತದೆ? ಸಾರ್ವಜನಿಕರ ತೆರಿಗೆ ಹಣಕ್ಕೆ ಬೆಲೆ ಇಲ್ಲವೇ? ಇಷ್ಟು ದುಂದುವೆಚ್ಚಕ್ಕೆ ಲೆಕ್ಕ ಎಲ್ಲಿದೆ? ವಿಶ್ವಾಸಾರ್ಹತೆ ಏನು? ಈ ಧೋರಣೆ ಬಿಡಿ. ನಿಮ್ಮನ್ನು ಆಯ್ಕೆ ಮಾಡಿದ ಜನರನ್ನು ಒಮ್ಮೆ ನೋಡಿ. ನಿಮಗೆ ಆತ್ಮಸಾಕ್ಷಿ ಇದ್ದರೆ ಅದನ್ನು ಪರೀಕ್ಷೆಗೆ ಒಡ್ಡಿಕೊಳ್ಳಿ. ಈ ಕೂಡಲೇ ಮುಖ್ಯಮಂತ್ರಿ ಆದಿಯಾಗಿ, ಈ ಸವಲತ್ತುಗಳೆಲ್ಲ ಬೇಡವೆಂಬ ಒಕ್ಕೊರಲಿನ ಧ್ವನಿ ನಿಮ್ಮದಾಗಲಿ. ಅಮಾಯಕರ ಕಷ್ಟಗಳಿಗೆ ಸ್ಪಂದಿಸಿ ಮಾನವೀಯತೆ ಮೆರೆಯಿರಿ ಜನನಾಯಕರೇ.

ಎಸ್.ಕುಮಾರಸ್ವಾಮಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದ ಹಲವು ರಾಜ್ಯಗಳಲ್ಲಿ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಸೋಂಕಿತ ಹಕ್ಕಿಗಳನ್ನು, ಕೋಳಿಗಳನ್ನು ನಾಶಪಡಿಸಲಾಗುತ್ತಿದೆ. ಅದರ ಜತೆಯಲ್ಲೇ ಸೋಂಕು ಮನುಷ್ಯರಿಗೆ ಹರಡುವ ಬಗ್ಗೆ ಮತ್ತು ಕೋಳಿ ಮಾಂಸ, ಮೊಟ್ಟೆ ತಿನ್ನುವ ಬಗ್ಗೆ ಜನರಲ್ಲಿ ಆತಂಕ ಮೂಡಿದೆ. ಆದರೆ, ಹಕ್ಕಿಜ್ವರದ ಬಗ್ಗೆ ಜನರಲ್ಲಿ ತಪ್ಪು ತಿಳಿವಳಿಕೆಗಳು ಇವೆ. ತಜ್ಞರ ಪ್ರಕಾರ, ಚೆನ್ನಾಗಿ ಬೇಯಿಸಿದ ಕೋಳಿ ಮಾಂಸ, ಮೊಟ್ಟೆಯನ್ನು ಜನ ಯಾವುದೇ ಆತಂಕವಿಲ್ಲದೆ ತಿನ್ನಬಹುದು. ಮಾಂಸ ಮತ್ತು ಮೊಟ್ಟೆಯನ್ನು ಹೇಗೆ ಬೇಯಿಸಬೇಕು, ಹೇಗೆ ಶುಚಿತ್ವ ಕಾಪಾಡಿಕೊಳ್ಳಬೇಕು ಎನ್ನುವ ಬಗ್ಗೆಯೂ ಆಹಾರ ತಜ್ಞರು, ವೈದ್ಯರು ಸಲಹೆಗಳನ್ನು ನೀಡಿದ್ದಾರೆ

ಹಕ್ಕಿಜ್ವರ ಆತಂಕ ಬೇಡ

ಮಾಂಸ, ಮೊಟ್ಟೆ ತಿಂದರೆ ಸೋಂಕು ತಗಲದು

ಪ್ರಜಾವಾಣಿ ವಾರ್ತೆ

ಕರ್ನಾಟಕದ ಹಲವು ಪ್ರದೇಶಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಬಳ್ಳಾರಿ, ಚಿಕ್ಕಬಳ್ಳಾಪುರ, ರಾಯಚೂರು ಜಿಲ್ಲೆಗಳಲ್ಲಿ ಸೋಂಕು ಪ್ರಕರಣಗಳು ವರದಿಯಾಗಿವೆ. ಫಾರಂ ಕೋಳಿಗಳಲ್ಲಿ ಹೆಚ್ಚಿನ ಪ್ರಮಾಣದ ಸೋಂಕು ಕಂಡು ಬಂದಿದ್ದು, ಪಶುವೈದ್ಯಕೀಯ ಸೇವಾ ಇಲಾಖೆಯು ಈ ಜಿಲ್ಲೆಗಳಲ್ಲಿ ಹಕ್ಕಿಜ್ವರ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳುತ್ತಿದೆ. ಸೋಂಕಿತ ಮತ್ತು ಶಂಕಿತ ಕೋಳಿಗಳನ್ನು ಕೊಲ್ಲಲಾಗಿದೆ. ಆರೋಗ್ಯ ಇಲಾಖೆಯೂ ಮಾರ್ಗಸೂಚಿ ಪ್ರಕಟಿಸಿದೆ. ಹಕ್ಕಿಜ್ವರ ಇತರ ಜಿಲ್ಲೆಗಳಿಗೂ ಹರಡುವ ಅಪಾಯವನ್ನು ತಳ್ಳಿಹಾಕಲಾಗದು. ಮುನ್ನೆಚ್ಚರಿಕೆ ವಹಿಸುವಂತೆ ರಾಜ್ಯ ಸರ್ಕಾರ ಸೂಚಿಸಿದೆ. ನೆರೆಯ ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲೂ ಹಕ್ಕಿಜ್ವರ ವರದಿಯಾಗಿದ್ದು, ಸಾವಿರಾರು ಕೋಳಿಗಳನ್ನು ನಾಶಪಡಿಸಲಾಗಿದೆ. ಇದು ಸಾಂಕ್ರಾಮಿಕ ರೋಗವಾಗಿರುವುದರಿಂದ ಹಕ್ಕಿಗಳಿಂದ ಹಕ್ಕಿಗಳಿಗೆ ಬಹುಬೇಗ ಹರಡುತ್ತದೆ. ಹೊರರಾಜ್ಯಗಳಿಂದ ರಾಜ್ಯಕ್ಕೂ ಫಾರಂ ಕೋಳಿಗಳು ಪೂರೈಕೆಯಾಗುತ್ತಿರುವುದರಿಂದ ಹರಡುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ, ರಾಜ್ಯದ ಗಡಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಈ ರಾಜ್ಯಗಳ ಕೋಳಿ ಸಾಗಾಣಿಕೆಗೆ ನಿರ್ಬಂಧ ಹೇರಲಾಗಿದೆ.

> **ಹಸುಗಳಲ್ಲಿ ಹಕ್ಕಿಜ್ವರ ಕಂಡು ಬಂದರೆ, ಈ ರೋಗಕ್ಕೆ ಕಾರಣವಾಗುವ ಎಚ್‌5ಎನ್‌1 ವೈರಸ್‌ಗಳು ಹಸುಗಳ ಹಾಲಿನಲ್ಲಿಯೂ ಇರುತ್ತವೆ. ಆದರೆ, ಆ ಹಾಲನ್ನು ಕುದಿಸಿ ಕುಡಿದರೆ ರೋಗ ಹರಡುವುದಿಲ್ಲ ಎಂಬುದು ತಜ್ಞರ ಹೇಳಿಕೆ.**

‘ಬೇಯಿಸಿ ತಿನ್ನುವುದು ಸುರಕ್ಷಿತ’

ಹಕ್ಕಿಜ್ವರದ ಬಗ್ಗೆ ಜನರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಕೋಳಿ ಮಾಂಸ ಅಥವಾ ಮೊಟ್ಟೆಯನ್ನು ತಿನ್ನುವುದರಿಂದ ಹಕ್ಕಿಜ್ವರ ಮನುಷ್ಯರಿಗೆ ಬರುವುದಿಲ್ಲ. ಆದರೆ, ತಿನ್ನುವುದಕ್ಕೂ ಮೊದಲು ಮಾಂಸ ಮತ್ತು ಮೊಟ್ಟೆಯನ್ನು ಚೆನ್ನಾಗಿ ಬೇಯಿಸಬೇಕು. ಸೋಂಕಿತ ಕೋಳಿಗಳ ಮಾಂಸವನ್ನು ಸರಿಯಾಗಿ ಬೇಯಿಸದೆ ತಿಂದರೆ, ಅವುಗಳ ಹಸಿ ಮೊಟ್ಟೆ ಸೇವಿಸಿದರೆ ರೋಗ ತಗಲುವ ಸಾಧ್ಯತೆ ಇರುತ್ತದೆ. ಮಾಂಸದ ಅಡುಗೆ ಸಿದ್ಧಪಡಿಸುವವರು ಮುನ್ನೆಚ್ಚರಿಕೆ ಕೈಗೊಳ್ಳಬೇಕು. ಸೋಂಕು ನಿವಾರಕದಿಂದ ಕೈಗಳನ್ನು ಸ್ವಚ್ಛಮಾಡಿಕೊಳ್ಳಬೇಕು.

ಡಾ.ಅನ್ಸರ್ ಅಹಮದ್, ರಾಜ್ಯ ಆರೋಗ್ಯ ಇಲಾಖೆಯ ಸಮಗ್ರ ರೋಗ ಕಣ್ಗಾವಲು ಯೋಜನಾ (ಐಡಿಎಸ್‌ಪಿ) ನಿರ್ದೇಶಕ

ಈ ವೈರಾಣು ಸೋಂಕು ದೇಶದ ಹಲವು ರಾಜ್ಯಗಳಲ್ಲಿ ವರದಿಯಾಗಿರುವುದರಿಂದ ಕೋಳಿಗಳ ಸಾವು, ರೈತರ ರಕ್ಷಣೆ ಮತ್ತು ಜನರ ಆರೋಗ್ಯದ ಸುರಕ್ಷೆಯ ವಿಚಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರದ ಪಶುವೈದ್ಯಕೀಯ ಸಚಿವಾಲಯವೂ ರಾಜ್ಯಗಳಿಗೆ ಸೂಚಿಸಿದೆ.

ಕೋಳಿಗಳು, ಟರ್ಕಿ ಕೋಳಿ, ಗಿನಿ ಕೋಳಿ, ಗೀಜಗ, ಕಾಗೆ ಮುಂತಾದ ಪಕ್ಷಿಗಳಲ್ಲಿ ಹಕ್ಕಿಜ್ವರ ಕಂಡುಬಂದಿದೆ. ಹಕ್ಕಿ ಜ್ವರದ ಭಯದಿಂದ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಕೋಳಿ ಮಾಂಸ, ಮೊಟ್ಟೆ ತಿನ್ನಲು ಜನ ಹಿಂದೇಟು ಹಾಕುತ್ತಿದ್ದಾರೆ. ಕುಕ್ಕುಟೋದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಇದಕ್ಕೆ ಹಕ್ಕಿಜ್ವರದ ಬಗ್ಗೆ ಇರುವ ತಪ್ಪು ತಿಳಿವಳಿಕೆಗಳೇ ಕಾರಣ.

‘ಏವಿಯೆನ್ ಇನ್‌ಫ್ಲುಯೆಂಜಾ’ ಎಂದು ಕರೆಯಲಾಗುವ ಹಕ್ಕಿಜ್ವರವು ಹಕ್ಕಿಗಳ ಜತೆಗೆ ಒಮ್ಮೊಮ್ಮೆ ಪ್ರಾಣಿಗಳಲ್ಲೂ ಕಾಣಿಸಿಕೊಳ್ಳುತ್ತದೆ. ಎಚ್‌5ಎನ್‌1 ಎನ್ನುವ ವೈರಸ್ ಈ ಸೋಂಕಿಗೆ ಕಾರಣ. ಹಕ್ಕಿಗಳ ಜೊಲ್ಲು, ಮೂಗಿನ ಸೋರಿಕೆ, ಹಿಕ್ಕೆಗಳ ಮೂಲಕ ವೈರಾಣುಗಳು ಹರಡುತ್ತವೆ. ಅವುಗಳ ಹಿಕ್ಕೆ, ಜೊಲ್ಲು ಮುಂತಾದವು ಬೆರೆತ ನೀರು ಕುಡಿಯುವುದರಿಂದಲೂ ಸೋಂಕು ಬರುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ವಲಸೆ ಹಕ್ಕಿಗಳು ರೋಗವನ್ನು ಹರಡುತ್ತವೆ. ವೈರಸ್ ರೂಪಾಂತರಗೊಂಡು ಪಕ್ಷಿಗಳಲ್ಲಿ ತೀವ್ರ ರೋಗಕ್ಕೆ, ಸಾವಿಗೆ ಕಾರಣವಾಗುವುದೂ ಉಂಟು.

ಮನುಷ್ಯರಿಗೆ ಹರಡುವ ಸಾಧ್ಯತೆ ಕ್ಷೀಣ: ಹಕ್ಕಿಜ್ವರವು ಹಕ್ಕಿಗಳಿಂದ ಮನುಷ್ಯರಿಗೆ ಹರಡುವುದು ಅಪರೂಪ. ಆದರೆ, ತೀರಾ ಹರಡುವುದೇ ಇಲ್ಲ ಎಂದು ಹೇಳಲಾಗುವುದಿಲ್ಲ. ಮನುಷ್ಯರಿಗೆ ಹರಡಿರುವ ನಿದರ್ಶನಗಳಿವೆ. ಹಲವು ರೀತಿಯ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅಮೆರಿಕದ ವ್ಯಕ್ತಿಯೊಬ್ಬರು ಇತ್ತೀಚೆಗೆ ಹಕ್ಕಿಜ್ವರದಿಂದ ಮೃತರಾಗಿದ್ದರು. ಅದು ಬಹಳ ಅಪರೂಪದ ಪ್ರಕರಣ. ಬಹಳ ಮುಖ್ಯವಾಗಿ, ಹಕ್ಕಿಜ್ವರವು ಮನುಷ್ಯರಿಂದ ಮನುಷ್ಯರಿಗೆ ಹರಡುವುದಿಲ್ಲ.

ತಜ್ಞರ ಪ್ರಕಾರ, ಹಕ್ಕಿಜ್ವರದಿಂದ ಮನುಷ್ಯರಿಗೆ ಯಾವುದೇ ಅಪಾಯ ಇಲ್ಲ. ಅಷ್ಟೇ ಅಲ್ಲ, ಜನ ಮಾಂಸ ಮತ್ತು ಮೊಟ್ಟೆಯನ್ನೂ ಎಂದಿನಂತೆ ತಿನ್ನಬಹುದು.

ತಿನ್ನುವುದು ಹೇಗೆ?

ಹಕ್ಕಿಜ್ವರದ ಕಾರಣದಿಂದಾಗಿ ಮಾಂಸ ಮತ್ತು ಮೊಟ್ಟೆಗಳನ್ನು ಹೇಗೆ ತಿನ್ನಬೇಕು, ಹೇಗೆ ಶುಚಿತ್ವ ಕಾಪಾಡಿಕೊಳ್ಳಬೇಕು ಎನ್ನುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯೂ ಸೇರಿದಂತೆ ಆಹಾರ ತಜ್ಞರು ಮಾರ್ಗಸೂಚಿ ಪ್ರಕಟಿಸಿದ್ದಾರೆ.

- ಮಾಂಸವನ್ನು ಶುಚಿಯಾಗಿ ಇಡಬೇಕು
- ಬೇಯಿಸದೇ ಇರುವ ಮತ್ತು ಬೇಯಿಸಿದ ಮಾಂಸವನ್ನು ಪ್ರತ್ಯೇಕವಾಗಿ ಇಡಬೇಕು
- ಸೋಂಕಿರುವ ಕೋಳಿ/ಹಕ್ಕಿಗಳ ಹಸಿ ಮೊಟ್ಟೆ ತಿನ್ನಬಾರದು
- ಕೋಳಿ ಮಾಂಸ, ಮೊಟ್ಟೆಯನ್ನು 70 ಡಿಗ್ರಿ ಸೆಂಟಿಗ್ರೇಡ್‌ಗೂ ಅಧಿಕ ಉಷ್ಣಾಂಶದಲ್ಲಿ ಸುಮಾರು 30 ನಿಮಿಷ ಚೆನ್ನಾಗಿ ಬೇಯಿಸಬೇಕು
- ಕೋಳಿ ಮಾಂಸ ಸಿದ್ಧಪಡಿಸಿದ ನಂತರ ಕೈಗಳನ್ನು ನಂಜು ನಿರೋಧಕದಿಂದ ಶುಚಿಗೊಳಿಸಿಕೊಳ್ಳಬೇಕು

ಆಧಾರ: ಪಿಟಿಐ, ವಿಶ್ವ ಆರೋಗ್ಯ ಸಂಸ್ಥೆ, ಆರೋಗ್ಯ ಮತ್ತು ಪಶುಸಂಗೋಪನೆ ಇಲಾಖೆ ಮಾಹಿತಿ

ಸರ್ಕಾರದ ಸಲಹೆಗಳೇನು?

- ಹಕ್ಕಿಜ್ವರ ಸಾಂಕ್ರಾಮಿಕ ರೋಗವಾದರೂ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡರೆ ರೋಗ ಹರಡುವಿಕೆ ತಡೆಯಬಹುದು
- ಹಕ್ಕಿ/ಕೋಳಿಗಳಲ್ಲಿ ಅಸಹಜ ಸಾವು ಹಾಗೂ ಹಕ್ಕಿ ಜ್ವರದ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣವೇ ಹತ್ತಿರದ ಪಶುವೈದ್ಯಕೀಯ ಆಸ್ಪತ್ರೆಗೆ ಮಾಹಿತಿ ನೀಡಬೇಕು
- ಹಕ್ಕಿ/ಕೋಳಿ/ಬಾತುಕೋಳಿಗಳು ಮೃತಪಟ್ಟರೆ ಅದರ ಸಮೀಪ ಹೋಗಬಾರದು, ಅವುಗಳನ್ನು ಮುಟ್ಟಬಾರದು. ಅವುಗಳನ್ನು ಕೊಲ್ಲಲು, ನಂತರ ವಿಲೇವಾರಿ ಮಾಡಲು ಪಶುಸಂಗೋಪನಾ ಇಲಾಖೆಗೆ ತಿಳಿಸಬೇಕು
- ಕೋಳಿ ಸಾಕಣಿಕೆ ಕೇಂದ್ರಗಳನ್ನು ಗುರುತಿಸಿ ಅಗತ್ಯ ಮಾಹಿತಿಗಳನ್ನು ನೀಡಿ ಕೇಂದ್ರದ ಮೇಲೆ ನಿಗಾ ವಹಿಸಬೇಕು. ಕೋಳಿ ಫಾರಂ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು
- ಹಕ್ಕಿಜ್ವರ ಶಂಕಿತ ಅಥವಾ ಪೀಡಿತ ಫಾರಂಗಳಿಗೆ ಭೇಟಿ ನೀಡಬಾರದು
- ಸೋಂಕು ಹರಡಿರುವ ಫಾರಂಗೆ ಭೇಟಿ ನೀಡಿದಾಗ ಅಥವಾ ಸಂಪರ್ಕಕ್ಕೆ ಬಂದರೆ ತಕ್ಷಣವೇ ಕೈಕಾಲು, ಮುಖ ತೊಳೆದುಕೊಂಡು ಬಟ್ಟೆ ಬದಲಾಯಿಸಿಕೊಳ್ಳಬೇಕು. ಜ್ವರದ ಲಕ್ಷಣ ಕಾಣಿಸಿಕೊಂಡರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು

- ಹಕ್ಕಿಜ್ವರ ಪ್ರಕರಣಗಳು ವರದಿಯಾಗಿರುವ ಪ್ರದೇಶದ 3ರಿಂದ 10 ಕಿ.ಮೀ ವ್ಯಾಪ್ತಿಯ ಪ್ರದೇಶಗಳಲ್ಲಿ ಜ್ವರ, ಶೀತ ನೆಗಡಿಯ ರೋಗ ಲಕ್ಷಣ ಇರುವ ಬಗ್ಗೆ ವಾರಕ್ಕೊಮ್ಮೆ ಸಮೀಕ್ಷೆ ಮಾಡಬೇಕು ಮತ್ತು ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು
- ಒಂದು ವೇಳೆ ಈ ಪ್ರದೇಶಗಳಲ್ಲಿ ಜ್ವರ, ಕೆಮ್ಮು, ತಲೆ ನೋವು, ಗಂಟಲು ನೋವು ಮತ್ತು ಸ್ನಾಯು ನೋವುಗಳು ಕಂಡು ಬಂದಲ್ಲಿ ಕೂಡಲೇ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯಬೇಕು
- ಸೋಂಕಿತ ಸ್ಥಳದಲ್ಲಿ ಯಾವುದೇ ವಸ್ತು ಮುಟ್ಟಿದರೆ ತಕ್ಷಣ, ಸೋಂಕು ನಿವಾರಕ/ಸಾಬೂನು ಬಳಸಿ ಕೈತೊಳೆಯಬೇಕು
- ಕೋಳಿ ಫಾರಂಗಳಿಂದ ಕೋಳಿಗಳನ್ನು ಸಾಗಣೆ ಮಾಡುವ ವಾಹನಗಳನ್ನು ಸೋಂಕು ನಿವಾರಕ ಸಿಂಪಡಿಸಿ ಸ್ವಚ್ಛಗೊಳಿಸಬೇಕು
- ಹೆಚ್ಚು ಪ್ರಕರಣಗಳು ವರದಿಯಾಗುತ್ತಿರುವ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಕೋಳಿ ಸಾಗಣೆ ವಾಹನಗಳ ಮೇಲೆ ನಿಗಾ ಇಡಬೇಕು
- ಸಾರ್ವಜನಿಕರು ಅನಗತ್ಯವಾಗಿ ಭಯ ಬೀಳುವುದನ್ನು ತಪ್ಪಿಸುವುದಕ್ಕಾಗಿ ಅವರಲ್ಲಿ ಹಕ್ಕಿಜ್ವರದ ಬಗ್ಗೆ ಜಾಗೃತಿ ಮೂಡಿಸಬೇಕು

ಸಿನಿ ಬಿಟ್ಸ್

ತೆರೆ ಮೇಲೆ ‘ಸತಿ ಸುಲೋಚನಾ’ ಕಥೆ

ವೈ.ವಿ.ರಾವ್ ನಿರ್ದೇಶನದ ‘ಸತಿ ಸುಲೋಚನಾ’ 1934ರಲ್ಲಿ ಬಿಡುಗಡೆಯಾದ ಕನ್ನಡದ ಮೊದಲ ವಾಕ್ಚಿತ್ರ. ಇದೀಗ ಈ ಸಿನಿಮಾದ ನಿರ್ಮಾಣ ಪ್ರಕ್ರಿಯೆ ತೆರೆ ಮೇಲೆ ಮರುಸೃಷ್ಟಿಯಾಗಲಿದೆ.

‘ಸತಿ ಸುಲೋಚನಾ; ಮೂರು–ಮೂರು–ಮೂವತ್ತನಾಲ್ಕು’ ಎಂಬ ಸಿನಿಮಾವನ್ನು ಪಿ.ಶೇಷಾದ್ರಿ ಅವರು ನಿರ್ದೇಶಿಸುತ್ತಿದ್ದಾರೆ. ತಮ್ಮ ತಾತ ಸುಬ್ಬಯ್ಯ ನಾಯ್ಡು ಅವರು ನಾಯಕರಾಗಿ ನಟಿಸಿದ್ದ ‘ಸತಿ ಸುಲೋಚನಾ’ ಸಿನಿಮಾವನ್ನು ಲೋಕೇಶ್ ಪ್ರೊಡಕ್ಷನ್ಸ್‌ನಡಿ ನಿರ್ಮಾಣ ಮಾಡುತ್ತಿದ್ದಾರೆ ಸೃಜನ್ ಲೋಕೇಶ್. ಜೊತೆಗೆ ತಾತ ಬಣ್ಣಹಚ್ಚಿದ್ದ ಇಂದ್ರಜಿತುವಿನ ಪಾತ್ರವನ್ನೂ ಸೃಜನ್ ನಿಭಾಯಿಸಲಿದ್ದಾರೆ. ಮುಂದಿನ ವರ್ಷದ ಮಾರ್ಚ್ 3ರಂದು ಸಿನಿಮಾ ತೆರೆಗೆ ತರುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇತ್ತೀಚೆಗೆ ಚಿತ್ರತಂಡ ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಂಡಿತು.

‘ದುರದೃಷ್ಟವಶಾತ್ ಮೊದಲ ವಾಕ್ಚಿತ್ರದ ಪ್ರತಿಯಾಗಲಿ, ಕಥೆ–ಚಿತ್ರಕಥೆ ಲಭ್ಯವಿಲ್ಲ. ಸ್ಥಿರ ಚಿತ್ರಗಳಷ್ಟೇ ಇವೆ. ಸಿನಿಮಾದ ಕುರಿತ ಸಂಶೋಧನೆ ಮತ್ತು ಚಿತ್ರಕಥೆ ರಚಿಸುವ ಕೆಲಸ ಆರಂಭವಾಗಿದೆ. ‘ಸತಿ ಸುಲೋಚನಾ’ ಸಿನಿಮಾ ನಿರ್ಮಾಣವಾದ ಪೂರ್ಣ ಪ್ರಕ್ರಿಯೆಯನ್ನು ಈ ಸಿನಿಮಾ ಕಟ್ಟಿಕೊಡಲಿದೆ. ಬಿಡುಗಡೆಯ ಸಂದರ್ಭವನ್ನೂ ಮರುಸೃಷ್ಟಿಸಲಿದ್ದೇವೆ. ಚಿತ್ರದ ಕಥೆ ಪೌರಾಣಿಕವಾಗಿದ್ದು ಕೆಲ ದೃಶ್ಯಗಳನ್ನು ಸೃಷ್ಟಿಸಲಿದ್ದೇವೆ. ಇದು ಸಾಕ್ಷ್ಯಚಿತ್ರವಲ್ಲ. ಮರಾಠಿಯ ‘ಹರಿಶ್ಚಂದ್ರಾಚಿ ಫ್ಯಾಕ್ಟರಿ’ ಸಿನಿಮಾದ ಮಾದರಿಯಲ್ಲಿ ಈ ಚಿತ್ರವಿರಲಿದೆ’ ಎನ್ನುತ್ತಾರೆ ಶೇಷಾದ್ರಿ.

ಸತಿ ಸುಲೋಚನಾ ಚಿತ್ರದ ದೃಶ್ಯ

‘ಈ ಸಿನಿಮಾವನ್ನು ಲಾಭಕ್ಕಾಗಿ ಮಾಡುತ್ತಿಲ್ಲ. ಕನ್ನಡ ಚಿತ್ರರಂಗದ ಉತ್ಕೃಷ್ಟವಾದ ಪರಂಪರೆಯನ್ನು ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ ಈ ಹೆಜ್ಜೆ ಇಟ್ಟಿದ್ದೇವೆ. ಈ ಸಿನಿಮಾ ಮಾಡುವ ಮೂಲಕ ‘ಸತಿ ಸುಲೋಚನಾ’ ತಂಡಕ್ಕೆ ಗೌರವ ಸಲ್ಲಿಸುತ್ತಿದ್ದೇವೆ’ ಎಂದರು ಸೃಜನ್.

‘ಕನ್ನಡದ ಅಸ್ಮಿತೆಯನ್ನು ಕಂಡುಕೊಳ್ಳುವುದಕ್ಕಾಗಿ ಈ ಸಿನಿಮಾ ಮಾಡಿದರು ಎನ್ನುವುದು ಬಹಳ ಮುಖ್ಯ. ನಾವು 1970ರಲ್ಲಿ ಘಟಶ್ರಾದ್ಧ ಮಾಡುವ ಸಂದರ್ಭದಲ್ಲಿ ಮದ್ರಾಸ್‌ಗೆ ಹೋಗುತ್ತಿದ್ದೆವು. ಅಲ್ಲಿ ನಮಗೆ ಸ್ಟುಡಿಯೊಗಳನ್ನೂ ನೀಡುತ್ತಿರಲಿಲ್ಲ. ಹೀಗಿರುವಾಗ 1934ರಲ್ಲಿ ಸ್ಥಿತಿ ಹೇಗಿರಬೇಡ. ನಾಗೇಂದ್ರ ರಾವ್ ಅವರಿಗೆ ಕನ್ನಡವನ್ನು ಮೆರಸಬೇಕು ಎನ್ನುವ ಆಸೆ ಇತ್ತಂತೆ. ಹೀಗಾಗಿ ಕನ್ನಡ ಅಸ್ಮಿತೆ ಬಗ್ಗೆ ಈ ಸಿನಿಮಾ ಒತ್ತು ನೀಡಲಿ. ‘ಸತಿ ಸುಲೋಚನಾ’ ಸ್ತ್ರೀ ಕೇಂದ್ರಿತ ಸಿನಿಮಾವಾಗಿತ್ತು. ಆಗಿನ ಕಾಲದಲ್ಲೇ ಹೇಗೆ ಭಿನ್ನವಾಗಿ ಯೋಚಿಸುತ್ತಿದ್ದರು ಎನ್ನುವುದೂ ದಾಖಲಾಗಬೇಕಿದೆ’ ಎಂದು ನಿರ್ದೇಶಕ ಗಿರೀಶ ಕಾಸರವಳ್ಳಿ ಅಭಿಪ್ರಾಯವ್ಯಕ್ತಪಡಿಸಿದರು.

‘ನಮ್ಮಲ್ಲಿಯೇ ಕನ್ನಡ ಸಿನಿಮಾಗಳ ಸಂಗ್ರಹವಿಲ್ಲ. ಇದು ಕರ್ನಾಟಕ ರಾಜ್ಯಕ್ಕೇ ಅವಮಾನ. ₹9 ಕೋಟಿಯನ್ನು ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಖರ್ಚು ಮಾಡುವ ಬದಲು, ಅದನ್ನು ಈ ಕಾರ್ಯಕ್ಕೆ ಬಳಸಿದ್ದರೆ ಚಲನಚಿತ್ರ ಅಕಾಡೆಮಿಯಲ್ಲಿ ಸಿನಿಮಾ ಸಂಗ್ರಹಾಲಯ ಆಗಿರುತ್ತಿತ್ತು’ ಎಂದರು ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು.

ಹೊಸಬರ ‘ಡೆಡ್ಲಿ ಲವರ್ಸ್’

ಬಹುತೇಕ ಹೊಸಬರಿಂದಲೇ ಕೂಡಿರುವ ‘ಡೆಡ್ಲಿ ಲವರ್ಸ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಾಗೇಂದ್ರ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

‘ಪ್ರೇಮಿಗಳಿಬ್ಬರು ಭೂಗತಲೋಕ ಪ್ರವೇಶಿಸಿ ಖಳನಾಯಕನಿಗೆ ಚಳ್ಳೆಹಣ್ಣು ತಿನ್ನಿಸಿ ಹಣವನ್ನು ಕದಿಯುತ್ತಾರೆ. ಅವರ ಕಥೆ ಏನಾಗುತ್ತದೆ ಎಂಬುದೇ ಚಿತ್ರದ ಕಥೆ’ ಎಂದರು ನಿರ್ದೇಶಕರು.

ತನುಪ್ರಸಾದ್

ಅಖಿಲ್ ಕುಮಾರ್ ಚಿತ್ರದ ನಾಯಕಿ. ತನುಪ್ರಸಾದ್ ನಾಯಕಿ. ಲಹರಿ ವೇಲು ಪ್ರಮುಖ ಪಾತ್ರದಲ್ಲಿದ್ದಾರೆ. ಲಯ ಕೋಕಿಲ ಸಂಗೀತ, ಹೆಚ್.ಎನ್.ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಕೆಟ್ ಸ್ಟೇಡಿಯಂನ ವಿಡಿಯೊ ಹರಿದಾಡುತ್ತಿದೆ. ಅದು ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ವಿಡಿಯೊ ಎಂದು ಪ್ರತಿಪಾದನೆ ಮಾಡಲಾಗುತ್ತಿದ್ದು, ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ತಂಡವು ಜಯ ಗಳಿಸಿದಾಗ ಸ್ಟೇಡಿಯಂನಲ್ಲಿ ‘ಅಗ್ನಿಪಥ್’ ಚಿತ್ರದ ‘ದೇವಾ ಶ್ರೀ ಗಣೇಶ’ ಹಾಡನ್ನು ಪ್ಲೇ ಮಾಡಲಾಯಿತು ಎಂದು ಪೋಸ್ಟ್ ಹಂಚಿಕೊಳ್ಳುವವರು ಹೇಳುತ್ತಿದ್ದಾರೆ. ಕೆಲವರು, ‘ದೇವಾ ಶ್ರೀ ಗಣೇಶ’ ಹಾಡಿನ ಬದಲಿಗೆ ‘ಬಾಜಿರಾವ್ ಮಸ್ತಾನಿ’ ಚಿತ್ರದ ‘ಗಜಾನನ’ ಹಾಡನ್ನು ಒಳಗೊಂಡಿರುವ ಇದೇ ವಿಡಿಯೊ ಅನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇವೆರಡೂ ಸುಳ್ಳು ಸುದ್ದಿಗಳು.

ವಿಡಿಯೊದ ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದರಲ್ಲಿ ಎರಡು ವಿಡಿಯೊಗಳಿದ್ದು, ಎರಡೂ ಪ್ರತ್ಯೇಕ ವಿಡಿಯೊಗಳು ಎನ್ನುವುದು ಕಂಡುಬಂತು. ಮತ್ತಷ್ಟು ಹುಡುಕಾಟ ನಡೆಸಿದಾಗ, ಮೊದಲ ವಿಡಿಯೊದಲ್ಲಿರುವ ‘ದೇವಾ ಶ್ರೀ ಗಣೇಶ’ ಹಾಡು ಇರುವ ವಿಡಿಯೊ ಮುಂಬೈನ ವಾಂಖೇಡೆ ಸ್ಟೇಡಿಯಂನ 50 ವರ್ಷದ ಸಂಭ್ರಮಾಚರಣೆಯದ್ದು (2025ರ ಜ.19) ಎನ್ನುವುದು ತಿಳಿಯಿತು. ಎರಡನೆಯ ವಿಡಿಯೊ, ಐಸಿಸಿ ಚಾಂಪಿಯನ್‌ಶಿಪ್‌ಗೂ ಮುನ್ನ ನಡೆದಿದ್ದ ಭಾರತ–ಇಂಗ್ಲೆಂಡ್ ಸರಣಿಯ ಪಂದ್ಯದ್ದು ಎನ್ನುವುದು ಕಂಡುಬಂತು. ಎರಡು ಬೇರೆ ಬೇರೆ ಸಂದರ್ಭಗಳ ಬೇರೆ ಬೇರೆ ವಿಡಿಯೊಗಳನ್ನು ಸೇರಿಸಿ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಅರಿದೊಡೆ ಶರಣ, ಮರೆದೊಡೆ ಮಾನವ

ನುಡಿ ಬೆಳಗು 145

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಾವು ಈ ಭೂಮಿಯ ಮೇಲೆ ಸಂತೋಷದಿಂದ, ಸಮಾಧಾನದಿಂದ ಬದುಕಬೇಕು ಎನ್ನುವುದು ನಮ್ಮೆಲ್ಲರ ಇಚ್ಛೆ. ಹಾಗೆ ಬದುಕಬೇಕಾದರೆ ಏನು ಬೇಕು? ಮೊದಲು ಅನ್ನ ಬೇಕು, ಆಶ್ರಯ ಬೇಕು, ಅರಿವೆ ಬೇಕು, ಬರೀ ಅನ್ನ ಇದ್ದರೆ ಸಾಲದು, ಬರೀ ಆಶ್ರಯ, ಅರಿವೆ ಇದ್ದರೆ ಸಾಲದು. ಹೇಗೆ ಬದುಕಬೇಕು ಎಂಬ ಅರಿವೂ ಇರಬೇಕು. ಅರಿವು ಇಲ್ಲದಿದ್ದರೆ ಜೀವನ ತಾಪ ಕೊಡುತ್ತದೆ.

‘ಅರಿದೊಡೆ ಶರಣ, ಮರೆದೊಡೆ ಮಾನವ’, ಇದು ಶರಣರ ಮಾತು. ಏನು ಅರಿತರೆ ಶರಣ ಆಗುತ್ತಾನೆ. ಏನು ಮರೆತು ಮಾನವ ಆಗಿದ್ದಾನೆ? ಸಾಮಾನ್ಯ ಮೊಬೈಲ್ ತೆಗೆದುಕೊಳ್ಳಬೇಕಾದರೂ ಅದರ ಬಗ್ಗೆ ನಾವು ತಿಳಿದುಕೊಳ್ಳುತ್ತೇವೆ. ಅಕಸ್ಮಾತ್ ಅರಿವು ಇಲ್ಲದೆ ಖರೀದಿ ಮಾಡಿದರೆ ನಂತರ ಪಶ್ಚಾತ್ತಾಪ ಪಡುತ್ತೇವೆ. ಮಕ್ಕಳಿಗೆ ಮದುವೆ ಮಾಡುವಾಗ ಕನ್ಯೆ ನೋಡೋಕೆ, ವರ ನೋಡೋಕೆ ಹೋಗುತ್ತೇವೆ. ಬೀದಿಯಾಗೆ ಯಾರು ಸಿಕ್ತಾರೆ ಅವರನ್ನು ಮಾಡಿಕೊಳ್ಳುವುದಿಲ್ಲ. ಕುಲ, ಗೋತ್ರ, ರಾಶಿ, ಪಗಾರ, ಎತ್ತರ ಎಲ್ಲವನ್ನೂ ನೋಡಿಯೇ ತೀರ್ಮಾನಿಸುತ್ತೇವೆ. ಅಂದರೆ ವಿಚಾರಣೆ ಇಲ್ಲದೆ ಯಾವ ಕೆಲಸವನ್ನೂ ಮಾಡುವುದಿಲ್ಲ. ವಿಚಾರಣೆ ಇಲ್ಲದೆ ಮಾಡಿದಾಗ ಯಾರಾದರೂ ಕೇಳಿದರೆ ‘ತಪ್ಪಾಯಿತು, ಮೊದಲೇ ಗೊತ್ತಾಗಲಿಲ್ಲ’ ಎನ್ನುತ್ತೇವೆ. ಪ್ರವಾಸಕ್ಕೆ ಹೋಗುವುದಕ್ಕೆ ಮೊದಲು ಎಲ್ಲ ವಿಚಾರಣೆ ಮಾಡಿಯೇ ಹೋಗುತ್ತೇವೆ. ಮೊದಲೇ ಯೋಜನೆ ಸಿದ್ಧಪಡಿಸಿಕೊಂಡು ಪ್ರವಾಸ ಮಾಡ್ತೀವಿ. ನಮ್ಮ ಪ್ರವಾಸದ ಬಗ್ಗೆ ನಮಗೆ ಮೊದಲೇ ಅರಿವು ಇದ್ದರೆ ನಮ್ಮ ಪ್ರಯಾಣ ಸುಖಕರವಾಗುತ್ತದೆ. ಅರಿವು ಇಲ್ಲದಿದ್ದರೆ ದುಃಖಕರವಾಗುತ್ತದೆ.

ನಾವು ಮನುಷ್ಯರು ಈ ಜಗತ್ತಿಗೆ ಪ್ರವಾಸಿಗರಾಗಿ ಬಂದಿದ್ದೇವೆ. ಹೀಗೆ ಪ್ರವಾಸ ಬಂದ ನಮಗೆ ಈ ಜಗತ್ತಿನ ಬಗ್ಗೆ ಅರಿವು ಇರಬೇಕು. ಅರಿವಿಲ್ಲದೇ ಇದ್ದರೆ ಕಷ್ಟ ಆಗುತ್ತದೆ. ನಮಗೆ ಆರೋಗ್ಯ ಕೆಟ್ಟಿತು ಅಂದರೆ ನಾವೇ ಔಷಧ ಅಂಗಡಿಗೆ ಹೋಗಿ ಏನೋ ಒಂದಿಷ್ಟು ಮಾತ್ರೆಗಳನ್ನು ತೆಗೆದುಕೊಂಡು ಬಿಡುತ್ತೇವೇನು? ಗುಳಿಗೆ ಸುಮ್ಮನೆ ತೆಗೆದುಕೊಂಡರೆ ಸೈಡ್ ಇಫೆಕ್ಟ್ ಆಗತೈತಿ. ಅರಿವಿಲ್ಲದೆ ಗುಳಿಗೆ ತೆಗೆದುಕೊಂಡರೆ ದೇಹದ ಆರೋಗ್ಯದ ಮೇಲೆ ಸೈಡ್ ಇಫೆಕ್ಟ್ ಆಗತೈತಿ.ಅದಕ್ಕೆ ನಾವು ವೈದ್ಯರ ಬಳಿಗೆ ಹೋಗುತ್ತೇವೆ. ಹಾಗೆಯೇ ಜಗತ್ತು ಎಂದರೆ ಏನು ಎಂಬ ಅರಿವು ಬರಬೇಕು ಎಂದರೆ ತಿಳಿದವರ ಹತ್ತಿರ ಹೋಗಬೇಕು. ಅವರು ಎಷ್ಟು ತಗೋಬೇಕು, ಎಷ್ಟು ಹೊರಗಿಡಬೇಕು ಅಂತ ಹೇಳುತ್ತಾರೆ. ಅರಿವಿಲ್ಲದೆ ಏನನ್ನಾದರೂ ಎಷ್ಟಾದರೂ ತೆಗೆದುಕೊಂಡರೆ ಜೀವನದಲ್ಲಿಯೂ ಸೈಡ್ ಇಫೆಕ್ಟ್ ಆಗುತ್ತದೆ.

ಹಾಗಾದರೆ ಜಗತ್ತು ಎಂದರೆ ಏನು? ಜಗತ್ತು ಎಂದರೆ ನಿರಂತರ ಚಲನಶೀಲವಾಗಿದ್ದು. ಇಲ್ಲಿ ಭೂಮಿ ತಿರುಗುತ್ತಿದೆ, ಗಾಳಿ ಬೀಸುತ್ತಿದೆ. ಎಲ್ಲದಕ್ಕೂ ಚಲನೆ ಇದೆ. ಇಲ್ಲಿ ಯಾವುದೂ ನಿಂತಿಲ್ಲ. ಬಾಲ್ಯ, ಯೌವನ, ಮುಪ್ಪು ಎಲ್ಲಾ ಚಲಿಸುತ್ತಲೇ ಇವೆ. ಜಾನ್ ಕೀಟ್ಸ್ ಅಂತ ಒಬ್ಬ ಇಂಗ್ಲಿಷ್ ಕವಿ. ಆತ ತನ್ನ ಸಮಾಧಿಯ ಮೇಲೆ ಒಂದು ವಾಕ್ಯ ಬರೆದುಕೊಂಡಿದ್ದಾನೆ. ‘ಜಗತ್ತು ಎಂದರೆ, ಜೀವನ ಎಂದರೆ ನೀರಿನ ಮೇಲೆ ನೆನಪು ಬರೆದ ಹಾಗೆ’ ಎಂದು. ನೀವು ಹೊಳೆಯಲ್ಲಿ ಹೋಗಿ ಏನಾದರೂ ಬರೆಯಿರಿ. ಬರೆಯುತ್ತೆ. ಆದರೆ ಉಳಿಯುವುದಿಲ್ಲ. ಜೀವನವೂ ಹಾಗೆ. ಯಾವುದನ್ನೂ ಇಲ್ಲಿ ಉಳಿಸಲು ಸಾಧ್ಯವಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 5, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಷಷ್ಠಿ ಗಂ. 12-52 ನಕ್ಷತ್ರ: ಕೃತ್ತಿಕಾ ಗಂ. 25-09 ಯೋಗ: ವೈಧೃತಿ ಗಂ. 23-07 ಕರಣ: ತೈತಿಲ ಗಂ. 12-52, ಕುಂಭ ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 1.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-47 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 04 ರಂಜಾನ್
ಅದೃಷ್ಟ ಸಂಖ್ಯೆ : 6, 11

ಮೇಷ: ಸಾಮಾಜಿಕ ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ಗಾಯನ ಅಥವಾ ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು. ಸ್ಥಾನಮಾನದ ಬಗ್ಗೆ ಅರಿವಿರಲಿ.

ವೃಷಭ: ಸಹೋದ್ಯೋಗಿಗಳಲ್ಲಿ ಗೌರವಾನ್ವಿತವಾಗಿ ವರ್ತಿಸುವುದರಿಂದ ಕೆಲಸಗಳು ಸರಾಗವಾಗಿ ಸಾಗಲಿವೆ. ಮಂಜುನಾಥನ ಸೇವೆ ಮಾಡುವುದರಿಂದ ಕೋರ್ಟು ವ್ಯವಹಾರಗಳಲ್ಲಿ ಸುಲಭವಾಗಿ ಜಯ ಸಿಗಲಿದೆ.

ಮಿಥುನ: ಮಕ್ಕಳ ವಿಷಯದಲ್ಲಿ ಕಾಳಜಿ ತೋರಿ ವ್ಯವಸ್ಥಿತ ತೀರ್ಮಾನವನ್ನು ತೆಗೆದುಕೊಂಡಲ್ಲಿ ಭವಿಷ್ಯ ಉತ್ತಮವಾಗಲಿದೆ. ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಆದಾಯ ಉಂಟಾಗಲಿದೆ.

ಕರ್ಕಾಟಕ: ಜೀವನೋಪಾಯಕ್ಕೆ ಹಲವು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಪೋಷಕರ ಹಾಗೂ ಗುರುವಿನ ಮಾರ್ಗದರ್ಶನವು ತಳಮಳವನ್ನು ದೂರ ಮಾಡುವುದು.

ಸಿಂಹ: ಕೆಲಸಗಳ ಬಗ್ಗೆ ಅಧಿಕಾರಿ ವರ್ಗದವರಲ್ಲಿ ಯಾವುದೇ ಚರ್ಚೆಗಳು, ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ.

ಕನ್ಯಾ: ದಿನಬಳಕೆಯ ವಸ್ತುಗಳ ಅಥವಾ ಉಡುಗೊರೆಯ ವಸ್ತುಗಳ ವ್ಯಾಪಾರಿಗಳಿಗೆ ಲಾಭ ಸಿಗಲಿದೆ. ನೂತನ ವಸ್ತುಗಳ ಖರೀದಿಗೆ ಸಮಯವಲ್ಲ. ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗುವುದು.

ತುಲಾ: ಮಾತೃವರ್ಗದವರಿಂದ ಆಯಾಚಿತವಾಗಿ ನೆರವು ಸಿಕ್ಕಿ ಅನ್ಯರಲ್ಲಿನ ಋಣ ಪರಿಹಾರವಾಗಲಿದೆ. ಹಿಂದಿನ ದಿನಗಳ ಪರಿಶ್ರಮ ಫಲವನ್ನು ಪಡೆಯುವ ಸಾಧ್ಯತೆ ಇದೆ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುತ್ತದೆ.

ವೃಶ್ಚಿಕ: ಮಾತಿನ ಕುಶಲತೆಯಿಂದ ಇತರರನ್ನು ಗೆಲ್ಲುವ ಅಥವಾ ಎದುರಾಳಿಯನ್ನು ಕಟ್ಟಿಹಾಕುವ ಸಾಮರ್ಥ್ಯ ನಿಮ್ಮಲ್ಲಿದೆ. ವೃತ್ತಿಯ ಮತ್ತು ಮುಂದಿನ ಬದುಕಿನ ಬಗ್ಗೆ ಗಂಭಿರವಾಗಿ ಚಿಂತಿಸಬೇಕಾದ ಅಗತ್ಯವಿದೆ.

ಧನು: ಖಾದಿ ಉದ್ಯಮದವರಿಗೆ ಬೇಡಿಕೆ ಪೂರೈಸಲು ಸಾಧ್ಯವಾಗದ ರೀತಿಯಲ್ಲಿ ವ್ಯಾಪಾರ ವ್ಯವಹಾರ ನಡೆಯುವುದು. ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಅಥವಾ ಪುಣ್ಯಕ್ಷೇತ್ರಗಳ ದರ್ಶನವನ್ನು ಮಾಡಿ.

ಮಕರ: ಮನೋಭಿಲಾಷೆಗೆ ಕುಟುಂಬ ವರ್ಗದವರು ಅಭಿವೃದ್ಧಿ ದಾರಿಯನ್ನು ಕಲ್ಪಿಸುವರು. ರಾಜಕೀಯ ವರ್ಗದವರಿಗೆ ದೇವತಾನುಗ್ರಹದಿಂದ ಅದೃಷ್ಟ ಖುಲಾಯಿಸಲಿದೆ. ಮೂಳೆಗೆ ಸಂಬಂಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ.

ಕುಂಭ: ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ನೀವು ಗೌರವವನ್ನು ಅಪೇಕ್ಷಿಸುವ ಮನಸ್ಥಿತಿಯನ್ನು ಇಟ್ಟುಕೊಳ್ಳಿರಿ. ನಿವೃತ್ತಿಯ ನಂತರದ ಕೆಲಸಗಳ ಬಗ್ಗೆ ಹೆಂಡತಿಯೊಡನೆ ಚರ್ಚೆ ನಡೆಸುವಿರಿ. ಆಡಿದ ಮಾತುಗಳು ಮುಳ್ಳಾಗುವ ದಿನ.

ಮೀನ: ದೇಹದಲ್ಲಿ ಪಿತ್ತವು ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ. ಮಾನಸಿಕ ಅಸ್ಥಿರತೆ ಹಾಗೂ ಋಣಾತ್ಮಕ ಚಿಂತನೆ ಆಗಾಗ ಕಾಡಲಿದೆ. ಆರೋಗ್ಯದಲ್ಲಿ ಮತ್ತು ಧನವ್ಯಯದಲ್ಲಿ ಗಮನವಿರಲಿ.

ಪದಬಂಧ 5972

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಚಿಕ್ಕದಾದರೂ ಕೀರ್ತಿ ದೊಡ್ಡದಂತೆ! (2)
2.ಮನೆ ಹೊಲ ಮುಂತಾದವುಗಳ ಸೀಮಾವಿವರ (4)
4.ಕುದುರೆ ಬಾಯಿಗೆ ಕಟ್ಟಿದ ಉಕ್ಕಿನ ತುಂಡು (4)
6. ವೀರಶೈವರ ಸ್ಮಶಾನ (4)
8.ರಾವು ಬಡಿದಂತಿರುವ ಕುದುರೆ ಸವಾರ (3)
9.ವೇದಗಳಿಂದ ಸಂಗ್ರಹಿಸಿದ ಭಾಗ (3)
11.ಮಂಜ ನಡುವೆ ತೂರಿಕೊಂಡರೆ ಇದು ಸೂಕ್ತ! (4)
13.ಮರದೊಳಗೆ ಸುತ್ತುತ್ತಿರುವ ದುಂಬಿ (4)
14.ಅತಿಶಯವಾದುದು ಮರದೊಳಗಿದೆಯೆಲ್ಲ! (4)
15.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1.ಇಲಿ ಇಲ್ಲಿ ಕಾಣುತ್ತಿದೆ (3)
2.ಪದ್ಯಗಳ ಸಾಲು (3)
3.ಹಡಗು ನಿಲ್ಲುವ ಸ್ಥಳ (3)
5.ಕಾವು ಬಡಿದರೂ ತೋರಿಸಿದ ಡೌಲು! (3)
7.ಮಿಡಿ ಧರಿಸಿದವಳು ತೋರಿಸಿದ್ದು ಹಾರುವ ಹುಳು (3)
8.ರಾಯರಿಂದ ಬಂದಿರುವ ನಿರೂಪ (3)
10.ಈತ ಹಿರಿಯವನು (3)
12.ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ! (3)
13.ಕನ್ನಡಿಗ ಹಿಡಿದಿರುವ ಲೆನ್ಸು (3)
14.ಮಣಿ ಧರಿಸಿದ ಚಲುವೆ (3)



5971ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಗತಿಗಾಮಿ 4.ಚೂರಿ
5.ಅಭಿಜಾತ 7.ಡಬರಿ
9.ಮಶಕ 11.ದನಾನಿ
12.ಮಾರಕ 14.ಜಪಮಾಲೆ
16.ಜಾವ 17.ಕಾರವಾರ

ಮೇಲಿಂದ ಕೆಳಕ್ಕೆ:
1.ಪುನರಾಗಮನ
2.ಗಾವುಂಡ 3.ನಾಭಿ
4.ಚೂತ 5.ಅರಿಸಿನಕಾಮಾಲೆ
6.ಜಾತವೇದ 8.ಶ್ರೀನಿವಾಸಪುರ
10.ಕಡುಕೋಪ 13.ಕಮ್ಮಾರ
14.ಜವ 15.ಮಾಡ

ಸುಡೊಕು 6357

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6356 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,119
ಇಂದಿನ ಅಂತ್ಯ	22,082
▼	36
ದಿನದ ಕನಿಷ್ಠ	21,964

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹363-703
ದ್ವಿತಳಿ (ಬಿ.ವಿ)	₹189-856

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹183
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹178

ಜಲಜನಕ ಇಂಧನ ಬಳಕೆಯ ಟ್ರಕ್ ಸಂಚಾರಕ್ಕೆ ಚಾಲನೆ

ನವದೆಹಲಿ (ಪಿಟಿಐ): ದೇಶದಲ್ಲಿ ಮೊದಲ ಬಾರಿಗೆ ಜಲಜನಕ ಇಂಧನ ಬಳಕೆಯ ಟ್ರಕ್‌ಗಳ ಪ್ರಾಯೋಗಿಕ ಸಂಚಾರಕ್ಕೆ ಟಾಟಾ ಮೋಟರ್ಸ್ ಮಂಗಳವಾರ ಚಾಲನೆ ನೀಡಿದೆ.

ಪ್ರಾಯೋಗಿಕ ಸಂಚಾರದ ಅವಧಿ 24 ತಿಂಗಳಾಗಿದ್ದು, 16 ಅತ್ಯಾಧುನಿಕ ಟ್ರಕ್‌ಗಳು ಸಂಚರಿಸಲಿವೆ. ಈ ಟ್ರಕ್‌ಗಳು ಜಲಜನಕದ ಆಂತರಿಕ ದಹನಕಾರಿ ಎಂಜಿನ್ ಮತ್ತು ಇಂಧನ ಕೋಶ ತಂತ್ರಜ್ಞಾನವನ್ನು ಹೊಂದಿವೆ.

ಮುಂಬೈ, ಪುಣೆ, ದೆಹಲಿ, ಸೂರತ್, ವಡೋದರಾ, ಜಮ್‌ಶೆಡ್‌ಪುರ ಮತ್ತು ಕಳಿಂಗನಗರದ ಪ್ರಮುಖ ಮಾರ್ಗಗಳಲ್ಲಿ ಪರೀಕ್ಷಾರ್ಥ ಸಂಚಾರ ನಡೆಯಲಿದೆ ಎಂದು ಕಂಪನಿ ತಿಳಿಸಿದೆ.

ದೀರ್ಘಕಾಲದ ಪ್ರಯಾಣಕ್ಕೆ ವಿದ್ಯುತ್‌ಚಾಲಿತ ಬ್ಯಾಟರಿ ತಂತ್ರಜ್ಞಾನದ ಬಳಕೆ ಲಾಭದಾಯಕವಾಗಿ ಕಾಣಿಸುತ್ತಿಲ್ಲ. ಹಾಗಾಗಿ, ಬ್ಯಾಟರಿಯಲ್ಲಿ ಕೆಲ ಸುಧಾರಣೆ ಮಾಡಲಾಗುತ್ತಿದೆ. ಇದೇ ವೇಳೆ ಜಲಜನಕ ಇಂಧನ ಬಳಕೆಯ ವಾಹನಗಳ ಮೇಲೂ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಟಾಟಾ ಮೋಟರ್ಸ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಗಿರೀಶ್ ವಾಘ್ ಅವರು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ		ಸರಕು	53100-93996	ಚಾಲಿ	27892-38889
ಬೆಟ್ಟೆ	47299-56109	ಯಲ್ಲಾಪುರ		ಕೋಕ	4499-14499
ಗೊರಬಲು	16059-31111	ಅಪಿ	59399-60901	ಕೆಂಪುಗೋಟು	12899-26899
ರಾಶಿ	40009-52389	ಬಿಳಿಗೋಟು	12899-26011	ರಾಶಿ	39600-58399

‘ಎಂಎಸ್‌ಎಂಇಗೆ ಸಾಲ ಯೋಜನೆ’

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ‘ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಸಕಾಲದಲ್ಲಿ ಕಡಿಮೆ ಬಡ್ಡಿದರದಡಿ ಸಾಲ ಸೌಲಭ್ಯ ಕಲ್ಪಿಸಲು ಹೊಸ ಮಾದರಿಯ ಸಾಲ ಯೋಜನೆಯನ್ನು ರೂಪಿಸುವ ಅಗತ್ಯವಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಎಂಎಸ್‌ಎಂಇ ಕುರಿತಂತೆ ಮಂಗಳವಾರ ನಡೆದ ಬಜೆಟ್ ನಂತರದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಮೊದಲ ಬಾರಿ ಉದ್ದಿಮೆ ಸ್ಥಾಪಿಸುವ ಐದು ಲಕ್ಷ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳಿಗೆ ₹2 ಕೋಟಿವರೆಗೆ ಸಾಲ ನೀಡಲಾಗುವುದು ಎಂದು ತಿಳಿಸಿದರು.

ಎಂಎಸ್‌ಎಂಇ ಅಭಿವೃದ್ಧಿಗೆ ಸಾಲ ಸೌಲಭ್ಯ ಕಲ್ಪಿಸುವುದಷ್ಟೇ ಮುಖ್ಯವಲ್ಲ. ಅವುಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಿದೆ. ಕೈಗಾರಿಕೆಗಳ ಸ್ವಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಪ್ರಸ್ತುತ ಜಾಗತಿಕ ಮಟ್ಟದಲ್ಲಿ ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿದೆ. ಹಾಗಾಗಿ, ಅಭಿವೃದ್ಧಿಯ ಕೇಂದ್ರವಾದ ಭಾರತದತ್ತ ಇಡೀ ವಿಶ್ವವೇ ದೃಷ್ಟಿ ನೆಟ್ಟಿದೆ ಎಂದರು.

14 ವಲಯಗಳಲ್ಲಿ ಉತ್ಪಾದನೆ ಆಧರಿತ ಉತ್ತೇಜನ (ಪಿಎಲ್ಐ) ಯೋಜನೆ ಜಾರಿಗೊಳಿಸಿದ್ದು, ₹1.5 ಲಕ್ಷ ಕೋಟಿ ವಿನಿಯೋಗಿಸಲಾಗಿದೆ. ಇದರಿಂದ ಒಟ್ಟು ₹13 ಲಕ್ಷ ಕೋಟಿ ಮೌಲ್ಯದ ಉತ್ಪಾದನೆಯಾಗಿದೆ ಎಂದು ವಿವರಿಸಿದರು.

ಪ್ರಯೊಂದು ದೇಶವು ಭಾರತದೊಂದಿಗೆ ಆರ್ಥಿಕ ಪಾಲುದಾರಿಕೆ ಹೊಂದಲು ಇಚ್ಛಿಸುತ್ತಿದೆ. ಹಾಗಾಗಿ, ತಯಾರಿಕಾ ವಲಯವು ಇದರ ಪ್ರಯೋಜನ ಪಡೆದುಕೊಳ್ಳಬೇಕಿದೆ ಎಂದರು.

ಕಂಪನಿಗಳ ನಡುವೆ ಪೈಪೋಟಿ: ಕುಸಿದ ಬೇಡಿಕೆ

ಇಳಿದ ಸಿಮೆಂಟ್ ಬೆಲೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಸಿಮೆಂಟ್ ಬೆಲೆಯು ಶೇ 7ರಷ್ಟು ಇಳಿಕೆಯಾಗಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ವರದಿ ತಿಳಿಸಿದೆ.

ಮಾರುಕಟ್ಟೆಯಲ್ಲಿ ಸಿಮೆಂಟ್‌ಗೆ ಬೇಡಿಕೆ ತಗ್ಗಿದೆ. ಮತ್ತೊಂದೆಡೆ ಪ್ರಮುಖ ಕಂಪನಿಗಳ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟಿದ್ದು, ಪೂರೈಕೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಇದರಿಂದ ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ತಿಳಿಸಿದೆ.

ನಾಲ್ಕನೇ ತ್ರೈಮಾಸಿಕದಲ್ಲಿ ಬೆಲೆ ಏರಿಕೆಯಾಗುವ ನಿರೀಕ್ಷೆಯಿದೆ. ಆದರೆ, ಕಂಪನಿಗಳು ಹೆಚ್ಚುವರಿಯಾಗಿ ಸಿಮೆಂಟ್ ತಯಾರಿಕಾ ಘಟಕಗಳನ್ನು ಸ್ಥಾಪಿಸುತ್ತಿವೆ. ಇದು ಒಟ್ಟಾರೆ ದರದಲ್ಲಿ ಇಳಿಕೆಗೂ ಕಾರಣವಾಗಬಹುದು ಎಂದು ಹೇಳಿದೆ.

ಈ ವಲಯದಲ್ಲಿ ಪ್ರಮುಖ ಕಂಪನಿಗಳಿಂದ ಸಣ್ಣ ಕಂಪನಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಮುಂದುವರಿದಿದೆ. ಅಲ್ಟ್ರಾಟೆಕ್ ಸಿಮೆಂಟ್, ಅದಾನಿ ಸಿಮೆಂಟ್, ಶ್ರೀ ಸಿಮೆಂಟ್, ದಾಲ್ಮಿಯ ಸಿಮೆಂಟ್ ತಮ್ಮ ವ್ಯವಹಾರ ವಿಸ್ತರಿಸಲು ಮುಂದಾಗಿವೆ. ಇದರ ಭಾಗವಾಗಿ ಸಣ್ಣ ಕಂಪನಿಗಳನ್ನು ಖರೀದಿಸುತ್ತಿವೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಈ ವಲಯದ ಬೆಳವಣಿಗೆಯು ಶೇ 2ರಿಂದ ಶೇ 3ರಷ್ಟು ಇಳಿಕೆಯಾಗಿದೆ. ಆದರೆ, ಮೂರನೇ ತ್ರೈಮಾಸಿಕದಲ್ಲಿ ಅಲ್ಪಮಟ್ಟಿಗೆ ಏರಿಕೆ ಕಂಡಿದೆ ಎಂದು ಹೇಳಿದೆ.

ಕಳೆದ ವರ್ಷದ ನವೆಂಬರ್‌ನಿಂದ ದೇಶದಲ್ಲಿ ನಿರ್ಮಾಣ ಚಟುವಟಿಕೆಗಳು ಗರಿಗೆದರಿವೆ. ಉತ್ತಮ ಮುಂಗಾರು ನಿರೀಕ್ಷೆ ಹಾಗೂ ಹಬ್ಬದ ಋತುವಿನ ಆರಂಭವು ಇದಕ್ಕೆ ನೆರವಾಗಿದೆ. ದೇಶದ ಪೂರ್ವ ಭಾಗದ ರಾಜ್ಯಗಳಿಗೆ ಹೋಲಿಸಿದರೆ ದಕ್ಷಿಣ ರಾಜ್ಯಗಳಲ್ಲಿ ನಿರ್ಮಾಣ ಚಟುವಟಿಕೆಗಳು ಉತ್ತಮವಾಗಿವೆ ಎಂದು ಹೇಳಿದೆ.

ಆದರೆ, ಮಾರುಕಟ್ಟೆಯ ಪಾಲು ಹೆಚ್ಚಿಸಿಕೊಳ್ಳಲು ಪ್ರಮುಖ ಕಂಪನಿಗಳ ನಡುವೆ ಪೈಪೋಟಿ ನಡೆದಿದೆ. ಇದರಿಂದ ಸಣ್ಣ ಮತ್ತು ಮಧ್ಯಮ ಕಂಪನಿಗಳ ಸ್ಥಾಪನೆ ಪ್ರಕ್ರಿಯೆ ಮುಂದುವರಿಯುವುದಿಲ್ಲ. ಮತ್ತೊಂದೆಡೆ ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಬೆಳವಣಿಗೆಯು ಇಳಿಕೆ ಕಂಡಿದೆ. ಹಾಗಾಗಿ, ನಾಲ್ಕನೇ ತ್ರೈಮಾಸಿಕದಲ್ಲಿ ಬೆಲೆ ಏರಿಕೆಯಾದರೂ ಒಟ್ಟಾರೆ ವಾರ್ಷಿಕ ಬೆಳವಣಿಗೆಯು ಒಂದು ದಶಕದ ಕನಿಷ್ಠ ಮಟ್ಟಕ್ಕೆ ಕುಸಿಯಲಿದೆ ಎಂದು ವಿವರಿಸಿದೆ.

ಮುಂಬೈ ಧಾರಣೆ

ಶೇಂಗಾ
04-03-2025

ಜಾವಾ 70/80(ಹೊಸ)	9900-10000
ಜಾವಾ 80/90(ಹೊಸ)	9400-9500
ದಪ್ಪ ಮಧ್ಯಪ್ರದೇಶ(ಹೊಸ)	7800-7900
ದಪ್ಪ ಗುಜರಾತ್(ಹೊಸ)	8100-8200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1358 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1375 (1380)

ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿದ್ದು)

ಅಪರಂಜಿ ಚಿನ್ನ 10ಗ್ರಾಂ
₹86,100 (84,950)
ಬೆಳ್ಳಿ ಕೆ.ಜಿ ₹95,250 (94,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1325 (1335)
ಸೂರ್ಯಕಾಂತಿ (ರಿಫೈನ್ಡ್)	₹1430 (1430)
ಪಾಮೋಲಿನ್	₹1360 (1365)

₹24,500 ಕೋಟಿ ಪರಿಹಾರ

ರಿಲಯನ್ಸ್‌ಗೆ ಕೇಂದ್ರ ನೋಟಿಸ್

Reliance Industries Limited

ನವದೆಹಲಿ (ಪಿಟಿಐ): ನೈಸರ್ಗಿಕ ಅನಿಲ ಉತ್ಪಾದನೆ ವಿವಾದಕ್ಕೆ ಸಂಬಂಧಿಸಿದಂತೆ ₹24,500 ಕೋಟಿ ಪರಿಹಾರ ಕೋರಿ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್‌ಗೆ, ಕೇಂದ್ರ ಸರ್ಕಾರವು ನೋಟಿಸ್ ನೀಡಿದೆ.

ರಿಲಯನ್ಸ್ ಮತ್ತು ಅದರ ಪಾಲುದಾರ ಕಂಪನಿಯಾದ ಬ್ರಿಟನ್‌ನ ಬಿಪಿ ಪಿಎಲ್‌ಸಿ, ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮಕ್ಕೆ (ಒಎನ್‌ಜಿಸಿ) ಸೇರಿದ ಕೃಷ್ಣ ಗೋದಾವರಿ ಪ್ರದೇಶದ ಆಳ ಸಮುದ್ರದಲ್ಲಿ ನೈಸರ್ಗಿಕ ಅನಿಲ ಉತ್ಪಾದಿಸಿ ಮಾರಾಟ ಮಾಡಿರುವ ಆರೋಪ ಹೊತ್ತಿವೆ.

ಈ ವಿವಾದಕ್ಕೆ ಸಂಬಂಧಿಸಿದಂತೆ ಎರಡು ಕಂಪನಿಗಳು ಪರಿಹಾರ ಪಾವತಿಸಲು ಜವಾಬ್ದಾರರಾಗಿರುವುದಿಲ್ಲ ಎಂದು ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿಯು ತೀರ್ಪು ನೀಡಿತ್ತು. ಇದನ್ನು ಫೆಬ್ರುವರಿ 14ರಂದು ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು ರದ್ದುಪಡಿಸಿದೆ. ಹಾಗಾಗಿ, ಕೇಂದ್ರವು ಪರಿಹಾರ ವಸೂಲಿಗೆ ಮುಂದಾಗಿದೆ.

ದಂಡ: ಉತ್ಪಾದನೆ ಆಧರಿತ ಉತ್ತೇಜನ (ಪಿಎಲ್‌ಐ) ಯೋಜನೆಯಡಿ ಪ್ರಸಕ್ತ ವರ್ಷದ ಜನವರಿಯಲ್ಲಿ ಐದು ಗಿಗಾವಾಟ್ ಸಾಮರ್ಥ್ಯದ ಬ್ಯಾಟರಿ ಘಟಕ ಸ್ಥಾಪಿಸುವಲ್ಲಿ ರಿಲಯನ್ಸ್ ಕಂಪನಿಯು ಕೇಂದ್ರದ ಭಾರಿ ಕೈಗಾರಿಕಾ ಸಚಿವಾಲಯದ ಜೊತೆಗೆ ಒಪ್ಪಂದ ಮಾಡಿಕೊಂಡಿತ್ತು. ಇದರಲ್ಲಿ ಉಲ್ಲಂಘಿಸಿರುವುದರಿಂದ ಮಾರ್ಚ್ 3ರ ವರೆಗೆ ಒಟ್ಟು ₹3.1 ಕೋಟಿ ದಂಡ ವಿಧಿಸಲಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನರೇಂದ್ರ ರೈ, ದಕ್ಷಿಣ ಕನ್ನಡ ಜಿಲ್ಲೆ.

• **ಪ್ರಶ್ನೆ: ನಾನು ಕೆಲವು ವರ್ಷಗಳಿಂದ ಹೂಡಿಕೆ ಮಾಡುತ್ತಿದ್ದೇನೆ. ಇದರಲ್ಲಿ ಷೇರುಪೇಟೆಯಲ್ಲಿನ ಹೂಡಿಕೆಯೇ ಹೆಚ್ಚಿದೆ. ಆದರೆ, ಇತ್ತೀಚಿನ ಮಾರುಕಟ್ಟೆ ಸ್ಥಿತಿಯು ದಯನೀಯವಾಗಿದೆ. ನಮ್ಮ ಹೂಡಿಕೆಗೆ ಲಾಭದ ವಿಚಾರ ಬದಿಗಿಟ್ಟರೂ ಅಸಲು ಬಂದರೆ ಸಾಕೆನ್ನುವ ಹಂತದಲ್ಲಿದ್ದೇವೆ. ಪ್ರಸ್ತುತ ಷೇರು ಹೂಡಿಕೆ- ಮ್ಯೂಚುವಲ್ ಫಂಡ್ ಹೂಡಿಕೆ ಬೇಡ ಅನ್ನುವ ಸ್ಥಿತಿಯಲ್ಲಿ ನಾನೂ ಸೇರಿದಂತೆ ಇನ್ನೂ ನನ್ನಂತಹ ಅನೇಕ ಹೂಡಿಕೆದಾರರು ಇರಬಹುದು. ಮುಂದಿನ ಹೂಡಿಕೆಯನ್ನು ಬ್ಯಾಂಕ್ ಅಥವಾ ಅಂಚೆ ಕಚೇರಿಯಲ್ಲಿ ಠೇವಣಿ ಇರಿಸೋಣ ಅಂತ ಅನ್ನಿಸುತ್ತಿದೆ. ನನ್ನ ಈ ನಿರ್ಧಾರ ಸರಿಯಾದುದೇ ಅಥವಾ ಇನ್ನುಳಿದ ಮಾರ್ಗೋಪಾಯಗಳಿವೆಯೇ?**

ಉತ್ತರ: ನೀವು ಬಂಡವಾಳ ಮಾರುಕಟ್ಟೆಯ ದೀರ್ಘಕಾಲದ ಹೂಡಿಕೆದಾರರು ಎಂಬುದು ನೀವು ನೀಡಿರುವ ಮಾಹಿತಿಯಿಂದ ಅರಿವಿಗೆ ಬರುತ್ತದೆ. ಇತ್ತೀಚಿನ ಮಾರುಕಟ್ಟೆಯ ಕುಸಿತವು ಆತಂಕವನ್ನು ಉಂಟು ಮಾಡುತ್ತದೆ. ಇದು ಸಣ್ಣ ಅವಧಿಯ ಹೂಡಿಕೆದಾರರಿಗೆ ಹೆಚ್ಚು ಆತಂಕ ಮೂಡಿಸುವ ವಿಚಾರ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಹೂಡಿಕೆ ತಂತ್ರವನ್ನು ಬದಲಾಯಿಸುವ ಮುನ್ನ ಕೆಲವು ಸಾಮಾನ್ಯ ಸಂಗತಿಗಳನ್ನು ಪರಿಗಣಿಸಬೇಕು. ಹೂಡಿಕೆಗೆ ಸಂಬಂಧಿಸಿ ಅಲ್ಪ ಸಮಾಲೋಚನೆಯನ್ನು ಸಂಪರ್ಕಿಸಿ.

ನಷ್ಟ ದಾಖಲಿಸುವ ಮೊದಲು ನಿಮ್ಮ ಹೂಡಿಕೆಯು ದೀರ್ಘಕಾಲೀನ ನಷ್ಟದಲ್ಲಿದೆಯೇ ಅಥವಾ ಕೇವಲ ತಾತ್ಕಾಲಿಕ ಕುಸಿತವೇ ಎಂಬುದನ್ನು ಅರಿಯಿರಿ. ಆಯಾ ಕಂಪನಿಗಳ ಆರ್ಥಿಕ ಕ್ರಮತೆ ಹಾಗೂ ಅವುಗಳ ಮುಂದಿನ ಯೋಜನೆಗಳ ಭದ್ರತೆಯು ಆಧಾರದ ಮೇಲೆ ನಿರ್ಣಯಿಸಿ. ಕಂಪನಿಯ ಪ್ರಸ್ತುತ ಮೌಲ್ಯದಲ್ಲಿ ಆದ ಕುಸಿತವು ಅದರ ಆರ್ಥಿಕತೆಯ ಕುಸಿತದ ಪರಿಣಾಮದಿಂದಲ್ಲ. ಬದಲಾಗಿ ಒಟ್ಟಾರೆ ಮಾರುಕಟ್ಟೆಯ ಕುಸಿತದ ಭಾಗವೇ ಅಥವಾ ಬೇರೇನಾದರೂ ಮೂಲ ಸಮಸ್ಯೆ ಇದೆಯೇ ಎನ್ನುವುದಿಲ್ಲಿ ಇಲ್ಲಿ ಮುಖ್ಯ.

ಉತ್ತಮ ಕಂಪನಿಗಳಾಗಿದ್ದರೆ ಅವು ಒಂದಲ್ಲ ಒಂದು ಹಂತದಲ್ಲಿ ಮತ್ತೆ ಉತ್ತಮ ಮೌಲ್ಯ ಕೊಡುತ್ತವೆ. ನಿಮ್ಮ ಹೂಡಿಕೆಯ ನಿರ್ಣಯವು ಈ ಹಂತದ ಹೊರತಾಗಿದ್ದರೆ, ನಷ್ಟ ದಾಖಲಿಸಿ ಸೂಕ್ತ ನಿರ್ಣಯ ಕೈಗೊಳ್ಳಬಹುದು. ಆದರೆ, 2008 ಮತ್ತು 2020ರ ಮಾರುಕಟ್ಟೆ ಕುಸಿತದ ಸಮಯದಲ್ಲಿ ಹೂಡಿಕೆದಾರರು ಯದ್ವಾತದ್ವ ನಿರ್ಧಾರ ಕೈಗೊಂಡು ಮುಂದೆ ಸಂಭಾವ್ಯ ಲಾಭ ಮಾಡುವ ಅವಕಾಶ ಇದ್ದಾಗಲೂ ಅನಗತ್ಯ ನಷ್ಟ ದಾಖಲಿಸಿ ಅಥವಾ ಹೂಡಿಕೆಯಿಂದ ದೂರ ಉಳಿದ ಸನ್ನಿವೇಶವೂ ಇದೆ. ಹೀಗಾಗಿ, ಯಾವುದೇ ಹೂಡಿಕೆಯ ನಿರ್ಧಾರ ಇದ್ದರೂ ಯೋಚನೆ ಅಂತ ಹೊಂದಿರುವುದು ಮುಖ್ಯ.

ನೀವು ಷೇರು ಮಾರುಕಟ್ಟೆಯಿಂದ ಹೊರಬರುವ ಮೊದಲು ಪರ್ಯಾಯ ಮಾರ್ಗಗಳೇನು ಎಂಬುದನ್ನು ಯೋಚಿಸಿ. ಒಂದೇ ಹಂತದಲ್ಲಿ ಈ ನಿರ್ಧಾರ ಕೈಗೊಂಡು ಒಂದೇ ದಿನಕ್ಕೆ ಎಲ್ಲ ಮೊತ್ತ ಹಿಂಪಡೆಯುವುದು ಒಳ್ಳೆಯ ಆಯ್ಕೆ ಆಗಲಾರದು. ಇಂತಹ ಸಮಯದಲ್ಲಿ ನೀವೇ ಉಲ್ಲೇಖಿಸಿರುವ ನಿಶ್ಚಿತ ಲಾಭ ನೀಡುವ ಹೂಡಿಕೆಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಬಹುದು. ನಂತರ ಆಕ್ಟಿವ ಷೇರುಗಳ ನೇರ ವ್ಯವಹಾರಕ್ಕಿಂತ ಪರೋಕ್ಷವಾಗಿ ಮ್ಯೂಚುವಲ್ ಫಂಡ್‌ಗಳಲ್ಲೂ ಹಂತ ಹಂತವಾಗಿ ಹೂಡಿಕೆ ಮಾಡಬಹುದು.

ಹೆಚ್ಚಾಗಿ ಡಿವಿಡೆಂಡ್ ನೀಡುವ, ಡಿವಿಡೆಂಡ್ ಷೇರುಗಳಲ್ಲಿ ಹೂಡಿಕೆ ಮಾಡುವ ಫಂಡ್‌ಗಳು ಮೊದಲ ಆದ್ಯತೆಯಾಗಿರಲಿ. ಷೇರು ಮಾರುಕಟ್ಟೆಗಿಂತ ತುಸು ಕಡಿಮೆ ಅಪಾಯ ಇರುವ ಹೂಡಿಕೆಗಳಾದ ಹೈಬ್ರಿಡ್ ಫಂಡ್, ಗೋಲ್ಡ್ ಫಂಡ್‌ಗಳನ್ನೂ ಆಯ್ಕೆ ಮಾಡಬಹುದು.

ಸತ್ಯಪ್ರಿಯ ಕಾರಂತ್, ಬೆಂಗಳೂರು.

• **ಪ್ರಶ್ನೆ: ಸಂಸತ್‌ನಲ್ಲಿ ಹೊಸ ಆದಾಯ ತೆರಿಗೆ ಮಸೂದೆ ಮಂಡಿಸಲಾಗಿದೆ. ಈಗಾಗಲೇ, ನಮಗೆ ₹12 ಲಕ್ಷದವರೆಗೆ ತೆರಿಗೆ ಕಟ್ಟುವ ಅಗತ್ಯವಿಲ್ಲ ಎಂಬ ಬಗ್ಗೆ 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹೀಗಿರುವಾಗ ಪ್ರಸ್ತುತ ಕಾನೂನಿನಡಿ ಇರುವ ಆದಾಯದ ವಿನಾಯಿತಿ ಮಿತಿ ಹಾಗೂ ಹೊಸ ತೆರಿಗೆ ಕಾನೂನಿನ ಮಿತಿ ಹಾಗೂ ಇತರ ವಿನಾಯಿತಿಗಳು ಮುಂದೆ ಸೇರಿಸಿದರೆ ಹೊಸ ಕಾನೂನಿನಿಂದ ತೆರಿಗೆ ಇನ್ನಷ್ಟು ಕಡಿಮೆ ಆಗಲಿದೆಯೇ ಅಥವಾ ಇದೊಂದು ದೊಡ್ಡ ಬದಲಾವಣೆಯೇ? ಜನಸಾಮಾನ್ಯರ ಮೇಲೆ ಇದರ ಪರಿಣಾಮ ಏನು?**

ಉತ್ತರ: ಯಾವುದೇ ಹೊಸ ಕಾನೂನು ಜಾರಿಗೊಳಿಸುವಾಗಲೂ ಅದರ ಪ್ರಸ್ತಾವ ಸಹಜವಾಗಿ ನಮ್ಮ ಸಂಸತ್ತಿನ ಜಂಟಿ ಸದನದಲ್ಲಿ ಅಂಗೀಕಾರವಾಗಿ ರಾಷ್ಟ್ರಪತಿಯಿಂದ ಅಂಕಿತಗೊಂಡ ನಂತರವೇ ಅದು ಅಧಿಕೃತ ಘೋಷಣೆಯಾಗಿ ಕಾನೂನಿನ ಮಾನ್ಯತೆ ಪಡೆಯುತ್ತದೆ. ಹೀಗಾಗಿ ಆದಾಯ ತೆರಿಗೆ ಮಸೂದೆ– 2025 ಈಗ ತಾನೆ ಮಂಡಿಸಲಾಗಿದ್ದು, ಇನ್ನೂ ಅದಕ್ಕೆ ಬೇಕಾದ ಹಿಡುವಳಿಗೆ ಅವಕಾಶವಿದೆ.

ಪ್ರಸ್ತುತ ಘೋಷಿಸಿರುವ ₹12 ಲಕ್ಷ ತನಕದ ಆದಾಯದ ಮೇಲಿನ ತೆರಿಗೆ ರಿಬೇಟ್/ವಿನಾಯಿತಿ, ಆದಾಯ ವರ್ಷ 2025-26ಕ್ಕೆ ಅನ್ವಯವಾಗುವ ಮಿತಿಯಾಗಿರುತ್ತದೆ. ಈ ಹಂತದ ತನಕದ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಈ ಮಿತಿಯು ಪ್ರಸ್ತುತ ಜಾರಿಯಲ್ಲಿರುವ ಆದಾಯ ತೆರಿಗೆ ಕಾಯ್ದೆ 1961ರ ಅನ್ವಯ ಮಂಡಿಸಲಾದ 'ಹಣಕಾಸು ಮಸೂದೆ 2025'ರ ಅಡಿಯಲ್ಲಿ ಮಿತಿ ಹಾಗೂ ದರಗಳಾಗಿರುತ್ತದೆ.

ಇದನ್ನು ಆದಾಯ ತೆರಿಗೆ ಮಸೂದೆ ಜೊತೆಗೆ ತಳುಕು ಹಾಕುವುದು ಸರಿಯಲ್ಲ. ಎಲ್ಲಾ ತೆರಿಗೆ ಮಿತಿ ಹಾಗೂ ದರಗಳು ಆಯಾ ವರ್ಷದ ಬಜೆಟ್ ಪ್ರಸ್ತಾವದಂತೆ ಹಣಕಾಸು ಮಸೂದೆಯಲ್ಲಿ ಜಾರಿಯಾಗುವ ವಿಚಾರಗಳಾಗಿರುತ್ತವೆ. ಹೀಗಾಗಿ, ಹೊಸ ಕಾನೂನು ಬಂದ ನಂತರ ಮುಂದಿನ ವರ್ಷಗಳಲ್ಲಿ ಮಂಡಿಸಲಾಗುವ ಬಜೆಟ್ ಆಧಾರದಲ್ಲಿ ಇದು ನಿರ್ಣಯವಾಗುತ್ತದೆ. ಅದರ ತೆರಿಗೆ ದರಗಳು ಆರ್ಥಿಕ ವರ್ಷ 2026-27ರಿಂದ ಅನ್ವಯವಾಗಲಿವೆ.

'ಆದಾಯ ತೆರಿಗೆ ಮಸೂದೆ' ಅಂಶಗಳ ಬಗ್ಗೆ ಹೇಳುವುದಾದರೆ ಇದು ಪ್ರಸ್ತುತ ಕಾನೂನಿನ ಪರಿಷ್ಕೃತ ರೂಪವಾಗಿದ್ದರೂ ಜನಸಾಮಾನ್ಯರ ನಿತ್ಯ ವ್ಯವಹಾರಗಳಿಗೆ ನಿರ್ಣಾಯಕವಾಗುವಂತಹ ದೊಡ್ಡ ಬದಲಾವಣೆ ಗಳನ್ನು ಮಾಡಿಲ್ಲ. ಹಳೆಯ ಕಾಯ್ದೆಯಲ್ಲಿನ ಸೆಕ್ಷನ್‌ಗಳನ್ನು ಒಟ್ಟುಗೂಡಿಸಿ ಒಂದೇ ಕಡೆ ಮಾಹಿತಿ ನೀಡುವ ಹಾಗೂ ನಾಗರಿಕರ ಸೀಮಿತ ಕಾನೂನಿನ ಪರಿಜ್ಞಾನಕ್ಕೆ ನಿಲುಕುವ ರೀತಿಯಲ್ಲಿ ಸಿದ್ಧಪಡಿಸಲಾಗಿದೆ. ಸರಳ ಭಾಷೆಯಲ್ಲಿ ವಿವರಿಸಲಾಗಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶ
TVS ಭುವನಪುರ, ಶಿವಮೊಗ್ಗ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಲ್ಲನುಸಾರ) ಪಾಸಾಗುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಉಚಿತವಾಸವಿದೆ. 14,000-18,000. 8951315839, 7022770052

HARSHA INSTITUTIONS
WE ARE HIRING - WALK-IN INTERVIEWS - 09 MARCH 2025 - SUNDAY AT HARSHA INSTITUTIONS CAMPUS, NELAMANGALA

HARSHA INTERNATIONAL PUBLIC SCHOOL (CBSE) & PRE-UNIVERSITY COLLEGE:
- Pre School (Mother Teacher- UG Degree, MTT/NTT/B.Ed. Preferred)
- Primary Teacher: English, Assistant Teacher & Computer Science (PRT- UG Degree, B.Ed. Preferred)
- Middle School: Science & Computer Science (PRT- PG Degree, B.Ed. Preferred)
- Senior Secondary: Physics, Computer Science & Biology (PGT- PG Degree, B.Ed. Preferred)
- PUC Lecturer: Physics, Chemistry, Economics & Computer Science (PG Degree, B.Ed. Preferred)
- Physical Education Instructor (with Specialisation; M.P.Ed.)
- Drum Instructor/ Instruments Instructor (Suitable qualification)

HARSHA INSTITUTE OF TECHNOLOGY:
- PRINCIPAL/DIRECTOR- Ph.D. in Engineering/Technology (Preferably in CS, Data Science, AI, Cyber Security) with preferably 10 years experience

HARSHA SCHOOL OF LAW:
- PRINCIPAL- Ph.D. in Law/LL.M with at least 15 years of experience in teaching/ research/ administration in a recognised law institution

HARSHA INSTITUTIONS:
- Graphic Designer (Suitable qualification)
- Marketing Executive (Suitable qualification)

Experienced candidates preferred (Freshers can apply/ walk-in for the interview)
WALK-IN INTERVIEWS ON 09 MARCH 2025, SUNDAY at HARSHA INSTITUTIONS CAMPUS, NELAMANGALA.
Call us on: 91765-43836/ 96204-23304/ 96069-45418/ 90350-87210
Mail your resumes to: hr@harshainstitutions.com/ vp.hips@harshainstitute.edu.in

Teachers / Professors

SVC EDUCATIONAL INSTITUTIONS
Kushtagi - 583277, Koppal District
Educators Wanted for CBSE & KSEAB Schools

PG Teachers
Qualification and Experience: PG with BEd. Experience preferred
Subject: English, Hindi, Kannada, Social Studies, Science, Mathematics, Physical Education Instructors, Computers and ICT

TG Teachers for Primary Section
Qualifications: Any Degree with BEd. Experience preferred
Subjects: English, Hindi, Kannada, Social Studies, Science, Mathematics, Physical Education Instructors, Computers and ICT, Art, Music, Counsellors

PU College
Physics, Mathematics, Chemistry, Biology, Accountancy, Economics, Business Studies, Computer Science
PG in respective disciplines with BEd. Candidates with NET, SLET, PhD will have added advantage.
Experienced candidates with ideas, vision and professionalism with English proficiency needed to head Institutions.
Attractive salary package commensurate with experience and qualification
Contact: 7411024861, 9606044849, 9945976976
Email your profiles to: ceo@svcerdt.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರ್ಮ ತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. 'ಕೆಂಪರ್' ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ, ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರುವವರು ಅಥವಾ ಇಲ್ಲದಿರುವವರು, ಉಚಿತ ಊಟ ವಸತಿ ಸಂಬಳ 15,000/-, 20,000/-, ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76, ತಕ್ಷಣಸಂಪರ್ಕಿಸಿ: 9606385001, 9606384001

Join AgroTIE
Shape the Future of High-Tech Horticulture
AgroTIE is Looking For PASSIONATE AGRICULTURE GRADUATES
To Join our Production Team at the Indo-Dutch Centre of Excellence for High-Tech Horticulture. This is a great opportunity to work in state-of-the-art trial fields & greenhouses, gain hands-on experience alongside industry experts, and be part of an innovative, growth-driven environment. If you are eager to build a rewarding career in horticulture, send your resume to info@agrotie.in

ಪ್ರವಾಸ

Travel

26.03.2025/ ಏಪ್ರಿಲ್ ಮೇ ತಿಂಗಳಲ್ಲಿ 7 ದಿನಗಳ ಕಾಶಿ, ಗಯಾ, ಪ್ರಯಾಗ್‌ರಾಜ್ ಅಯೋಧ್ಯೆ. ಮೇ ತಿಂಗಳಿಂದ ಪ್ರತಿ 15 ದಿನಗಳಿಗೊಮ್ಮೆ 13 ದಿನಗಳ ಚಾರ್‌ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ದೆಹಲಿ. ಶ್ರೀರಾಮ ಟ್ರಾವೆಲ್ಸ್ 8088826815 9019301300

21.3.2025: ದೆಹಲಿ ಆಗ್ರಾ ಪ್ರಯಾಗ್ ರಾಜ್ ಅಯೋಧ್ಯೆ ಕಾಶಿ 8.4.2025 ಪುರಿ ಜಗನ್ನಾಥ, ಕಲ್ಕತ್ತಾ 22.4.2025 ಚಾರ್‌ಧಾಮ್ ವೈಷ್ಣವಿ ಕಾಶಿ ಗಯಾ ಅಯೋಧ್ಯೆ 3.5.25 ಶ್ರೀಶೈಲ ಮಂತ್ರಾಲಯ 13.5.25 ತಿರುಪತಿ ಕಾಳಹಸ್ತಿ ಮಲ್ಲಿಕಾರ್ಜುನ ಟ್ರಾವೆಲ್ಸ್ ತುಮಕೂರು ಪೋ: 8496044942

ಭವಿಷ್ಯ

Astrology

ವಿದಾಯ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ಬಗ್ಗೆ ಪತ್ರಿಕೆಯು ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ...
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

★ಶ್ರೀಗೋಮಾತಾ ಜ್ಯೋತಿಷ್ಯರು★ ಪ್ರೀತಿಪ್ರೇಮ, ದಾಂಪತ್ಯ, ವಿದ್ಯೆ, ಉದ್ಯೋಗ, ಕಂಕಣಭಾಗ್ಯ, ಸಾಲಬಾಧೆ, ಇನ್ನೂಯಾವುದೇ ಸಮಸ್ಯೆಗಳಿದ್ದರೂ ಪರಿಹಾರ ಮಾಡುತ್ತಾರೆ. ಸಂಪರ್ಕಿಸಿ: 9108022257

ಸಂಕ್ಷಿಪ್ತ ಸುದ್ದಿ

ಬುಚ್ ವಿರುದ್ಧ ಎಫ್‌ಐಆರ್‌ಗೆ ನಾಲ್ಕು ವಾರ ತಡೆ

ಮುಂಬೈ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾಜಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ಐದು ಅಧಿಕಾರಿಗಳ ವಿರುದ್ಧ ನಾಲ್ಕು ವಾರದವರೆಗೆ ಎಫ್‌ಐಆರ್ ದಾಖಲಿಸದಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ, ಬಾಂಬೆ ಹೈಕೋರ್ಟ್ ಮಂಗಳವಾರ ಸೂಚಿಸಿದೆ.

ಷೇರುಪೇಟೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ನ್ಯಾಯಾಲಯವು ಎಫ್‌ಐಆರ್ ದಾಖಲಿಸುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಬುಚ್ ಅವರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಿವಕುಮಾರ್ ಡಿಗೆ ನೇತೃತ್ವದ ಏಕಸದಸ್ಯ ಪೀಠವು, ಈ ಆದೇಶ ನೀಡಿದೆ.

ಸುಂಕ ನೀತಿ: ಕಚ್ಚಾ ತೈಲ ಬೆಲೆ ಇಳಿಕೆ

ಲಂಡನ್ (ರಾಯಿಟರ್ಸ್): ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆಯು (ಒಪೆಕ್) ಉತ್ಪಾದನೆ ಹೆಚ್ಚಿಸುವುದಾಗಿ ಘೋಷಿಸಿದೆ. ಇದರ ಬೆನ್ನಲ್ಲೇ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.5ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರೆಲ್ ದರ 70.57 ಡಾಲರ್ ಆಗಿದೆ.

ವೆಸ್ಟ್ ಟೆಕ್ಸಾಸ್ 'ಇಂಟರ್‌ಮೀಡಿಯೆಟ್ ಕಚ್ಚಾ ತೈಲದ ಬೆಲೆಯು ಶೇ 1.3ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್ ಬೆಲೆಯು 67.51 ಡಾಲರ್‌ಗೆ ತಲುಪಿದೆ.

ಕೆನಡಾ, ಮೆಕ್ಸಿಕೊದ ಮೇಲೆ ಅಮೆರಿಕದ ಸುಂಕ ನೀತಿಯು ಮಂಗಳವಾರದಿಂದ ಜಾರಿಗೆ ಬಂದಿದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

10 ಗ್ರಾಂ ಚಿನ್ನದ ಬೆಲೆ ₹89 ಸಾವಿರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆಯು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,100 ಏರಿಕೆಯಾಗಿದ್ದು, ₹89 ಸಾವಿರ ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು, ₹88,600 ಆಗಿದೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1,500 ಏರಿಕೆಯಾಗಿದ್ದು, ₹98 ಸಾವಿರ ಆಗಿದೆ.

ಆಸ್ಪತ್ರೆಯಲ್ಲಿ ಪೋಪ್ ರಾಜೀನಾಮೆ ವದಂತಿ

ವ್ಯಾಟಿಕನ್ ಸಿಟಿ(ರಾಯಿಟರ್ಸ್): ಪೋಪ್ ಫ್ರಾನ್ಸಿಸ್ ಅವರು ನ್ಯುಮೋನಿಯಾದಿಂದ ಬಳಲುತ್ತಿದ್ದು, ಕಳೆದ ಮೂರು ವಾರಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಮವಾರ ಅವರ ಆರೋಗ್ಯದಲ್ಲಿ ತುಸು ಏರುಪೇರು ಕಂಡುಬಂದಿತ್ತು. ಆದರೆ, ಅವರ ಆರೋಗ್ಯ ಕುರಿತು ಇತ್ತೀಚೆಗೆ ಬಿಡುಗಡೆಯಾಗಿರುವ ಮಾಹಿತಿಯು ಚೇತರಿಸಿಕೊಳ್ಳುತ್ತಿದ್ದಾರೆ ಎಂಬ ಸೂಚನೆ ನೀಡಿದೆ.

ಈ ನಡುವೆ, ಪೋಪ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ವದಂತಿಗಳು ಕೇಳಿಬರುತ್ತಿವೆ. ಅವರ ಜೀವನ ಚರಿತ್ರೆಕಾರರು ಮಾತ್ರ, ಪೋಪ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆ ಇಲ್ಲ ಎನ್ನುತ್ತಿದ್ದಾರೆ.

ರೋಮ್‌ನ ಜೆಮೆಲಿ ಆಸ್ಪತ್ರೆಗೆ ಫೆಬ್ರುವರಿ 14ರಂದು ಪೋಪ್ ಅವರನ್ನು ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

ಟ್ರಂಪ್ ಜೊತೆ ವಾಗ್ವಾದ ‘ವಿಷಾದನೀಯ’: ಝೆಲೆನ್‌ಸ್ಕಿ

ಕೀವ್ (ಎಪಿ): ಅಮೆರಿಕಕ್ಕೆ ಭೇಟಿ ನೀಡಿದ ವೇಳೆ, ಶ್ವೇತ ಭವನದ ಓವಲ್ ಕಚೇರಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ವಾಗ್ವಾದ ನಡೆದಿರುವುದು 'ವಿಷಾದನೀಯ' ಎಂದಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, 'ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದ ಸಮಯವಿದು' ಎಂದು ಮಂಗಳವಾರ ಹೇಳಿದ್ದಾರೆ.

ಉಕ್ರೇನ್‌ಗೆ ಸೇನಾ ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರವನ್ನು ಅಮೆರಿಕ ಪ್ರಕಟಿಸಿದ ಬೆನ್ನಲ್ಲೇ, ಝೆಲೆನ್‌ಸ್ಕಿ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

'ಟ್ರಂಪ್ ಅವರ ಮುಂದಾಳತ್ವದಂತೆ, ವಿರಳ ಖನಿಜಗಳ ಕುರಿತ ಒಪ್ಪಂದಕ್ಕೆ ಸಹಿ ಹಾಕಲು ಉಕ್ರೇನ್ ಸಿದ್ಧವಿದೆ' ಎಂದೂ ಅವರು ಹೇಳಿದ್ದಾರೆ.

ಕೆನಡಾ, ಮೆಕ್ಸಿಕೊಗೆ ಶೇ 25ರಷ್ಟು ತೆರಿಗೆ: ಉತ್ತರ ಅಮೆರಿಕ ರಾಷ್ಟ್ರಗಳಿಗೆ ಆತಂಕ

ಅಮೆರಿಕದಿಂದ ಸುಂಕ ಸಮರ ಶುರು

ವಾಷಿಂಗ್ಟನ್ (ಎಪಿ): 'ಮೆಕ್ಸಿಕೊ ಮತ್ತು ಕೆನಡಾದಿಂದ ಅಮೆರಿಕಕ್ಕೆ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಮಂಗಳವಾರದಿಂದ ಶೇಕಡ 25ರಷ್ಟು ಸುಂಕ ಹೇರಲಾಗುವುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಡೊನಾಲ್ಡ್ ಟ್ರಂಪ್

ಈ ನಿರ್ಧಾರದಿಂದ ತೀವ್ರವಾದ ಹಣದುಬ್ಬರ ಹಾಗೂ ಪ್ರಗತಿಯಲ್ಲಿ ಕುಂಠಿತವಾಗುತ್ತದೆ ಎಂಬ ಆತಂಕ ಅಮೆರಿಕ ರಾಷ್ಟ್ರಗಳಲ್ಲಿ ಹೊಸ ಆತಂಕ ಸೃಷ್ಟಿಸಿದೆ.

'ಕೆನಡಾ ಮತ್ತು ಮೆಕ್ಸಿಕೊದಿಂದ ಬರುವ ಉತ್ಪನ್ನಗಳ ಮೇಲೆ ಶೇಕಡ 25ರಷ್ಟು ಸುಂಕ ವಿಧಿಸಲಾಗುತ್ತಿದೆ. ಈ ವಿಷಯದಲ್ಲಿ ವಿಳಂಬ ಮಾಡುವುದಿಲ್ಲ' ಎಂದು ಶ್ವೇತಭವನದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ಅವರಿಗೆ ಸುಂಕ ವಿಧಿಸಬೇಕಾಗುತ್ತದೆ' ಎಂದು ಅವರು ಪುನರುಚ್ಚರಿಸಿದರು.

'ಅನಿಯಂತ್ರಿತ ಕಳ್ಳಸಾಗಣೆ ಹಾಗೂ ಅಕ್ರಮ ವಲಸೆಯ ವಿರುದ್ಧ ಕ್ರಮ ಕೈಗೊಳ್ಳಲು ಎರಡು ರಾಷ್ಟ್ರಗಳ ಮೇಲೂ ಸುಂಕ ವಿಧಿಸುವುದು ಅನಿವಾರ್ಯ' ಎಂದು ಟ್ರಂಪ್ ತಿಳಿಸಿದರು. ಅಮೆರಿಕದ ವ್ಯಾಪಾರ ಅಸಮತೋಲನ ಹೋಗಲಾಡಿಸಲು ನಿರಂತರ ಪ್ರಯತ್ನಿಸುತ್ತಿದ್ದು, ಹೆಚ್ಚು ಹೆಚ್ಚು ಕಾರ್ಖಾನೆಗಳನ್ನು ಅಮೆರಿಕಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಟ್ರಂಪ್‌ಗೆ ತಿರುಗೇಟು ನೀಡಿದ ಚೀನಾ, ಕೆನಡಾ, ಮೆಕ್ಸಿಕೊ

ಬೀಜಿಂಗ್/ ಒಟ್ಟಾವಾ (ಎಪಿ, ರಾಯಿಟರ್ಸ್): ಅಮೆರಿಕದಿಂದ ಆಮದು ಮಾಡಿಕೊಳ್ಳಲಾಗುವ ಚಿಕನ್, ಹಂದಿ ಮಾಂಸ, ಗೋಮಾಂಸ ಹಾಗೂ ಸೋಯಾ ಉತ್ಪನ್ನಗಳ ಮೇಲೆ ಹೆಚ್ಚುವರಿಯಾಗಿ ಶೇ 15ರವರೆಗೆ ಸುಂಕ ವಿಧಿಸುವುದಾಗಿ ಚೀನಾ ಮಂಗಳವಾರ ಘೋಷಿಸಿದೆ.

ವಾಣಿಜ್ಯ ಸಚಿವಾಲಯ ಘೋಷಿಸಿರುವ ಈ ಸುಂಕ ಹೆಚ್ಚಳವು ಮಾರ್ಚ್ 10ರಿಂದ ಜಾರಿಗೆ ಬರಲಿದೆ. ಚೀನಾದಿಂದ ಆಮದು ಮಾಡಿಕೊಳ್ಳಲಾಗುವ ಉತ್ಪನ್ನಗಳ ಮೇಲೆ ವಿಧಿಸುವ ಸುಂಕವನ್ನು ಶೇ 20ಕ್ಕೆ ಹೆಚ್ಚಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಕ್ಕೆ ಪ್ರತಿಯಾಗಿ ಚೀನಾ ಈ ನಿರ್ಧಾರ ಕೈಗೊಂಡಿದೆ. ಅಮೆರಿಕದ ಸುಂಕ ಹೆಚ್ಚಳ ಆದೇಶ ಮಂಗಳವಾರದಿಂದ ಜಾರಿಗೆ ಬಂದಿದೆ.

ಅಮೆರಿಕದಿಂದ ಆಮದು ಮಾಡಿಕೊಳ್ಳಲಾಗುವ ಕೋಳಿ ಮಾಂಸ, ಗೋಧಿ, ಜೋಳ ಧಾನ್ಯಗಳು, ಅರಳೆಗೆ ಹೆಚ್ಚುವರಿ ಶೇ 15ರಷ್ಟು ಸುಂಕ ವಿಧಿಸಲಾಗುತ್ತದೆ. ಜೋಳ, ಸೋಯಾಬೀನ್, ಹಂದಿ ಮಾಂಸ, ಗೋಮಾಂಸ, ಹಣ್ಣುಗಳು, ತರಕಾರಿಗಳು ಹಾಗೂ ಡೇರಿ ಉತ್ಪನ್ನಗಳ ಮೇಲಿನ ಸುಂಕವನ್ನು ಶೇ 10ರಷ್ಟು ಹೆಚ್ಚಿಸಲಾಗಿದೆ ಎಂದು ಚೀನಾ ವಾಣಿಜ್ಯ ಸಚಿವಾಲಯ ಹೇಳಿದೆ.

ಜೊತೆಗೆ, ಅಮೆರಿಕದ 10 ಕಂಪನಿಗಳನ್ನು 'ವಿಶ್ವಾಸಾರ್ಹವಲ್ಲದ ಸಂಸ್ಥೆಗಳ ಪಟ್ಟಿ'ಯಲ್ಲಿ ಸೇರ್ಪಡೆ ಮಾಡಲಾಗಿದೆ. ಈ ಕಂಪನಿಗಳ ಹಿರಿಯ ಅಧಿಕಾರಿಗಳು ಚೀನಾ ಪ್ರವೇಶಿಸುವುದನ್ನು ಕೂಡ ನಿರ್ಬಂಧಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಶೇ 25 ಸುಂಕ ವಿಧಿಸಲು ಕೆನಡಾ ನಿರ್ಧಾರ: ಅಮೆರಿಕದಿಂದ ಆಮದು ಮಾಡಿಕೊಳ್ಳುವ 107 ಶತಕೋಟಿ ಡಾಲರ್ ಮೊತ್ತದ ಉತ್ಪನ್ನಗಳಿಗೆ ಶೇ 25ರಷ್ಟು ಹೆಚ್ಚುವರಿ ಸುಂಕ ವಿಧಿಸಲು ಕೆನಡಾ ನಿರ್ಧರಿಸಿದೆ.

'ಹೆಚ್ಚುವರಿ ಸುಂಕ ವಿಧಿಸುವುದನ್ನು ಅಮೆರಿಕ ವಾಪಸ್ ಪಡೆಯುವವರೆಗೂ ಈ ವ್ಯವಸ್ಥೆ ಜಾರಿಯಲ್ಲಿರುತ್ತದೆ' ಎಂದು ಪ್ರಧಾನಿ ಜಸ್ಟಿನ್ ಟ್ರೂಡೊ ತಿಳಿಸಿದ್ದಾರೆ.

ಮೆಕ್ಸಿಕೊ ಸಹ ಅಮೆರಿಕದ ಉತ್ಪನ್ನಗಳಿಗೆ ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ವಿಧಿಸಿದೆ.

ಐಎಸ್‌ಐ ಜೊತೆ ನಂಟು ಹೊಂದಿರುವ ಶಂಕೆ

ಕೇಂದ್ರದ ಗುಪ್ತಚರ ಸಂಸ್ಥೆಗಳು ತನಿಖೆ ಆರಂಭಿಸಿದ್ದು, ಈ ಪ್ರಕರಣದ ಜೊತೆ ನಂಟು ಹೊಂದಿರುವ ಸ್ಲೀಪರ್ ಸೆಲ್‌ಗಳನ್ನು ಪತ್ತೆ ಮಾಡಲು ರಾಜ್ಯಗಳ ಭದ್ರತಾ ಏಜೆನ್ಸಿಗಳ ಜೊತೆಯಾಗಿ ಕೆಲಸ ಮಾಡುತ್ತಿವೆ

ಶಂಕಿತ ಉಗ್ರ ರೆಹಮಾನ್‌ಗೆ ‘ಸ್ಲೀಪರ್ ಸೆಲ್’ ನೆರವು?

ಫರೀದಾಬಾದ್ (ಪಿಟಿಐ): ಅಯೋಧ್ಯೆಗೆ ತೆರಳುತ್ತಿದ್ದ ಎನ್ನಲಾದ ಶಂಕಿತ ಉಗ್ರ ಅಬ್ದುಲ್ ರೆಹಮಾನ್‌ಗೆ ಕೆಲವು ‘ಸ್ಲೀಪರ್ ಸೆಲ್’ಗಳ ಜೊತೆ ನಂಟು ಇದೆಯೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ಹಲವು ಸಂಸ್ಥೆಗಳು ತನಿಖೆ ನಡೆಸುತ್ತಿವೆ.

ಉತ್ತರ ಪ್ರದೇಶದ ಫೈಜಾಬಾದ್‌ನ ಮಿಲ್ಕಿಪುರದ ನಿವಾಸಿ ರೆಹಮಾನ್‌ನನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಮತ್ತು ಹರಿಯಾಣದ ವಿಶೇಷ ಟಾಸ್ಕ್ ಫೋರ್ಸ್ (ಎಸ್‌ಟಿಎಫ್) ಅಧಿಕಾರಿಗಳು ಫರೀದಾಬಾದ್ ಸನಿಹದ ಪಲವಲ್‌ನಲ್ಲಿ ಭಾನುವಾರ ಬಂಧಿಸಿದ್ದಾರೆ.

ಫರೀದಾಬಾದ್ ಸನಿಹದ ಪಾಲಿ ಗ್ರಾಮದಲ್ಲಿ ಯಾರೂ ವಾಸಮಾಡದ ಮನೆಯೊಂದರಲ್ಲಿ ಎರಡು ಗ್ರೆನೇಡ್‌ಗಳನ್ನು ತಾನು ಇರಿಸಿರುವುದಾಗಿ ರೆಹಮಾನ್ ಪೊಲೀಸ್ ವಿಚಾರಣೆಯ ಸಂದರ್ಭದಲ್ಲಿ ತಿಳಿಸಿದ್ದಾನೆ ಎಂದು ಮೂಲಗಳು ಹೇಳಿವೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆ ರೆಹಮಾನ್‌ಗೆ ನಂಟು ಇದೆ ಎನ್ನಲಾಗಿದೆ. ಈತ ಮಾರ್ಚ್ 4ರಂದು ಅಯೋಧ್ಯೆಗೆ ತೆರಳುವ ಉದ್ದೇಶ ಹೊಂದಿದ್ದ ಎಂದು ಮೂಲಗಳು ಹೇಳಿವೆ. ‘ಇದು ಬಹಳ ಸೂಕ್ಷ್ಮವಾದ ವಿಚಾರ. ತನಿಖೆ ನಡೆಯುತ್ತಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ತನಗೆ ಗ್ರೆನೇಡ್ ತಂದುಕೊಟ್ಟ ವ್ಯಕ್ತಿಯ ಹೆಸರು, ಆತನ ವಿಳಾಸ ಗೊತ್ತಿಲ್ಲ ಎಂಬುದಾಗಿ ರೆಹಮಾನ್ ವಿಚಾರಣೆ ಸಂದರ್ಭದಲ್ಲಿ ಹೇಳಿದ್ದಾನೆ ಎನ್ನಲಾಗಿದೆ.

ಫೈಜಾಬಾದ್‌ನಿಂದ ಫರೀದಾಬಾದ್‌ಗೆ ರೆಹಮಾನ್ ರೈಲಿನಲ್ಲಿ ಭಾನುವಾರ ಬಂದ. ಅಲ್ಲಿ ಆತನಿಗೆ ಒಬ್ಬ ಎರಡು ಗ್ರೆನೇಡ್‌ಗಳನ್ನು ತಂದುಕೊಟ್ಟ. ರೆಹಮಾನ್ ಅಯೋಧ್ಯೆಗೆ ರೈಲಿನ ಮೂಲಕ ತೆರಳಬೇಕಿತ್ತು. ಆದರೆ ಅದಕ್ಕೂ ಮೊದಲು ಆತನನ್ನು ಬಂಧಿಸಲಾಯಿತು.

ಫರೀದಾಬಾದ್‌ನಲ್ಲಿ ಸ್ಲೀಪರ್ ಸೆಲ್ ಒಂದು ರೆಹಮಾನ್‌ಗೆ ಬೆಂಬಲ ಒದಗಿಸುತ್ತಿತ್ತು, ಆ ಸೆಲ್‌ನವರು ಗ್ರೆನೇಡ್ ಒದಗಿಸಿದ್ದಾರೆ ಎಂಬ ಮಾಹಿತಿ ಹರಿಯಾಣ ಎಸ್‌ಟಿಎಫ್‌ಗೆ ಲಭ್ಯವಾಗಿದೆ ಎಂದು ಮೂಲಗಳು ಹೇಳಿವೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ • ರಾಜ್ಯ ಸರ್ಕಾರಗಳಿಗೆ ಹೊಣೆ ಹೊರಿಸಿದ ಸುಪ್ರೀಂ ಕೋರ್ಟ್

‘ಖಾಸಗಿ ಆಸ್ಪತ್ರೆಗಳಲ್ಲಿ ಸುಲಿಗೆ: ನೀತಿ ರೂಪಿಸಿ’

ನವದೆಹಲಿ (ಪಿಟಿಐ): ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವ ರೋಗಿಗಳು ಮತ್ತು ಅವರ ಆರೈಕೆಗಾಗಿ ಜೊತೆಯಲ್ಲಿ ಇರುವವರು ಸುಲಿಗೆಗೆ ಗುರಿಯಾಗುವುದನ್ನು ತಡೆಯಲು ಸೂಕ್ತವಾದ ನೀತಿ ರೂಪಿಸುವ ಹೊಣೆಯು ರಾಜ್ಯ ಸರ್ಕಾರಗಳದ್ದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಇರುವ ಔಷಧ ಮಳಿಗೆಗಳಲ್ಲಿ ಹೆಚ್ಚಿನ ಬೆಲೆಗೆ ಔಷಧ ಮತ್ತು ವೈದ್ಯಕೀಯ ಉಪಕರಣ ಖರೀದಿಸಬೇಕಾದ ಸ್ಥಿತಿಯನ್ನು ರೋಗಿಗಳು, ಅವರನ್ನು ಆರೈಕೆ ಮಾಡುವವರು ಎದುರಿಸುತ್ತಿದ್ದಾರೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ದೂರಲಾಗಿತ್ತು.

ಕಡ್ಡಾಯವಾಗಿ ಪಾಲಿಸಬೇಕಾದ ನಿರ್ದೇಶನಗಳನ್ನು ತಾನು ನೀಡಿದರೆ ಖಾಸಗಿ ಆಸ್ಪತ್ರೆಗಳ ಕಾರ್ಯನಿರ್ವಹಣೆಗೆ ಅಡ್ಡಿ ಉಂಟಾಗಬಹುದು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರಿದ್ದ ಪೀಠವು ಹೇಳಿದೆ.

ಕಾನೂನು ವಿದ್ಯಾರ್ಥಿ ಸಿದ್ಧಾರ್ಥ ದಾಲ್ಮಿಯಾ ಮತ್ತು ಅವರ ತಂದೆ, ವಕೀಲ ವಿಜಯಪಾಲ್ ದಾಲ್ಮಿಯಾ ಅವರು ಈ ಅರ್ಜಿ ಸಲ್ಲಿಸಿದ್ದರು. ‘ಈ ಅರ್ಜಿಯಲ್ಲಿನ ವಿಷಯವನ್ನು ಪರಿಗಣಿಸಿ, ಸೂಕ್ತವೆನ್ನಿಸುವ ನೀತಿ ನಿರ್ಧಾರ ಕೈಗೊಳ್ಳಬೇಕು ಎಂದು ನಾವು ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚಿಸುತ್ತಿದ್ದೇವೆ’ ಎಂದು ಪೀಠ ಹೇಳಿದೆ.

ನೀತಿ ನಿರೂಪಕರು ಈ ವಿಚಾರದಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಬೇಕು. ರೋಗಿಗಳು ಸುಲಿಗೆಗೆ ಒಳಗಾಗದಂತೆ ನೋಡಿಕೊಳ್ಳಬೇಕು. ಇದೇ ವೇಳೆ ಖಾಸಗಿ ಸಂಸ್ಥೆಗಳು ಈ ಕ್ಷೇತ್ರವನ್ನು ಪ್ರವೇಶಿಸುವುದರ ಮೇಲೆ ಅತಾರ್ಕಿಕವಾದ ನಿರ್ಬಂಧಗಳು ಕೂಡ ಇರಬಾರದು ಎಂದು ಪೀಠವು ಸ್ಪಷ್ಟಪಡಿಸಿದೆ.

‘ಜಾಮೀನಿನ ಪರಿಣಾಮದ ಅರಿವು ಇರಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ವರದಕ್ಷಿಣೆ ಕಿರುಕುಳದಿಂದಾಗಿ ಉಂಟಾದ ಸಾವಿನ ಪ್ರಕರಣಗಳಲ್ಲಿ ನ್ಯಾಯಾಲಯಗಳು ಜಾಮೀನು ನೀಡುವಾಗ ಅದರ ಸಾಮಾಜಿಕ ಪರಿಣಾಮಗಳನ್ನೂ ಪರಿಗಣಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇಂತಹ ಪ್ರಕರಣಗಳು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಅಡಿಪಾಯಕ್ಕೇ ಪೆಟ್ಟು ಕೊಟ್ಟಿರುತ್ತವೆ ಎಂದು ಕೋರ್ಟ್ ಹೇಳಿದೆ.

‘ಇಂತಹ ಹೀನ ಕೃತ್ಯಗಳ ಪ್ರಮುಖ ಸೂತ್ರಧಾರರು ದೈಹಿಕ ಮತ್ತು ಮಾನಸಿಕ ಯಾತನೆ ನೀಡುತ್ತಿದ್ದರು ಎಂಬುದನ್ನು ಸಾಕ್ಷ್ಯಗಳು ಹೇಳುತ್ತಿದ್ದರೂ ಅವರು ಜಾಮೀನಿನ ಮೇಲೆ ಹೊರಗಿರಲು ಅವಕಾಶ ಮಾಡಿಕೊಟ್ಟರೆ, ನ್ಯಾಯಸಮ್ಮತ ವಿಚಾರಣಾ ಪ್ರಕ್ರಿಯೆ ಹಾಗೂ ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯ ಮೇಲೆ ಜನ ಇರಿಸಿರುವ ವಿಶ್ವಾಸಕ್ಕೆ ಪೆಟ್ಟು ಬೀಳುತ್ತದೆ’ ಎಂದು ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ವರದಕ್ಷಿಣೆಯ ಕಿರುಕುಳ ಮತ್ತು ಸಾವು ಪ್ರಕರಣದಲ್ಲಿ ಆರೋಪಿಗಳಾದ ಮುಖ್ತಾರ್ ಅಹಮದ್ (ಮಾವ) ಹಾಗೂ ತಾರಾ ಬಾನು (ಅತ್ತೆ) ಅವರಿಗೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಜಾಮೀನನ್ನು ಪೀಠವು ರದ್ದುಪಡಿಸಿದೆ.

ಈ ಪ್ರಕರಣದಲ್ಲಿ ಸೊಸೆಯು ಮದುವೆಯಾದ ಎರಡು ವರ್ಷಗಳ ಒಳಗೆ, ವರದಕ್ಷಿಣೆ ಕಿರುಕುಳದಿಂದಾಗಿ ಮೃತಪಟ್ಟಿದ್ದಳು ಎನ್ನಲಾಗಿದೆ.

ಇಂದಿನ ಸಮಾಜದಲ್ಲಿ ವರದಕ್ಷಿಣೆ ಕಿರುಕುಳವು ಹೆಣ್ಣುಮಕ್ಕಳ ಪ್ರಾಣಕ್ಕೆ ಇಂದಿಗೂ ಎರವಾಗುತ್ತಿದೆ, ಇದು ಬಹಳ ಗಂಭೀರವಾದ ಸಂಗತಿ. ಇಂಥ ಪ್ರಕರಣಗಳಲ್ಲಿ ಜಾಮೀನನ್ನು ಎಂತಹ ಸಂದರ್ಭದಲ್ಲಿ ನೀಡಲಾಯಿತು ಎಂಬ ಬಗ್ಗೆ ನ್ಯಾಯಾಲಯಗಳು ಆಳವಾಗಿ ಪರಿಶೀಲಿಸಬೇಕು ಎಂದು ಪೀಠ ಹೇಳಿದೆ. ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳು ನೀಡುವ ಆದೇಶಗಳಿಂದ ಹೊರಹೊಮ್ಮುವ ಸಾಮಾಜಿಕ ಸಂದೇಶವು ಬಹಳ ಮಹತ್ವದ್ದಾಗುತ್ತದೆ. ಮದುವೆಯಾಗಿ ಎರಡು ವರ್ಷ ತುಂಬುವ ಮೊದಲೇ ಹೆಣ್ಣು ಅನುಮಾನಾಸ್ಪದ ಪರಿಸ್ಥಿತಿಯಲ್ಲಿ ಜೀವ ಕಳೆದುಕೊಂಡಾಗ ನ್ಯಾಯಾಲಯಗಳು ಹೆಚ್ಚಿನ ಎಚ್ಚರಿಕೆಯನ್ನು ಪ್ರದರ್ಶಿಸಬೇಕು ಎಂದು ಅದು ಕಿವಿಮಾತು ಹೇಳಿದೆ.

> ಜಾಮೀನಿನ ಮಾನದಂಡಗಳನ್ನು ಆಳವಾಗಿ ಪರಿಶೀಲಿಸದೆ ಅನ್ವಯಗೊಳಿಸಿದರೆ, ಅಪರಾಧ ಗಂಭೀರವಲ್ಲ ಎಂದಂತೆ ಆಗಿಬಿಡುತ್ತದೆ. ಅಲ್ಲದೆ, ಅದು ವರದಕ್ಷಿಣೆ ಕಿರುಕುಳಗಳಿಂದಾಗಿ ಉಂಟಾಗುವ ಪ್ರಾಣಹಾನಿಯನ್ನು ತಡೆಯಲು ನ್ಯಾಯಾಂಗ ಕೈಗೊಂಡಿರುವ ದೃಢನಿಶ್ಚಯದ ಬಗ್ಗೆ ಸಾರ್ವಜನಿಕರು ಇರಿಸಿರುವ ವಿಶ್ವಾಸವನ್ನು ದುರ್ಬಲಗೊಳಿಸುವ ಅಪಾಯವೂ ಇದೆ.
>
> **ವಿಭಾಗೀಯ ಪೀಠದ ಕಿವಿಮಾತು**

‘ಪಿಐಎಲ್ ಅರ್ಥ ಬದಲಾಗಿದೆ’

ನವದೆಹಲಿ (ಪಿಟಿಐ): ಅನ್ಯಾಯದ ವಿರುದ್ಧ ಹೋರಾಡಲು ಪ್ರಬಲ ಅಸ್ತ್ರವಾಗಿದ್ದ ಪಿಐಎಲ್ ಈಗ ಕೆಲವರ ಧೋರಣೆಯಿಂದಾಗಿ ಅನುಮಾನಪಡುವಂತಹ ಸ್ಥಿತಿಗೆ ತಲುಪಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ವಿಷಾದಿಸಿದರು.

‘ಪಿಐಎಲ್’ ಎನ್ನುವುದು ‘ಪೈಸಾ ಇಂಟರೆಸ್ಟ್ ಲಿಟಿಗೇಷನ್’ (ಹಣ ವಸೂಲು ಮಾಡುವ ಮೊಕದ್ದಮೆ), ’ಪಬ್ಲಿಸಿಟಿ ಇಂಟರೆಸ್ಟ್ ಲಿಟಿಗೇಷನ್’ (ಪ್ರಚಾರದ ಹಿತಾಸಕ್ತಿಯ ಮೊಕದ್ದಮೆ), ’ಪ್ರೈವೇಟ್ ಇಂಟರೆಸ್ಟ್ ಲಿಟಿಗೇಷನ್‘ (ಖಾಸಗಿ ಆಸಕ್ತಿಯ ಮೊಕದ್ದಮೆ) ಆಗುತ್ತಿದೆ ಎಂದೇ ಆಡುಮಾತಿನಲ್ಲಿ ಹೇಳಬೇಕಾದ ಸ್ಥಿತಿ ಇದೆ ಎಂದರು.

‘ಲಾ, ಜಸ್ಟಿಸ್, ಸೊಸೈಟಿ: ಸೆಲೆಕ್ಟೆಡ್ ವರ್ಕ್ಸ್ ಆಫ್ ಉಪೇಂದ್ರ ಬಕ್ಷಿ’ ಕೃತಿ ಬಿಡುಗಡೆ ಸಮಾರಂಭದಲ್ಲಿ ನಾಗರತ್ನ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಅರಣ್ಯ ಭೂಮಿ ದಾಖಲೀಕರಣ ಸಮಿತಿ ರಚಿಸಲು ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಅರಣ್ಯದಂತಹ ಪ್ರದೇಶಗಳು, ಸಮುದಾಯ ಅರಣ್ಯ ಮತ್ತು ಸಂರಕ್ಷಿತ ಎಂದು ಘೋಷಣೆ ಮಾಡದ ಅರಣ್ಯ ಭೂಮಿಗಳ ಸಮಗ್ರ ದಾಖಲೀಕರಣಕ್ಕೆ ಒಂದು ತಿಂಗಳೊಳಗೆ ತಜ್ಞರ ಸಮಿತಿಯನ್ನು ರಚಿಸುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿದೆ.

2023ರ ವನ ಸಂರಕ್ಷಣೆ ಮತ್ತು ವನ ಸಂವರ್ಧನೆ ಕಾಯ್ದೆಯ ನಿಯಮ 16 (1)ರ ಅಡಿಯಲ್ಲಿ ಹೊಸದಾಗಿ ತಜ್ಞರ ಸಮಿತಿಯನ್ನು ನೇಮಿಸುವ ಅಗತ್ಯವಿದೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠ ಹೇಳಿದೆ.

2023ರ ಅರಣ್ಯ ಸಂರಕ್ಷಣಾ ಕಾನೂನಿಗೆ ತಿದ್ದುಪಡಿ ತಂದಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ವೇಳೆ ಪೀಠವು ಈ ನಿರ್ದೇಶನ ನೀಡಿದೆ.

ಔರಂಗಜೇಬ್ ಶ್ಲಾಘನೆ: ಎಸ್‌ಪಿ ಶಾಸಕ ಆಜ್ಮಿ ವಿರುದ್ಧ ತನಿಖೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ (ಪಿಟಿಐ): ಮೊಘಲ್ ದೊರೆ ಔರಂಗಜೇಬ್‌ನನ್ನು ಹೊಗಳಿದ ವಿಚಾರವಾಗಿ ಸಮಾಜವಾದಿ ಪಕ್ಷದ ಶಾಸಕ ಅಬೂ ಆಸಿಂ ಆಜ್ಮಿ ಅವರ ವಿರುದ್ಧ ದಾಖಲಾಗಿರುವ ದೂರಿನ ಬಗ್ಗೆ ಮುಂಬೈ ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಜ್ಮಿ ಅವರ ವಿರುದ್ಧ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿತ್ತು. ಲೋಕಸಭಾ ಸದಸ್ಯ ನರೇಶ್ ಮಹಸ್ಕೆ ಅವರು ಧಾರ್ಮಿಕ ಭಾವನೆಗೆ ಧಕ್ಕೆ ತರಲಾಗಿದೆ ಎಂದು ಆರೋಪಿಸಿ ದೂರು ದಾಖಲಿಸಿದ್ದರು.

ನಂತರದ ಬೆಳವಣಿಗೆಯಲ್ಲಿ ಠಾಣೆ ಪೊಲೀಸರು ಎಫ್‌ಐಆರ್ ಅನ್ನು ಮುಂಬೈಗೆ ವರ್ಗಾಯಿಸಿದ್ದಾರೆ. ಬಳಿಕ ಮರೈನ್ ಡ್ರೈವ್ ಠಾಣೆಯಲ್ಲಿ ಆಜ್ಮಿ ಅವರ ವಿರುದ್ಧ ಮಂಗಳವಾರ ಹೊಸದಾಗಿ ಪ್ರಕರಣ ದಾಖಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಜ್ಮಿ ಅವರು ಹೇಳಿಕೆಯು ವಿವಾದಕ್ಕೆ ಕಾರಣವಾಗಿದ್ದು, ಶಿವಸೇನಾ ಬೆಂಬಲಿಗರು ಅಜ್ಮಿ ಅವರ ವಿರುದ್ಧ ಪ್ರತಿಭಟನೆ ನಡೆಸಿದರು.

ವಿಷಯವು ವಿಧಾನಸಭೆಯಲ್ಲೂ ಪ್ರತಿಧ್ವನಿಸಿದ್ದು, ಅಜ್ಮಿ ಅವರನ್ನು ಅಮಾನತು ಮಾಡಬೇಕು ಎಂದು ಆಡಳಿತಾರೂಢ ಪಕ್ಷದ ಸದಸ್ಯರು ಒತ್ತಾಯಿಸಿದರು. ಆಜ್ಮಿ ವಿರುದ್ಧ ದೇಶದ್ರೋಹ ಪ್ರಕರಣದಾಖಲಿಸಬೇಕು ಎಂದು ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಒತ್ತಾಯಿಸಿದರು.

ಆಜ್ಮಿ ಹೇಳಿದ್ದೇನು?

ಆಜ್ಮಿ

ಮಹಾರಾಷ್ಟ್ರದಲ್ಲಿ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿರುವ ಆಜ್ಮಿ ಅವರು, ‘ಔರಂಗಜೇಬ್ ಅವರ ಆಡಳಿತದಲ್ಲಿ ಭಾರತದ ಗಡಿಯು ಅಫ್ಗಾನಿಸ್ತಾನ ಮತ್ತು ಬರ್ಮಾ (ಮ್ಯಾನ್ಮಾರ್)ವರೆಗೂ ವಿಸ್ತರಿಸಿತ್ತು. ನಮ್ಮ ಜಿಡಿಪಿಯು ವಿಶ್ವದ ಜಿಡಿಪಿಯ ಶೇ 24ರಷ್ಟಿತ್ತು. ಭಾರತವನ್ನು ಚಿನ್ನದ ಗುಬ್ಬಚ್ಚಿ ಎಂದು ಕರೆಯಲಾಗುತ್ತಿತ್ತು’ ಎಂದು ಹೇಳಿದ್ದರು.

ಔರಂಗಜೇಬ್ ಮತ್ತು ಛತ್ರಪತಿ ಸಂಭಾಜಿ ಮಹಾರಾಜ ನಡುವಿನ ಯುದ್ಧದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅದೊಂದು ರಾಜಕೀಯ ಕದನವಾಗಿತ್ತು ಎಂದಿದ್ದರು.

ಪುತ್ರನ ವಿರುದ್ಧವೂ ಪ್ರಕರಣ

ಪಣಜಿ (ಪಿಟಿಐ): ಸಾರ್ವಜನಿಕ ಸ್ಥಳದಲ್ಲಿ ಹೊಡೆದಾಡಿಕೊಂಡು ಶಾಂತಿ ಕದಡಿದ ಆರೋಪಕ್ಕೆ ಸಂಬಂಧಿಸಿದಂತೆ ಆಜ್ಮಿ ಅವರ ಪುತ್ರ ಅಬೂ ಫರ್ಹಾನ್ ಆಜ್ಮಿ ಅವರ ವಿರುದ್ಧ ಗೋವಾ ಪೊಲೀಸರು ಮಂಗಳವಾರ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಜನಪದ ನೃತ್ಯ... ಹಿಮಾಚಲ ಪ್ರದೇಶದ ಮಂಡಿಯಲ್ಲಿ ಮಹಾಶಿವರಾತ್ರಿ ಆಚರಣೆ ಅಂಗವಾಗಿ ಮಂಗಳವಾರ ಕಲಾವಿದರು ಜನಪದ ನೃತ್ಯ ಪ್ರದರ್ಶಿಸಿದರು – ಪಿಟಿಐ ಚಿತ್ರ

ಉತ್ತರದಲ್ಲಿ ತಮಿಳು ಕಲಿಕಾ ಕೇಂದ್ರ ಸ್ಥಾಪಿಸಿಲ್ಲ ಏಕೆ?

ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ಹಿಂದಿ ಹೇರಿಕೆ ವಿಚಾರವಾಗಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ‘ಉತ್ತರ ಭಾರತದ ರಾಜ್ಯಗಳಲ್ಲಿ ತಮಿಳು ಅಥವಾ ದಕ್ಷಿಣ ಭಾರತದ ಭಾಷೆಗಳನ್ನು ಕಲಿಸುವ ಸಂಸ್ಥೆಯನ್ನು ಕೇಂದ್ರ ಏಕೆ ಸ್ಥಾಪಿಸಿಲ್ಲ’ ಎಂದು ಅವರು ಪ್ರಶ್ನಿಸಿದರು.

ಪಕ್ಷದ ಕಾರ್ಯಕರ್ತರಿಗೆ ಪತ್ರ ಬರೆದಿರುವ ಅವರು, ‘ಕೇಂದ್ರ ಸರ್ಕಾರವು ತಮಿಳುನಾಡಿನಲ್ಲಿ ಕಾರ್ಯಾಚರಣೆ ನಡೆಸುವ ರೈಲುಗಳಿಗೂ ಹಿಂದಿ ಮತ್ತು ಸಂಸ್ಕೃತದಲ್ಲಿ ಹೆಸರಿಟ್ಟಿದೆ. ಇದು ತಮಿಳು ಮತ್ತು ಇತರ ಭಾಷೆಗಳನ್ನು ನಿರ್ನಾಮ ಮಾಡುವ ಗುಪ್ತ ಯೋಜನೆಯಾಗಿದೆ ಎಂದರು.

‘ದಕ್ಷಿಣ ಭಾರತದ ಜನರು ಹಿಂದಿ ಕಲಿಯಬೇಕು. ಅದೇ ರೀತಿ ಉತ್ತರ ಭಾರತದವರು ದಕ್ಷಿಣದ ಒಂದಾದರೂ ಭಾಷೆಯನ್ನು ಕಲಿಯಬೇಕು. ಇದರಿಂದ ರಾಷ್ಟ್ರದ ಏಕತೆ ಸಾಧ್ಯವಾಗುತ್ತದೆ’ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು. ಗಾಂಧೀಜಿ ಅವರ ಈ ಅಪೇಕ್ಷೆ ಈಡೇರಿಕೆಗಾಗಿಯೇ ‘ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ’ಯನ್ನು ಸ್ಥಾಪಿಸಲಾಗಿತ್ತು. ಆದರೆ ‘ಉತ್ತರ ಭಾರತ ತಮಿಳು ಪ್ರಚಾರ ಸಭಾ’ ಅಥವಾ ‘ದ್ರಾವಿಡ ಭಾಷಾ ಸಭಾ’ ಎಂಬ ಯಾವುದೇ ಸಂಸ್ಥೆಗಳಿಲ್ಲವೇಕೆ’ ಎಂದು ಪ್ರಶ್ನಿಸಿದರು.

ಗೋಡ್ಸೆ ತತ್ವವನ್ನು ಪಾಲಿಸುವವರು ಗಾಂಧೀಜಿ ಆಕಾಂಕ್ಷೆಯನ್ನು ಈಡೇರಿಸುವುದಿಲ್ಲ ಎಂದರು.

ಚುನಾವಣಾ ಆಯೋಗಕ್ಕೆ ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದ ರಾಜಕಾರಣಿಗಳ ಅನರ್ಹತೆಯ ಅವಧಿಯನ್ನು ಕಡಿತಗೊಳಿಸಿದ ಅಥವಾ ರದ್ದುಗೊಳಿಸಿದ ಪ್ರಕರಣಗಳ ವಿವರಗಳನ್ನು ನೀಡುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಚುನಾವಣಾ ಆಯೋಗವನ್ನು (ಇಸಿಐ) ಕೇಳಿದೆ.

ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಮನಮೋಹನ್ ಅವರನ್ನೊಳಗೊಂಡ ಪೀಠವು, ಪ್ರಜಾ ಪ್ರಾತಿನಿಧ್ಯ ಕಾಯ್ದೆ–1951ರ (ಆರ್‌ಪಿಎ) ಸೆಕ್ಷನ್ 11ರ ಅಡಿಯಲ್ಲಿ ತಾನು ಅಧಿಕಾರ ಚಲಾಯಿಸಿದಂತಹ ಪ್ರಕರಣಗಳ ವಿವರಗಳನ್ನು ಎರಡು ವಾರಗಳಲ್ಲಿ ಒದಗಿಸುವಂತೆ ಸೂಚಿಸಿದೆ. ಅಪರಾಧ ಪ್ರಕರಣಗಳಲ್ಲಿ ತಪ್ಪಿತಸ್ಥ ಎಂದು ಘೋಷಣೆಯಾದ ರಾಜಕಾರಣಿಗಳನ್ನು ಚುನಾವಣಾ ರಾಜಕೀಯದಿಂದ ಅನರ್ಹಗೊಳಿಸುವ ಅವಧಿಯು ಅವರ ಅಪರಾಧ ಮತ್ತು ಶಿಕ್ಷೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ.

ಅಪರಾಧ ಪ್ರಕರಣಗಳಲ್ಲಿ ಸಂಸದರು ಮತ್ತು ಶಾಸಕರಿಗೆ ನ್ಯಾಯಾಲಯವು ಎರಡು ಅಥವಾ ಎರಡಕ್ಕಿಂತ ಹೆಚ್ಚು ವರ್ಷಗಳ ಜೈಲು ಶಿಕ್ಷೆ ವಿಧಿಸಿದಾಗ, ಈ ಕಾಯ್ದೆ ಪ್ರಕಾರ ಅವರು ಅಪರಾಧ ಸಾಬೀತಾದ ದಿನದಿಂದ ಆರು ವರ್ಷಗಳ ಅವಧಿಗೆ ಅನರ್ಹಗೊಳ್ಳುತ್ತಾರೆ. ಆದರೂ ಕಾಯ್ದೆಯ ಸೆಕ್ಷನ್ 11ರ ಅಡಿಯಲ್ಲಿ ಅನರ್ಹತೆಯನ್ನು ತೆಗೆದುಹಾಕುವ ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಚುನಾವಣಾ ಆಯೋಗವು ಹೊಂದಿದೆ.

ಆಯೋಗವು ಮಾಹಿತಿಯನ್ನು ಒದಗಿಸಿದ ಎರಡು ವಾರಗಳ ಒಳಗಾಗಿ ಪ್ರತ್ಯುತ್ತರ ಸಲ್ಲಿಸಬಹುದು ಎಂದು ಪಿಐಎಲ್ ಸಲ್ಲಿಸಿದವರಿಗೆ ಪೀಠವು ಸೂಚಿಸಿತು.

ತನ್ನದೇ ವಾಹಿನಿಯ ವಿರುದ್ಧ ಅಸಮಾಧಾನ ಹೊರಹಾಕಿದ ರಾಜೀವ್

ಮಹಾಕುಂಭ ಅಣಕಿಸಿದ ವಾಹಿನಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪ್ರಯಾಗರಾಜ್‌ನಲ್ಲಿ ನಡೆದಿದ್ದ ಮಹಾಕುಂಭ ಮೇಳದ ವಿರುದ್ಧದ ‘ಕವರ್ ಸ್ಟೋರಿ’ಯನ್ನು ಬಿಜೆಪಿ ನಾಯಕ ಮತ್ತು ಮಾಜಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರ ಒಡೆತನದ ‘ಏಷ್ಯಾ ನ್ಯೂಸ್’ ವಾಹಿನಿಯಲ್ಲಿ ಪ್ರಸಾರ ಮಾಡಲಾಗಿದೆ. ಈ ವರದಿ ಪ್ರಸಾರ ಮಾಡಿದ್ದಕ್ಕಾಗಿ ರಾಜೀವ್ ಖುದ್ದು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಏಷ್ಯಾ ನ್ಯೂಸ್’ ವಾಹಿನಿಯಲ್ಲಿ ‘ಜುಪಿಟರ್ ಎಂಟರ್‌ಟೈನ್‌ಮೆಂಟ್ ವೆಂಚರ್ಸ್’ ಕಂಪನಿಯು ಅಧಿಕ ಷೇರು ಹೊಂದಿದೆ. ರಾಜೀವ್ ಚಂದ್ರಶೇಖರ್ ಅವರು ಈ ಕಂಪನಿಯ ಮಾಲೀಕರಾಗಿದ್ದಾರೆ.

‘ಕೇರಳದಲ್ಲಿ ಬಿಜೆಪಿಯು ಬೆಳವಣಿಗೆ ಕಾಣುತ್ತಿದೆ. ಯಾಕೆಂದರೆ, ಇತ್ತೀಚೆಗೆ ನಡೆದ ಮಹಾಕುಂಭ ಮೇಳದಲ್ಲಿ ಮಲೆಯಾಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದೊಂದು ಅತ್ಯುತ್ತಮ ‘ಸಾರ್ವಜನಿಕ ಸಂಪರ್ಕ’ (ಪಿಆರ್) ಕಾರ್ಯಕ್ರಮವಾಗಿತ್ತು. ಜೊತೆಗೆ, ಪ್ರಧಾನಿ ಮೋದಿ ಅವರು ತ್ರಿವೇಣಿ ಸಂಗಮದಲ್ಲಿ ‘ಪವಿತ್ರ ಸ್ನಾನ’ ಕೈಗೊಂಡಿದ್ದ ದೃಶ್ಯಗಳನ್ನು ತೋರಿಸುವ ಮೂಲಕ ಮಹಾಕುಂಭಕ್ಕೆ ಉತ್ತಮ ಪ್ರಚಾರವನ್ನೂ ನೀಡಲಾಯಿತು’ ಎಂಬರ್ಥದಲ್ಲಿ ವರದಿಯನ್ನು ಮಾಡಲಾಗಿತ್ತು.

‘ನನಗೆ ಹಲವಾರು ಮಲಯಾಳಿಗಳು ಸಂದೇಶ ಕಳುಹಿಸಿದ್ದಾರೆ. ಮಹಾಕುಂಭವನ್ನು ಗೇಲಿ ಮಾಡಿದ ಈ ಕಾರ್ಯಕ್ರಮದಿಂದ ಅವರಿಗೆ ನೋವಾಗಿದೆ. ಈ ಬಗ್ಗೆ ನಾನು ವಾಹಿನಿಯ ನೇತೃತ್ವ ವಹಿಸಿದವರ ಗಮನಕ್ಕೆ ತಂದಿದ್ದೇನೆ. ಲಕ್ಷಾಂತರ ಭಕ್ತರು ಶ್ರದ್ಧೆಯಿಂದ ತೆರಳಿದ ಕಾರ್ಯಕ್ರಮವೊಂದರ ಬಗ್ಗೆ ಈ ರೀತಿ ಕಾರ್ಯಕ್ರಮವನ್ನು ಮುಂದೆ ಪ್ರಸಾರ ಮಾಡದಂತೆ ಮನವಿ ಮಾಡಿದ್ದೇನೆ’ ಎಂದು ರಾಜೀವ್ ಚಂದ್ರಶೇಖರ್ ಅವರು ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

> **ಪ್ರತಿಯೊಬ್ಬ ಹಿಂದೂವಿಗೂ ಅಥವಾ ಯಾವುದೇ ಧರ್ಮದವರಿಗೂ ನಂಬಿಕೆ ಮುಖ್ಯವಾಗುತ್ತದೆ. ದೇಶದ ಯಾವುದೇ ಭಾಗದ ಜನರಿಗೂ ಅನ್ವಯಿಸುತ್ತದೆ. ನಾವು ಇದನ್ನು ಗೌರವಿಸಲೇಬೇಕು**
>
> **ರಾಜೀವ್ ಚಂದ್ರಶೇಖರ್,** ಬಿಜೆಪಿ ನಾಯಕ

‘ನಮ್ಮದನ್ನು ನಾವು ಪಡೆಯಬೇಕು’

ಲಖನೌ: ‘ನಮ್ಮದನ್ನು ನಾವು ಪಡೆಯಲೇಬೇಕು. ಸತ್ಯ ಎಂಬುದು ಯಾವಾಗಲೂ ಕಹಿಯಾಗಿರುತ್ತದೆ. ಸತ್ಯವನ್ನು ಸ್ವೀಕರಿಸಲು ಧೈರ್ಯ ಇರಬೇಕು’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ತಿಳಿಸಿದ್ದಾರೆ.

ಮಂಗಳವಾರ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಅವರು, ‘ಸಂಭಲ್‌ನಲ್ಲಿ 67 ತೀರ್ಥ ಕುಂಡಗಳು, 17 ಬಾವಿಗಳನ್ನು ನಾಶಪಡಿಸಿರುವುದು ಪತ್ತೆಯಾಗಿದೆ. ಇದರಲ್ಲಿ 54 ತೀರ್ಥಕ್ಷೇತ್ರಗಳನ್ನು ಪತ್ತೆಹಚ್ಚಿದ್ದು, ಬಾವಿಗಳನ್ನು ಒತ್ತುವರಿದಾರರಿಂದ ತೆರವುಗೊಳಿಸಲಾಗಿದೆ’ ಎಂದು ತಿಳಿಸಿದರು.

‘ನಮ್ಮದು ಏನಿದೆಯೋ ಅದು ಮಾತ್ರ ನಮಗೆ ಸೇರಿದ್ದು, ಅದಕ್ಕಿಂತ ಹೆಚ್ಚಿನದು ಏನೂ ಬೇಡ’ ಎಂದರು.

ಸಂಭಲ್‌ನ ಜಾಮಿಯಾ ಮಸೀದಿಯ ಮಾಲೀಕತ್ವದ ವಿವಾದ ನ್ಯಾಯಾಲಯದಲ್ಲಿರುವಾಗಲೇ, ಯೋಗಿ ಆದಿತ್ಯನಾಥ ಅವರು ಈ ಹೇಳಿಕೆ ನೀಡಿದ್ದಾರೆ.

‘ಕೆಪಿಎಸ್‌ಸಿ ಭ್ರಷ್ಟಾಚಾರದ ಕೂಪ’

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಅಶೋಕ ಅವರು ‘ದಾಖಲೆ, ಆಧಾರ ಇಲ್ಲದೇ ಮಾತನಾಡುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸು ಮಾಡಿಸಿ ಕೆಲಸ ಕೊಡಿಸುತ್ತೇವೆ ಎಂದು ಹಣ ವಸೂಲಿ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಉಪ್ಪಾರಪೇಟೆ ಠಾಣೆ ಮತ್ತು ವಿಜಯನಗರ ಠಾಣೆ ಪೊಲೀಸರೇ ಬಂಧಿಸಿ, ಎಫ್‌ಐಆರ್ ದಾಖಲಿಸಿದ್ದಾರೆ’ ಎಂದರು.

ಪಿಡಿಒ ಪರೀಕ್ಷೆಯಲ್ಲಿ ಪಾಸ್ ಮಾಡಿಸುವುದಾಗಿ ₹25 ಲಕ್ಷ, ಕೆಎಎಸ್ ಪೂರ್ವಭಾವಿ ಪರೀಕ್ಷೆಯಲ್ಲಿ ಪಾಸ್ ಮಾಡಿಸಲು ₹60 ಲಕ್ಷ ಪಡೆಯಲಾಗಿತ್ತು. ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಸಹಾಯಕ ಎಂಜಿನಿಯರ್ ಹುದ್ದೆಗಳ ಪರೀಕ್ಷೆಯಲ್ಲಿ ಗೋಲ್‌ಮಾಲ್ ಸಂಪೂರ್ಣ ಬಯಲಿಗೆ ಬಂದಿದೆ. 24 ಎಇ ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ10 ಜನ ಮೋಸ ಮಾಡಿ ಪಾಸ್ ಆಗಿ ಹುದ್ದೆ ಗಿಟ್ಟಿಸಿದ್ದರು. ಕೆಪಿಎಸ್‌ಸಿ ನೇಮಿಸಿದ ಸಮಿತಿ ನಡೆಸಿದ ತನಿಖೆಯಿಂದಲೇ ಅಕ್ರಮ ದೃಢಪಟ್ಟಿದೆ. ಈ ಹತ್ತು ಜನರ ನೇಮಕಾತಿ ರದ್ದುಪಡಿಸಿ, ಸಿಒಡಿ ತನಿಖೆ ನಡೆಸಬೇಕು ಎಂದು ಹೇಳಿದೆ ಎಂದ ಅಶೋಕ ಸಮಿತಿಯ ವರದಿಯನ್ನು ಪ್ರದರ್ಶಿಸಿದರು.

ಅಶೋಕ ಅವರ ವಾದವನ್ನು ಒಪ್ಪಿದ ಕಾಂಗ್ರೆಸ್ ಸದಸ್ಯರು, ಕೆಪಿಎಸ್‌ಸಿಯ ಹಾಲಿ ವ್ಯವಸ್ಥೆಯನ್ನು ರದ್ದುಮಾಡಿ, ಯುಪಿಎಸ್‌ಸಿ ಮಾದರಿಯ ಪರೀಕ್ಷಾ ವ್ಯವಸ್ಥೆ ಜಾರಿ ತರಬೇಕು. ರಾಜಕೀಯ ಪಕ್ಷಗಳು ಮತ್ತು ಪ್ರಭಾವಿಗಳ ಚೇಲಾಗಳನ್ನು ಸದಸ್ಯರನ್ನಾಗಿ ನೇಮಿಸುವ ಪರಿಪಾಟ ನಿಲ್ಲಿಸಬೇಕು ಎಂದು ಹೇಳಿದರು. ಬಿಜೆಪಿ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು.

ತಪ್ಪು ಕನ್ನಡ: ಅಧಿಕಾರಿಗಳ ನಾಲ್ಗೆ ಸೀಳ್ಸಿ...

‘ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಸಿದ ಪರೀಕ್ಷೆಯಲ್ಲಿ ಕನ್ನಡದ ಪ್ರಶ್ನೆಗಳನ್ನು ತಪ್ಪಾಗಿ ಹಾಗೂ ಆಭಾಸಕಾರಿಯಾಗಿ ಮುದ್ರಿಸಿದ ಅಧಿಕಾರಿಗಳ ನಾಲ್ಗೆ ಸೀಳಿಸಬೇಕು’ ಎಂದು ಅಶೋಕ ಹೇಳಿದರು.

‘ಜಿ.ಪಿ.ರಾಜರತ್ನಂ ಅವರು, ನರಕಕ್ಕೆ ಕಳ್ಸಿ ನಾಲ್ಗೆ ಸೀಳ್ಸಿ, ಬಾಯಿಗೆ ಹೊಲ್ಗೆ ಹಾಕ್ಸಿದ್ರೂನು, ಮೂಗಲ್ಲಿ ಕನ್ನಡ ಮಾತಾಡ್ತೀನಿ ಎಂದು ಹೇಳಿದ್ದರು. ಇಲ್ಲಿ ಕನ್ನಡ ತಪ್ಪಾಗಿ ಬಳಸಿ ಲಕ್ಷಾಂತರ ಕನ್ನಡಿಗ ಅಭ್ಯರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಆಡಿದ ಅಧಿಕಾರಿಗಳ ನಾಲ್ಗೆ ಸೀಳಿಸಬೇಕು’ ಎಂದರು. ‘ಇಂಗ್ಲಿಷ್‌ನಲ್ಲಿ ಪ್ರಶ್ನೆ ಪತ್ರಿಕೆ ತಯಾರಿಸಿ, ಕನ್ನಡಕ್ಕೆ ತರ್ಜುಮೆ ಮಾಡುವುದನ್ನು ನಿಲ್ಲಿಸಬೇಕು. ಮೊದಲಿಗೆ ಕನ್ನಡದಲ್ಲೇ ಪ್ರಶ್ನೆ ಪತ್ರಿಕೆ ತಯಾರಿಸಿ, ಇಂಗ್ಲಿಷ್‌ಗೆ ತರ್ಜುಮೆ ಮಾಡಿ. ಕನ್ನಡಿಗ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಲೆಂದೇ ಇಂಗ್ಲಿಷ್‌ನಲ್ಲಿ ಪ್ರಶ್ನೆ ಪತ್ರಿಕೆ ರೂಪಿಸಲಾಗುತ್ತಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ವಿಧಾನಸಭೆ ಪ್ರವೇಶದ್ವಾರದಲ್ಲಿ ಪಾನ್ ಉಗುಳಿದ ಶಾಸಕ, ತರಾಟೆ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಯ ಪ್ರವೇಶ ದ್ವಾರದಲ್ಲಿ ಹಾಕಿದ್ದ ನೆಲಹಾಸಿನ ಮೇಲೆ ಶಾಸಕರೊಬ್ಬರು ಪಾನ್ ಮಸಾಲಾ ಉಗುಳಿದ್ದು, ಶಾಸಕರ ಈ ನಡೆ ಕಂಡು ಸ್ಪೀಕರ್ ಗದರಿಸಿದ್ದಾರೆ.

‘ಸದನದ ಘನತೆಯನ್ನು ಕಾಪಾಡಬೇಕು ಮತ್ತು ಇಂತಹ ದುರಭ್ಯಾಸಗಳನ್ನು ನಿಲ್ಲಿಸಬೇಕು’ ಎಂದು ಸ್ಪೀಕರ್ ಸತೀಶ್ ಮಹನಾ ಅವರು ಶಾಸಕರಿಗೆ ತಾಕೀತು ಮಾಡಿದ್ದಾರೆ.

‘ಪಾನ್ ಮಸಾಲಾ ಉಗುಳಿರುವ ಶಾಸಕ ಯಾರೆಂಬುದು ನನಗೆ ಗೊತ್ತಿದೆ. ಅದರ ವಿಡಿಯೊ ಕೂಡ ಇದೆ. ಆದರೆ, ಅವರ ಹೆಸರು ಬಹಿರಂಗಪಡಿಸಿ, ಅಪಮಾನ ಮಾಡಲು ಬಯಸುವುದಿಲ್ಲ. ಆ ಶಾಸಕ ನನ್ನನ್ನು ಭೇಟಿ ಆಗಬೇಕು, ಇಲ್ಲವೇ ಬಲವಂತವಾಗಿ ಕರೆಸಬೇಕಾಗುತ್ತದೆ’ ಎಂದು ಸ್ಪೀಕರ್ ಹೇಳಿದರು.

‘ನೆಲಹಾಸನ್ನು ಬದಲಿಸಬೇಕು, ಇದರ ವೆಚ್ಚವನ್ನು ಆ ಶಾಸಕರಿಂದಲೇ ವಸೂಲಿ ಮಾಡಬೇಕು’ ಎಂದು ಸ್ಪೀಕರ್ ಹೇಳಿರುವುದು ವಿಡಿಯೊವೊಂದರಲ್ಲಿ ದಾಖಲಾಗಿದೆ.

ಒಡಿಶಾ: ಗುಟ್ಕಾಕ್ಕೆ ಹಣ ನೀಡದ ತಂದೆಯ ತಲೆ ಕಡಿದ ಮಗ

ಬಾರಿಪದಾ (ಒಡಿಶಾ) (ಪಿಟಿಐ): ಗುಟ್ಕಾ ತಿನ್ನಲು ₹10 ಕೊಡಲಿಲ್ಲ ಎನ್ನುವ ಕಾರಣಕ್ಕೆ 40 ವರ್ಷ ಮಗ ತನ್ನ 70 ವಯೋಮಾನದ ತಂದೆಯ ತಲೆ ಕತ್ತರಿಸಿದ್ದಾನೆ. ಘಟನೆಯು ಮಂಗಳವಾರ ನಡೆದಿದ್ದು, ರಕ್ತ ಸೋರುತ್ತಿದ್ದ ತಲೆಯನ್ನು ಆತನೇ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿದ್ದಾನೆ.

ಬೈದರ್ ಸಿಂಗ್ ಮೃತರು. ‘ಚೂಪಾದ ಆಯುಧದಿಂದ ಮಗನು ತಂದೆಯ ತಲೆ ಕತ್ತರಿಸಿದ್ದಾನೆ. ಬಳಿಕ ಪೊಲೀಸರಿಗೆ ಶರಣಾಗಿದ್ದಾನೆ. ತಾಯಿಯು ಘಟನಾ ಸ್ಥಳದಿಂದ ಓಡಿಹೋಗಿದ್ದಾರೆ. ತಂದೆ ಮಗನ ಮಧ್ಯೆಯ ವಾಗ್ವಾದ ಏರ್ಪಟ್ಟಿತ್ತು. ಇದು ತಾರಕಕ್ಕೇರಿ ಮಗ ಹತ್ಯೆ ಮಾಡಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಸರಪಂಚ ಕೊಲೆಯ ‘ಸಂಚುಕೋರ’ ಸಚಿವರ ಪರಮಾಪ್ತ ಎಂಬುದು ಸಾಬೀತು

ಮಹಾರಾಷ್ಟ್ರ ಸಚಿವ ಮುಂಡೆ ರಾಜೀನಾಮೆ

ಧನಂಜಯ ಮುಂಡೆ

ಮುಂಬೈ/ಪುಣೆ (ಪಿಟಿಐ): ಮಹಾರಾಷ್ಟ್ರದ ಆಹಾರ ಸಚಿವ ಧನಂಜಯ ಮುಂಡೆ ಅವರ ಪರಮಾಪ್ತ ವಾಲ್ಮೀಕ್ ಕರಾಡ್ ಅವರು ಬೀಡ್ ಜಿಲ್ಲೆಯಲ್ಲಿ ನಡೆದಿದ್ದ ಸರಪಂಚ ಒಬ್ಬರ ಕೊಲೆ ಪ್ರಕರಣದ ಸಂಚುಕೋರ ಎಂದು ಪೊಲೀಸರು ಆರೋಪಿಸಿದಸ್ದಾರೆ. ಹೀಗಾಗಿ, ಮುಂಡೆ ಅವರು ಸಚಿವ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ.

‘ಸಚಿವರ ರಾಜೀನಾಮೆ ಪತ್ರ ಸ್ವೀಕರಿಸಿದ್ದು, ರಾಜ್ಯಪಾಲರಿಗೆ ಕಳುಹಿಸಿ ಕೊಟ್ಟಿದ್ದೇನೆ’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸುದ್ದಿಗಾರರಿಗೆ ದೃಢಪಡಿಸಿದರು. ಸರಪಂಚ ಕೊಲೆ ಕೃತ್ಯಕ್ಕೆ ಸಂಬಂಧಿಸಿ ಮುಂಡೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ವಿರೋಧಪಕ್ಷಗಳು ಆಗ್ರಹಿಸಿದ್ದವು.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಮತ್ತು ಮುಂಡೆ ಅವರ ಜೊತೆಗೆ ಸೋಮವಾರ ರಾತ್ರಿ ಚರ್ಚಿಸಿದ್ದರು.

ಬೀಡ್ ಜಿಲ್ಲೆಯ ಮಸಾಜೋಗ್ ಗ್ರಾಮದ ಸರಪಂಚ ಆಗಿದ್ದ ಸಂತೋಷ್ ದೇಶಮುಖ್ ಅವರ ಕೊಲೆಗೆ ಸಂಬಂಧಿಸಿದ ಫೋಟೊಗಳು ಹಾಗೂ ಕೋರ್ಟ್‌ಗೆ ಸಲ್ಲಿಸಿದ್ದ ಆರೋಪಪಟ್ಟಿಯ ವಿವರಗಳು ಬಯಲಾದ ನಂತರ ಸಚಿವರ ರಾಜೀನಾಮೆಗೆ ಒತ್ತಾಯ ಕೇಳಿಬಂದಿತ್ತು.

ಸರಪಂಚ ಕೊಲೆ, ಹಣ ಸುಲಿಗೆ ಯತ್ನ ಮತ್ತು ಇಂಧನ ಕಂಪನಿಯ ಭದ್ರತಾ ಸಿಬ್ಬಂದಿಯ ಮೇಲೆ ಹಲ್ಲೆಗೆ ಸಂಬಂಧಿಸಿ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಮಹಾರಾಷ್ಟ್ರ ಸಂಘಟಿತ ಅಪರಾಧ ತಡೆ ಕಾಯ್ದೆ (ಎಂ–ಕೋಕಾ) ಅನ್ವಯವೂ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

ಸಚಿವರ ಪರಮಾಪ್ತ ವಾಲ್ಮೀಕ್ ಹಾಗೂ ಇತರೆ ಆರು ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಅರು ಜನರನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಇನ್ನೊಬ್ಬ ತಲೆಮರೆಸಿಕೊಂಡಿದ್ದಾನೆ.

‘84 ದಿನ ಏಕೆ ಬೇಕಾಯಿತು?’

‘ಕೊಲೆ ಕೃತ್ಯದ ಫೋಟೊ, ದಾಖಲೆಗಳು ಸರ್ಕಾರದ ಬಳಿ ಇದ್ದರೂ ಸಚಿವರ ರಾಜೀನಾಮೆಗೆ 84 ದಿನ ಏಕೆ ಬೇಕಾಯಿತು’ ಎಂದು ಎನ್‌ಸಿಪಿ (ಎಸ್‌ಪಿ) ನಾಯಕಿ, ಸಂಸದೆ ಸುಪ್ರಿಯಾ ಸುಳೆ ಪ್ರಶ್ನಿಸಿದ್ದಾರೆ.

ಇಲ್ಲಿ, ಸುದ್ದಿಗಾರರ ಜೊತೆಗೆ ಮಾತನಾಡಿದ ಸುಳೆ, ‘ಕೊಲೆ ಕೃತ್ಯದ ಫೋಟೊಗಳನ್ನು ನಾವು ನೋಡುವ ಮೊದಲೇ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ನೋಡಿರಬಹುದು. ನೋಡಿದ್ದಲ್ಲಿ, ರಾಜೀನಾಮೆ ಪಡೆಯಲು 84 ದಿನ ಏಕೆ ತೆಗೆದುಕೊಂಡರು’ ಎಂದು ಪ್ರಶ್ನಿಸಿದರು.

ಕೃತ್ಯ ಕುರಿತಂತೆ ಪಾರದರ್ಶಕ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ ಅವರು, ಈ ಕುರಿತು ಚರ್ಚಿಸಲು ಹಲವು ದಿನಗಳಿಂದ ಸಿ.ಎಂ ಭೇಟಿಗೆ ಸಮಯ ಕೇಳುತ್ತಿದ್ದೇನೆ, ಸಿಗುತ್ತಿಲ್ಲ. ಈ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಪರಿಸ್ಥಿತಿ ವಿವರಿಸುವ ಉದ್ದೇಶವಿದೆ ಎಂದರು.

‘ತೀವ್ರ ಹಲ್ಲೆ, ಗಾಯದ ಮೇಲೆ ಮೂತ್ರ ವಿಸರ್ಜನೆ’

ಮುಂಬೈ: ಪವನ ವಿದ್ಯುತ್ ತಯಾರಿಕೆ ಕಂಪನಿಯಿಂದ ಹಣ ಸುಲಿಗೆಗೆ ಅಡ್ಡಿಯಾಗಿದ್ದರು ಎಂದೇ ಸರಪಂಚ್ ಸಂತೋಷ್ ದೇಶಮುಖ್ ಅವರನ್ನು ಆರೋಪಿಗಳು ಅಪಹರಿಸಿ, ಗಂಟೆಗಟ್ಟಲೆ ಕಿರುಕುಳ ನೀಡಿದ್ದರು.

‘ಗ್ಯಾಸ್ ಪೈಪ್, ಕಬ್ಬಿಣದ ಸರಳು ಮತ್ತು ಮರದ ಪಟ್ಟಿಗಳಿಂದ ತೀವ್ರವಾಗಿ ಹಲ್ಲೆ ಮಾಡಿರುವ ಹಾಗೂ ಕಿರುಕುಳ ಕೃತ್ಯವನ್ನು 15 ವಿಡಿಯೊಗಳಲ್ಲಿ ಚಿತ್ರೀಕರಿಸಿದ್ದರು. ಎರಡು ಬಾರಿ ವಿಡಿಯೊ ಕರೆ ಮಾಡಿದ್ದರು’ ಎಂದು ಆರೋಪಪಟ್ಟಿಯ ವಿವರಗಳನ್ನು ಆಧರಿಸಿ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ದೇಶಮುಖ್ ಅವರನ್ನು ಅರೆನಗ್ನಗೊಳಿಸಿ ಮರದ ಪಟ್ಟಿ, ಪೈಪ್‌ನಿಂದ ಹಲ್ಲೆ ಮಾಡಿರುವ ದೃಶ್ಯ ಒಂದು ವಿಡಿಯೊದಲ್ಲಿ ಇದ್ದರೆ, ಮತ್ತೊಂದು ವಿಡಿಯೊದಲ್ಲಿ ಹಲ್ಲೆಯಿಂದಾಗಿ ರಕ್ತಸ್ರಾವವಾಗುತ್ತಿದ್ದ ಗಾಯಗಳ ಮೇಲೆ ಮೂತ್ರವಿಸರ್ಜನೆ ಮಾಡಿರುವ ದೃಶ್ಯವಿದೆ.

ಆರೋಪಪಟ್ಟಿ ಪ್ರಕಾರ, ಬೀಡ್ ಜಿಲ್ಲೆ ಮಸಾಜೋಗ್ ಗ್ರಾಮದಲ್ಲಿ ಸ್ಥಾಪನೆ ಆಗಿದ್ದ ಪವನ ವಿದ್ಯುತ್ ಉತ್ಪಾದನೆ ಕಂಪನಿಯಿಂದ ₹2 ಕೋಟಿ ಸುಲಿಗೆ ಮಾಡಲು ಆರೋಪಿಗಳು ಯತ್ನಿಸಿದ್ದು, ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ, ಕಂಪನಿಯನ್ನು ಮುಚ್ಚಿಸಲಾಗುವುದು ಎಂದು ಬೆದರಿಕೆಯೊಡ್ಡಿದ್ದರು.

ಹಣಕ್ಕಾಗಿ ಬೇಡಿಕೆ ಇಟ್ಟಿದ್ದ ಹಿಂದೆಯೇ ಕಂಪನಿಯ ಸಿಬ್ಬಂದಿ ಮೇಲೂ ಹಲ್ಲೆ ಮಾಡಿದ್ದರು. ‘ಹಣ ಸುಲಿಗೆಯ ಬೆದರಿಕೆಯಿಂದ ಕಂಪನಿ ಮುಚ್ಚಿದರೆ, ಸ್ಥಳೀಯರು ಉದ್ಯೋಗ ಕಳೆದುಕೊಳ್ಳುತ್ತಾರೆ ಎಂದು ಭಾವಿಸಿದ ಅಲ್ಲಿನ ಗ್ರಾಮ ಪಂಚಾಯಿತಿಯ ಸರಪಂಚ್ ದೇಶಮುಖ್ ಸುಲಿಗೆ ತಡೆಯಲು ಮುಂದಾಗಿದ್ದರು. ಇದೇ ಕಾರಣದಿಂದಲೇ ಅವರನ್ನು ಅಪಹರಿಸಿದ್ದ ಆರೋಪಿಗಳು, ಹಿಂಸೆ ಕೊಟ್ಟಿದ್ದರು.

ಮಲ್ಲಿಗೆ, ಗುಲಾಬಿ ಘಮ

ಒಂದನೇ ಪುಟದಿಂದ...

ಈಗ ಗಂಧದೆಣ್ಣೆಯ ಪ್ರಮಾಣ ಹಲವು ಪಟ್ಟು ಹೆಚ್ಚು ಇರುವ ‘ಪ್ರೀಮಿಯಂ’ ಸಾಬೂನುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಕೆಎಸ್‌ಡಿಎಲ್ ಸಜ್ಜಾಗಿದೆ. ‘ಈ ಸಾಬೂನು ಯಾವುದೇ ಜಾಗತಿಕ ಕಂಪನಿಗಳ ಪ್ರೀಮಿಯಂ ಸಾಬೂನುಗಳಿಗೂ ಸಡ್ಡು ಹೊಡೆಯುವಂತಿದೆ. ಮೈಸೂರು ಸ್ಯಾಂಡಲ್ ಸಾಬೂನಿನ ಪರಂಪರೆ, ಆಧುನಿಕತೆ ಮತ್ತು ಐಷಾರಾಮದ ಸ್ಪರ್ಶ ಇರುವ ಈ ಸಾಬೂನು ಕಂಪನಿಗೆ ಜಾಗತಿಕ ಮಟ್ಟದಲ್ಲಿ ಹೆಸರು ತಂದುಕೊಡಲಿದೆ’ ಎನ್ನುತ್ತಾರೆ ಅವರು.

19 ಹೊಸ ಉತ್ಪನ್ನಗಳು: ಮಾರುಕಟ್ಟೆಯಲ್ಲಿ ಕೆಎಸ್‌ಡಿಎಲ್‌ನ 48 ಉತ್ಪನ್ನಗಳು ಈಗ ಇವೆ. ಇವುಗಳಲ್ಲಿ ಸಾಬೂನು, ಬಟ್ಟೆಯ ಸೋಪು, ವಿವಿಧ ಪರಿಮಳದ ಶವರ್ ಜೆಲ್, ವಿವಿಧ ಪರಿಮಳದ ಸ್ಯಾನಿಟೈಸರ್, ಟಾಲ್ಕ್ ಪೌಡರ್‌ಗಳು, ಊದುಬತ್ತಿ, ಧೂಪ, ದೀಪದ ಎಣ್ಣೆ, ಗಂಧದೆಣ್ಣೆ, ಶುಚಿ ಕಿಟ್, ಡಿಯೋಡ್ರೆಂಟ್, ತೆಂಗಿನೆಣ್ಣೆ ಸೇರಿವೆ.

ಇವುಗಳಿಗಿಂತಲೂ ಭಿನ್ನವಾದ, ಕೆಲವು ಐಷಾರಾಮದ ಉತ್ಪನ್ನಗಳೂ ಸೇರಿ ಇನ್ನೂ ಹೊಸದಾಗಿ 19 ಉತ್ಪನ್ನಗಳನ್ನು ಬಿಡುಗಡೆ ಮಾಡಲು ಕೆಎಸ್‌ಡಿಎಲ್ ಸಜ್ಜಾಗಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

ವಿಜಯದ ಸಿಕ್ಸರ್ ಹೊಡೆದ ರಾಹುಲ್ • ಪಾಂಡ್ಯ ಆರ್ಭಟ • ಆಸ್ಟ್ರೇಲಿಯಾಕ್ಕೆ ನಿರಾಸೆ • ದುಬೈನಲ್ಲೇ ಅಂತಿಮ ಪಂದ್ಯ

ವಿರಾಟ್ ಆಟ: ಫೈನಲ್‌ಗೆ ಭಾರತ

ದುಬೈ, (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ವಿಜಯದ ಸಿಕ್ಸರ್ ಹೊಡೆಯುವ ಮೂಲಕ ಭಾರತ ಕ್ರಿಕೆಟ್ ತಂಡವು ಸತತ ಮೂರನೇ ಬಾರಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು. 'ಚೇಸಿಂಗ್ ಮಾಸ್ಟರ್' ವಿರಾಟ್ ಕೊಹ್ಲಿಯ ಅಮೋಘ ಆಟಕ್ಕೆ ಗೆಲುವಿನ ಶ್ರೇಯ ಒಲಿಯಿತು.

ಮಂಗಳವಾರ ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ 4 ವಿಕೆಟ್‌ಗಳಿಂದ ಆಸ್ಟ್ರೇಲಿಯಾದ ಸವಾಲನ್ನು ಮೆಟ್ಟಿ ನಿಂತ ರೋಹಿತ್ ಶರ್ಮಾ ಬಳಗವು ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತು. ಟೂರ್ನಿಯ ಇತಿಹಾಸದಲ್ಲಿ ಭಾರತಕ್ಕಿದು ಐದನೇ ಫೈನಲ್. ಬುಧವಾರ ಲಾಹೋರ್‌ನಲ್ಲಿ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಡೆಯುವ ಇನ್ನೊಂದು ಸೆಮಿಫೈನಲ್‌ನಲ್ಲಿ ಗೆದ್ದ ತಂಡವು ಭಾರತವನ್ನು ಮಾರ್ಚ್ 9ರಂದು ದುಬೈನಲ್ಲಿ ನಡೆಯುವ ಫೈನಲ್‌ನಲ್ಲಿ ಎದುರಿಸಲಿದೆ.

ನಾಲ್ಕರ ಘಟ್ಟದ ಪಂದ್ಯದಲ್ಲಿ 265 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ ತಂಡದ ಗೆಲುವಿನಲ್ಲಿ ವಿರಾಟ್ (84; 98ಎ, 4X5) ತಾಳ್ಮೆಯ ಬ್ಯಾಟಿಂಗ್ ಪ್ರಮುಖ ಪಾತ್ರ ವಹಿಸಿತು. ರೋಹಿತ್ (28; 29ಎ) ಮತ್ತು ಶುಭಮನ್ ಗಿಲ್ ಔಟಾಗಿ ಪೆವಿಲಿಯನ್ ಸೇರಿದ ನಂತರ ವಿರಾಟ್ ಮತ್ತು ಶ್ರೇಯಸ್ ಜೊತೆಗೂಡಿ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿದರು. 26ನೇ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಬಿಟ್ಟ ಕ್ಯಾಚ್‌ನಿಂದಾಗಿ ಜೀವದಾನ ಪಡೆದ ವಿರಾಟ್ ಆಸ್ಟ್ರೇಲಿಯಾದ ಕೈಯಿಂದ ಪಂದ್ಯವನ್ನು ಕಿತ್ತುಕೊಂಡರು.

ಅರ್ಧಶತಕದ ಅಂಚಿನಲ್ಲಿ ಶ್ರೇಯಸ್ ಔಟಾದ ನಂತರ ಅಕ್ಷರ್ ಪಟೇಲ್ (27 ರನ್) ಅವರು ವಿರಾಟ್ ಜೊತೆಗೂಡಿ ನೆರವಾದರು. ಗೆಲುವಿಗೆ ಇನ್ನೂ 98 ರನ್ ಅಗತ್ಯವಿದ್ದಾಗ ಅಕ್ಷರ್ ಔಟಾದರು. ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ ತಾಳ್ಮೆಯಿಂದ ಆಡಿ ಬೇರೂರಿದರು. ನಂತರ ಆಸ್ಟ್ರೇಲಿಯಾ ಸ್ಪಿನ್ನರ್‌ಗಳು ಹಿಡಿತ ಬಿಗಿಗೊಳಿಸಲು ಪ್ರಯತ್ನಿಸಿದ್ದರಿಂದ ರನ್ ಮತ್ತು ಎಸೆತಗಳ ಸಂಖ್ಯೆ ಸಮಸಮವಾಗಿತ್ತು. ಈ ಹಂತದಲ್ಲಿ ರಾಹುಲ್ ಒಂದು ಸಿಕ್ಸರ್ ಮತ್ತು ಬೌಂಡರಿ ಹೊಡೆದು ಪರಿಸ್ಥಿತಿ ತಿಳಿಗೊಳಿಸಿದರು. ಇದೇ ಲಯದಲ್ಲಿ ವಿರಾಟ್ ಕೂಡ ತಮ್ಮ ಆಟದ ವೇಗ ಹೆಚ್ಚಿಸುವ ಭರದಲ್ಲಿ ದೊಡ್ಡ ಹೊಡೆತ ಆಡಿದರು. ಆದರೆ ದ್ವಾರ್ಷಿಯಸ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ (28; 24ಎ) ಮತ್ತು ರಾಹುಲ್ ಅವರನ್ನು ತುಸು ಹೊತ್ತು ಬೌಲರ್‌ಗಳು ಕಾಡಿದರು. ಈ ಸಂದರ್ಭದಲ್ಲಿ ಕಡಿಮೆ ಎಸೆತಗಳಲ್ಲಿ ಹೆಚ್ಚು ರನ್ ಗಳಿಸುವ ಒತ್ತಡ ನಿರ್ಮಾಣವಾಯಿತು.

ಆ್ಯಡಂ ಜಂಪಾ ಹಾಕಿದ 47ನೇ ಓವರ್‌ನಲ್ಲಿ ಒಂದರ ಹಿಂದೆ ಒಂದರಂತೆ ಎರಡು ಸಿಕ್ಸರ್ ಬಾರಿಸಿದ ಹಾರ್ದಿಕ್ ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದರು. ನಂತರದ ಓವರ್‌ನಲ್ಲಿ ಮತ್ತೊಂದು ಸಿಕ್ಸರ್ ಹೊಡೆಯುವ ಯತ್ನದಲ್ಲಿ ಹಾರ್ದಿಕ್ ಔಟಾದರು. ಆದರೆ ರಾಹುಲ್ ತಂಡವನ್ನು ಗೆಲುವಿನ ದಡ ಸೇರಿಸುವ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಆಗ ಇನ್ನೂ 11 ಎಸೆತಗಳು ಬಾಕಿಯಿದ್ದವು.

ಸ್ಮಿತ್–ಕ್ಯಾರಿ ಬ್ಯಾಟಿಂಗ್: ಆಸ್ಟ್ರೇಲಿಯಾ ತಂಡವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿ ಕೊಂಡಿತು. ನಾಯಕ ಸ್ಟೀವ್ ಸ್ಮಿತ್ (73; 96ಎ) ಮತ್ತು ಅಲೆಕ್ಸ್ ಕ್ಯಾರಿ (61; 57ಎ) ಅವರ ಚೆಂದದ ಬ್ಯಾಟಿಂಗ್ ಬಲದಿಂದ ತಂಡವು ಸ್ಪರ್ಧಾತ್ಮಕ ಮೊತ್ತ ಗಳಿಸಲು ಸಾಧ್ಯವಾಯಿತು. ಏಕೆಂದರೆ; ಆಸ್ಟ್ರೇಲಿಯಾ ತಂಡವು ಆರಂಭದಲ್ಲಿ ಆಘಾತ ಅನುಭವಿಸಿತ್ತು.

ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ ಅವರಿಗೆ ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ 'ಜೀವದಾನ' ಲಭಿಸಿತು. ಮೊಹಮ್ಮದ್ ಶಮಿ ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಪಡೆಯುವಲ್ಲಿ ವಿಫಲರಾದರು. ಇದರ ಲಾಭ ಪಡೆದ ಹೆಡ್ ಭಾರತಕ್ಕೆ ಮತ್ತೆ ತಲೆನೋವಾಗುವ ಆತಂಕ ಮೂಡಿಸಿದರು. ಕೂಪರ್ ಕೊನೊಲಿ 9 ಎಸೆತ ಎದುರಿಸಿದರೂ ಖಾತೆ ತೆರೆಯಲಿಲ್ಲ. ಹೆಡ್ ಜೊತೆಗೂಡಿದ ನಾಯಕ ಸ್ಟೀವ್ ಸ್ಮಿತ್ ಎರಡನೇ ವಿಕೆಟ್‌ಗೆ 50 ರನ್ ಸೇರಿಸಿದರು.

ಸ್ಪಿನ್ನರ್ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಶುಭಮನ್ ಗಿಲ್ ಪಡೆದ ಚೆಂದದ ಕ್ಯಾಚ್‌ಗೆ ಹೆಡ್ ಆಟ ಮುಗಿಯಿತು. ಇನಿಂಗ್ಸ್ ಕಟ್ಟುವ ಹೊಣೆಯನ್ನು ಸ್ಮಿತ್ ತಮ್ಮ ಮೇಲೆಳೆದುಕೊಂಡರು.

ಮಾರ್ನಸ್ ಲಾಬುಷೇನ್ (29; 36ಎ) 3ನೇ ವಿಕೆಟ್ ಜೊತೆಯಾಟದಲ್ಲಿ 56 ರನ್ ಸೇರಿಸಿದರು. ಸ್ಮಿತ್ ಮತ್ತು ಜೋಶ್ ಇಂಗ್ಲಿಸ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 34 ರನ್ ಸೇರಿದವು. ಆದರೆ ಸ್ಮಿತ್ ಜೊತೆಗೆ ಅಲೆಕ್ಸ್ ಕ್ಯಾರಿ ಸೇರಿಕೊಂಡ ಮೇಲೆ ರನ್ ಗಳಿಕೆಗೆ ತುಸು ವೇಗ ಸಿಕ್ಕಿತು.

ಭಾರತದ ವೇಗಿ ಮೊಹಮ್ಮದ್ ಶಮಿ (48ಕ್ಕೆ3), ಚಕ್ರವರ್ತಿ (49ಕ್ಕೆ2) ಮತ್ತು ರವೀಂದ್ರ ಜಡೇಜ (40ಕ್ಕೆ2) ಅವರು ಆಸ್ಟ್ರೇಲಿಯಾ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಕೆ.ಎಲ್‌.ರಾಹುಲ್ ಅವರ ಬ್ಯಾಟಿಂಗ್

ಶ್ರೇಯಸ್ ಅಯ್ಯರ್



ವಿಕೆಟ್ ಪಡೆದ ಸಂಭ್ರಮದಲ್ಲಿ ಮೊಹಮ್ಮದ್ ಶಮಿ ಮತ್ತು ವಿರಾಟ್ ಕೊಹ್ಲಿ ಚಿತ್ರ: ಪಿಟಿಐ

ಚಾಂಪಿಯನ್ಸ್ ಟ್ರೋಫಿ ಭಾರತದ ಹೆಜ್ಜೆಗುರುತು

ವರ್ಷ	ಆತಿಥ್ಯ	ಭಾರತದ ಸಾಧನೆ
1998	ಬಾಂಗ್ಲಾದೇಶ	ಸೆಮಿಫೈನಲ್
2000	ಕೆನ್ಯಾ	ರನ್ನರ್ ಅಪ್
2002	ಶ್ರೀಲಂಕಾ	ಜಂಟಿ ಚಾಂಪಿಯನ್
2004	ಇಂಗ್ಲೆಂಡ್	ಗುಂಪು ಹಂತ
2006	ಭಾರತ	ಗುಂಪು ಹಂತ
2009	ದ. ಆಫ್ರಿಕಾ	ಗುಂಪು ಹಂತ
2013	ಇಂಗ್ಲೆಂಡ್	ಚಾಂಪಿಯನ್
2017	ಇಂಗ್ಲೆಂಡ್	ರನ್ನರ್ ಅಪ್
2025	ಪಾಕಿಸ್ತಾನ	ಫೈನಲ್*

ವಿರಾಟ್ ಕೊಹ್ಲಿ ಪತ್ನಿ, ನಟಿ ಅನುಷ್ಕಾ ಶರ್ಮಾ ಪಂದ್ಯ ವೀಕ್ಷಿಸಿದರು

ಏಕದಿನ ಕ್ರಿಕೆಟ್: ಆಟಗಾರರ ಗರಿಷ್ಠ ಕ್ಯಾಚ್

ಆಟಗಾರ	ದೇಶ	ಪಂದ್ಯ	ಕ್ಯಾಚ್
ಮಹೇಲಾ ಜಯವರ್ಧನೆ	ಶ್ರೀಲಂಕಾ	448	218
ವಿರಾಟ್ ಕೊಹ್ಲಿ	ಭಾರತ	301*	161
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	375	160
ಮೊಹಮ್ಮದ್ ಅಜರುದ್ದೀನ್	ಭಾರತ	334	156
ರಾಸ್ ಟೇಲರ್	ನ್ಯೂಜಿಲೆಂಡ್	236	142

336 ಭಾರತದ ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೂರು ಮಾದರಿಗಳಲ್ಲಿ ಪಡೆದ ಒಟ್ಟು ಕ್ಯಾಚ್‌ಗಳು. ಈ ಹಾದಿಯಲ್ಲಿ ರಾಹುಲ್ ದ್ರಾವಿಡ್ (334) ಅವರನ್ನು ಹಿಂದಿಕ್ಕಿ ಐದನೇ ಸ್ಥಾನಕ್ಕೆ ಏರಿದರು. ಶ್ರೀಲಂಕಾದ ಮಹೇಲಾ ಜಯವರ್ಧನೆ (440) ಮತ್ತು ಆಸ್ಟ್ರೇಲಿಯಾದ ರಿಕಿ ಪಾಟಿಂಗ್ (364) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದಾರೆ.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 264 (49.3 ಓವರ್‌ಗಳಲ್ಲಿ)

ಹೆಡ್ ಸಿ ಶುಭಮನ್ ಬಿ ವರುಣ್ 39 (33ಎ, 4x5, 6x2)
ಕೊನೊಲಿ ಸಿ ರಾಹುಲ್ ಬಿ ಶಮಿ 0 (9ಎ)
ಸ್ಮಿತ್ ಬಿ ಶಮಿ 73 (96ಎ, 4x1, 6x1)
ಲಾಬುಷೇನ್ ಎಲ್‌ಬಿಡಬ್ಲ್ಯು ಬಿ ಜಡೇಜ 29 (36ಎ, 4x2, 6x1)
ಇಂಗ್ಲಿಸ್ ಸಿ ಕೊಹ್ಲಿ ಬಿ ಜಡೇಜ 11 (12ಎ)
ಕ್ಯಾರಿ ರನೌಟ್ (ಅಯ್ಯರ್) 61 (57ಎ, 4x8, 6x1)
ಮ್ಯಾಕ್ಸ್‌ವೆಲ್ ಬಿ ಪಟೇಲ್ 7 (5ಎ, 6x1)
ದ್ವಾರ್ಷಿಯಸ್ ಸಿ ಅಯ್ಯರ್ ಬಿ ವರುಣ್ 19 (29ಎ, 4x1, 6x1)
ಜಂಪಾ ಬಿ ಪಾಂಡ್ಯ 7 (12ಎ)
ಎಲ್ಲಿಸ್ ಸಿ ಕೊಹ್ಲಿ ಬಿ ಶಮಿ 10 (7ಎ, 6x1)
ತನ್ವೀರ್ ಸಂಘಾ ಔಟಾಗದೇ 1 (1ಎ)

ಇತರೆ: 7 (ವೈಡ್ 7)

ವಿಕೆಟ್ ಪತನ: 1-4 (ಕೂಪರ್ ಕೊನೊಲಿ, 2.6), 2-54 (ಟ್ರಾವಿಸ್ ಹೆಡ್, 8.2), 3-110 (ಮಾರ್ನಸ್ ಲಾಬುಷೇನ್, 22.3), 4-144 (ಜೋಶ್ ಇಂಗ್ಲಿಸ್, 26.6), 5-198 (ಸ್ಟೀವನ್ ಸ್ಮಿತ್, 36.4), 6-205 (ಗ್ಲೆನ್ ಮ್ಯಾಕ್ಸ್‌ವೆಲ್, 37.3), 7-239 (ಬೆನ್ ದ್ವಾರ್ಷಿಯಸ್, 45.2), 8-249 (ಅಲೆಕ್ಸ್ ಕ್ಯಾರಿ, 47.1), 9-262 (ನೇಥನ್ ಎಲ್ಲಿಸ್, 48.6), 10-264 (ಆ್ಯಡಂ ಜಂಪಾ, 49.3).

ಬೌಲಿಂಗ್: ಮೊಹಮ್ಮದ್ ಶಮಿ 10–0–48–3, ಹಾರ್ದಿಕ್ ಪಾಂಡ್ಯ 5.3–0–40–1, ಕುಲದೀಪ್ ಯಾದವ್ 8–0–44–0, ವರುಣ್ ಚಕ್ರವರ್ತಿ 10–0–49–2, ಅಕ್ಷರ್ ಪಟೇಲ್ 8–1–43–1, ರವೀಂದ್ರ ಜಡೇಜ 8–1–40–2

ಭಾರತ: 6ಕ್ಕೆ 267 (48.1 ಓವರ್‌ಗಳಲ್ಲಿ)

ರೋಹಿತ್ ಎಲ್‌ಬಿಡಬ್ಲ್ಯು ಬಿ ಕೊನೊಲಿ 28 (29ಎ, 4x3, 6x1)
ಗಿಲ್ ಬಿ ದ್ವಾರ್ಷಿಯಸ್ 8 (11ಎ, 4x1)
ಕೊಹ್ಲಿ ಸಿ ದ್ವಾರ್ಷಿಯಸ್ ಬಿ ಜಂಪಾ 84 (98ಎ, 4x5)
ಶ್ರೇಯಸ್ ಬಿ ಜಂಪಾ 45 (62ಎ, 4x3)
ಅಕ್ಷರ್ ಬಿ ಎಲ್ಲಿಸ್ 27 (30ಎ, 4x1, 6x1)
ಕೆ.ಎಲ್.ರಾಹುಲ್ ಔಟಾಗದೇ 42 (34ಎ, 4x2, 6x2)
ಹಾರ್ದಿಕ್ ಸಿ ಮ್ಯಾಕ್ಸ್‌ವೆಲ್ ಬಿ ಎಲ್ಲಿಸ್ 28 (24ಎ, 4x1, 6x3)
ರವೀಂದ್ರ ಜಡೇಜ ಔಟಾಗದೇ 2 (1ಎ)

ಇತರೆ: 3 (ವೈಡ್ 3)

ವಿಕೆಟ್ ಪತನ: 1–30 (ಶುಭಮನ್ ಗಿಲ್, 4.6), 2–43 (ರೋಹಿತ್ ಶರ್ಮಾ, 7.5), 3–134 (ಶ್ರೇಯಸ್ ಅಯ್ಯರ್, 26.2), 4–178 (ಅಕ್ಷರ್ ಪಟೇಲ್, 34.6), 5–225 (ವಿರಾಟ್ ಕೊಹ್ಲಿ, 42.4), 6–259 (ಹಾರ್ದಿಕ್ ಪಾಂಡ್ಯ, 47.5)

ಬೌಲಿಂಗ್: ಬೆನ್ ದ್ವಾರ್ಷಿಯಸ್ 7–0–39–1, ನೇಥನ್ ಎಲ್ಲಿಸ್ 10–0–49–2, ಕೂಪರ್ ಕೊನೊಲಿ 8–0–37–1, ಆ್ಯಡಂ ಜಂಪಾ 10–0–60–2, ತನ್ವೀರ್ ಸಂಘಾ 6–0–41–0, ಗ್ಲೆನ್ ಮ್ಯಾಕ್ಸ್‌ವೆಲ್ 6.1–0–35–0, ಟ್ರಾವಿಸ್ ಹೆಡ್ 1–0–6–0

ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ಭಾರತಕ್ಕೆ ನಾಲ್ಕು ವಿಕೆಟ್‌ಗಳ ಜಯ, ಫೈನಲ್ ಪ್ರವೇಶ

'ಮೈಕಟ್ಟಿಗಿಂತ ಮಾನಸಿಕ ದೃಢತೆ ಮುಖ್ಯ'

ದುಬೈ(ಪಿಟಿಐ): ನೀಳಕಾಯದವರು ಮಾಡೆಲಿಂಗ್ ಸ್ಪರ್ಧೆಗಳಿಗೆ ಸೂಕ್ತವಾಗುತ್ತಾರೆ. ಕ್ರಿಕೆಟ್‌ನಲ್ಲಿ ದೇಹಾಕೃತಿಗಿಂತಲೂ ಮಾನಸಿಕ ದೃಢತೆ ಮುಖ್ಯವಾಗುತ್ತದೆ. ಉತ್ತಮವಾಗಿ ಬ್ಯಾಟಿಂಗ್ ಮಾಡುವುದು, ಸುದೀರ್ಘ ಇನಿಂಗ್ಸ್ ಆಡುವುದು ಮತ್ತು ರನ್ ಗಳಿಸುವುದು ಮುಖ್ಯವಾಗುತ್ತದೆ ಎಂದು ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರ 'ದಪ್ಪ ದೇಹ'ದ ಕುರಿತು ಕಾಂಗ್ರೆಸ್ ಪಕ್ಷದ ವಕ್ತಾರೆ ಶಮಾ ಮೊಹಮ್ಮದ್ ಅವರು ಸೋಮವಾರ ಎಕ್ಸ್‌ನಲ್ಲಿ ಹಾಕಿದ್ದ ಸಂದೇಶವು ವಿವಾದದ ರೂಪಕ್ಕೆ ತಿರುಗಿತ್ತು. ಶಮಾ ಅವರ ಹೇಳಿಕೆಗೆ ಬಹಳಷ್ಟು ವಿರೋಧ ವ್ಯಕ್ತವಾಗಿತ್ತು. ಗಾವಸ್ಕರ್ ಅವರು ರೋಹಿತ್ ಪರವಾಗಿ ಬ್ಯಾಟಿಂಗ್ ಮಾಡಿದ್ದಾರೆ.

ಈ ಕುರಿತು ಇಂಡಿಯಾ ಟುಡೆ ಕಾರ್ಯಕ್ರಮದಲ್ಲಿ ಪ್ರತಿಕ್ರಿಯಿಸಿದ ಗಾವಸ್ಕರ್, 'ನಾನು ಈ ಹಿಂದೆಯೂ ಇದೇ ಮಾತುಗಳನ್ನು ಹೇಳಿದ್ದೇನೆ. ತೆಳು ಮೈಕಟ್ಟಿನವರು ಬೇಕೆಂದರೆ ಮಾಡೆಲಿಂಗ್ ಕ್ಷೇತ್ರದಲ್ಲಿ ಸಿಗುತ್ತಾರೆ. ಆದರೆ ಕ್ರಿಕೆಟ್‌ನಲ್ಲಿ ಹೇಗೆ ಆಡುತ್ತೀರಿ. ಮನೋಬಲ ಯಾವ ರೀತಿಯಿರುತ್ತದೆ ಎಂಬುದು ಮುಖ್ಯ. ಈ ಮೊದಲು ಸರ್ಫರಾಜ್ ಖಾನ್ ಬಗ್ಗೆ ಕೂಡ ಮಾತನಾಡಿದ್ದೆವು. ಅವರು ದೇಹ ತೂಕ ಹೆಚ್ಚಿರುವ ವ್ಯಕ್ತಿ. ಆದರೆ ಟೆಸ್ಟ್ ಪಂದ್ಯದಲ್ಲಿ ಅವರು ಇನಿಂಗ್ಸ್‌ನಲ್ಲಿ 150 ರನ್ ಗಳಿಸಿದರು. ಅದರ ನಂತರದ ಇನಿಂಗ್ಸ್‌ಗಳಲ್ಲಿ 2 ಅಥವಾ 3 ಬಾರಿ 50ಕ್ಕಿಂತ ಹೆಚ್ಚು ರನ್‌ಗಳನ್ನೂ ಗಳಿಸಿದ್ದರು. ಹಾಗಿದ್ದಾಗ ಸಮಸ್ಯೆಯೇನು' ಎಂದು ಪ್ರಶ್ನಿಸಿದ್ದಾರೆ.

ಸುನಿಲ್ ಗಾವಸ್ಕರ್

ಪಾಕಿಸ್ತಾನ ಟಿ20 ತಂಡಕ್ಕೆ ಸಲ್ಮಾನ್ ನಾಯಕ

ಲಾಹೋರ್ (ಪಿಟಿಐ): ನಾಯಕ ಮೊಹಮ್ಮದ್ ರಿಜ್ವಾನ್ ಮತ್ತು ಅನುಭವಿ ಬ್ಯಾಟರ್ ಬಾಬರ್ ಆಜಂ ಅವರನ್ನು ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಐದು ಪಂದ್ಯಗಳ ಟಿ20 ಸರಣಿಗೆ ಪಾಕಿಸ್ತಾನ ತಂಡದಿಂದ ಕೈಬಿಡಲಾಗಿದೆ.

ಸಲ್ಮಾನ್ ಅಲಿ ಆಘಾ ಟಿ20 ಸರಣಿಯಲ್ಲಿ ಪಾಕ್ ತಂಡವನ್ನು ಮುನ್ನಡೆಸಲಿದ್ದಾರೆ. ಆಲ್‌ರೌಂಡರ್ ಶಾದಾಬ್ ಖಾನ್ ಅವರು ತಂಡವನ್ನು ಮರಳಿ ಸೇರಿಕೊಳ್ಳಲಿದ್ದು, ಅವರಿಗೆ ಉಪನಾಯಕನ ಜವಾಬ್ದಾರಿ ನೀಡಲಾಗಿದೆ.

ಪಾಕಿಸ್ತಾನ ತಂಡವು ಮಾರ್ಚ್ 16ರಿಂದ ನ್ಯೂಜಿಲೆಂಡ್‌ನಲ್ಲಿ ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಈ ಸರಣಿಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಮಂಗಳವಾರ ತಂಡಗಳನ್ನು ಪ್ರಕಟಿಸಿದೆ.

ಚಾಂಪಿಯನ್ಸ್ ಟ್ರೋಫಿಯಲ್ಲಿ ನಿರಾಶಾದಾಯಕ ಪ್ರದರ್ಶನದ ನಂತರವೂ ರಿಜ್ವಾನ್ ಅವರನ್ನು ಏಕದಿನ ತಂಡದ ನಾಯಕರನ್ನಾಗಿ ಉಳಿಸಿಕೊಳ್ಳಲಾಗಿದೆ. ಬಾಬರ್ ಅವರಿಗೂ ಏಕದಿನ ತಂಡದಲ್ಲಿ ಸ್ಥಾನ ಕಲ್ಪಿಸಲಾಗಿದೆ. ಆದರೆ, ಬ್ಯಾಟರ್‌ಗಳಾದ ಸೌದ್ ಶಕೀಲ್ ಮತ್ತು ಕಮ್ರಾನ್ ಗುಲಾಮ್, ವೇಗದ ಬೌಲರ್‌ಗಳಾದ ಶಾಹಿನ್ ಶಾ ಅಫ್ರಿದಿ ಮತ್ತು ಹ್ಯಾರಿಸ್ ರವೂಫ್ ಅವರಿಗೆ ಕೊಕ್ ನೀಡಲಾಗಿದೆ.

ಗಜಾನನ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಶ್ರೀಗಜಾನನ ಎಫ್‌ಸಿ ತಂಡ ಎ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಮಂಗಳವಾರ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು 4–2 ಗೋಲುಗಳಿಂದ ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶ್ರೀಗಜಾನನ ತಂಡದ ಸುಜಿಕುಮಾರ್ (40 + 1ನೇ ನಿ.), ಗೋಪಿನಾಥ್ ಜಿ. (40 + 3., 45ನೇ ನಿ.) ಮತ್ತು ಅರುಣ್ ಕುಮಾರ್ ಪೆರಿಸ್ವಾಮಿ (61ನೇ ನಿ.) ಗೋಲು ಗಳಿಸಿದರು.

ಚಾಲೆಂಜರ್ಸ್ ತಂಡದ ವಿಶಾಲ್ ಬೊತಾರೆ (13ನೇ ನಿ.) ಮತ್ತು ಅಭಿನಾಷ್ ಬೊರೊ (19ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಜವಾಹರ್ ಯುನಿಯನ್ ಎಫ್‌ಸಿ ತಂಡ 1–1 ಗೋಲಿನಿಂದ ಡೆಕ್ಕನ್ ಎಫ್‌ಸಿ ತಂಡದ ಜೊತೆ ಡ್ರಾ ಮಾಡಿಕೊಂಡಿತು.

ಲಾಹೋರ್‌ನಲ್ಲಿ ಇಂದು ಎರಡನೇ ಸೆಮಿಫೈನಲ್ • ನ್ಯೂಜಿಲೆಂಡ್–ದಕ್ಷಿಣ ಆಫ್ರಿಕಾ ಹಣಾಹಣಿ

ತೆಂಬಾ ಬಳಗಕ್ಕೆ ಸ್ಯಾಂಟನರ್ ಪಡೆ ಸವಾಲು

ಲಾಹೋರ್ (ಪಿಟಿಐ): ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳು ಸೀಮಿತ ಓವರ್‌ಗಳ ಮಾದರಿಯ ಕ್ರಿಕೆಟ್‌ನಲ್ಲಿ ಸಮರ್ಥ ಆಟಗಾರರನ್ನು ಹೊಂದಿವೆ. ಆದರೆ ಐಸಿಸಿ ಟ್ರೋಫಿಗಳನ್ನು ಜಯಿಸುವಲ್ಲಿ ಹಲವು ವರ್ಷಗಳಿಂದ ಈ ತಂಡಗಳಿಗೆ ಅದೃಷ್ಟ ಜೊತೆಗೂಡುತ್ತಿಲ್ಲ.

ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳು ಕ್ರಮವಾಗಿ 1998 ಮತ್ತು 2000ರಲ್ಲಿ ಚಾಂಪಿಯನ್ಸ್ ಟ್ರೋಫಿ (ಆಗಿನ್ನೂ ಇದು ನಾಕೌಟ್ ಟ್ರೋಫಿ ಎಂದೇ ಹೆಸರಾಗಿತ್ತು) ಜಯಿಸಿದ್ದವು. ಮರುನಾಮಕರಣದ ನಂತರ ಉಭಯ ತಂಡಗಳು ಚಾಂಪಿಯನ್ ಆಗಿಲ್ಲ. ಈ ತಂಡಗಳು ಬುಧವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಎರಡನೇ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ನ್ಯೂಜಿಲೆಂಡ್ ತಂಡವು 2015 ಮತ್ತು 2019ರ ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ರನ್ನರ್ಸ್ ಅಪ್ ಆಗಿತ್ತು. 2021ರ ಟಿ20 ವಿಶ್ವಕಪ್‌ನಲ್ಲಿಯೂ ಫೈನಲ್‌ನಲ್ಲಿ ಎಡವಿತ್ತು. ಅದರಿಂದಾಗಿ ಈ ಸಲ ದಕ್ಷಿಣ ಆಫ್ರಿಕಾ ಎದುರು ಗೆದ್ದು ಫೈನಲ್ ಪ್ರವೇಶಿಸುವ ಛಲದಲ್ಲಿದೆ. ಮಿಚೆಲ್ ಸ್ಯಾಂಟನರ್ ನಾಯಕತ್ವದ ಕಿವೀಸ್ ಪಡೆಯು ಎ ಗುಂಪಿನಲ್ಲಿ ದ್ವಿತೀಯ ಸ್ಥಾನ ಪಡೆದು ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದೆ. ದಕ್ಷಿಣ ಆಫ್ರಿಕಾ ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು.

ಉಭಯ ತಂಡಗಳೂ ಸಮ ಸಾಮರ್ಥ್ಯ ಹೊಂದಿರುವಂತೆ ಮೇಲ್ನೋಟಕ್ಕೆ ಕಾಣುತ್ತವೆ. ಆದರೆ, ದಕ್ಷಿಣ ಆಫ್ರಿಕಾ ತಂಡದ ಬೌಲಿಂಗ್, ನ್ಯೂಜಿಲೆಂಡ್‌ಗಿಂತಲೂ ಹೆಚ್ಚು ಸಮರ್ಥವಾಗಿದೆ. ಅಲ್ಲದೇ ವೈವಿಧ್ಯದಿಂದ ಕೂಡಿದೆ. ಇಲ್ಲಿ ಪಿಚ್‌ಗಳು ನಿಧಾನಗತಿಯ ಎಸೆತಗಳಿಗೆ ನೆರವಾಗುತ್ತಿವೆ. ಆದರೆ ಹೆಚ್ಚು ತಿರುವು ಪಡೆಯುತ್ತಿಲ್ಲ. ಕಳೆದ ತಿಂಗಳು ಇಲ್ಲಿ ಮೂರು ಪಂದ್ಯಗಳ ಸರಣಿಯಲ್ಲಿ ಆಡಿದ್ದ ಕಿವೀಸ್ ಬಳಗದ ಆತ್ಮವಿಶ್ವಾಸ ಹೆಚ್ಚಿದೆ. ಆದ್ದರಿಂದ ಎದುರಾಳಿ ತಂಡಕ್ಕೆ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಅನುಭವಿ ಬ್ಯಾಟರ್ ಟಾಮ್ ಲೇಥಮ್, ರಚಿನ್ ರವೀಂದ್ರ, ಕೇನ್ ವಿಲಿಯಮ್ಸನ್, ವಿಲ್ ಯಂಗ್, ಡ್ಯಾರಿಲ್ ಮಿಚೆಲ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಆಲ್‌ರೌಂಡರ್ ಮತ್ತು ಮಿಂಚಿನ ಫೀಲ್ಡರ್ ಗ್ಲೆನ್ ಫಿಲಿಪ್ಸ್, ಮೈಕೆಲ್ ಬ್ರೇಸ್‌ವೆಲ್ ಅವರೂ ತಂಡಕ್ಕೆ ವಿಜಯ ತಂದುಕೊಡಬಲ್ಲ ಸಮರ್ಥರು. ಮ್ಯಾಟ್ ಹೆನ್ರಿ, ವಿಲ್ ಒ ರೂರ್ಕಿ, ಜೇಕಬ್ ಡಫಿ ಹಾಗೂ ಕೈಲ್ ಜೆಮಿಸನ್ ಅವರು ಬೌಲಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ಭಾನುವಾರ ದುಬೈನಲ್ಲಿ ಭಾರತ ಎದುರಿನ ಪಂದ್ಯದಲ್ಲಿ ಆಡಿದ ಮರುದಿನ ತಂಡ ಬೆಳಿಗ್ಗೆ ಲಾಹೋರ್‌ಗೆ ಮರಳಿದೆ.

ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡಕ್ಕೆ ಚೋಕರ್ಸ್ ಹಣೆಪಟ್ಟಿ ಕಳಚಿಕೊಳ್ಳಲು ಮತ್ತೊಂದು ಸುಸಂದರ್ಭ ಈಗ ಬಂದಿದೆ. ಶತಕ ಹೊಡೆದಿರುವ ರಯಾನ್ ರಿಕೆಲ್ಟನ್, ರಸಿ ವ್ಯಾನ್ ಡೆರ್ ಡಸೆ ಮತ್ತು ಏಡನ್ ಮರ್ಕರಂ ಅವರು ತಂಡಕ್ಕೆ ದೊಡ್ಡ ಮೊತ್ತ ಗಳಿಸಿಕೊಡಬಲ್ಲ ಆಟಗಾರರು. ವಿಯಾನ್ ಮಲ್ದರ್, ಕಗಿಸೊ ರಬಾಡ, ಲುಂಗಿ ಗಿಡಿ, ಮಾರ್ಕೊ ಯಾನ್ಸನ್, ಸ್ಪಿನ್ನರ್ ಕೇಶವ್ ಮಹಾರಾಜ ಮತ್ತು ತಬ್ರೇಜ್ ಶಮ್ಸಿ ಅವರು ಕಿವೀಸ್ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಸಿದ್ಧರಾಗಿದ್ದಾರೆ.

ಕಳೆದೊಂದು ವರ್ಷದಲ್ಲಿ 13 ಏಕದಿನ ಪಂದ್ಯಗಳನ್ನು ಆಡಿರುವ ದಕ್ಷಿಣ ಆಫ್ರಿಕಾ ತಂಡವು ಎಂಟರಲ್ಲಿ ಸೋತಿದೆ. ಮಹತ್ವದ ಘಟ್ಟದಲ್ಲಿ ಎಡವಿದೆ. ಅದೆಲ್ಲವನ್ನೂ ಮೀರಿ ಕಿವೀಸ್ ಸವಾಲಿಗೆ ಎದೆಯೊಡ್ಡಲು ಸಜ್ಜಾಗಿದೆ.

ಬಲಾಬಲ

ಪಂದ್ಯ	73
ಕಿವೀಸ್ ಜಯ	26
ದ.ಆಫ್ರಿಕಾ ಜಯ	42

ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ

ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟನರ್ —ಎಎಫ್‌ಪಿ ಚಿತ್ರಗಳು

ಪಂದ್ಯ ಆರಂಭ: ಮಧ್ಯಾಹ್ನ 2.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕೇರಳ ರಣಜಿ ತಂಡಕ್ಕೆ ₹4.5 ಕೋಟಿ ಬಹುಮಾನ ಪ್ರಕಟ

ತಿರುವನಂತಪುರ (ಪಿಟಿಐ): ಮೊದಲ ಬಾರಿ ರಣಜಿ ಟ್ರೋಫಿ ಕ್ರಿಕೆಟ್ ಫೈನಲ್ ಆಡಿದ್ದ ಕೇರಳ ತಂಡಕ್ಕೆ ಮಂಗಳವಾರ ಇಲ್ಲಿ ಕೇರಳ ಕ್ರಿಕೆಟ್ ಸಂಸ್ಥೆ ₹4.5 ಕೋಟಿ ಬಹುಮಾನ ಪ್ರಕಟಿಸಿದೆ.

ಕೇರಳ ತಂಡಕ್ಕೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕೇರಳ ಫೈನಲ್ ತಲುಪಿದ್ದು, ಗೆಲುವಿಗೆ ಸಮನಾದುದು ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು.

ಮಹಿಳಾ ಹಾಕಿ ತಂಡಕ್ಕೆ ತಾಕೇಮಾ ನೆರವು

ನವದೆಹಲಿ (ಪಿಟಿಐ): ನೆದರ್ಲೆಂಡ್ಸ್‌ನ ದಿಗ್ಗಜ ಆಟಗಾರ ತಾಕ್ ತಾಕೇಮಾ ಅವರನ್ನು ಭಾರತ ಮಹಿಳಾ ರಾಷ್ಟ್ರೀಯ ಹಾಕಿ ತಂಡದ ಡ್ರ್ಯಾಗ್‌ಫ್ಲಿಕರ್ಸ್ ಆಟಗಾರ್ತಿಯರಿಗೆ ತರಬೇತಿ ನೀಡಲು ಅಲ್ಪಾವಧಿ ಆಧಾರದ ಮೇಲೆ ನೇಮಕ ಮಾಡಲಾಗಿದೆ. 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ವರೆಗೆ ಅವರ ತರಬೇತಿ ಅವಧಿ ಇರಲಿದೆ.

ಗಗನ್ ನಾರಂಗ್ ಪತ್ರಕ್ಕೆ ಉತ್ತರಿಸಿದ ಐಒಎ ಅಧ್ಯಕ್ಷೆ

ಬಾಕ್ಸಿಂಗ್‌ಗೆ ಅಡ್‌ಹಾಕ್ ಸಮಿತಿ: ಉಷಾ ಸಮರ್ಥನೆ

ನವದೆಹಲಿ (ಪಿಟಿಐ): ಒಂದು ವರ್ಷದಿಂದ ರಾಷ್ಟ್ರೀಯ ಬಾಕ್ಸಿಂಗ್ ಫೆಡರೇಷನ್ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ. ಹೀಗಾಗಿ ಬಾಕ್ಸಿಂಗ್ ಆಡಳಿತ ನಿರ್ವಹಿಸಲು ಅಡ್‌ಹಾಕ್ ಸಮಿತಿಯನ್ನು ನೇಮಕ ಮಾಡಬೇಕಾಯಿತು ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ.ಉಷಾ ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಫೆಡರೇಷನ್‌ಅನ್ನು ದಾರಿಗೆ ತರಲು ಮತ್ತು ಆಡಳಿತ ಸುಗಮವಾಗಿ ನಡೆಯುವಂತೆ ಮಾಡಲು ಈ ಕ್ರಮ ಅತ್ಯಗತ್ಯವಾಗಿತ್ತು ಎಂದೂ ಉಷಾ ಮಂಗಳವಾರ ಹೇಳಿದ್ದಾರೆ.

'ಉಷಾ ಅವರು ಏಕಪಕ್ಷೀಯವಾಗಿ ಆದೇಶಗಳನ್ನು ಹೊರಡಿಸುತ್ತಿದ್ದಾರೆ ಮತ್ತು ಕ್ರೀಡಾಪಟುಗಳ ಹಿತಾಸಕ್ತಿಯನ್ನು ಕಡೆಗಣಿಸುತ್ತಿದ್ದಾರೆ' ಎಂದು ಆರೋಪಿಸಿ ಐಒಎ ಹಿರಿಯ ಉಪಾಧ್ಯಕ್ಷ ಗಗನ್ ನಾರಂಗ್ ಅವರು ಫೆ. 28ರಂದು ಪತ್ರ ಬರೆದಿದ್ದರು. ಇದಕ್ಕೆ ಉತ್ತರವಾಗಿ ಉಷಾ ಮೇಲಿನಂತೆ ಪ್ರತಿಕ್ರಿಯಿಸಿದ್ದಾರೆ. ಶೂಟರ್ ನಾರಂಗ್ ಅವರು 2012ರ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತ ಕೂಡ ಆಗಿದ್ದಾರೆ.

ಅಡ್‌ಹಾಕ್ ಸಮಿತಿ ನೇಮಕ ಪ್ರಶ್ನಿಸಿ ಡೆಲ್ಲಿ ಹೈಕೋರ್ಟ್‌ಗೆ ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಅರ್ಜಿ ಸಲ್ಲಿಸಿದ್ದು, ಅದು ಐಒಎ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಪ್ರತಿಕ್ರಿಯೆ ಕೇಳಿ ಐಒಎಗೆ ನೋಟಿಸ್ ನೀಡಿದೆ. ಇದರ ಮಧ್ಯೆಯೇ ಉಷಾ ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ.

'ಸಮಿತಿ ನೇಮಕದ ಕ್ರಮದಿಂದ ಅಥ್ಲೀಟುಗಳಿಗೆ ತೊಂದರೆಯಾಗುತ್ತಿದೆ ಮತ್ತು ನನ್ನ ಕ್ರಮ ಸ್ವೇಚ್ಛೆಯಿಂದ ಕೂಡಿದ್ದು' ಎಂಬ ನಿಮ್ಮ ಮಾತಿನಲ್ಲಿ ಹುರುಳಿಲ್ಲ. ಅಡ್‌ಹಾಕ್ ಸಮಿತಿ ನೇಮಕದ ನಿರ್ಧಾರ ಸ್ವೇಚ್ಛೆಯದ್ದಲ್ಲ. ಶಿಸ್ತು ಮರಳಿ ತರಲು ಮತ್ತು ಆಡಳಿತ ಸುಸೂತ್ರವಾಗಿ ನಡೆಯುವಂತೆ ಮಾಡಲು ಇದು ಅತ್ಯಗತ್ಯವಾಗಿತ್ತು' ಎಂದು ನಾರಂಗ್ ಅವರಿಗೆ ನೀಡಿದ ಉತ್ತರದಲ್ಲಿ ಉಷಾ ತಿಳಿಸಿದ್ದಾರೆ. ನಾರಂಗ್ ಅವರು ಐಒಎ ಕಾರ್ಯಕಾರಿ ಮಂಡಳಿಯ ಸದಸ್ಯರೂ ಆಗಿದ್ದಾರೆ.

'ದುರದೃಷ್ಟಕರ ಆದರೆ ವಾಸ್ತವ ಎಂದರೆ ಬಿಎಫ್‌ಐ ತನ್ನ ಹೊಣೆಗಾರಿಕೆ ನಿರ್ವಹಿಸುವಲ್ಲಿ ವಿಫಲವಾಗಿರುವುದು. 2024ರಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸದೇ ಇರುವುದೂ ಇದರಲ್ಲಿ ಸೇರಿದೆ' ಎಂದು ಉಷಾ ಸಮರ್ಥನೆ ಮಾಡಿಕೊಂಡಿದ್ದಾರೆ.

'2026ರ ಏಷ್ಯನ್ ಕ್ರೀಡೆಗಳು ಸಮೀಪಿಸುತ್ತಿವೆ. ಆದರೆ ಪ್ರತಿಭೆಗಳನ್ನು ಗುರುತಿಸುವ, ಭರವಸೆ ಮೂಡಿಸಿರುವ ಬಾಕ್ಸರ್‌ಗಳನ್ನು ಆಯ್ಕೆ ಮಾಡುವ, ದೇಶದ ಪದಕ ಸಾಧ್ಯತೆ ಹೆಚ್ಚಿಸುವ ವ್ಯವಸ್ಥಿತ ತರಬೇತಿ ಯೋಜನೆಗಳ ಅನುಷ್ಠಾನ ಕೆಲಸಗಳು ಆಗುತ್ತಿಲ್ಲ' ಎಂದು ಉಷಾ ಬೊಟ್ಟುಮಾಡಿದ್ದಾರೆ.

ಉಷಾ ಮತ್ತು ಐಒಎ ಕಾರ್ಯಕಾರಿ ಸಮಿತಿ ಸದಸ್ಯರ ಜೊತೆ ಕೆಲವು ಸಮಯದಿಂದ 'ಮುಸುಕಿನ ಗುದ್ದಾಟ' ನಡೆಯುತ್ತಿದೆ. ಫೆಬ್ರುವರಿ 24ರಂದು ದೇಶದ ಬಾಕ್ಸಿಂಗ್ ಆಡಳಿತ ನಿರ್ವಹಣೆ ಮತ್ತು ಚಟುವಟಿಕೆಗಳನ್ನು ನಿರ್ವಹಿಸಲು ಐಒಎಯು ಐವರು ಸದಸ್ಯರ ಅಡ್‌ಹಾಕ್ ಸಮಿತಿಯನ್ನು ನೇಮಕ ಮಾಡಿತ್ತು.

ಅಡ್‌ಹಾಕ್ ಸಮಿತಿ ನೇಮಕ ಮಾಡುವ ನಿರ್ಧಾರಕ್ಕೆ ಮುನ್ನ ಉಷಾ ಅವರು ಯಾರ ಜೊತೆಯೂ ಸಮಾಲೋಚಿಸಿಲ್ಲ ಮತ್ತು ಕಾರ್ಯಕಾರಿ ಸಮಿತಿ ಅನುಮೋದನೆಯನ್ನೂ ಪಡೆದಿಲ್ಲ ಎಂದು ನಾರಂಗ್ ಹೇಳಿದ್ದರು. ಈ ಆದೇಶ ಹಿಂಪಡೆಯಬೇಕು ಮತ್ತು ಕಾರ್ಯಕಾರಿ ಸಮಿತಿಯ ತುರ್ತು ಸಭೆ ಕರೆಯಬೇಕು ಎಂದು ಅವರು ಒತ್ತಾಯಿಸಿದ್ದರು.

ಪಿ.ಟಿ. ಉಷಾ

ಗಗನ್ ನಾರಂಗ್

ಸಂಕ್ಷಿಪ್ತ ಸುದ್ದಿ

ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಟೂರ್ನಿ ಇಂದಿನಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಇದೇ 5ರಿಂದ 8ರವರೆಗೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಎಸ್‌ಎಂಎನ್ ಸ್ಮಾರಕ ಟ್ರೋಫಿಗಾಗಿ ಮಾತೃ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ನಡೆಯಲಿದೆ.

ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯದಾದ್ಯಂತ 21 ತಂಡಗಳು ಭಾಗವಹಿಸಲಿವೆ. ಪಂದ್ಯಗಳು ಲೀಗ್ ಮಾದರಿಯಲ್ಲಿ ನಡೆಯಲಿವೆ. ಹಾಲಿ ಚಾಂಪಿಯನ್ ನೈರುತ್ಯ ರೈಲ್ವೆ ಈ ಬಾರಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದಾಗಿದೆ. ಡಿವೈಇಎಸ್ ಮೈಸೂರು, ಬೀಗಲ್ಸ್ ಮತ್ತು ಮೌಂಟ್ಸ್ ಕ್ಲಬ್ ತಂಡಗಳೂ ಕಣಕ್ಕೆ ಇಳಿಯಲಿವೆ.

ಚಾಂಪಿಯನ್, ರನ್ನರ್ಸ್ ಅಪ್, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆಯುವ ತಂಡಗಳಿಗೆ ಟ್ರೋಫಿಯ ಜೊತೆಗೆ ನಗದು ಬಹುಮಾನ ನೀಡಲಾಗುತ್ತಿದೆ.

ಕೊಕ್ಕೊ ಸಂಸ್ಥೆ ಅಧ್ಯಕ್ಷರಾಗಿ ಲೋಕೇಶ್ವರ ಪುನರಾಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಕೊಕ್ಕೊ ಸಂಸ್ಥೆಯ ಅಧ್ಯಕ್ಷರಾಗಿ ಲೋಕೇಶ್ವರ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿಗೆ ಈಚೆಗೆ ಚುನಾವಣೆ ನಡೆಯಿತು. ಉಪಾಧ್ಯಕ್ಷರಾಗಿ ಮಂಜುನಾಥ್ ಜಿ.ವೈ, ಜಗದೀಶ್, ಮುರಳೀಧರ್ ಕೆ. ಬಿ. ಭೀಮಣ್ಣ, ಜಯರಾಂ ಆಯ್ಕೆಯಾಗಿದ್ದಾರೆ.

ಗೌರವ ಕಾರ್ಯದರ್ಶಿಯಾಗಿ ರಾಮಲಿಂಗಪ್ಪ, ಖಜಾಂಚಿಯಾಗಿ ಶೋಭಾ ನಾರಾಯಣ್, ಜಂಟಿ ಕಾರ್ಯದರ್ಶಿಯಾಗಿ ಟಿ. ಕರಿಬಸಪ್ಪ ಹಾಗೂ ಜೋಸೆಫ್ ವೇದಕುಮಾರ್ ಗೆಲುವು ಸಾಧಿಸಿದ್ದಾರೆ. ಸಂಸ್ಥೆಯ ಆಡಳಿತಾವಧಿ ಮುಂದಿನ ನಾಲ್ಕು ವರ್ಷ ಇರಲಿದೆ.

ಕೊಲೆ ಪ್ರಕರಣ: ಕುಸ್ತಿಪಟು ಸುಶೀಲ್‌ಗೆ ಜಾಮೀನು

ನವದೆಹಲಿ (ಪಿಟಿಐ): ಇಲ್ಲಿನ ಛತ್ರಸಾಲ್ ಕ್ರೀಡಾಂಗಣದಲ್ಲಿ ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸುಶೀಲ್ ಕುಮಾರ್ ಅವರಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿ ಸಂಜೀವ್ ನರುಲಾ ಅವರು ₹50,000 ಮೊತ್ತದ ವೈಯಕ್ತಿಕ ಬಾಂಡ್ ಜೊತೆಗೆ ಅದೇ ಮೊತ್ತಕ್ಕೆ ಇಬ್ಬರ ಭದ್ರತೆ ನೀಡುವಂತೆ ಆದೇಶಿಸಿದರು.

ಆಸ್ತಿಗೆ ಸಂಬಂಧಿಸಿದ ವಿವಾದ ಪ್ರಕೋಪಕ್ಕೆ ತಿರುಗಿ ಸುಶೀಲ್ ಕುಮಾರ್ ಮತ್ತು ಅವರ ಸಹಚರರು 2021ರ ಮೇ ತಿಂಗಳಲ್ಲಿ ಧನಕರ್ ಮೇಲೆ ಮೊಂಡಾದ ವಸ್ತುವಿನಿಂದ ಹಲ್ಲೆ ನಡೆಸಿದ್ದರು. ಪ್ರಕರಣದಲ್ಲಿ ಧನಕರ್ ಅವರ ಇಬ್ಬರು ಸ್ನೇಹಿತರು ಗಾಯಗೊಂಡಿದ್ದರು. ಮರಣೋತ್ತರ ಪರೀಕ್ಷೆಯಲ್ಲಿ ಅವರು ಹಲ್ಲೆಯಿಂದ ಮೃತಪಟ್ಟಿದ್ದು ದೃಢಪಟ್ಟಿತ್ತು. ಸುಶೀಲ್ ಕುಮಾರ್ ಅವರನ್ನು 2021ರ ಮೇ ತಿಂಗಳಲ್ಲಿ ಬಂಧಿಸಲಾಗಿತ್ತು. ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಅವರಿಗೆ ಒಂದು ವಾರ ಮಧ್ಯಂತರ ಜಾಮೀನು ನೀಡಲಾಗಿತ್ತು.